ವಿಶ್ವವಾಣಿ
ವಿಶ್ವಾಸವೇ ವಿಶ್ವ

## 2019ರ ರಾಜ್ಯ ಚಲನಚಿತ್ರ ಪ್ರಶಸ್ತಿ ಪ್ರಕಟ
# ಸುದೀಪ್ ಅತ್ಯುತ್ತಮ ನಟ ಅನುಪಮಾ ಅತ್ಯುತ್ತಮ ನಟಿ

2019ನೇ ಸಾಲಿನ ರಾಜ್ಯ ಚಲನಚಿತ್ರ ಪ್ರಶಸ್ತಿ ಪ್ರಕಟವಾಗಿದ್ದು, ಪೈಲ್ವಾನ್ ಚಿತ್ರದಲ್ಲಿನ ನಟನೆಗೆ ಕಿಚ್ಚ ಸುದೀಪ್ ಅವರು ಅತ್ಯುತ್ತಮ ನಟ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಅದೇ ರೀತಿ ತ್ರಯಂಬಕಂ ಚಿತ್ರದ ನಟನೆಗಾಗಿ ಅನುಪಮಾ ಗೌಡ ಅತ್ಯುತ್ತಮ ನಟಿ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.

ಸೊಂಪಾದ ಪುಟಗಳು

ಒಂದು ಮರದ ಕೊಂಬೆ ಅಲ್ಲಾಡಿಸಿದ್ದಕ್ಕೆ ಕ್ಯಾತೆ ತೆಗೆದಿದ್ದ ಜಪಾನಿಯರು!
ನೂರೆಂಟು ವಿಶ್ವ ವಿಶ್ವೇಶ್ವರ ಭಟ್ 6

ಶಾಲೆಗೆ ನೂರು, ನೆನಪುಗಳು ನೂರಾರು
ಕಾಡುದಾರಿ ಹರೀಶ್ ಕೇರ 7

## ದಾರಿದೀಪೋಕ್ತಿ



ಯಾವುದೋ ಕೆಲಸ ವಿಳಂಬವಾಗುತ್ತಿದೆಯೆಂದ ಮಾತ್ರಕ್ಕೆ ಅದು ಆಗುವುದೇ ಇಲ್ಲ ಎಂದು ಭಾವಿಸಬಾರದು. ನೀವು ಬಟನ್ ಒತ್ತಿದ ತಕ್ಷಣ ಲಿಫ್ಟ್ ಬಾರದಿರಬಹುದು, ಹಾಗೆಂದು ಪದೇ ಪದೆ ಹತ್ತಾರು ಸಲ ಒತ್ತಿದರೂ ಅದು ಬರುವುದಿಲ್ಲ. ಅದು ಬರುವ ತನಕ ಕಾಯಬೇಕು.

## ವಕ್ರತುಂಡೋಕ್ತಿ



ಬಾಸ್ ಅಂದ್ರೆ ಮೋಡ ಇದ್ದಂತೆ. ಅವರು ಹೊರಟರೆ ಸಾಕು, ಇಡೀ ಆಫೀಸು ಬೆಳಗುತ್ತದೆ.

# ಒಂದೇ ದಿನ ಮೂರು ಅಪಘಾತ, 26 ಮಂದಿ ಸಾವು
# ಕರಾಳ ಬುಧವಾರ

ಯಲ್ಲಾಪುರ ಬಳಿ ಅರೆಬೈಲ್ ಘಾಟ್‌ನಲ್ಲಿ ಬುಧವಾರ ನಸುಕಿನ ಜಾವ ಹಣ್ಣು ತರಕಾರಿ ತುಂಬಿದ್ದ ಲಾರಿ ಪಲ್ಟಿಯಾಗಿದ್ದು 11 ಜನರು ಮೃತಪಟ್ಟಿದ್ದಾರೆ. ಜಲಗಾಂವ್ ಬಳಿ ಮುಂಬಯಿಗೆ ತೆರಳುತ್ತಿದ್ದ ಪುಷ್ಪಕ್ ಎಕ್ಸ್‌ಪ್ರೆಸ್‌ನಲ್ಲಿ ಬೆಂಕಿ ಕಾಣಿಸಿಕೊಂಡಿದೆ ಎಂದು ಭಯಭೀತರಾದ ಪ್ರಯಾಣಿಕರು ಜೀವ ಭಯದಿಂದ ಚಲಿಸುವ ರೈಲಿನಿಂದ ಜಿಗಿದಿದ್ದು, ಅದೇ ಸಮಯದಲ್ಲಿ ಪಕ್ಕದ ಹಳಿಯಲ್ಲಿ ಬರುತ್ತಿದ್ದ ಕರ್ನಾಟಕ ಎಕ್ಸ್‌ಪ್ರೆಸ್ ರೈಲು ಡಿಕ್ಕಿ ಹೊಡೆದಿದೆ. ಘಟನೆಯಲ್ಲಿ 11 ಜನರು ಮೃತಪಟ್ಟಿದ್ದಾರೆ. ಮತ್ತೊಂದೆಡೆ ಸಿಂಧನೂರು-ರಾಯಚೂರು ಮುಖ್ಯ ರಸ್ತೆಯಲ್ಲಿ ವೈಷ್ಣವಿದೇವಿ ದೇವಸ್ಥಾನದ ಸಮೀಪ ಮಂಗಳವಾರ ರಾತ್ರಿ ಕ್ರೂಸರ್ ಪಲ್ಟಿಯಾಗಿ ಚಾಲಕ ಹಾಗೂ ಮೂವರು ವಿದ್ಯಾರ್ಥಿಗಳು ಸೇರಿ ನಾಲ್ವರು ಸ್ಥಳದಲ್ಲೇ ಕೊನೆಯುಸಿರೆಳೆದಿದ್ದಾರೆ.

## ಲಾರಿ ಪಲ್ಟಿ: 11 ಸಂತೆ ವ್ಯಾಪಾರಿಗಳ ಸಾವು

ಸವಣೂರಿನಿಂದ ಕುಮಟಾದ ವಾರದ ಸಂತೆಗೆ ತೆರಳುತ್ತಿದ್ದ ವ್ಯಾಪಾರಿಗಳು ಮಸಣಕ್ಕೆ
ಮೃತರ ಕುಟುಂಬಕ್ಕೆ ಪ್ರಧಾನಿ 2 ಲಕ್ಷ, ಸಿಎಂ ಪರಿಹಾರ ನಿಧಿಯಿಂದ 3 ಲಕ್ಷ ಪರಿಹಾರ



**ಶಿರಸಿ:** ಹಣ್ಣು, ತರಕಾರಿ ತುಂಬಿದ್ದ ಲಾರಿಯೊಂದು ಯಲ್ಲಾಪುರ ತಾಲೂಕಿನ ಗುಳ್ಳಾಪುರದ ಅರೆಬೈಲ್ ಘಟ್ಟದ ಸಮೀಪ ಬುಧವಾರ ನಸುಕಿನ ಜಾವ ಪಲ್ಟಿಯಾಗಿದ್ದು, ಅದರಲ್ಲಿದ್ದ 11 ಮಂದಿ ಮೃತಪಟ್ಟಿದ್ದಾರೆ.

ಫಯಾಜ್ ಜಮಖಂಡಿ(45), ವಸಿಂ ಮುಡಗೇರಿ(35), ಇಜಾಜ್ ಮುಲ್ಲಾ(20), ಸಾದಿಕ್ ಭಾಷಾ(30), ಗುಲಾಂ ಹುಸೇನ್ ಜವಳಿ(40), ಇಮ್ತಿಯಾಜ್ ಮುಳಕೇರಿ(36), ಅಲ್ಫಾಜ್ ಜಾಫರ್ ಮಂಡಕ್ಕಿ(25), ಜಿಲಾನಿ ಅಬ್ದುಲ್ ಜಕಾತಿ (25), ಅಸ್ಲಂ ಬಾಬುಲಿ ಬೆಣ್ಣಿ(24), ಜಲಾಲ್ ಭಾಷಾ(25) ಸುಭಾಸ್ ಗೌಡ(34) ಮೃತರು.

ಮಲ್ಲಿಕ್ ರಿಹಾನ್(22), ಅಫ್ಸರ್‌ಖಾನ್(20), ಅಶ್ರಫ್. ಎಲ್(20), ನಿಜಾಮುದ್ದೀನ್ ಸುಧಾಗರ್(28) ಖಾಜಾ ಹುಸೇನ್(30), ಖಾಜಾ ಮೈನ್(21), ಮಹ್ಮದ್ ಸಾದಿಕ್(21) ಮರ್ದಾನ್ ಸಾಬ್(21), ಇರ್ಫಾನ್ ಗುಡಿಗೇರಿ(18), ಜಾಫರ್ ಸವಣೂರು(28) ಗಾಯಗೊಂಡಿದ್ದಾರೆ. ಗಾಯಾಳುಗಳನ್ನು ಹುಬ್ಬಳ್ಳಿಯ ಕಿಮ್ಸ್ ಆಸ್ಪತ್ರೆಗೆ ದಾಖಲಿಸಲಾಗಿದೆ.

ಕುಮಟಾದಲ್ಲಿ ನಡೆಯುವ ವಾರದ ಸಂತೆಗೆ ಹಾವೇರಿ ಜಿಲ್ಲೆಯ ಸವಣೂರಿನಿಂದ ಯಲ್ಲಾಪುರ ಮಾರ್ಗವಾಗಿ ತರಕಾರಿ ಸಾಗಿಸುವ ವೇಳೆ ದುರ್ಘಟನೆ ನಡೆದಿದೆ. ಮೃತರೆಲ್ಲರೂ ತರಕಾರಿ ವ್ಯಾಪಾರಿಗಳು. ಲಾರಿಯಲ್ಲಿ ತರಕಾರಿ ದಾಸ್ತಾನಿನ ಜತೆಗೆ 30ಕ್ಕೂ ಹೆಚ್ಚು ವ್ಯಾಪಾರಿಗಳು ಪ್ರಯಾಣಿಸುತ್ತಿದ್ದರು. ಚಾಲಕನ ನಿದ್ದೆ ಮಂಪರಿನಿಂದಾಗಿ ನಿಯಂತ್ರಣ ತಪ್ಪಿ ರಸ್ತೆಯ ಪಕ್ಕದ ಕಂದಕಕ್ಕೆ ಲಾರಿ ಉರುಳಿದೆ ಎಂದು ಪೊಲೀಸರು ತಿಳಿಸಿದ್ದಾರೆ.

### ಮೃತರ ಮನೆಗಳ ಎದುರು ಆಕ್ರಂದನ

**ಈ ಭೀಕರ ಅಪಘಾತದಲ್ಲಿ ತಮ್ಮೂರಿನ 10 ಜನ ಒಂದೇ ದಿನ ಮೃತಪಟ್ಟದ್ದರಿಂದ ಸವಣೂರಿನ ಜನರು ಆಘಾತಕ್ಕೊಳಗಾಗಿದ್ದಾರೆ. ಮೃತಪಟ್ಟವರೆಲ್ಲರೂ ಪಟ್ಟಣದ ಹಲವೆಡೆ ಪ್ರತ್ಯೇಕವಾಗಿ ವಾಸವಿದ್ದರು. ಇವರ ಸಾವಿನಿಂದ ಮನೆಯಲ್ಲಿ ಕುಟುಂಬಸ್ಥರ ಆಕ್ರಂದನ ಮುಗಿಲು ಮುಟ್ಟಿದೆ. ಹಾವೇರಿ ಪೊಲೀಸ್ ಹೆಚ್ಚುವರಿ ಎಸ್‌ಪಿ ಲಕ್ಷ್ಮಣ ಶಿರಕೋಳ, ಮೃತರ ಮನೆಗಳಿಗೆ ಭೇಟಿ ನೀಡಿ ಸಾಂತ್ವನ ಹೇಳಿದರು. ಶಿಗ್ಗಾವಿ ಶಾಸಕ ಯಾಸೀರ ಅಹ್ಮದ್ ಖಾನ್ ಪಠಾಣ ಅವರು ಯಲ್ಲಾಪುರ ಆಸ್ಪತ್ರೆಯಲ್ಲಿಯೇ ಬೀಡು ಬಿಟ್ಟಿದ್ದರು.**

### ಪ್ರಧಾನಿ, ಸಿಎಂ ಪರಿಹಾರ

ಅಪಘಾತದಲ್ಲಿ ಮೃತಪಟ್ಟವರ ಕುಟುಂಬಗಳಿಗೆ ಪ್ರಧಾನಿ ನರೇಂದ್ರ ಮೋದಿ 2 ಲಕ್ಷ ಹಾಗೂ ರಾಜ್ಯ ಸರಕಾರದಿಂದ ತಲಾ ₹3 ಲಕ್ಷ ಪರಿಹಾರ ಘೋಷಿಸಲಾಗಿದೆ. ರಾಜ್ಯ ಸರಕಾರದ ಆದೇಶದ ಮೇರೆಗೆ ಜಿಲ್ಲಾಧಿಕಾರಿ ಕೆ.ಲಕ್ಷ್ಮಿಪ್ರಿಯಾ ಮೃತರ ಕುಟುಂಬ ಸದಸ್ಯರಿಗೆ ಪರಿಹಾರ ಮೊತ್ತ ಬಿಡುಗಡೆಯ ಆದೇಶ ಪ್ರತಿ ನೀಡಿದರು.

**ಸಿಎಂ ಸಂತಾಪ:** ಘಟನೆಯ ಬಗ್ಗೆ ಸಿಎಂ ಸಿದ್ದರಾಮಯ್ಯ ಟ್ವೀಟ್ ಮಾಡಿದ್ದು, ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪುರ ಹಾಗೂ ಸಿಂಧನೂರಿನಲ್ಲಿ ಸಂಭವಿಸಿದ ಎರಡು ಪ್ರತ್ಯೇಕ ಅಪಘಾತಗಳಲ್ಲಿ ಒಟ್ಟು 14 ಜನ ಸಾವನ್ನಪ್ಪಿರುವ ಸುದ್ದಿ ತಿಳಿದು ಸಂಕಟವಾಯಿತು. ಮೃತರ ಆತ್ಮಗಳಿಗೆ ಚಿರಶಾಂತಿ ಕೋರುತ್ತೇನೆ. ಈ ದುರ್ಘಟನೆಗಳಲ್ಲಿ ತಮ್ಮವರನ್ನು ಕಳೆದುಕೊಂಡು ದುಃಖದಲ್ಲಿರುವ ನೊಂದ ಜನರಿಗೆ ನನ್ನ ಸಂತಾಪಗಳು ಎಂದು ತಿಳಿಸಿದ್ದಾರೆ.

## ಕ್ರೂಸರ್ ಪಲ್ಟಿ: 4 ಸಾವು

**ಸಿಂಧನೂರು-ರಾಯಚೂರು ರಸ್ತೆಯಲ್ಲಿ ದುರ್ಘಟನೆ ಮೂವರು ವಿದ್ಯಾರ್ಥಿಗಳು, ಚಾಲಕ ಸ್ಥಳದಲ್ಲೇ ಸಾವು**



**ರಾಯಚೂರು:** ಸಿಂಧನೂರು-ರಾಯಚೂರು ಮುಖ್ಯ ರಸ್ತೆಯಲ್ಲಿ ವೈಷ್ಣವಿದೇವಿ ದೇವಸ್ಥಾನದ ಸಮೀಪ ಮಂಗಳವಾರ ರಾತ್ರಿ ಕ್ರೂಸರ್ ಪಲ್ಟಿಯಾಗಿ ಚಾಲಕ ಹಾಗೂ ಮೂವರು ವಿದ್ಯಾರ್ಥಿಗಳು ಸೇರಿ ನಾಲ್ವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಮಂತ್ರಾಲಯದ ಸಂಸ್ಕೃತ ವಿದ್ಯಾಪೀಠದ ವಿದ್ಯಾರ್ಥಿಗಳಾದ ಸುಜಯೇಂದ್ರ ಕೃಷ್ಣಮೂರ್ತಿ(22), ಬಳ್ಳಾರಿಯ ಹಯವದನ ಪ್ರಹ್ಲಾದಚಾರಿ(18), ಕೊಪ್ಪಳದ ಅಭಿಲಾಷ ಅಶ್ವತ್ ಓಲಿ (20) ಹಾಗೂ ಚಾಲಕ ಕಂಸಾಲಿಶಿವಾ ಸೋಮಣ್ಣ(20) ಮೃತಪಟ್ಟಿದ್ದಾರೆ.

ಬಳ್ಳಾರಿಯ ಶ್ರೀಹರಿ ರಾಘವೇಂದ್ರ, ಗಂಗಾವತಿಯ ವಿಜಯೇಂದ್ರ ಸುಶಿಲೇಂದ್ರ, ತಾಳಿಕೋಟೆಯ ಭರತ ರವಿ ಜೋಶಿ, ದೇವದುರ್ಗ ತಾಲೂಕಿನ ಗಬ್ಬೂರಿನ ರಾಘವೇಂದ್ರ ರಾಜೇಂದ್ರರಾವ್, ಯಾದಗಿರಿಯ ತನಿಶ್ ಉಲ್ಲಾಸ, ಕುಷ್ಟಗಿಯ ಶ್ರೀಕರ ರಾಘವೇಂಧ್ರ ಆಚಾರಿ, ನಾರಾಯಣಪೇಟೆಯ ವಾಸುದೇವ ಮಂಜುನಾಥ, ರಾಘವೇಂದ್ರ, ಸುಧೀಂದ್ರ, ತಿರುಪತಿಯ ಬಸಂತ ಜಗದೀಶ ಶರ್ಮಾ, ಬಳ್ಳಾರಿಯ ಜಯಸಿಂಹ ರಾಘವೇಂದ್ರ ಗಾಯಗೊಂಡಿದ್ದಾರೆ.

ಕೊಪ್ಪಳ ಜಿಲ್ಲೆಯ ಆನೆಗುಂದಿ ಸಮೀಪದ ನರಹರಿ ತೀರ್ಥರ ಮೂರು ದಿನಗಳ ಆರಾಧನೆ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ರಾತ್ರಿ ಮಂತ್ರಾಲಯದಿಂದ ನಾಲ್ಕು ಕ್ರೂಸರ್‌ಗಳಲ್ಲಿ ಹೊರಟಿದ್ದರು. ವೇಗವಾಗಿ ಚಲಿಸುತ್ತಿದ್ದ ಕ್ರೂಸರ್ ಪಲ್ಟಿಯಾಗಿ ನಾಲ್ವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಗಾಯಗೊಂಡವರಿಗೆ ಸಿಂಧನೂರು ಸಾರ್ವಜನಿಕ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಲಾಗಿದೆ. ಸಿಂಧನೂರು ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ರೈಲು ಹರಿದು 11 ಜನ ಸಾವು

**ರೈಲಿನಲ್ಲಿ ಬೆಂಕಿ ವದಂತಿಯಿಂದ ಇಳಿದು ಪಕ್ಕದ ಹಳಿಗೆ ಹೋದ ಪ್ರಯಾಣಿಕರ ಮೇಲೆ ಹರಿದ ಕರ್ನಾಟಕ ಎಕ್ಸ್‌ಪ್ರೆಸ್ ರೈಲು**

**ಜಲಗಾಂವ್:** ಮುಂಬಯಿಗೆ ತೆರಳುತ್ತಿದ್ದ ಪುಷ್ಪಕ್ ಎಕ್ಸ್‌ಪ್ರೆಸ್‌ನಲ್ಲಿ ಬೆಂಕಿ ಕಾಣಿಸಿಕೊಂಡಿದೆ ಎಂದು ಭಯಭೀತರಾದ ಪ್ರಯಾಣಿಕರು ಜೀವ ಭಯದಿಂದ ಚಲಿಸುವ ರೈಲಿನಿಂದ ಜಿಗಿದಿದ್ದು, ಅದೇ ಸಮಯದಲ್ಲಿ ಪಕ್ಕದ ಹಳಿಯಲ್ಲಿ ಬರುತ್ತಿದ್ದ ಕರ್ನಾಟಕ ಎಕ್ಸ್‌ಪ್ರೆಸ್ ರೈಲು ಡಿಕ್ಕಿ ಹೊಡೆದಿದೆ. ಘಟನೆಯಲ್ಲಿ 11 ಜನರು ಮೃತಪಟ್ಟಿದ್ದಾರೆ. ಹಲವರು ಗಾಯಗೊಂಡಿದ್ದಾರೆ.

ಜಲಗಾಂವ್ ಜಿಲ್ಲೆಯ ಪಚೋರಾ ತಾಲೂಕಿನ ಜಲಗಾಂವ್- ಮುಂಬಯಿ ರೈಲು ಮಾರ್ಗದಲ್ಲಿ ಮಹಿಜಿ ಮತ್ತು ಪರ್ಧಾಡೆ ನಿಲ್ದಾಣಗಳ ನಡುವೆ ಈ ಭೀಕರ ಘಟನೆ ಸಂಭವಿಸಿದೆ. ಪುಷ್ಪಕ್ ಎಕ್ಸ್‌ಪ್ರೆಸ್ ರೈಲಿನಿಂದ ಇದ್ದಕ್ಕಿದ್ದಂತೆ ಹೊಗೆ ಬರಲಾರಂಭಿಸಿತು. ರೈಲಿನಲ್ಲಿ ಬೆಂಕಿ ಕಾಣಿಸಿಕೊಂಡಿದೆ ಎಂಬ ಭೀತಿಯಲ್ಲಿ ಕೆಲ ಪ್ರಯಾಣಿಕರು ರೈಲ್ವೆ ಹಳಿ ಮೇಲೆ ಹಾರಿದ್ದಾರೆ. ಅದೇ ಸಮಯದಲ್ಲಿ ವಿರುದ್ಧ ದಿಕ್ಕಿನಿಂದ ಬರುತ್ತಿದ್ದ ಕರ್ನಾಟಕ ಎಕ್ಸ್‌ಪ್ರೆಸ್ ರೈಲು ಡಿಕ್ಕಿಯಾಗಿದೆ. ಹಲವು ಮೃತದೇಹಗಳು ಹಳಿ ಮೇಲೆ ಚೆಲ್ಲಾಪಿಲ್ಲಿಯಾಗಿ ಬಿದ್ದಿವೆ. ರೈಲಿನಿಂದ ಜಿಗಿದ ಕನಿಷ್ಠ 30-40 ಮಂದಿ ಗಾಯಗೊಂಡಿದ್ದಾರೆ.

### ಹೊಗೆ ಬಂದಿದ್ದು ಏಕೆ?

**ಜಲಗಾಂವ್‌ನ ಪರಂದಾ ರೈಲು ನಿಲ್ದಾಣ ವ್ಯಾಪ್ತಿಯಲ್ಲಿ ಹಳಿಗಳ ಕಾಮಗಾರಿ ನಡೆಯುತ್ತಿರುವುದರಿಂದ ರೈಲಿಗೆ ಎಚ್ಚರಿಕೆಯ ಸಂದೇಶ ರವಾನಿಸಲಾಗಿದೆ. ಹೀಗಾಗಿ ಪುಷ್ಪಕ್ ಎಕ್ಸ್‌ಪ್ರೆಸ್ ರೈಲು ನಿಧಾನಗೊಳಿಸಲು ಬ್ರೇಕ್ ಹಾಕುತ್ತಿದ್ದಂತೆ, ಚಕ್ರಗಳಿಂದ ಕಿಡಿಗಳು ಹೊರಹೊಮ್ಮಿವೆ. ಇದನ್ನು ಕಂಡ ಪ್ರಯಾಣಿಕರು ಭಯಭೀತರಾಗಿದ್ದಾರೆ. ಕೂಡಲೇ ರೈಲಿಗೆ ಬೆಂಕಿ ಹೊತ್ತಿಕೊಂಡಿದೆ ಎಂದು ವದಂತಿ ಹಬ್ಬಿದೆ ಎಂದು ವರದಿಯಾಗಿದೆ. ಈ ಘಟನೆಯಿಂದ ಇತರೆ ರೈಲುಗಳ ಸಂಚಾರಕ್ಕೂ ತೊಂದರೆಯಾಗಿದೆ.**

## ಆರ್.ಜಿ.ಕರ್ ಪ್ರಕರಣ: ಸಿಬಿಐ ಮೇಲ್ಮನವಿ

**ಕೋಲ್ಕತ್ತಾ:** ಪ.ಬಂಗಾಳದ ಆರ್. ಜಿ. ಕರ್ ಮೆಡಿಕಲ್ ಕಾಲೇಜಿನ ವೈದ್ಯೆ ಮೇಲಿನ ಅತ್ಯಾಚಾರ, ಕೊಲೆ ಪ್ರಕರಣದ ಅಪರಾಧಿ ಸಂಜಯ್ ರಾಯ್‌ಗೆ ನೀಡಿರುವ ಜೀವಾವಧಿ ಶಿಕ್ಷೆಯನ್ನು ಮರಣದಂಡನೆ ಶಿಕ್ಷೆಯನ್ನಾಗಿ ಪರಿವರ್ತಿಸುವಂತೆ ಕೋರಿ ಸಿಬಿಐ ಕೋಲ್ಕತ್ತಾ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದೆ. ಕೇಂದ್ರ ತನಿಖಾ ಸಂಸ್ಥೆಯು ಪ್ರಕರಣದ ತನಿಖೆಯನ್ನು ನಿರ್ವಹಿಸಿದ ರೀತಿಯನ್ನು ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ನೇತೃತ್ವದ ಸರ್ಕಾರ ಟೀಕಿಸಿತ್ತು. ಅಲ್ಲದೇ ಅಪರಾಧಿಗೆ ಮರಣದಂಡನೆ ಶಿಕ್ಷೆ ವಿಧಿಸಬೇಕು ಎಂದು ಪಶ್ಚಿಮ ಬಂಗಾಳ ಮತ್ತು ದೇಶದ ಹಲವೆಡೆ ಪ್ರತಿಭಟನೆಗಳು ಸಹ ನಡೆದಿದ್ದವು.

## ದರ್ಶನ್ ಜಾಮೀನು ಅರ್ಜಿ ವಿಚಾರಣೆ ನಾಳೆ

**ಬೆಂಗಳೂರು:** ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ಜೈಲಿಗೆ ಹೋಗಿ ಹೈಕೋರ್ಟ್‌ನಿಂದ ಷರತ್ತುಬದ್ಧ ಜಾಮೀನು ಪಡೆದಿರುವ ನಟ ದರ್ಶನ್‌ಗೆ ಹೈಕೋರ್ಟ್ ನೀಡಿರುವ ಜಾಮೀನು ಪ್ರಶ್ನಿಸಿ ಸುಪ್ರಿಂಕೋರ್ಟ್‌ಗೆ ಮೇಲ್ಮನವಿ ಅರ್ಜಿ ಸಲ್ಲಿಸಲಾಗಿದ್ದು, ಜ.24ರಂದು ಅರ್ಜಿ ವಿಚಾರಣೆಗೆ ಬರಲಿದೆ.ರಾಜ್ಯ ಸರಕಾರದ ಪರವಾಗಿ ಸುಪ್ರಿಂ ಕೋರ್ಟ್ ವಕೀಲ ಅನಿಲ್ ನಿಶಾನಿ ಅವರು ಮೇಲ್ಮನವಿ ಅರ್ಜಿ ಸಲ್ಲಿಸಿದ್ದು, ಹೈಕೋರ್ಟ್ ಏಕ ಸದಸ್ಯ ಪೀಠದ ನ್ಯಾಯಮೂರ್ತಿಗಳು ನೀಡಿರುವ ಷರತ್ತುಬದ್ಧ ಜಾಮೀನನ್ನು ರದ್ದುಪಡಿಸಬೇಕೆಂದು ಕೋರಿದ್ದಾರೆ. ಪೊಲೀಸರು ನ್ಯಾಯಾಲಯಕ್ಕೆ ಸಲ್ಲಿಸಿರುವ ದೋಷಾರೋಪಪಟ್ಟಿ, ಪಂಚನಾಮೆ ದಾಖಲೆಗಳು, ಸಾಕ್ಷಿದಾರರ ಹೇಳಿಕೆಗಳು ಸೇರಿದಂತೆ ಒಟ್ಟು 1498 ಪುಟಗಳ ಕಡತವನ್ನು ಸಲ್ಲಿಕೆ ಮಾಡಿದ್ದಾರೆ. ಇದರಲ್ಲಿ ಪ್ರಮುಖವಾಗಿ ಎಫ್‌ಎಸ್‌ಎಲ್ ವರದಿ, ಸಿಡಿಆರ್ ಮತ್ತು ಮರಣೋತ್ತರ ಪರೀಕ್ಷೆಯ ವರದಿ ಉಲ್ಲೇಖಿಸಿ ಜಾಮೀನು ರದ್ದು ಮಾಡಬೇಕೆಂದು ಮೇಲ್ಮನವಿ ಅರ್ಜಿಯಲ್ಲಿ ಅನಿಲ್ ನಿಶಾನಿ ಮನವಿ ಮಾಡಿದ್ದಾರೆ.

## ಈ ವರ್ಷ ಭಾರತದಲ್ಲಿ ಕ್ವಾಡ್ ಶೃಂಗಸಭೆ

**ವಾಷಿಂಗ್ಟನ್:** ಈ ವರ್ಷಾಂತ್ಯಕ್ಕೆ ನಡೆಯಲಿರುವ ಕ್ವಾಡ್ ನಾಯಕತ್ವ ಶೃಂಗಸಭೆಯ ಆತಿಥ್ಯವನ್ನು ಭಾರತ ವಹಿಸಿಕೊಳ್ಳಲಿದೆ. ಇಲ್ಲಿ ನಡೆದ ಕ್ವಾಡ್ ರಾಷ್ಟ್ರಗಳ ವಿದೇಶಾಂಗ ಸಚಿವರ ಸಭೆಯಲ್ಲಿ ಈ ಕುರಿತ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಸಭೆ ಬಳಿಕ ಬಿಡುಗಡೆ ಮಾಡಿರುವ ಜಂಟಿ ಹೇಳಿಕೆಯಲ್ಲಿ ತಿಳಿಸಲಾಗಿದೆ.

ಅಮೆರಿಕ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರುಬಿಯೊ ಆಯೋಜಿಸಿದ್ದ ಈ ಸಭೆಯಲ್ಲಿ ವಿದೇಶಾಂಗ ಸಚಿವ ಎಸ್. ಜೈಶಂಕರ್, ಆಸ್ಟ್ರೇಲಿಯಾದ ಪೆನ್ನಿ ವಾಂಗ್, ಜಪಾನ್‌ನ ಇವಯಾ ತಕೇಶಿ ಪಾಲ್ಗೊಂಡಿದ್ದರು. ಅಮೆರಿಕ, ಭಾರತ, ಆಸ್ಟ್ರೇಲಿಯಾ ಹಾಗೂ ಜಪಾನ್, ಕ್ವಾಡ್ ಸದಸ್ಯ ರಾಷ್ಟ್ರಗಳು.

**ಚೀನಾಗೆ ಎಚ್ಚರಿಕೆ:** ಹಿಂದೂ ಮಹಾಸಾಗರ-ಪೆಸಿಫಿಕ್ ಪ್ರದೇಶ ಸೇರಿದಂತೆ ಇತರ ಪ್ರದೇಶಗಳಲ್ಲಿನ ಯಥಾಸ್ಥಿತಿ ಬದಲಾಯಿಸಲು ಯಾವುದೇ ಏಕಪಕ್ಷೀಯ ಕ್ರಮಗಳನ್ನು ತೆಗೆದುಕೊಳ್ಳಬಾರದು ಎಂಬ ಕಠಿಣ ಸಂದೇಶವನ್ನು ಚೀನಾಕ್ಕೆ ಕ್ವಾಡ್ ರಾಷ್ಟ್ರಗಳು ರವಾನಿಸಿವೆ.

ವಾಷಿಂಗ್ಟನ್‌ನಲ್ಲಿ ನಡದ ಕ್ವಾಡ್ ಸಭೆಯಲ್ಲಿ ಸಂಘಟನೆಯ ಸದಸ್ಯ ರಾಷ್ಟ್ರಗಳ ವಿದೇಶಾಂಗ ಸಚಿವರು ಪಾಲ್ಗೊಂಡಿದ್ದರು.

### ಟ್ರಂಪ್ ಆಡಳಿತದಲ್ಲಿ ಭಾರತಕ್ಕೆ ಆದ್ಯತೆ

**ಡೊನಾಲ್ಡ್ ಟ್ರಂಪ್ ಅವರ ನೂತನ ಆಡಳಿತವು ಅಧಿಕಾರಕ್ಕೆ ಬರುತ್ತಿದ್ದಂತೆ ಭಾರತಕ್ಕೆ ನೀಡುವ ಪ್ರಾಮುಖ್ಯತೆಯನ್ನು ಸೂಚಿಸುತ್ತಾ, ಯುಎಸ್ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರೂಬಿಯೊ ಮತ್ತು ರಾಷ್ಟ್ರೀಯ ಭದ್ರತಾ ಸಲಹೆಗಾರ ಮೈಕ್ ವಾಲ್ಜ್ ಕ್ರಮವಾಗಿ ಭಾರತದ ವಿದೇಶಾಂಗ ಸಚಿವ ಎಸ್.ಜೈಶಂಕರ್ ಅವರೊಂದಿಗೆ ತಮ್ಮ ಮೊದಲ ದ್ವಿಪಕ್ಷೀಯ ಮತ್ತು ಅಂತಾರಾಷ್ಟ್ರೀಯ ಸಭೆಗಳನ್ನು ನಡೆಸಿದರು.**

### ಆಹಾರ, ರಸಗೊಬ್ಬರ, ಎಲ್‌ಪಿಜಿ ಸಬ್ಸಿಡಿ ಶೇ.8ರಷ್ಟು ಹೆಚ್ಚಳ ನಿರೀಕ್ಷೆ
## ಬಜೆಟ್‌ನಲ್ಲಿ 4 ಲಕ್ಷ ಕೋಟಿ ಸಬ್ಸಿಡಿ ನೀಡುವ ಸಾಧ್ಯತೆ

**ದೆಹಲಿ:** ಸದ್ಯ ಆಹಾರ ಮತ್ತು ಇಂಧನ ಬೆಲೆ ಏರಿಕೆಯಾಗಿದೆ. ಇದರಿಂದ ಗ್ರಾಹಕರಿಗೆ ಹೊರೆಯಾಗಿದೆ. ಹಾಗಾಗಿ, 2025-26ನೇ ಸಾಲಿನ ಕೇಂದ್ರ ಬಜೆಟ್‌ನಲ್ಲಿ ಆಹಾರ, ರಸಗೊಬ್ಬರ ಮತ್ತು ಅಡುಗೆ ಅನಿಲ ಸಿಲಿಂಡರ್‌ಗೆ ನೀಡುವ ಸಬ್ಸಿಡಿ ಮೊತ್ತವನ್ನು ಶೇ.8ರಷ್ಟು ಹೆಚ್ಚಿಸುವ ನಿರೀಕ್ಷೆಯಿದೆ ಎಂದು ಕೇಂದ್ರ ಸರಕಾರದ ಮೂಲಗಳು ತಿಳಿಸಿವೆ.

ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಫೆಬ್ರವರಿ 1ರಂದು ಸಂಸತ್‌ನಲ್ಲಿ ಬಜೆಟ್ ಮಂಡಿಸಲಿದ್ದು, ಸುಮಾರು ₹4 ಲಕ್ಷ ಕೋಟಿ ಸಬ್ಸಿಡಿ ನೀಡುವ ಸಾಧ್ಯತೆಯಿದೆ ಎಂದು ಹೇಳಿವೆ. ನಗರ ಪ್ರದೇಶದಲ್ಲಿ ದಿನಬಳಕೆಯ ವೆಚ್ಚದ ಪ್ರಮಾಣ ಕಡಿಮೆಯಾಗಿದೆ. ಕಂಪನಿಗಳ ಹೂಡಿಕೆಯೂ ಇಳಿಕೆಯಾಗಿದೆ. ಇದು ಒಟ್ಟು ಆಂತರಿಕ ಉತ್ಪನ್ನದ (ಜಿಡಿಪಿ) ನಿಧಾನಗತಿ ಬೆಳವಣಿಗೆಗೆ ಕಾರಣವಾಗಿದೆ. ಸಬ್ಸಿಡಿ ಪಾಲಿನಲ್ಲಿ ಗ್ರಾಮೀಣ ಪ್ರದೇಶದ ಪಾಲು ಹೆಚ್ಚಿದೆ. ಗ್ರಾಮೀಣ ದಿನಬಳಕೆಯ ವೆಚ್ಚದ ಏರಿಕೆಗೆ ಸಬ್ಸಿಡಿ ಸಹಕಾರಿಯಾಗಲಿದೆ ಎಂದು ಹೇಳಿವೆ.

- **ಕಳೆದ ಆರ್ಥಿಕ ವರ್ಷದಲ್ಲಿ ಸರಕಾರವು ಆಹಾರಕ್ಕೆ 2 ಲಕ್ಷ ಕೋಟಿ ಸಬ್ಸಿಡಿ ನೀಡಿದ್ದು, ಇದನ್ನು 2.14 ಲಕ್ಷ ಕೋಟಿಗೆ ಹೆಚ್ಚಿಸುವ ಸಾಧ್ಯತೆ**
- **ಅಡುಗೆ ಅನಿಲಕ್ಕೆ 25 ಸಾವಿರ ರು. ಹಾಗೂ ರಸಗೊಬ್ಬರಕ್ಕೆ 1.90 ಲಕ್ಷ ಕೋಟಿ ರು. ಸಬ್ಸಿಡಿ ನೀಡುವ ಸಾಧ್ಯತೆಯಿದೆ ಎನ್ನಲಾಗಿದೆ**

## ಮಾತಂದ್ರೆ ಮಾತು

**ನನ್ನನ್ನು ಪಕ್ಷದಿಂದ ಉಚ್ಚಾಟನೆ ಮಾಡುವ ತಾಕತ್ ನಾಯಕರಿಗೆ ಇಲ್ಲ. ಪಕ್ಷ ಕಟ್ಟುವ ತಾಕತ್ ಇರೋನು ಸಸ್ಪೆಂಡ್ ಮಾಡುತ್ತಾನೆ. ಆದರೆ ನನ್ನ ಪಕ್ಷದ ನಾಯಕರಿಗೆ ಈ ತಾಕತ್ ಇಲ್ಲ. ಅದಕ್ಕೆ ಉಚ್ಚಾಟನೆ ಮಾಡುತ್ತಿಲ್ಲ. ಯಾವುದೇ ಪಕ್ಷದ ನಾಯಕರು ಪಕ್ಷ ಸೇರುವ ಆಮಿಷದೊಂದಿಗೆ ನನ್ನನ್ನು ಸಂಪರ್ಕಿಸಿಲ್ಲ. ನಾನು ಸಹ ಯಾವುದೇ ಪಕ್ಷ ಸೇರುತ್ತಿಲ್ಲ.**

- ಜಿ.ಟಿ.ದೇವೇಗೌಡ
ಜೆಡಿಎಸ್ ಪಕ್ಷದ ಶಾಸಕ

## ಫನ್‌ತರಂಗ

- ರಘುಪತಿ ಶೃಂಗೇರಿ -

### ಕೆಎಸ್‌ಟಿಡಿಸಿಯಿಂದ ವಿನೂತನ ಪ್ರವಾಸಿ ಪ್ಯಾಕೇಜ್‌ಗಳು ಲಭ್ಯ | ಕೇರಳ, ತಮಿಳುನಾಡು, ಮಹಾರಾಷ್ಟ್ರಕ್ಕೆ ಹೊಸ ಟೂರ್ ಪ್ಯಾಕೇಜ್ | ಹಿರಿಯ ನಾಗರಿಕರಿಗೆ ವಿಶೇಷ ರಿಯಾಯಿತಿ
# ಕೈಗೆಟಕುವ ದರದಲ್ಲಿ ವಾರಗಟ್ಟಲೇ ಪ್ರವಾಸ ಭಾಗ್ಯ

● ಅಪರ್ಣಾ ಎ.ಎಸ್

ಕರ್ನಾಟಕ ಪ್ರವಾಸೋದ್ಯಮ ಇಲಾಖೆಯು ಮಧ್ಯಮವರ್ಗದ ಜನರಿಗೆ ಅನುಕೂಲವಾಗುವಂತೆ ವಿವಿಧ ರಾಜ್ಯಗಳ ಪ್ರವಾಸಿ ತಾಣಗಳಿಗೆ ಪ್ಯಾಕೇಜ್ ಟೂರ್‌ನ್ನು ಆಯೋಜಿಸಿದ್ದು, ಆಯಾ ರಾಜ್ಯದ ನೈಸರ್ಗಿಕ ತಾಣಗಳು, ಸಾಂಸ್ಕೃತಿಕ ಪರಂಪರೆ ಸೇರಿದಂತೆ ವೈವಿಧ್ಯಗಳನ್ನು ಪರಿಚಯಿಸಲು ಕಡಿಮೆ ಖರ್ಚಿನ ವಾರದ ಪ್ಯಾಕೇಜ್ ಪ್ರವಾಸವನ್ನು ಆರಂಭಿಸಿದೆ.

ವಿವಿಧ ರಾಜ್ಯಗಳ ಒಂಭತ್ತು ಪ್ರಖ್ಯಾತ ಸ್ಥಳಗಳಿಗೆ ಕೈಗೆಟಕುವ ದರದಲ್ಲಿ ಈ ಪ್ರವಾಸವನ್ನು ಆಯೋಜಿಸಿದ್ದು, ವಿವಿಧ ಪ್ರವಾಸಿ ತಾಣಗಳನ್ನು ನೋಡಬೇಕು ಆದರೆ ಆರ್ಥಿಕ ಪರಿಸ್ಥಿತಿಯಲ್ಲಿ ಸಾಧ್ಯವಿಲ್ಲ ಎನ್ನುವವರಿಗೆ ಈ ಪ್ಯಾಕೇಜ್ ಪ್ರವಾಸವು ಹೇಳಿ ಮಾಡಿಸಿದಂತಿದೆ, ವಾರಪೂರ್ತಿ ಆಯೋಜನೆಯಾಗುವ ಈ ಟೂರ್‌ನಲ್ಲಿ ಒಂದಿಬ್ಬರಿಗಿಂತ ಸಂಪೂರ್ಣ ಕುಟುಂಬವೇ ವಿವಿಧ ಕಡೆಗಳಿಗೆ ಭೇಟಿ ನೀಡಿ ಮನರಂಜನೆ ಹಾಗೂ ಅನೇಕ ಅನುಭವಗಳನ್ನು ಪಡೆದುಕೊಳ್ಳಬಹುದಾಗಿದೆ. ಜತೆಗೆ ಪ್ರವಾಸದ ಎಲ್ಲಾ ಪ್ಯಾಕೇಜ್‌ಗಳಲ್ಲೂ ಹಿರಿಯ ನಾಗರಿಕರಿಗೆ ರಿಯಾಯಿತಿ ನೀಡಲಾಗಿದೆ. ಒಂದು ಟಿಕೆಟ್ ಗಿಂತ ಮೂರು ಜನ ಬುಕ್ ಮಾಡಿದರೆ ಟೂರ್ ಪ್ಯಾಕೇಜ್ ರೇಟ್ ನಲ್ಲಿ ಕಡಿಮೆ ದರ ದೊರೆಯಲಿದೆ. ಪ್ರವಾಸಿಗರ ಊಟೋಪಚಾರ,ವಸತಿ, ಹೋಟೆಲ್ ವ್ಯವಸ್ಥೆಯನ್ನು ಸ್ವತಃ ಕೆಎಸ್‌ಟಿಡಿಸಿಯೇ ನೋಡಿಕೊಳ್ಳಲಿದೆ. ವಾರಗಳ ನಡೆಯುವ ಈ ಪ್ರವಾಸಕ್ಕೆ ಐಷಾರಾಮಿ ಬಸ್‌ಗಳನ್ನು ಬಳಸಿಕೊಳ್ಳಲಾಗುತ್ತಿದೆ. ಈ ಪ್ರವಾಸಿ ಪ್ಯಾಕೇಜ್‌ನಲ್ಲಿ ಒಂದು ದಿನದ ಟೂರ್ ಪ್ಯಾಕೇಜ್‌ನಿಂದ ಒಂದು ವಾರದ ವರೆಗಿನ ಪ್ಯಾಕೇಜ್ ಇರಲಿದ್ದು, ಟೂರ್ ಪ್ಯಾಕೇಜ್ ಒಬ್ಬರಿಗೆ ಒಂದು ದಿನಕ್ಕೆ 1480ರಿಂದ ಆರಂಭವಾಗಿ 20 ಸಾವಿರದಲ್ಲಿ ಸಂಪೂರ್ಣ ಪ್ರವಾಸವೇ ಮುಕ್ತಾಯವಾಗಲಿದೆ. ಇನ್ನು ಈ ಪ್ಯಾಕೇಜ್‌ನಲ್ಲಿ ಹಿರಿಯರಿಗೆ ರಿಯಾಯಿತಿಯನ್ನು ನೀಡಲಾಗಿದ್ದು, 200 ರುನಿಂದ 600 ರು.ವರೆಗೂ ರಿಯಾಯಿತಿ ಕೊಡಲಾಗಿದೆ.

ಈಗಾಗಲೇ ವಿವಿಧ ಪ್ರವಾಸಿ ಪ್ಯಾಕೇಜ್‌ಗಳನ್ನು ಆರಂಭಿಸಿರುವ ಕೆಎಸ್‌ಟಿಡಿಸಿ ಇದೀಗ, ಅಂತಾರಾಜ್ಯ ಪ್ರಯಾಣದಲ್ಲಿಯೂ ಹೊಸ ಪ್ಯಾಕೇಜ್‌ಗಳನ್ನು ಆರಂಭಿಸಿದೆ.

→ 4

**ಕರೋನಾ ಬಳಿಕ ಪ್ರತಿಯೊಬ್ಬರಲ್ಲಿಯೂ ಪ್ರವಾಸಕ್ಕೆ ಹೋಗಬೇಕೆಂಬ ಬಯಕೆ ಹೆಚ್ಚಿದೆ. ಆದರೆ ಮಧ್ಯಮವರ್ಗದವರಿಗೆ ಸುರಕ್ಷಿತ ಪ್ರವಾಸಕ್ಕೆ ಹಲವು ಸವಾಲುಗಳಿರುತ್ತದೆ. ಆದ್ದರಿಂದ ಕರ್ನಾಟಕ ಪ್ರವಾಸೋದ್ಯಮ ಅಭಿವೃದ್ಧಿ ಮಂಡಳಿವತಿಯಿಂದ ಅಂತಾರಾಜ್ಯ ಪ್ರವಾಸಗಳನ್ನು ಹಮ್ಮಿಕೊಳ್ಳಲಾಗಿದೆ. ಖಾಸಗಿ ಸಂಸ್ಥೆಗಳಿಗೆ ಹೋಲಿಸಿದರೆ, ಕಡಿಮೆ ದರದಲ್ಲಿ ಎಲ್ಲ ಪ್ರವಾಸಿ ಪ್ಯಾಕೇಜ್‌ಗಳನ್ನು ರೂಪಿಸಲಾಗಿದೆ.**

- ಸರೋವರ ಶ್ರೀನಿವಾಸ್
ಅಧ್ಯಕ್ಷರು, ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ಮಂಡಳಿ

● **ಕೃಷ್ಣಗಿರಿ ಡ್ಯಾಮ್ ಹೊಗೇನಕಲ್**

ಪ್ರವಾಸದ ದಿನ : ಶುಕ್ರವಾರ, ಶನಿವಾರ, ಭಾನುವಾರ
ಪ್ರವಾಸದ ಅವಧಿ : ಒಂದು ದಿನ
ದರ (ಒಬ್ಬರಿಗೆ) : 1480 ರು.
ಹಿರಿಯ ನಾಗರಿಕರಿಗೆ ಸಿಗುವ ರಿಯಾಯಿತಿ : 200 ರು.

● **ಯಗಚಿ-ಚಿಕ್ಕಮಗಳೂರು**

ಪ್ರವಾಸದ ದಿನ : ಪ್ರತಿದಿನ
ಪ್ರವಾಸದ ಅವಧಿ : ಎರಡು ದಿನ
ದರ (ಒಬ್ಬರಿಗೆ) : 6460 ರು.
ಹಿರಿಯ ನಾಗರಿಕರಿಗೆ ಸಿಗುವ ರಿಯಾಯಿತಿ : 325 ರು.

● **ಕೊಚ್ಚಿ-ಆಲೆಪ್ಪಿ**

ಪ್ರವಾಸದ ದಿನ : ಪ್ರತಿ ಶುಕ್ರವಾರ
ಪ್ರವಾಸದ ಅವಧಿ : 4 ದಿನ
ದರ (ಒಬ್ಬರಿಗೆ) : 12980
ಹಿರಿಯ ನಾಗರಿಕರಿಗೆ ಸಿಗುವ ರಿಯಾಯಿತಿ : 675

## ಸಮಾಚಾರ ಸಣ್ಣದಲ್ಲ

### ಹಸುಗಳ ಕಳ್ಳತನ: ಸೆರೆ

**ಬೆಂಗಳೂರು:** ಚಾಮರಾಜಪೇಟೆಯಲ್ಲಿ ಇತ್ತೀಚೆಗೆ ಹಸುವಿನ ಕೆಚ್ಚಲು ಕೊಯ್ದು ವಿಕೃತಿ ಮೆರೆದಿದ್ದ ಪ್ರಕರಣ ನಡೆದಿತ್ತು. ಈ ಬೆನ್ನಲ್ಲೇ ಅಮೃತಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಹಸುಗಳು ಕಳ್ಳತನವಾಗಿರುವ ಘಟನೆ ನಡೆದಿದ್ದು, ತಡವಾಗಿ ಬೆಳಕಿಗೆ ಬಂದಿದೆ. ಹೆಲ್ಮೆಟ್ ಧರಿಸಿ ಬಂದ ವ್ಯಕ್ತಿಯೊಬ್ಬ 2 ಲಕ್ಷ ರು. ಮೌಲ್ಯದ ಮೂರು ಹಸುಗಳನ್ನು ಕಳ್ಳತನ ಮಾಡಿದ್ದಾನೆ. ಕಳ್ಳನ ಕೈಚಳಕದ ದೃಶ್ಯ ಸಿಸಿಟಿವಿಯಲ್ಲಿ ಸೆರೆಯಾಗಿದೆ. ಜಕ್ಕೂರಿನ ಸರಕಾರಿ ಶಾಲೆಯ ಸಮೀಪ ಖಾಲಿ ಜಾಗದಲ್ಲಿ ಹಸುಗಳನ್ನು ಕಟ್ಟಿಹಾಕಲಾಗಿತ್ತು. ಆದರೆ ಜ.15ರಂದು ಬೆಳಗ್ಗೆ 11 ಗಂಟೆ ಸುಮಾರಿಗೆ ಕಾಣೆಯಾಗಿವೆ. ಮೂರು ದಿನಗಳು ಹುಡುಕಾಟ ನಡೆಸಿದ ಮಾಲೀಕರು ಬಳಿಕ ಅಮೃತಹಳ್ಳಿ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ದೂರಿನ ಅನ್ವಯ ಜ.19ರಂದು ಎಫ್‌ಐಆರ್ ದಾಖಲಾಗಿದೆ. ದೂರು ದಾಖಲಾಗುತ್ತಿದ್ದಂತೆ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿದ್ದ ಪೊಲೀಸರು, ಓರ್ವ ಆರೋಪಿಯನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ. ಯಾವ ಉದ್ದೇಶದಿಂದ ಕಳ್ಳತನ ಮಾಡಿದ್ದ ಎನ್ನುವುದರ ಮಾಹಿತಿ ಕಲೆ ಹಾಕುತ್ತಿದ್ದಾರೆ. ಇನ್ನೂ ವಿಚಾರಣೆ ವೇಳೆ ಆರೋಪಿ ನೀಡಿದ ಮಾಹಿತಿ ಮೇರೆಗೆ ಒಂದು ಹಸುವನ್ನು ಪೊಲೀಸರು ಪತ್ತೆ ಮಾಡಿದ್ದು, ಠಾಣೆಗೆ ತಂದು ಕಟ್ಟಿದ್ದಾರೆ.

### ಇಂದು ವಿದ್ಯುತ್ ವ್ಯತ್ಯಯ

**ಬೆಂಗಳೂರು:** ನಗರದ 66/11ಕೆವಿ ಜಕ್ಕಸಂದ್ರ ವಿ.ವಿ.ಕೇಂದ್ರದಲ್ಲಿ ಕೆಪಿಟಿಸಿಎಲ್ ವತಿಯಿಂದ ಜ.23ರಂದು ತುರ್ತುನಿರ್ವಹಣಾ ಕಾಮಗಾರಿ ಹಿನ್ನಲೆ ಬೆಳಗ್ಗೆ 10.00ರಿಂದ 5.00ರವರೆಗೆ ನಗರದ ಬಿ ಡಬ್ಲ್ಯೂಎಸ್‌ಎಸ್‌ಬಿ–ಎಸ್‌ಟಿಪಿ, ಎಚ್‌ಎಸ್ ಆರ್ 5ನೇ ಸೆಕ್ಟರ್ ಟೀಚರ್ಸ್ ಕಾಲೋನಿ, ವೆಂಕಟಾಪುರ, ಗ್ರೀನೇಜ್ ಅಪಾರ್ಟ್‌ಮೆಂಟ್, ಕೋರಮಂಗಲ, ಡಾಸ್ ಕಟ್ಟಡ, ಜಕ್ಕಸಂದ್ರ ಎಕ್ಸ್‌ಟೆನ್‌ಶನ್ 1ನೇ ಹಂತ ಮತ್ತು ಸುತ್ತಮುತ್ತಲಿನ ಪ್ರದೇಶಗಳು ವಿದ್ಯುತ್ ವ್ಯತ್ಯಯವಾಗಲಿದೆ. 66/11ಕೆವಿ ಶೋಭಾ ಅಪಾರ್ಟ್‌ಮೆಂಟ್ ವಿ.ವಿ.ಕೇಂದ್ರದಲ್ಲಿ ಕೆಪಿಟಿಸಿಎಲ್ ವತಿಯಿಂದ ಜ.24ರಂದು ತುರ್ತುನಿರ್ವಹಣಾ ಕಾಮಗಾರಿ ಹಿನ್ನಲೆ ಬೆಳಗ್ಗೆ 10.00ರಿಂದ 3.00ರ ವರೆಗೆ ಸರ್ಜಾಪುರ, ಸಸ್ಥಾನ ಗಾರ್ಡನ್ ಔಟರ್ ರಿಂಗ್ ರೋಡ್, ಸೆಂಟ್ರಲ್ ಮಾಲ್ ಎಕೋರಾ ಬಿಸಿನೆಸ್ ಪಾರ್ಕ್ ಶೋಭಾ ಅಪಾರ್ಟ್‌ಮೆಂಟ್, ಸರ್ಜಾಪುರ ಸಾಫ್ಟ್ ಜೋನ್, ತಕ್ಷಶಿಲಾ ಹೆಲ್ತ್ ಕೇರ್ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ತಿಳಿಸಿದೆ.

ವಿರಾಮ
ಪ್ರತಿ ಭಾನುವಾರ

## ಜಾಮೀನು ಪ್ರಶ್ನಿಸಿ ಸುಪ್ರಿಂಕೋರ್ಟ್‌ಗೆ ಮೇಲ್ಮನವಿ ಅರ್ಜಿ ಸಲ್ಲಿಕೆ

# ದರ್ಶನ್ ಜಾಮೀನು ವಿಚಾರಣೆ ನಾಳೆ

**ಬೆಂಗಳೂರು:** ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ಜೈಲಿಗೆ ಹೋಗಿ ಹೈಕೋರ್ಟ್‌ನಿಂದ ಷರತ್ತುಬದ್ಧ ಜಾಮೀನು ಪಡೆದಿರುವ ನಟ ದರ್ಶನ್‌ಗೆ ಹೈಕೋರ್ಟ್ ನೀಡಿರುವ

ಜಾಮೀನು ಪ್ರಶ್ನಿಸಿ ಸುಪ್ರಿಂಕೋರ್ಟ್‌ಗೆ ಮೇಲ್ಮನವಿ ಅರ್ಜಿ ಸಲ್ಲಿಸಲಾಗಿದ್ದು, ಜ.24 ರಂದು ಅರ್ಜಿ ವಿಚಾರಣೆಗೆ ಬರಲಿದೆ.

ರಾಜ್ಯ ಸರಕಾರದ ಪರವಾಗಿ ಸುಪ್ರಿಂ ಕೋರ್ಟ್ ವಕೀಲ ಅನಿಲ್ ನಿಶಾನಿ ಅವರು ಮೇಲ್ಮನವಿ ಅರ್ಜಿ ಸಲ್ಲಿಸಿದ್ದು, ಹೈಕೋರ್ಟ್ ಏಕಸದಸ್ಯ ಪೀಠದ ನ್ಯಾಯಮೂರ್ತಿಗಳು ನೀಡಿರುವ ಷರತ್ತು ಬದ್ಧ ಜಾಮೀನನ್ನು ರದ್ದುಪಡಿಸಬೇಕೆಂದು ಕೋರಿದ್ದಾರೆ.

ಪೊಲೀಸರು ನ್ಯಾಯಾಲಯಕ್ಕೆ ಸಲ್ಲಿಸಿರುವ ದೋಷಾರೋಪಪಟ್ಟಿ, ಪಂಚನಾಮೆ ದಾಖಲೆಗಳು, ಸಾಕ್ಷಿದಾರರ ಹೇಳಿಕೆಗಳು ಸೇರಿದಂತೆ ಒಟ್ಟು 1498 ಪುಟಗಳ ಕಡತವನ್ನು ಸಲ್ಲಿಕೆ ಮಾಡಿದ್ದಾರೆ. ಇದರಲ್ಲಿ ಪ್ರಮುಖವಾಗಿ ಎಫ್‌ಎಸ್‌ಎಲ್ ವರದಿ, ಸಿಡಿಆರ್ ಮತ್ತು ಮರಣೋತ್ತರ ಪರೀಕ್ಷೆಯ ವರದಿ ಉಲ್ಲೇಖಿಸಿ ಜಾಮೀನು ರದ್ದು ಮಾಡಬೇಕೆಂದು ಮೇಲನವಿ ಅರ್ಜಿಯಲ್ಲಿ ಅನಿಲ್ ನಿಶಾನಿ ಮನವಿ ಮಾಡಿದ್ದಾರೆ.

ಈ ಪ್ರಕರಣವು ಅಪರೂಪದಲ್ಲೇ ಅಪರೂಪದ ಪ್ರಕರಣ. ಎಂತಹ ನಾಗರಿಕ ಸಮಾಜವು ತಲೆತಗ್ಗಿಸುವ ಘಟನೆ ಇದಾಗಿದ್ದು, ಆರೋಪಿ ಸ್ಥಾನದಲ್ಲಿರುವ ದರ್ಶನ್ ಸೇರಿದಂತೆ ಇತರೆ ಆರೋಪಿಗಳಿಗೆ ಹೈಕೋರ್ಟ್ ಏಕಸದಸ್ಯ ಪೀಠದ ನ್ಯಾಯಮೂರ್ತಿ ವಿಶ್ವಾಜಿತ್ ಶೆಟ್ಟಿ ಅವರು ನೀಡಿರುವ ಷರತ್ತುಬದ್ಧ ಜಾಮೀನು ರದ್ದು ಪಡಿಸಬೇಕೆಂದು ಕೋರಲಾಗಿದೆ.

ಕಳೆದ ಡಿಸೆಂಬರ್ 13ರಂದು ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ಜೈಲು ಸೇರಿದ್ದ ಪ್ರಮುಖ ಆರೋಪಿಯಾಗಿದ್ದ ಎ1 ಆರೋಪಿ ಪವಿತ್ರಾ ಗೌಡ, ಎ2 ಆರೋಪಿ ದರ್ಶನ್, ಎ3 ಪವನ್, ಎ4 ಜಗದೀಶ್, ಎ5 ನಂದೀಶ್, ಎ7 ಅನುಕುಮಾರ್, ಎ9 ಧನರಾಜ್, ಎ10 ವಿನಯ್, ಎ12 ಲಕ್ಷ್ಮಣ್, ಎ11 ನಾಗರಾಜ್, ಎ14 ಪ್ರದೂಷ್ ಸೇರಿದಂತೆ ಪ್ರಕರಣದ ಎಲ್ಲಾ ಆರೋಪಿಗಳಿಗೂ ಜಾಮೀನು ಮಂಜೂರು ಮಾಡಿತ್ತು. ಇದೀಗ ಆರೋಪಿಗಳಿಗೆ ನೀಡಿರುವ ಜಾಮೀನು ರದ್ದುಪಡಿಸಬೇಕೆಂದು ರಾಜ್ಯ ಸರ್ಕಾರ ಮನವಿ ಮಾಡಲು ಮುಂದಾಗಿದೆ.

#### ಪ್ರಕರಣ ಹಿನ್ನಲೆ

**ನಟ ದರ್ಶನ್ ಗೆಳತಿ ಪವಿತ್ರಾ ಗೌಡಗೆ ಕೆಟ್ಟದಾಗಿ ಮೆಸೇಜ್ ಮಾಡಿದ್ದಾನೆದಂದು ದರ್ಶನ್ ಗ್ಯಾಂಗ್, ಚಿತ್ರದುರ್ಗದ ರೇಣುಕಾಸ್ವಾಮಿಯನ್ನು ಬೆಂಗಳೂರಿಗೆ ಕರೆತಂದರು. ಅಂದೇ ರೇಣುಕಾಸ್ವಾಮಿಯನ್ನು ಕೂಡಿ ಹಾಕಿದ್ದ ಶೆಡ್‌ಗೆ ಬಂದ ದರ್ಶನ್ ಹಾಗೂ ಪವಿತ್ರಾ ಗೌಡ ಆತನ ಮೇಲೆ ಹಲ್ಲೆ ನಡೆಸಿದ್ದರು ಎಂಬ ವಿಚಾರ ಚಾರ್ಜ್‌ಶೀಟ್‌ನಲ್ಲಿ ದಾಖಲಾಗಿ ನಿರಂತರವಾಗಿ ಹಲ್ಲೆ ನಡೆಸಿದ ಬಳಿಕ ರೇಣುಕಾಸ್ವಾಮಿ ಸಾವನ್ನಪ್ಪಿದ್ದ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.**

#### ಮೈಸೂರಿನ ಫಾರ್ಮ್ ಹೌಸ್‌ನಲ್ಲಿ ದರ್ಶನ್

**ಬೆನ್ನು ನೋವಿನಿಂದ ಬಳಲುತ್ತಿರುವ ನಟ ದರ್ಶನ್ ವೈದ್ಯರ ಸಲಹೆ ಪಡೆದು ಆಸ್ಪತ್ರೆಯಿಂದ ಡಿಸ್‌ಚಾರ್ಜ್ ಆಗಿದ್ದಾರೆ. ಬೆಂಗಳೂರಿನಲ್ಲಿದ್ದ ಪತ್ನಿ ವಿಜಯಲಕ್ಷ್ಮಿ ಅವರ ಅಪಾರ್ಟ್‌ಮೆಂಟ್ ನಲ್ಲಿದ್ದ ನಟ ದರ್ಶನ್, ಮೈಸೂರಿಗೆ ತೆರಳಲು ಕೋರ್ಟ್ ಅನುಮತಿ ಕೇಳಿದ್ದರು. ಅನುಮತಿ ಸಿಗುತ್ತಿದ್ದಂತೆ ನಟ ಮೈಸೂರಿನ ಶ್ರೀರಂಗಪಟ್ಟಣದ ಬಳಿ ಇರುವ ತಮ ಫಾರ್ಮ್ ಹೌಸ್ ತೆರಳಿ ವಿಶ್ರಾಂತಿ ಪಡೆಯುತ್ತಿದ್ದಾರೆ.**

## ಕರಾಳ ದಿನಾಚರಣೆ: ನಿಲುವು ತಿಳಿಸಲು ಎಂಇಎಸ್‌ಗೆ ಸೂಚನೆ

**ಬೆಂಗಳೂರು:** ಬೆಳಗಾವಿಯಲ್ಲಿ ನವೆಂಬರ್ 1ರಂದು ಕನ್ನಡ ರಾಜ್ಯೋತ್ಸವ ವಿರೋಧಿಸಿ ಕರಾಳ ದಿನ ಆಚರಿಸುವ ತನ್ನ ಪರಿಪಾಠಕ್ಕೆ ಸಂಬಂಧಿಸಿದಂತೆ ನಿಲುವು ಸ್ಪಷ್ಟಪಡಿಸಲು ಮಹಾರಾಷ್ಟ್ರ ಏಕೀಕರಣ ಸಮಿತಿಗೆ (ಎಂಇಎಸ್) ಹೈಕೋರ್ಟ್ ಬುಧವಾರ ನಿರ್ದೇಶಿಸಿದೆ.

ಬೆಳಗಾವಿ ಜಿಲ್ಲೆಯ ಹುಕ್ಕೇರಿಯ ಮಲ್ಲಪ್ಪ ಚಾಯಪ್ಪ ಅಕ್ಷರದ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಎನ್.ವಿ.ಅಂಜಾರಿಯಾ ಮತ್ತು ನ್ಯಾಯಮೂರ್ತಿ ಎಂ.ಐ.ಅರುಣ್ ಅವರ ವಿಭಾಗೀಯ ಪೀಠ ನಡೆಸಿತು.

ಇದಕ್ಕೂ ಮುನ್ನ ಅರ್ಜಿದಾರರ ಪರ ವಕೀಲ ಎನ್.ಪಿ.ಅಮೃತೇಶ್ ಅವರು, ರಾಜ್ಯದಲ್ಲಿ ಪ್ರತಿವರ್ಷ ನವೆಂಬರ್ 1ರಂದು ಆಚರಿಸುವ ಕನ್ನಡ ರಾಜ್ಯೋತ್ಸವವು ಕರ್ನಾಟಕ ಹಾಗೂ ಕನ್ನಡಿಗರ ಹೃದಯ ಮತ್ತು ಆತ್ಮದೊಂದಿಗೆ ಬೆಸೆದುಕೊಂಡಿದೆ. ಆದರೆ, ಗಡಿ ವಿವಾದ ಇರುವ ಬೆಳಗಾವಿ ಜಿಲ್ಲೆಯಲ್ಲಿ ಮಹಾರಾಷ್ಟ್ರ ಏಕೀಕರಣ ಸಮಿತಿಯು ರಾಜ್ಯೋತ್ಸವದ ದಿನದಂದೇ ಕರಾಳ ದಿನ ಆಚರಿಸಿಕೊಂಡು ಬರುತ್ತಿದೆ. ಮೇಲಾಗಿ ಕರಾಳ ದಿನ ಆಚರಿಸಲು ರಾಜ್ಯ ಪೊಲೀಸರೇ ಭದ್ರತೆ ಒದಗಿಸುತ್ತಿದ್ದಾರೆ ಎಂದು ಆಕ್ಷೇಪಿಸಿದರು.

#### ಫೆ.18ಕ್ಕೆ ವಿಚಾರಣೆ ಮುಂದೂಡಿಕೆ

**ಈ ಮಧ್ಯೆ ಪೀಠವು ಎಂಇಎಸ್ ಪರವಾಗಿ ಯಾರು ಹಾಜರಾಗುತ್ತಿದ್ದಾರೆ ಎಂದು ಪ್ರಶ್ನಿಸಿತು. ನ್ಯಾಯಾಲಯದಲ್ಲಿ ಹಾಜರಿದ್ದ ವಕೀಲರು, ತಾವು ಎಂಇಎಸ್ ನ ಅಧ್ಯಕ್ಷರನ್ನು ಪ್ರತಿನಿಧಿಸುತ್ತಿರುವುದಾಗಿ ತಿಳಿಸಿದರು. ಅದಕ್ಕೆ ಪೀಠವು ಕರ್ನಾಟಕದಲ್ಲಿ ಮಹಾರಾಷ್ಟ್ರವೇ? ಎಂದು ಲಘುಧಾಟಿಯಲ್ಲಿ ಪ್ರಶ್ನಿಸಿತಲ್ಲದೆ, ಪ್ರಕರಣದಲ್ಲಿ ನಿಮ್ಮ ನಿಲುವೇನು ಎಂಬುದನ್ನು ಮುಂದಿನ ವಿಚಾರಣೆಯೊಳಗೆ ಸ್ಪಷ್ಟಪಡಿಸಬೇಕು ಎಂದು ಎಂಇಎಸ್ ಪರ ವಕೀಲರಿಗೆ ಸೂಚಿಸಿ, ವಿಚಾರಣೆಯನ್ನು ಫೆಬ್ರವರಿ 18ಕ್ಕೆ ಮುಂದೂಡಿತು.**

## ಕಾಂಗ್ರೆಸಿಗರ ಭಟ್ಟಂಗಿತನದ ಪರಮಾವಧಿ: ಸಿ.ಟಿ.ರವಿ

### ಮಲ್ಲಿಕಾರ್ಜುನ ಖರ್ಗೆ ನಾಡಿನ ಜನರ ಕ್ಷಮೆ ಕೇಳಬೇಕು

**ಬೆಂಗಳೂರು:** ಕಾಂಗ್ರೆಸ್ ಸಮಾವೇಶದಲ್ಲಿ ಪ್ರಿಯಾಂಕಾ ಗಾಂಧಿಯವರನ್ನು ಕಿತ್ತೂರು ರಾಣಿ ಚನ್ನಮ್ಮನಿಗೆ ಹೋಲಿಸಿದ್ದಾರೆ. ಇದೊಂದು ರೀತಿಯ ಭಟ್ಟಂಗಿತನದ ಪರಮಾವಧಿ ಎಂದು ವಿಧಾನಪರಿಷತ್ ಸದಸ್ಯ ಸಿ.ಟಿ.ರವಿ ಟೀಕಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿ, ಕಿತ್ತೂರು ರಾಣಿ ಚನ್ನಮ್ಮ ಬ್ರಿಟಿಷರ ವಿರುದ್ಧ ಹೋರಾಟ ಮಾಡಿದ ವೀರರಾಣಿ. ಅವರನ್ನು ಪ್ರಿಯಾಂಕಾ ಗಾಂಧಿಗೆ ಹೋಲಿಕೆ ಮಾಡು

ವುದು ಅಥವಾ ಕಿತ್ತೂರು ರಾಣಿ ಚನ್ನಮ್ಮರಿಗೆ ಅವಮಾನ ಮಾಡುವುದು ಒಂದೇ ಆಗಿದೆ. ಹೊಗಳಿಕೆಯ ಭರದಲ್ಲಿ ಮಾನಸಿಕ ಗುಲಾಮಗಿರಿಯ ಪ್ರದರ್ಶನ ಮಾಡಿದ್ದಾರೆ ಎಂದರು. ದೇಶಕ್ಕಾಗಿ ತಮ್ಮ ಬದುಕನ್ನು ಸಮರ್ಪಿಸಿಕೊಂಡ ಕಿತ್ತೂರು ರಾಣಿ ಚನ್ನಮ್ಮ ಎಲ್ಲಿ? ಕುಟುಂಬದ ಕೈಯಲ್ಲಿ ಅಧಿಕಾರ ಇರಬೇಕು ಎನ್ನುವಂಥ ಈ ಗಾಂಧಿ ಎಲ್ಲಿ ಎಂದು ಪ್ರಶ್ನಿಸಿದ ಅವರು, ಎರಡಕ್ಕೂ ಹೋಲಿಕೆ ಮಾಡಿದರೆ, ಅದು ಒಂದು ರೀತಿಯ ಅಕ್ಷಮ್ಯ ಅಪರಾಧ. ಕನ್ನಡ ನಾಡನ್ನೂ ಅವಮಾನಿಸಿದ್ದು, ಈ ಸಂಬಂಧ ಅವರು ನಾಡಿನ ಜನರ ಕ್ಷಮೆ ಯಾಚಿಸಬೇಕು ಎಂದು ಆಗ್ರಹಿಸಿದರು.

ಕಾಂಗ್ರೆಸ್ ಅಧಿವೇಶನದಲ್ಲಿ ಗಾಂಧಿ ಸ್ಮರಣೆ ಮಾಡಿದ್ದಾರೆ. ಗಾಂಧಿ ಅವರ ಕಡೆಯ ಮಾತು ಕಾಂಗ್ರೆಸ್ ವಿಸರ್ಜಿಸಿ ಎಂಬುದಾಗಿತ್ತು. ಅದನ್ನೂ ಕಾಂಗ್ರೆಸಿಗರು ನೆನಪು ಮಾಡಿಕೊಳ್ಳಬೇಕು. ಗಾಂಧಿಯವರು ಸ್ವಾತಂತ್ರ್ಯ ಬಂದ ಮೇಲೆ ಭ್ರಷ್ಟಾಚಾರ ನಡೆಸಿ ಎಂದು ಕಾಂಗ್ರೆಸಿನವರಿಗೆ ಆದೇಶ ಮಾಡಿಲ್ಲ. ಕರ್ನಾಟಕ ಕಾಂಗ್ರೆಸ್ ಭ್ರಷ್ಟಾಚಾರ ಮಾಡುತ್ತಿದೆ. ಭ್ರಷ್ಟಾಚಾರ ಮಾಡಲು ಗಾಂಧಿ ಹೇಳಿಕೊಟ್ಟಿಲ್ಲ. ಕಾಂಗ್ರೆಸಿಗರು ಆತ್ಮಾವಲೋಕನ ಮಾಡಿಕೊಳ್ಳಬೇಕು ಎಂದರು.

**ಸಂವಿಧಾನ, ಅಂಬೇಡ್ಕರರನ್ನೂ ನೆನಪಿಸಿಕೊಂಡಿದ್ದು ಒಳ್ಳೆಯದೇ. ಅವರು ಬದುಕಿದ್ದಾಗ 2 ಬಾರಿ ಕಾಂಗ್ರೆಸಿನವರು ಸೋಲಿಸಿದ್ದರು. ಅಂಬೇಡ್ಕರರನ್ನು ಸೋಲಿಸಲು ಪ್ರಧಾನಿ ಜವಾಹರ ಲಾಲ್ ನೆಹರೂ ಅವರು ಪ್ರಚಾರಕ್ಕೆ ಬಂದಿದ್ದರು, ಅದಕ್ಕೂ ಸ್ವಲ್ಪ ಪ್ರಾಯಶ್ಚಿತ್ತ ಮಾಡಿಕೊಳ್ಳಿ.**

**–ಸಿ.ಟಿ.ರವಿ** ವಿಧಾನಪರಿಷತ್ ಸದಸ್ಯ

## ಹತ್ಯೆ ಪ್ರಕರಣ: ಅಮೃತಸರದಲ್ಲಿ ಆರೋಪಿ ಅಂದರ್

### ಜ.10ರಂದು ಬಾಗಲೂರು ಠಾಣೆ ವ್ಯಾಪ್ತಿಯ ಅಪಾರ್ಟ್‌ಮೆಂಟ್‌ನಲ್ಲಿ ಕೊಲೆ

**ಬೆಂಗಳೂರು:** ರೌಡಿಶೀಟರ್ ಮೇಲೆ ಗುಂಡು ಹಾರಿಸಿ ಹತ್ಯೆಗೈದು, ಮೃತದೇಹವನ್ನು ಸುಟ್ಟುಹಾಕಲು ಯತ್ನಿಸಿದ್ದ ಪ್ರಕರಣದ ಆರೋಪಿಯನ್ನು ಬಾಗಲೂರು ಠಾಣೆ ಪೊಲೀಸರು ಬಂಧಿಸಿದ್ದಾರೆ.

ಪಂಜಾಬ್‌ನ ಅಮೃತಸರ ಬಳಿ ಬ್ರಿಜೇಶ್ ಎಂಬ ಆರೋಪಿಯನ್ನು ಬಂಧಿಸಲಾಗಿದೆ. ಜನವರಿ 10ರಂದು ಬಾಗಲೂರು ಠಾಣೆ ವ್ಯಾಪ್ತಿಯ ಅಪಾರ್ಟ್‌ಮೆಂಟ್‌ನಲ್ಲಿ ಗುಣಶೇಖರ (30) ಎಂಬ ರೌಡಿಶೀಟರ್‌ನನ್ನು ಗುಂಡು ಹಾರಿಸಿ ಹತ್ಯೆಗೈಯ್ಯಲಾಗಿತ್ತು. ಪತಿ ನಾಪತ್ತೆಯಾಗಿದ್ದಾನೆ ಎಂದು ಗುಣಶೇಖರನ ಪತ್ನಿ ಜೋಸ್ಬಿನ್ ನೀಡಿದ ದೂರಿನನ್ವಯ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದರು. ಬಳಿಕ ತಮಿಳುನಾಡಿನ ಪೆನ್ನಾಗರಂ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಗುಣಶೇಖರನ ಮೃತದೇಹ ಸುಟ್ಟ ಸ್ಥಿತಿಯಲ್ಲಿ ಪತ್ತೆಯಾಗಿತ್ತು.

ಭಾರತೀನಗರ ಠಾಣೆಯ ರೌಡಿಶೀಟರ್ ಆಗಿರುವ ಬ್ರಿಜೇಶ್, ಪಂಜಾಬ್‌ನಲ್ಲಿ ನಕಲಿ ಚಿನ್ನ ತಂದು ಅದನ್ನು ಬಾಗಲೂರು ಠಾಣೆಯ ರೌಡಿಶೀಟರ್ ಗುಣಶೇಖರನ ಮೂಲಕ ಬೆಂಗಳೂರಿನಲ್ಲಿ ಮಾರಾಟ ಮಾಡುತ್ತಿದ್ದ. ಅದೇ ರೀತಿ ತಂದ ನಕಲಿ ಚಿನ್ನವನ್ನು ಬ್ರಿಜೇಶ್ ಹಾಗೂ ಗುಣಶೇಖರ ಸೇರಿ ಗುಣಶೇಖರನ ಸಂಬಂಧಿಯೊಬ್ಬರ ಮೂಲಕ ಫೈನಾನ್ಸ್ ಕಂಪನಿಯಲ್ಲಿ ಅಡವಿಟ್ಟು ಹಣ ಪಡೆದುಕೊಂಡಿದ್ದರು. ನಕಲಿ ಚಿನ್ನವೆಂದು ತಿಳಿದ ಬಳಿಕ ಫೈನಾನ್ಸ್ ಕಂಪನಿಯವರು ಹಣ ವಾಪಸ್ ಮಾಡಿ, ಇಲ್ಲದಿದ್ದರೆ ಪೊಲೀಸರಿಗೆ ದೂರು ನೀಡುತ್ತೇವೆ ಎಂದು ಗುಣಶೇಖರನ ಸಂಬಂಧಿಗೆ ತಾಕೀತು ಮಾಡಿದ್ದರು ಪೊಲೀಸರು ತಿಳಿಸಿದ್ದಾರೆ.

ಇದರಿಂದ ಕಂಗಾಲಾಗಿದ್ದ ಗುಣಶೇಖರ, ಹಣ

ಆರೋಪಿ ಬ್ರಿಜೇಶ್ ಹಾಗೂ ಮೃತ ವ್ಯಕ್ತಿ ಗುಣಶೇಖರ.

ನೀಡುವಂತೆ ಬ್ರಿಜೇಶ್‌ನ ಮೇಲೆ ಒತ್ತಡ ಹೇರಲಾರಂಭಿಸಿದ್ದ. ಅಲ್ಲದೆ ಬ್ರಿಜೇಶ್ ನಡೆಸುತ್ತಿದ್ದ ನಕಲಿ ಚಿನ್ನದ ವಹಿವಾಟಿನ ಕುರಿತು ಇತರರ ಬಳಿ ಹೇಳಿಕೊಂಡು ತಿರುಗಾಡಲಾರಂಭಿಸಿದ್ದ. ಈ ಎಲ್ಲಾ ಕಾರಣಗಳಿಂದ ಕೋಪಗೊಂಡಿದ್ದ ಬ್ರಿಜೇಶ್, ಜನವರಿ 10ರಂದು ಹಣ ಕೊಡುವುದಾಗಿ ಬಾಗಲೂರು ವ್ಯಾಪ್ತಿಯ ಅಪಾರ್ಟ್‌ಮೆಂಟ್‌ಗೆ ಗುಣಶೇಖರನನ್ನು ಕರೆಸಿಕೊಂಡಿದ್ದ. ಬಳಿಕ ಆತನ ಮೇಲೆ ಎರಡು ಸುತ್ತು ಗುಂಡು ಹಾರಿಸಿ ಹತ್ಯೆಗೈದಿದ್ದ. ನಂತರ ತನ್ನ ಸಹಚರನನ್ನು ಕರೆಸಿಕೊಂಡು ಕಾರಿನಲ್ಲಿ ಗುಣಶೇಖರನ ಮೃತದೇಹವನ್ನು ತಮಿಳುನಾಡಿನ ನಿರ್ಜನ ಪ್ರದೇಶಕ್ಕೆ ಕೊಂಡೊಯ್ದು ಬೆಂಕಿಯಿಟ್ಟಿದ್ದ. ಗುಣಶೇಖರನ ಮೃತದೇಹ ಪತ್ತೆಯಾದ ಬಳಿಕ ಹತ್ಯೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿತ್ತು. ಕೃತ್ಯದ ಬಳಿಕ ಮತ್ತೆ ನಕಲಿ ಚಿನ್ನದ ವಹಿವಾಟು ನಡೆಸಲು ಅಮೃತಸರಕ್ಕೆ ತೆರಳಿದ್ದ ಬ್ರಿಜೇಶ್‌ನನ್ನು ಸದ್ಯ ಬಂಧಿಸಲಾಗಿದೆ ಎಂದು ಬೆಂಗಳೂರು ಈಶಾನ್ಯ ವಿಭಾಗದ ಡಿಸಿಪಿ ಸಜೀತ್ ತಿಳಿಸಿದ್ದಾರೆ.

**ಬೆಂಗಳೂರಿನಲ್ಲಿ ಕೊಲೆ, ತಮಿಳುನಾಡಿನಲ್ಲಿ ಮೃತದೇಹ**

ರೌಡಿಶೀಟರ್ ಬ್ರಿಜೇಶ್ ಚಿನ್ನ ತಂದು ಮಾರಲು ಗುಣನಿಗೆ ನೀಡಿದ್ದ. ಗುಣ ಚಿನ್ನವನ್ನು ಮುತ್ತೂಟ್ ಫೈನಾನ್ಸ್‌ನಲ್ಲಿ 6 ಲಕ್ಷಕ್ಕೆ ಅಡವಿಟ್ಟಿದ್ದ. ನಂತರ ಬಂದ ಹಣದಲ್ಲಿ ಇಬ್ಬರು ಹಂಚಿಕೊಂಡಿದ್ದರು. ಚಿನ್ನದ ಮೇಲೆ ಇರುವ ಒಂದು ಲೇಯರ್ ಭಾಗವನ್ನು ಮಾತ್ರ ಚಿನ್ನದಿಂದ ಹಾಕಿ ನಂತರ ಉಳಿದ ಭಾಗ ಎಲ್ಲವೂ ಸಹ ನಕಲಿಯಾಗಿತ್ತು. ಮುತ್ತೂಟ್ ಫೈನಾನ್ಸ್‌ನವರು ನಕಲಿ ಎಂದು ತಿಳಿದು ಗುಣನಿಗೆ ಫೋನ್ ಮಾಡಿ ಹಣ ವಾಪಸ್ ಕೇಳಿದ್ದಾರೆ. ಇಲ್ಲದಿದ್ದರೆ ಪೊಲೀಸ್‌ಗೆ ದೂರು ದಾಖಲಿಸುತ್ತೇವೆ ಎಂದಿದ್ದಾರೆ. ಆಗ ಗುಣ, ಬ್ರಿಜೇಶ್‌ಗೆ ಹಣ ವಾಪಸ್ ನೀಡಲು ಒತ್ತಾಯಿಸಿದ್ದಾನೆ. ಇದೆಲ್ಲದರಿಂದ ಕೋಪಗೊಂಡಿದ್ದ ಬ್ರಿಜೇಶ್ ಏನಾದರೂ ಒಂದು ಗತಿ ಕಾಣಿಸಬೇಕು ಎಂದು ನಿರ್ಧಾರ ಮಾಡಿದ್ದ. ಅದರಂತೆ ಜ.10 ರಂದು ಕಾಲ್ ಮಾಡಿ ಅಪಾರ್ಟ್‌ಮೆಂಟ್‌ಗೆ ಕರೆಸಿಕೊಂಡಿದ್ದಾನೆ. ಅಲ್ಲಿ ಬ್ರಿಜೇಶ್ ಮಚ್ಚಿನಿಂದ ಹೊಡೆದು ಕೊಲೆ ಮಾಡಿದ್ದಾನೆ. ಬಳಿಕ ತಮಿಳುನಾಡಿನಲ್ಲಿ ಮೃತದೇಹ ಬಿಸಾಡಿದ್ದಾನೆ. ಬಾಗಲೂರು ಪೊಲೀಸರು ತಮಿಳುನಾಡಿಗೆ ಹೋಗಿದ್ದು, ಮೃತದೇಹ ಪತ್ತೆ ಹಚ್ಚಲಾಗಿತ್ತು. ರೌಡಿಶೀಟರ್ ಗುಣನ ಮೇಲೆ ಸಾಕಷ್ಟು ಕ್ರಿಮಿನಲ್ ಪ್ರಕರಣಗಳಿದ್ದವು. ಬ್ರಿಜೇಶ್ ಮೇಲೂ ಹಲವಾರು ಪ್ರಕರಣಗಳಿವೆ. ಹೀಗಾಗಿ, ಇಬ್ಬರ ಮೇಲೂ ರೌಡಿಶೀಟ್ ತೆರೆಯಲಾಗಿತ್ತು. ಕೊಲೆ ಬಳಿಕ ರೌಡಿಶೀಟರ್ ಬ್ರಿಜೇಶ್ ಹಾಗೂ ಆತನ ಸಹಚರರು ಮೂರು ದಿನಗಳ ನಂತರ ಪತ್ತೆಯಾಗಿದ್ದು, ಬಾಗಲೂರು ಪೊಲೀಸರು ತೀವ್ರ ವಿಚಾರಣೆ ನಡೆಸಿದ್ದಾರೆ.

IN THE COURT OF THE HON'BLE PRINCIPAL CITY CIVIL JUDGE AT BENGALURU (CCH-60)
FDP No. 64/2024 IN O.S.NO.158/2007

BETWEEN: Sri D.R.Shankarnarayana, Aged about 70 Years, S/o Late D.K. Ranganatha Rao, Residing at No.413, 4th Floor, 'A' Block, DS MAX SAGA, Near Prathyagari TempleTurahalli, Bengaluru-560 061 & Others ...Petitioners
AND: SMT.MAHALAKSHMI & Dead by her Lrs & Others ...Respondents

NOTICE TO THE RESPONDENT Nos. 2, 19 to 29

2. SMT. SRIDEVI, D/o. Late Mahalakshmi, Aged about 53 Years, Residing at No.30, 3rd Main, Raghavendra Block, Srinagar, Bengaluru-560 050.
19. SMT. SUSHILAMMA, D/o.Ramachandra, Aged about 25 Years, R/at Habbenahalli, Madivala Post, Malur Taluk, Kolar District-
20. SMT. RASHMI, D/o. Ramachandra, Aged about 19 Years, R/at Habbenahalli, Madivala Post, Malur Taluk, Kolar District-
21. SRI. SHANKARAPPA, Retired Head Master S/o. Late Savithramma, Aged about 60 Years, Residing at Habbenahalli, Madivala Post, Malur Taluk, Kolar District-
22. SRI. MURALI, S/o. Late Savithramma, Aged about 53 years, R/at Habbenahalli, Madivala Post, Malur Taluk,Kolar District-
23. SMT. GOWARAMMA, D/o Late Savithramma, Aged about 50 years, Residing at Habbenahalli, Madivala Post, Malur Taluk, Kolar District-
24. SRI. SUBRAMANI, S/o Late Savithramma, Aged about 48 years, R/at Habbenahalli, Madivala Post, Malur Taluk, Kolar District-
25. SMT. SHARADA, W/o D.K. Ranganatha Rao Aged about 56 Years, R/at No.50, 2nd Main Road, 4th Cross, Sarvabhusanagara, Chikkalasandra, Bengaluru-560 062
26. SRI. RAVIKEERTHI .D.R. S/o D.K. Ranganatha Rao, Aged about 29 Years, Residing at No.50, 2nd Main Road, 4th Cross, Sarvabhusanagara, Chikkalasandra, Bengaluru-560 062.
27. Smt. D.R.Shilpa, D/o Late D.K. Ranganatha Rao, W/o. Raghavendra, Aged about 26 years, Residing at No.50, 2nd Main Road, 4th Cross, Sarvabhusanagara, Chikkalasandra, Bengaluru-560 062.
28. Sri. Yogesh, Major, S/o. Late D.K. Ranganatha Rao, R/at No.45, Rangappa Galli, Chikkamavalli, Bengaluru-560 004.
29. Smt. Rama, Major, D/o. Late D.K. Ranganatha Rao, Residing at No.45, Rangappa Galli, Chikkamavalli, Bengaluru-560 004.

WHEREAS, the above named Decree Holder in Final Decree Proceedings O.S.No.158/2007 on the file of Additional City Civil Judge, City Civil Court [CCH-60], Bengaluru has instituted the above Final Decree Proceedings against the Respondents for the Final Decree Proceedings passed in said suit on 10.11.23 i.e., to allot the respective shares of the Suit Schedule Property to the Respondents No.2, 19, 20, 21, 22, 23, 24, 25, 26, 27, 28 and 29.

Therefore, you the Respondents No.2, 19, 20, 21, 22, 23, 24, 25, 26, 27, 28 and 29 are hereby warned to appear in person or through pleader duly instructed before the LIX Civil Judge, City Civil Court [CCH-60], **Bengaluru on 24.02.2025 at 11 A.M,** failing which the execution petition will be heard and determined ex-parte.

SCHEDULE PROPERTY

All the piece and parcel of the property bearing No.1249, 'Chitkala' situated at 4th Main, 'E' Block, 2nd Stage, Rajajinagar, Bangalore-10. Consisting of Ground and First Floors, measuring East to West: 30 ft X 40 ft and bounded on:
EAST BY : Property No.1334, WESTBY : Road,
NORTH BY: Property No.1250, SOUTH BY: Road,

Given under my hand and seal and signature **on this 21st day of January 2025 at Bengaluru.**

By Order of this Court, Assistant Registrar City Civil Court, Bengaluru

Advocate for Petitioner
J.S.DINESH, Advocate
No 74, "Mathrushree", 12th 'E' Main Road, 76th Cross, 6th Block, Rajajinagara Bengaluru - 560010.

### ರೈಲಿನಿಂದ ಕೆಳಗೆ ಜಿಗಿದ ವ್ಯಕ್ತಿ; ಗಾಯ

**ಬೆಂಗಳೂರು:** ವ್ಯಕ್ತಿಯೊಬ್ಬ ಚಲಿಸುತ್ತಿದ್ದ ರೈಲಿನಿಂದ (ಮೇಲ್ಸೇತುವೆಯಲ್ಲಿ ಚಲಿಸುತ್ತಿದ್ದಾಗ) ಸುಮಾರು 25 ರಿಂದ 30 ಅಡಿ ಕೆಳಗೆ ಜಿಗಿದ ಘಟನೆ ಬೆಂಗಳೂರಿನ ಮೆಜೆಸ್ಟಿಕ್‌ನಿಂದ ಮಲ್ಲೇಶ್ವರಂ ಕಡೆ ತೆರಳುವ ಮಾರ್ಗದಲ್ಲಿ ಸಂಭವಿಸಿದೆ. ರೈಲಿನಿಂದ ಕೆಳಗೆ ಬಿದ್ದ ರಭಸಕ್ಕೆ ವ್ಯಕ್ತಿಯ ಸೊಂಟ, ಬಲಭಾಗದ ಕಾಲಿಗೆ ತೀವ್ರ ಗಾಯಗಳಾಗಿದೆ. ಕುಡಿದ ಅಮಲಿನಲ್ಲಿ ಚಲಿಸುತ್ತಿದ್ದ ರೈಲಿನಿಂದ ಕೆಳಕ್ಕೆ ಜಿಗಿದಿರುವ ಶಂಕೆ ವ್ಯಕ್ತವಾಗಿದೆ. ಸದ್ಯ ಸ್ಥಳಕ್ಕೆ ಧಾವಿಸಿರುವ ಪೊಲೀಸರು ರೈಲಿನಿಂದ ಕೆಳಗೆ ಬಿದ್ದ ವ್ಯಕ್ತಿಯ ಹೆಸರು, ವಿಳಾಸ ಪತ್ತೆ ಹಚ್ಚುತ್ತಿದ್ದಾರೆ. ಶೇಷಾದ್ರಿಪುಂ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಘಟನೆ ಸಂಭವಿಸಿದೆ.

**ಅರ್ಜಿ ಸಂಖ್ಯೆ ಯುಆರ್‌ಸಿ–2**
**ಭಾಗ–1ರ ಅಧ್ಯಾಯ 21ರಡಿ ನೋಂದಣಿ ಬಗ್ಗೆ ಸೂಚನೆ ನೀಡುವ ಬಗ್ಗೆ ಜಾಹೀರಾತು [ಸೆಕ್ಷನ್ 374(ಬಿ)ರ ಕಂಪನಿ ಕಾಯಿದೆ, 2013ರ ನಿಯಮ 4(1)ರ ಕಂಪನಿಗಳಿಗೆ ಸಂಬಂಧಪಟ್ಟಂತೆ (ಅಧಿಕೃತ ನೋಂದಣಿಯಾಗಲು) ನಿಯಮಗಳು, 2014]**

1, ಈ ಮೂಲಕ ಸೂಚಿಸುವುದೇನೆಂದರೆ, ಷೇರುಗಳಿಂದ ನಿಯಮಿತವಾದ ಕಂಪನಿಯನ್ನಾಗಿ ಕಂಪನಿಗಳ ಕಾಯ್ದೆ 2013ರ ಚಾಪ್ಟರ್ 21ರ ಭಾಗ 1ರ ಅಡಿಯಲ್ಲಿ ಮೆ॥ **"ನೌಸ್ ಇನ್‌ಫೋ ಸೆಲ್ಯೂಷನ್ ಎಲ್‌ಎಲ್‌ಪಿ** (ಎಲ್‌ಎಲ್‌ಪಿಐಎನ್ ;ಎಎಕ್ಯೂ–5376)"ಅನ್ನು ಇಂದಿನಿಂದ ಹದಿನೈದು ದಿನಗಳ ನಂತರ ಹಾಗೂ ಮೂವತ್ತು ದಿನಗಳ ಒಳಗಾಗಿ ನೋಂದಣಿ ಮಾಡಬಹುದು ಎಂಬುದಾಗಿ ಬೆಂಗಳೂರಿನಲ್ಲಿನ **ರಿಜಿಸ್ಟ್ರಾರ್ ಸೆಂಟ್ರಲ್ ರಿಜಿಸ್ಟ್ರೇಶನ್ ಸೆಂಟರ್ (ಸಿಆರ್‌ಸಿ), ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಕಾರ್ಪೋರೇಟ್ ಆಫೇರ್ಸ್(ಐಐಸಿಎ), ಪ್ಲಾಟ್ ನಂ.6,7,8 ಸೆಕ್ಟರ್–5, ಐಎಂಟಿ ಮಾನೇಸರ್, ಜಿಲ್ಲೆ, – ಗುರಗಾಂವ್ (ಹರ್ಯಾಣ), ಪಿನ್ ಕೋಡ್ – 122050 ಇವರಿಗೆ ಕಂಪನಿಗಳ ಕಾಯ್ದೆ, 2013ರ ಪ್ರಕರಣ 366 ಉಪಪ್ರಕರಣ(2)ರ ಅನುಸಾರ ರಿಜಿಸ್ಟ್ರಾರ್** ಅರ್ಜಿಯೊಂದನ್ನು ಸಲ್ಲಿಸಲು ಉದ್ದೇಶಿಸಲಾಗಿದೆ.

**2. ಕಂಪನಿಯ ಮುಖ್ಯ ಉದ್ದೇಶಗಳು ಈ ರೀತಿಯಾಗಿವೆ,**
ಒಂದು ಪಾಲುದಾರಿಕಾ ಸಂಸ್ಥೆಯಾಗಿದ್ದು ಅಭಿವೃದ್ಧಿಪಡಿಸುವ, ಉತ್ಪಾದಿಸುವ, ಸ್ವಾಧೀನ, ವ್ಯಾಪಾರ, ಆಮದು, ರಫ್ತು ಮತ್ತು ಇತರೆ ಕಂಪ್ಯೂಟರ್ ಸಾಫ್ಟ್‌ವೇರ್ ಮತ್ತು ಎಲ್ಲಾ ರೀತಿಯ ಇನ್ಫರ್‌ಮೇಷನ್ ಸಿಸ್ಟಮ್ಸ್ ಮತ್ತು ಸಂಸ್ಥೆಯ ಪರಸ್ಪರ ಒಪ್ಪಿತ ನಿರ್ಣಯದಂತೆ ಭಾರತದಲ್ಲಿ ಅಥವಾ ಎಲ್ಲಿಯಾದರು ವ್ಯವಹಾರ ನಿರ್ವಹಿಸುವುದು.

3. ಪ್ರಸ್ತಾವಿತ ಕಂಪನಿಯ ಕರಡು ಪತ್ರ ಮತ್ತು ನಿರ್ಧಾರಿತ ಆರ್ಟಿಕಲ್ ಆಫ್ ಅಸೋಸಿಯೇಶನ್‌ನ ನಕಲನ್ನು ಪ್ಲಾಟ್ ನಂ.983 ರಿಂದ 985, 7ನೇ ಅಡ್ಡರಸ್ತೆ, 24ನೇ ಮುಖ್ಯ ರಸ್ತೆ, ವಂಗನಹಳ್ಳಿ, 1ನೇ ಸೆಕ್ಟರ್, ಹೆಚ್‌ಎಸ್‌ಆರ್ ಲೇಔಟ್, ಬೆಂಗಳೂರು, ಬೆಂಗಳೂರು, ಕರ್ನಾಟಕ–560102, ಭಾರತ,
ಇಲ್ಲಿ ಪರಿಶೀಲಿಸಬಹುದಾಗಿದೆ.

4. ಈ ಅರ್ಜಿಯನ್ನು ಆಕ್ಷೇಪಿಸುವ ಯಾವುದೇ ವ್ಯಕ್ತಿಯು ತಮ್ಮ ಆಕ್ಷೇಪಣೆಯನ್ನು **ರಿಜಿಸ್ಟ್ರಾರ್, ಸೆಂಟ್ರಲ್ ರಿಜಿಸ್ಟ್ರೇಷನ್ ಸೆಂಟರ್ (ಸಿಆರ್‌ಸಿ) ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಕಾರ್ಪೋರೇಟ್ ಅಫೇರ್ಸ್ (ಐಐಸಿಎ), ಪ್ಲಾಟ್ ನಂ.6,7,8, ಸೆಕ್ಟರ್–5, ಐಎಂಟಿ ಮಾನೇಸರ್, ಜಿಲ್ಲೆ–ಗುರುಗಾಂವ್(ಹರ್ಯಾಣ), ಪಿನ್ ಕೋಡ್–122050** ಈ ವಿಳಾಸಕ್ಕೆ ಈ ಸೂಚನೆ ಪ್ರಕಟವಾದ 21 ದಿನಗಳ ಒಳಗಾಗಿ ಲಿಖಿತ ಮೂಲಕ ಹಾಗೂ ಒಂದು ಪ್ರತಿಯನ್ನು ನೋಂದಾಯಿತ ಕಚೇರಿಗೆ ಕಳುಹಿಸಬಹುದಾಗಿದೆ.

**ಅರ್ಜಿದಾರ(ರ) ಹೆಸರು**
**ಮೆ॥ ನೌಸ್ ಇನ್ಫೋಸೆಲ್ಯೂಷನ್ ಎಲ್‌ಎಲ್‌ಪಿ ರವರ ಪರವಾಗಿ**
**ಸಹಿ/–**
**1.ಕೃಷ್ಣ ಅಜಿತ್** (ಪದೋನ್ನತ ಪಾಲುದಾರರು)
**2. ಅಜಿತ್ ಕುಮಾರ್ ಜನಾರ್ದನ್ ಪಿಳ್ಳೈ** (ಪದೋನ್ನತ ಪಾಲುದಾರರು)
**3. ಅಪ್ಸರಾ ಪೆರುಂಬತ್** (ಪದೋನ್ನತ ಪಾಲುದಾರರು)
**ದಿನಾಂಕ: 23.01.2025.** **ಸ್ಥಳ: ಬೆಂಗಳೂರು**

## ರಾಜ್ಯ ಚಲನಚಿತ್ರ ಪ್ರಶಸ್ತಿ ಪ್ರಕಟ

### ಸುದೀಪ್ ಅತ್ಯುತ್ತಮ ನಟ–ಅನುಪಮಾಗೆ ಒಲಿದ ಅತ್ಯುತ್ತಮ ನಟಿ ಪ್ರಶಸ್ತಿ

**ಬೆಂಗಳೂರು:** 2019ನೇ ಸಾಲಿನ ರಾಜ್ಯ ಚಲನಚಿತ್ರ ಪ್ರಶಸ್ತಿ ಪ್ರಕಟವಾಗಿದೆ. ನಟ ಕಿಚ್ಚ ಸುದೀಪ್ ಅತ್ಯುತ್ತಮ ನಟ ಪ್ರಶಸ್ತಿಗೆ ಭಾಜನವಾಗಿದ್ದು, ಅನುಪಮಾ ಗೌಡ ಅತ್ಯುತ್ತಮ ನಟಿ ಪ್ರಶಸ್ತಿ ಪಡೆದುಕೊಂಡಿದ್ದಾರೆ. ಪಿ. ಶೇಷಾದ್ರಿ ನಿರ್ದೇಶನದ ಮೋಹನದಾಸ ಅತ್ಯುತ್ತಮ ಸಿನಿಮಾ ಪ್ರಶಸ್ತಿ ಗೆದ್ದುಕೊಂಡಿದೆ.



ಕೆ. ಕೃಷ್ಣ ನಿರ್ದೇಶನದ ಪೈಲ್ವಾನ್ ಚಿತ್ರದಲ್ಲಿ ಸುದೀಪ್ ಕುಸ್ತಿಪಟುವಾಗಿ ಕಾಣಿಸಿಕೊಂಡಿದ್ದರು. ಅನಾಥ ಹುಡುಗನೊಬ್ಬ ಹಠ ತೊಟ್ಟು ಹೇಗೆ ಬಾಕ್ಸಿಂಗ್ ಪಟುವಾಗಿ ಜಯ ಸಾಧಿಸುತ್ತಾನೆ ಎಂಬುದನ್ನು ಚಿತ್ರದಲ್ಲಿ ಮನಮುಟ್ಟುವಂತೆ ಕಟ್ಟಿಕೊಡಲಾಗಿತ್ತು. ಕಿಚ್ಚ ಸುದೀಪ್, ಪೈಲ್ವಾನ್ ಆಗಿ ಅದ್ಭುತವಾಗಿ ನಟಿಸಿದ್ದರು. ಅವರ ಅಭಿನಯಕ್ಕೆ ರಾಜ್ಯ ಪ್ರಶಸ್ತಿ ಒಲಿದು ಬಂದಿದೆ.

ನಿರ್ದೇಶಕ ದಯಾಳ್ ಪದ್ಮನಾಭನ್ ನಿರ್ದೇಶನದಲ್ಲಿ ತ್ರಯಂಬಕಂ ಚಿತ್ರ ಮೂಡಿಬಂದಿತ್ತು. ಸಸ್ಪೆನ್ಸ್, ಥ್ರಿಲ್ಲರ್ ಸ್ಟೋರಿಯ ಈ ಸಿನಿಮಾದಲ್ಲಿ ಅನುಪಮಾ ಗೌಡ ಪತ್ರಕರ್ತೆಯಾಗಿ ಮೆಚ್ಚುವ ಅಭಿನಯ ತೋರಿದ್ದರು. ಅನುಪಮಾ ತಮ್ಮ ಅದ್ಭುತ ನಟನೆಗಾಗಿ ಅತ್ಯುತ್ತಮ ನಟಿ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡಿದ್ದಾರೆ. ಐತಿಹಾಸಿಕ ಕಥೆಯ ಮೋಹನದಾಸ ಅತ್ಯುತ್ತಮ ಚಿತ್ರವಾಗಿದೆ. ಡಾರ್ಲಿಂಗ್ ಕೃಷ್ಣ ನಿರ್ದೇಶಿಸಿ ನಟಿಸಿದ್ದ ಲವ್ ಮಾಕ್ಟೇಲ್ ಅತ್ಯುತ್ತಮ ದ್ವಿತೀಯ ಚಿತ್ರ ಪ್ರಶಸ್ತಿ ಪಡೆದಿದೆ.

- **ಅತ್ಯುತ್ತಮ ನಟ : ಸುದೀಪ್**
- **ಅತ್ಯುತ್ತಮ ನಟಿ : ಅನುಪಮಾ ಗೌಡ**
- **ಅತ್ಯುತ್ತಮ ಚಿತ್ರ: ಮೋಹನದಾಸ (ನಿರ್ದೇಶನ: ಪಿ. ಶೇಷಾದ್ರಿ)**
- **ಅತ್ಯುತ್ತಮ ದ್ವಿತೀಯ ಚಿತ್ರ: ಲವ್ ಮಾಕ್ಟೇಲ್ (ನಿ: ಡಾರ್ಲಿಂಗ್ ಕೃಷ್ಣ)**
- **ಅತ್ಯುತ್ತಮ ಪೋಷಕ ನಟ : ತಬಲಾ ನಾಣಿ (ಕಮೆಸ್ಟ್ರಿ ಆಫ್ ಕರಿಯಪ್ಪ)**
- **ಅತ್ಯುತ್ತಮ ಪೋಷಕ ನಟಿ : ಅನುಷಾ ಕೃಷ್ಣ(ಬ್ರಾಹ್ಮಿ)**
- **ಅತ್ಯುತ್ತಮ ಬಾಲ ನಟ: ಮಾಸ್ಟರ್ ಪ್ರೀತಂ (ಮಿಂಚುಹುಳು),**
- **ಅತ್ಯುತ್ತಮ ಬಾಲ ನಟಿ: ಬೇಬಿ ವೈಷ್ಣವಿ ಅಡಿಗ (ಸುಗಂಧಿ),**
- **ಅತ್ಯುತ್ತಮ ಚಿತ್ರಕಥೆ: ಡಾರ್ಲಿಂಗ್ ಕೃಷ್ಣ (ಲವ್ ಮಾಕ್ಟೈಲ್)**
- **ಅತ್ಯುತ್ತಮ ಸಂಭಾಷಣೆ: ಬರಗೂರು ರಾಮಚಂದ್ರಪ್ಪ (ಅಮೃತಮತಿ)**
- **ಅತ್ಯುತ್ತಮ ಸಂಗೀತ ನಿರ್ದೇಶನ –ವಿ. ಹರಿಕೃಷ್ಣ (ಯಜಮಾನ)**
- **ಅತ್ಯುತ್ತಮ ಗೀತ ರಚನೆ: ರಘೂಕ್ ಪುತ್ತೂರು (ಪೆನ್ಸಿಲ್ ಬಾಕ್ಸ್)**
- **ಅತ್ಯುತ್ತಮ ಹಿನ್ನೆಲೆ ಗಾಯಕ: ರಘು ದೀಕ್ಷಿತ್ (ಲವ್ ಮಾಕ್ಟೇಲ್)**
- **ಅತ್ಯುತ್ತಮ ಹಿನ್ನೆಲೆ ಗಾಯಕಿ: ಜಯದೇವಿ ಜಿಂಗಮ ಶೆಟ್ಟಿ (ರಾಗಭೈರವಿ)**
- **ತೀರ್ಪುಗಾರರ ವಿಶೇಷ ಪ್ರಶಸ್ತಿ: ಅಮೃತಮತಿ ಹಾಗೂ ತಮಟೆ ನರಸಿಂಹಯ್ಯ ಚಿತ್ರ**
- **ಅತ್ಯುತ್ತಮ ಛಾಯಾಗ್ರಹಣ: ಜಿ.ಎಸ್ ಭಾಸ್ಕರ್**
- **ಅತ್ಯುತ್ತಮ ಸಂಕಲನ: ಜಿ.ಬಸವರಾಜ್ ಅರಸ್**
- **ಅತ್ಯುತ್ತಮ ಕಲಾ ನಿರ್ದೇಶನ: ಹೊಸ್ಮನೆ ಮೂರ್ತಿ**

## ಅಕ್ರಮ ಕಟ್ಟಡಗಳ ವಿದ್ಯುತ್ ಸಂಪರ್ಕ ಕಡಿತ

**ಬೆಂಗಳೂರು:** ಬಿಡಿಎಯ ಮನವಿಯ ಮೇರೆಗೆ ಬೆಸ್ಕಾಂ ಅಕ್ರಮವಾಗಿ ನಿರ್ಮಾಣ ಮಾಡಿದ ಮನೆಗಳ ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸಿದ್ದು, ಈ ಹಿನ್ನೆಲೆಯಲ್ಲಿ 200ಕ್ಕೂ ಅಧಿಕ ಭೂ ಮಾಲೀಕರು ಬಿಡಿಎಯ ಕಚೇರಿ ಬಳಿ ಪ್ರತಿಭಟನೆ ನಡೆಸಿದ್ದಾರೆ.

ಅವಾಚ್ಯ ಶಬ್ಧಗಳಿಂದ ನಿಂದಿಸಿ ಪ್ರತಿಭಟನೆ ನಡೆಸಿದ ಹಿನ್ನೆಲೆಯಲ್ಲಿ 200 ಜನರ ವಿರುದ್ಧ ಬಿಡಿಎ ಸಿಬ್ಬಂದಿ ಕರ್ತವ್ಯ ನಿರ್ವಹಿಸಲು ಅಡ್ಡಿಪಡಿಸಿದ್ದಾರೆ ಎಂದು ಕೆಂಗೇರಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದ್ದು, ಪ್ರತಿಭಟನೆಯ ಮತ್ತಷ್ಟು ಮುಂದುವರಿದ ಹಿನ್ನೆಲೆಯಲ್ಲಿ ಶೀಘ್ರದಲ್ಲೇ ಎಫ್‌ಐಆರ್ ದಾಖಲಿಸಲು ಮುಂದಾಗಿದೆ ಎಂದು ಬಿಡಿಎ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಬೆಂಗಳೂರು ಬಿಸಿನೆಸ್ ಕಾರಿಡಾರ್–ಐಐ ಹೊಸೂರಿನಿಂದ ತುಮಕೂರು ರಸ್ತೆಗೆ ಬನ್ನೇರುಘಟ್ಟ ರಸ್ತೆ, ಕನಕಪುರ ರಸ್ತೆ, ಮೈಸೂರು ರಸ್ತೆ ಮತ್ತು ಮಾಗಡಿ ರಸ್ತೆ ಮೂಲಕ 52 ಕಿ.ಮೀ. ದೂರದಲ್ಲಿದೆ. ಇದಕ್ಕೆ ಸುಮಾರು 4,000 ಎಕರೆ ಭೂಮಿ ಅಗತ್ಯವಿದೆ. ಬೆಂಗಳೂರು ಬಿಸಿನೆಸ್ ಕಾರಿಡಾರ್–173.03 ಕಿ.ಮೀ ವೃತ್ತಾಕಾರದ ರಸ್ತೆಯಾಗಿದ್ದು, ಇದನ್ನು 2,560 ಎಕರೆ ಭೂಮಿಯಲ್ಲಿ ನಿರ್ಮಿಸಲಾಗುವುದು. ಇದು ತುಮಕೂರು ರಸ್ತೆಯಲ್ಲಿ ಪ್ರಾರಂಭವಾಗಿ ಹೊಸೂರು ರಸ್ತೆಯಲ್ಲಿ ಕೊನೆಗೊಳ್ಳುತ್ತದೆ, ದೊಡ್ಡಬಳ್ಳಾಪುರ ರಸ್ತೆ, ಬಳ್ಳಾರಿ ರಸ್ತೆ, ಹಳೆ ಮದ್ರಾಸ್ ರಸ್ತೆ ಮತ್ತು ವೈಟ್‌ಫೀಲ್ಡ್ ರಸ್ತೆ ಮೂಲಕ ಹಾದುಹೋಗುತ್ತದೆ.

ಬೆಂಗಳೂರು ಬ್ಯುಸಿನೆಸ್ ಕಾರಿಡಾರ್‌ನ ಎರಡೂ ಹಂತಗಳಿಗೆ ಸಂಬಂಧಿಸಿದಂತೆ ಪ್ರಾಥಮಿಕ ಕೆಲಸಗಳು ಪ್ರಾರಂಭವಾಗಿವೆ. ಅಧಿಕಾರಿಗಳು ಸಮೀಕ್ಷೆ ಕಾರ್ಯವನ್ನು ನಡೆಸುತ್ತಿದ್ದಾಗ, ಹಂತ–2ರ ಮಾರ್ಗದಲ್ಲಿ 200 ಕ್ಕೂ ಹೆಚ್ಚು ಅಕ್ರಮ ನಿರ್ಮಾಣಗಳು ಬರುತ್ತಿದೆ ಎಂದು ಹೇಳುತ್ತಿದ್ದರು. ಇವು ಕಂದಾಯ ಸ್ಥಳಗಳಾಗಿದ್ದು, ಮಾಲೀಕರು 12 ಅಧಿಕೃತ ಸಂಸ್ಥೆಗಳಿಂದ–ಬಿಡಿಎ, ಆನೇಕಲ್ ಪ್ರಾಧಿಕಾರ ಅಥವಾ ಗ್ರಾಮ ಪಂಚಾಯತ್‌ಗಳಿಂದ – ಯಾವುದೇ ಯೋಜನೆ ಮಂಜೂರಾತಿ ಪಡೆಯದೆ ಮನೆಗಳನ್ನು ನಿರ್ಮಿಸಿದ್ದಾರೆ ಎಂದು ಅಧಿಕಾರಿಗಳು ಹೇಳಿದ್ದಾರೆ.

### ಇಂದಿನಿಂದ ಅಂತಾರಾಷ್ಟ್ರೀಯ ಅಂಧರ ಫುಟ್‌ಬಾಲ್ ಪಂದ್ಯಾವಳಿ

**ಬೆಂಗಳೂರು:** ಅಶ್ವಿನಿ ಅಂಗಡಿ ಟ್ರಸ್ಟ್ ಮತ್ತು ಭಾರತೀಯ ಅಂಧರ ಫುಟ್‌ಬಾಲ್ ಸಂಸ್ಥೆ ಸಹಯೋಗದಲ್ಲಿ ಜನವರಿ 23ರಿಂದ 26ರವರೆಗೆ ಅಂತಾರಾಷ್ಟ್ರೀಯ ಅಂಧರ ಪುರುಷರ ಮತ್ತು ಮಹಿಳೆಯರ ಫುಟ್ ಬಾಲ್ ಸೂಪರ್ ಲೀಗ್ ಪಂದ್ಯಾವಳಿಯನ್ನು ನ್ಯೂ ಬಿಇಎಲ್ ರೋಡ್‌ನಲ್ಲಿರುವ ಮ್ಯಾಚ್ ಡೈ ಗ್ರೌಂಡ್‌ನಲ್ಲಿ ಆಯೋಜಿಸಲಾಗಿದೆ.

ಅಶ್ವಿನಿ ಅಂಗಡಿ ಮಾತನಾಡಿ, ಅಂಗ ನ್ಯೂನತೆ ಮತ್ತು ಪ್ರಪಂಚದ ಬೆಳಕನ್ನೇ ನೋಡದೇ ಛಲದಿಂದ ಬದುಕು ಕಟ್ಟಿಕೊಂಡು ಸಾಮಾನ್ಯರಂತೆ ಬದುಕುವ ಛಲ ಹೊಂದಿರುವ ಇವರಿಗೆ ನಾವು ಸಾಧಿಸಿ ತೋರಿಸಬಲ್ಲವು ಎಂದು ಫುಟ್ ಬಾಲ್ ಪಂದ್ಯಾವಳಿ ಆಯೋಜಿಸಲಾಗಿದೆ. ಜನವರಿ 23ರಿಂದ 26ರವರೆಗೆ ಪುರುಷರ ಮತ್ತು ಮಹಿಳೆಯರ ಫುಟ್ ಬಾಲ್ ಸೂಪರ್ ಲೀಗ್ ಪಂದ್ಯಾವಳಿ ಜರುಗಲಿದೆ ಎಂದರು. ಜನವರಿ 23ರಂದು ಬೆಳಗ್ಗೆ 9ಗಂಟೆಗೆ ಉದ್ಘಾಟನೆಯನ್ನು ಕನ್ನಡ, ಸಂಸ್ಕೃತ ವಿಶ್ವವಿದ್ಯಾಲಯದ ಕುಲಸಚಿವರಾದ ವಿಶ್ವನಾಥ್ ಹಿರೇಮಠ್ ರವರು, ಕೆಎಸ್ ಡಿಎಲ್ ವ್ಯವಸ್ಥಾಪಕ ನಿರ್ದೇಶಕ ಡಾ.ಪ್ರಶಾಂತ್ ಮತ್ತು ಪೊಲೀಸ್ ಅಧಿಕಾರಿ ಸಿ.ಕೆ.ಬಾವ, ಎನ್‌ಎಚ್‌ಪಿಸಿ ಜನರಲ್ ಮ್ಯಾನೇಜರ್‌ಗಳಾದ ಬಿ.ಡಿ.ಮಹಾರಾಣ, ರಾಜಪ್ಪನ್ ರವರು ಉದ್ಘಾಟಿಸಲಿದ್ದಾರೆ. ಎಂದು ಮಾಹಿತಿ ನೀಡಿದರು.

## ಚೀಟಿ ವಂಚನೆ ಆರೋಪ: ಮಹಿಳೆ ಮನೆ ಮುಂದೆ ಪ್ರತಿಭಟನೆ

**ಬೆಂಗಳೂರು:** ರಾಜಧಾನಿಯಲ್ಲಿ ವಂಚನೆ ಪ್ರಕರಣಗಳು ದಿನೇ ದಿನೆ ಹೆಚ್ಚಾಗ್ತುತ್ತಿವೆ. ಕಷ್ಟಪಟ್ಟು ಉಳಿತಾಯ ಮಾಡಿ ಮಕ್ಕಳ ಶಿಕ್ಷಣ, ಮದುವೆ ಸೇರಿದಂತೆ ಕಷ್ಟಕಾಲದಲ್ಲಿ ನೆರವಿಗೆ ಬರಲಿದೆ ಎಂಬ ಜನರ ನಂಬಿಕೆಯನ್ನು ಚೀಟಿ ನಡೆಸುವವರು ಬುಡಮೇಲು ಮಾಡುತ್ತಿದ್ದಾರೆ. ಚೀಟಿ ಮುಗಿದು ಎರಡು ವರ್ಷ ಕಳೆದರೂ ಜನರಿಗೆ ಹಣ ನೀಡದೆ ವಂಚಿಸಿರುವುದು ಬೆಳಕಿಗೆ ಬಂದಿದೆ. ಈ ಸಂಬಂಧ ವಂಚನೆಗೊಳಗಾದವರು ಮಹಿಳೆಯ ಮನೆ ಮುಂದೆ ಪೋಸ್ಟರ್ ಹಿಡಿದು ಪ್ರತಿಭಟನೆ ನಡೆಸಿದ್ದಾರೆ.

ಕೆ.ಆರ್.ಪುರ ಪೊಲೀಸ್ ಠಾಣಾ ವ್ಯಾಪ್ತಿಯ ಅಯ್ಯಪ್ಪನಗರ ಮುಖ್ಯರಸ್ತೆಯಲ್ಲಿರುವ ಆರೋಪಿ ಮಹಿಳೆ ವನಿತಾ ಎಂಬುವರ ಮನೆ ಮುಂದೆ ವಂಚನೆಗೊಳಗಾದವರು ಪ್ರತಿಭಟನೆ ನಡೆಸಿದ್ದಾರೆ. ವಂಚನೆ ಸಂಬಂಧ ಪೊಲೀಸ್ ಠಾಣೆ ಮೆಟ್ಟಿಲೇರಿದರೂ ಇದುವರೆಗೂ ನ್ಯಾಯ ಸಿಕ್ಕಿಲ್ಲ ಎಂದು ಅಳಲು ತೋಡಿಕೊಂಡಿದ್ದಾರೆ. ನ್ಯಾಯಕ್ಕಾಗಿ ಆಗ್ರಹಿಸಿ ವಂಚನೆಗೊಳಗಾದವರು ಕೋರ್ಟ್ ಮೊರೆ ಹೋಗಿದ್ದಾರೆ.

**ಏನಿದು ವಂಚನೆ ಪ್ರಕರಣ?:** ಅಯ್ಯಪ್ಪನಗರ ಮುಖ್ಯರಸ್ತೆಯಲ್ಲಿ ವಾಸ ಮಾಡುತ್ತಿದ್ದ ವನಿತಾ 2020ರಿಂದ ಚೀಟಿ ವ್ಯವಹಾರ ನಡೆಸುತ್ತಿದ್ದು, ಇದನ್ನು ನಂಬಿ ಇವರ ಬಳಿ ಸಾರ್ವಜನಿಕರು 1ರಿಂದ 10 ಲಕ್ಷ ರು.ವರೆಗೆ ಚೀಟಿ ಕಟ್ಟುತ್ತಿದ್ದರು. ಚೀಟಿ ಮುಗಿದ ಬಳಿಕ ಹಣ ನೀಡುವಂತೆ ಕೇಳಿದಾಗ ಎಂದು ಸತಾಯಿಸಿಕೊಂಡು ಬಂದಿದ್ದಾರೆ. ಚೀಟಿ ಹಣ ನೀಡುವಂತೆ ಮನೆ ಬಳಿ ಹೋದಾಗ ಬಲಾತ್ಕಾರಕ್ಕೆ ಯತ್ನಿಸಿರುವುದಾಗಿ ಪೊಲೀಸರಿಗೆ ದೂರು ನೀಡುತ್ತೇನೆ ಎಂದು ವನಿತಾ ಬೆದರಿಸಿರುವುದಾಗಿ ದೂರುದಾರ ವಿನಯ್ ಕುಮಾರ್ ಆರೋಪಿಸಿದ್ದಾರೆ.

ವಿನಯ್ ಕುಮಾರ್ ಜತೆಗೆ ಒಟ್ಟು 17 ಮಂದಿ ಲಕ್ಷಾಂತರ ರೂಪಾಯಿ ಹಣ ವಂಚಿಸಿರುವುದಾಗಿ ಆರೋಪಿಸಿ ಕೆ.ಆರ್.ಪುರ ಪೊಲೀಸರಿಗೆ ದೂರು ನೀಡಿದ್ದರು. 2023ರಲ್ಲಿ ಪ್ರಕರಣ ದಾಖಲಿಸಿಕೊಂಡಿದ್ದ ಪೊಲೀಸರು ತನಿಖೆ ನಡೆಸಿದ್ದರೂ ಯಾವುದೇ ಪ್ರಯೋಜನವಾಗಿಲ್ಲ ಎಂದು ಹಣ ಕಳೆದುಕೊಂಡವರು ಅಳಲು ತೋಡಿಕೊಂಡಿದ್ದಾರೆ.

ಮನೆ ಕಟ್ಟೋಣ ಎಂದು ಬ್ಯಾಂಕ್‌ನಲ್ಲಿ ಲೋನ್ ಪಡೆದುಕೊಂಡಿದ್ದೆ. ಈ ವೇಳೆ ಪರಿಚಿತರಾಗಿದ್ದ ವನಿತಾ ಬಂದು ಮನೆ ಕಟ್ಟುತ್ತಿದ್ದು, ಸಾಲ ಕೇಳಿದ್ದರು. ಚೀಟಿ ವ್ಯವಹಾರ ನಡೆಸುತ್ತಿರುವುದನ್ನು ನಂಬಿ ನಾನು ಅವರಿಗೆ 8 ಲಕ್ಷ ರು. ಸಾಲ ನೀಡಿದ್ದೆ. ಆದರೆ ಈವರೆಗೂ ಹಣ ವಾಪಸ್ ನೀಡಿಲ್ಲ, ಕೇಳಲು ಹೋದಾಗ ಏನು ಬೇಕಾದರೂ ಮಾಡಿಕೊಳ್ಳಿ ಎಂದು ಹೇಳಿರುವು ದಾಗಿ ವೆಂಕಟರತ್ನಮ್ಮ ಎಂಬವರು ಆರೋಪಿಸಿ ದ್ದಾರೆ. 5 ಲಕ್ಷ ರು. ಚೀಟಿ ಹಾಕಿದ್ದೆ. ಆದರೆ ಚೀಟಿ ಮುಗಿದು 3 ವರ್ಷ ಕಳೆದರೂ ಇದುವರೆಗೂ ಹಣ ನೀಡಿಲ್ಲ, ಪೊಲೀಸರಿಗೆ ವಿಷಯ ತಿಳಿಸಿದಾಗ ಬ್ಯಾಂಕ್‌ನಲ್ಲಿ ಲೋನ್ ಪಡೆದು ವಾಪಸ್ ನೀಡುವುದಾಗಿ ಸಮಯಾವಕಾಶ ಪಡೆದಿದ್ದರು. ಸಂಬಂಧಪಟ್ಟ ತನಿಖಾಧಿಕಾರಿಗಳು ವರ್ಗಾವಣೆ ಯಾದ ಬಳಿಕ ಹಣ ನೀಡದೆ ವಂಚಿಸಿದ್ದಾರೆ ಎಂದು ಶಂಕರ್ ಆರೋಪಿಸಿದ್ದಾರೆ. ಆರೋಪಿ ಮಹಿಳೆಯು ಪರಿಚಯಸ್ಥರಾಗಿದ್ದು, ಕಷ್ಟದಲ್ಲಿದ್ದು ತುರ್ತು ಹಣ ನೀಡುವಂತೆ ಕೇಳಿದ್ದರು. ಅದನ್ನು ನಂಬಿ ಮಾಂಗಲ್ಯ ಸರ, ಎರಡು ಚಿನ್ನದ ಉಂಗುರ ಅಡವಿಟ್ಟು ಅದರಿಂದ ಬಂದ ಹಣ ನೀಡಿದ್ದೆ. ಸಾಲ ವಾಪಸ್ ನೀಡುವಂತೆ ಕೇಳಲು ಹೋದಾಗ ನಾನು ಕೊಟ್ಟಾಗ ತೆಗೆದುಕೊಳ್ಳುವಂತೆ ಹೇಳುತ್ತಿದ್ದಾಳೆ. ಸ್ವಂತ ಮನೆಯಿದ್ದು, ಪ್ರತ್ಯೇಕ ಗೋಲ್ಡ್ ಚೀಟಿ ನಡೆಸುತ್ತಿರುವುದಾಗಿ ನೊಂದ ಮಹಿಳೆಯರು ಆಪಾದಿಸಿದ್ದಾರೆ.

#### ಪೊಲೀಸರಿಂದ ಸ್ಪಷ್ಟನೆ

**ವಂಚನೆ ಪ್ರಕರಣ ಸಂಬಂಧ ಹಣ ಕಳೆದುಕೊಂಡವರಿಗೆ ವಿಚಾರಣೆಗೆ ಹಾಜರಾಗಿ ಹಣ ವರ್ಗಾವಣೆ ಸೇರಿದಂತೆ ಪೂರಕ ದಾಖಲಾತಿ ನೀಡುವಂತೆ ಮೂರು ಬಾರಿ ನೋಟಿಸ್ ಜಾರಿ ಮಾಡಿದರೂ ನೊಂದವರು ದಾಖಲೆ ನೀಡಿಲ್ಲ. ಸೂಕ್ತ ದಾಖಲಾತಿ ಒದಗಿಸಿದರೆ ತನಿಖೆ ನಡೆಸಿ ಆರೋಪಿತೆ ವಿರುದ್ಧ ನ್ಯಾಯಾಲಯಕ್ಕೆ ಚಾರ್ಜ್ ಶೀಟ್ ಸಲ್ಲಿಸಲಾಗುವುದು. ಸದ್ಯ ನ್ಯಾಯಾಲಯವು ಆರೋಪಿತ ಮಹಿಳೆಗೆ ನಿರೀಕ್ಷಣಾ ಜಾಮೀನು ನೀಡಿರುವುದಾಗಿ ಪೊಲೀಸರು ತಿಳಿಸಿದ್ದಾರೆ.**



ಎಂ.ಕೆ. ಸ್ಕ್ವೇರ್ ಫೌಂಡೇಷನ್ ವತಿಯಿಂದ ಮಂಗಳವಾರ ಕಿದ್ವಾಯಿ ಕ್ಯಾನ್ಸರ್ ಆಸ್ಪತ್ರೆಯ ಕಪೂರ್ ಮಕ್ಕಳ ವಾರ್ಡ್ ನಲ್ಲಿ ಕ್ಯಾನ್ಸರ್ ಪೀಡಿತ ಮಕ್ಕಳಿಗೆ ಕಿಶೋರ್ ಕುಮಾರ್ ಅವರು ಹಣ್ಣು ವಿತರಣೆ ಮಾಡಿದರು. ಈ ವೇಳೆ ಪುನೀತ್ ರಾಜಕುಮಾರ್ ರವರ ಹಾಡುಗಳ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮದಲ್ಲಿ ಕಿದ್ವಾಯಿ ಆಸ್ಪತ್ರೆಯ ನಿರ್ದೇಶಕ ರವಿ ಅರ್ಜುನ್, ಡಾ. ಅರುಣ್, ವಾಸು ವಿಶೇಷ ಅಧಿಕಾರಿ, ಶ್ರೀರಂಗರಾಜ ಮಸಲ್ವಾಡಿ, ಪ್ರಭ ಉಪಸ್ಥಿತರಿದ್ದರು.

ವಿಶ್ವವಾಣಿ
ವಿಶ್ವಾಸವೇ ವಿಶ್ವ

## ಇಂಗ್ಲೆಂಡ್ ವಿರುದ್ಧ ಭಾರತಕ್ಕೆ 7 ವಿಕೆಟ್ ಜಯ

ಕೋಲ್ಕತ್ತದ ಈಡನ್ ಗಾರ್ಡನ್ ಮೈದಾನದಲ್ಲಿ ನಡೆದ ಮೊದಲ ಟ್ವೆಂಟಿ-20 ಅಂತಾರಾಷ್ಟ್ರೀಯ ಪಂದ್ಯದಲ್ಲಿ ಟೀಂ ಇಂಡಿಯಾ ಪ್ರವಾಸಿ ಇಂಗ್ಲೆಂಡ್ ವಿರುದ್ಧ ಏಳು ವಿಕೆಟ್ ಅಂತರದ ಭರ್ಜರಿ ಗೆಲುವು ದಾಖಲಿಸಿದೆ.

**ಜನಾರ್ದನ ರೆಡ್ಡಿ ವಿರುದ್ಧ ಶ್ರೀರಾಮುಲು ಆಕ್ರೋಶ, ಪಕ್ಷ ಬಿಡುವ ಬೆದರಿಕೆ**
**ಉಸ್ತುವಾರಿ ವಿರುದ್ಧವೂ ಕೆಂಡ | ಸಭೆಯಲ್ಲಿಯೇ ಅಶ್ವತ್ಥ್-ವಿಜಯೇಂದ್ರ ಜಟಾಪಟಿ**

# ಕೋರ್ ಕಮಿಟಿ ಸಭೆ ಬಳಿಕ ಬಿಜೆಪಿ ನಿಗಿ ನಿಗಿ

**ಬೆಂಗಳೂರು:** ಹೈಕಮಾಂಡ್‌ನ ಒಂದು ಗುಟುರಿನಿಂದ ಕಾಂಗ್ರೆಸಿನ ಹುದ್ದೆ ಗುದ್ದಾಟ ತಣ್ಣಗಾಗಿದ್ದರೆ, ಇತ್ತ ಉಸ್ತುವಾರಿಗಳು ಹಾಗೂ ವರಿಷ್ಠರ ಮಾತಿಗೆ ಕ್ಯಾರೇ ಎನ್ನದ ಕಮಲ ಕಲಿಗಳು ಮತ್ತೊಂದು ಹಂತದ ಕೆಸರೆರಚಾಟ ಆರಂಭಿಸಿದ್ದು ಕಾರ್ಯಕರ್ತರಲ್ಲಿ ಗೊಂದಲ ಮತ್ತಷ್ಟು ಹೆಚ್ಚಾಗಿದೆ. ಒಂದು ಕಾಲದಲ್ಲಿ ಆಪ್ತರಾಗಿದ್ದ ಗಾಲಿ ಜನಾರ್ದನ ರೆಡ್ಡಿ ಹಾಗೂ ಶ್ರೀರಾಮುಲು ಈಗ ಪರಸ್ಪರ ಕಚ್ಚಾಡುತ್ತಿದ್ದಾರಲ್ಲದೆ ಪಕ್ಷ ಬಿಡುವ ಮಾತನ್ನೂ ಶ್ರೀರಾಮುಲು ಆಡಿರುವುದು ಮತ್ತೊಂದು ಬಣ ಬಡಿದಾಟ ಆರಂಭವಾಗಿದೆ.



ಮಾಜಿ ಸಚಿವ ಶ್ರೀರಾಮುಲು ಆಕ್ರೋಶ ಗೊಂಡಿದ್ದು, ಬಿಜೆಪಿ ತೊರೆಯುವ ಎಚ್ಚರಿಕೆ ನೀಡಿದ್ದಾರೆ. ಇಷ್ಟೆಲ್ಲಾ ಬೆಳವಣಿಗೆಗೆ ಕಾರಣವಾಗಿರುವುದೇ ಮಂಗಳವಾರ ನಡೆದ ಬಿಜೆಪಿ ಕೋರ್ ಕಮಿಟಿ ಸಭೆ. ಸಭೆಯಲ್ಲೇ ರಾಜ್ಯ ಉಸ್ತುವಾರಿ ವಿರುದ್ಧ ರಾಮುಲು ಅಸಮಾಧಾನ ಹೊರಹಾಕಿದ್ದಾರೆ. ಬಳ್ಳಾರಿಯಲ್ಲಿ ಸಾಲು ಸಾಲು ಚುನಾವಣೆಯಲ್ಲಿ ಸೋತಿರುವುದಕ್ಕೆ ರಾಮುಲು ಅವರನ್ನು ಹೊಣೆ ಮಾಡಲಾಗಿತ್ತು. ಇದಕ್ಕೆ ಸಿಡಿದೆದ್ದ ರಾಮುಲು, ರೆಡ್ಡಿ ವಿರುದ್ಧವೂ ತಿರುಗಿ ಬಿದ್ದಿದ್ದಾರೆ. ಅಲ್ಲದೆ ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ವಿರುದ್ಧವೂ ಅಸಮಾಧಾನ ವ್ಯಕ್ತಪಡಿಸಿದ್ದಲ್ಲದೆ, 'ನಾನು ಬೇಡವಾದರೆ ಹೇಳಿ ಪಕ್ಷ ಬಿಡಲು ಸಿದ್ಧನಿದ್ದೇನೆ' ಎಂದು ಎಚ್ಚರಿಕೆ ಕೊಟ್ಟಿದ್ದಾರೆ.

ನನ್ನನ್ನು ರಾಜಕೀಯವಾಗಿ ಮುಗಿಸಲು ಜನಾರ್ದನ ರೆಡ್ಡಿ ಯತ್ನಿಸುತ್ತಿದ್ದಾರೆ ಎಂದು ಹೇಳಿರುವ ಶ್ರೀರಾಮುಲು, ಕೆಲಸ ಮಾಡಿದವರಿಗೆ ಬೆಲೆಯೇ ಇಲ್ಲ. ರೆಡ್ಡಿ ಮಾತು ಕೇಳಿ ನನ್ನ ಬಗ್ಗೆ ಲಘುವಾಗಿ ಮಾತನಾಡಿದ್ದಾರೆ. ಇತ್ತೀಚೆಗೆ ಜನಾರ್ದನ ರೆಡ್ಡಿ ಅವರು ತಾವು ಹೇಳಿದ್ದೇ ನಡೆಯಬೇಕು, ನಾನು ಹೇಳಿದವರೇ ಗೆಲ್ಲಬೇಕು ಎಂದು ಇಲ್ಲಿಂದ ದೆಹಲಿವರೆಗೆ ಏನೇನೋ ಸುಳ್ಳು ಹೇಳಿ, ನನ್ನನ್ನು ರಾಜಕೀಯವಾಗಿ ಮುಗಿಸಬೇಕು ಎಂದು ಕುತಂತ್ರ ಮಾಡುತ್ತಿದ್ದಾರೆ. ನಾನು ಜನಾರ್ದನ ರೆಡ್ಡಿ ವಿರುದ್ಧ ಯಾವತ್ತೂ ನಡೆದುಕೊಂಡಿಲ್ಲ. ಅವರು ಪಕ್ಷಕ್ಕೆ ಮತ್ತೆ ಬರುತ್ತೇನೆ ಎಂದಾಗ, ಅವರನ್ನು ಕರೆದುಕೊಳ್ಳಲು ನಾನೇ ಹೇಳಿದ್ದೆ. ಆದರೆ, ಈಗ ನನ್ನ ವಿರುದ್ಧವೇ ಅಪಪ್ರಚಾರ ಮಾಡಿಸುತ್ತಿದ್ದಾರೆ ಎಂದು ಎಂದು ಒಂದು ಕಾಲದ ತಮ್ಮ ಆಪ್ತ ಸ್ನೇಹಿತನ ವಿರುದ್ಧವೇ ಶ್ರೀರಾಮುಲು ಕಿಡಿಕಾರಿದ್ದಾರೆ.

**ವಿಜಯೇಂದ್ರ ವಿರುದ್ಧ ಮಾಜಿ ಡಿಸಿಎಂ ಗರಂ:** ಕೋರ್ ಕಮಿಟಿ ಸಭೆಯಲ್ಲಿ ಬೆಂಗಳೂರು ಉತ್ತರ ಜಿಲ್ಲಾಧ್ಯಕ್ಷರ ನೇಮಕ ಸಂಬಂಧ ರಾಜ್ಯಾಧ್ಯಕ್ಷ ವಿಜಯೇಂದ್ರ ಹಾಗೂ ಮಾಜಿ ಡಿಸಿಎಂ ಅಶ್ವತ್ಥ ನಾರಾಯಣ ನಡುವೆ ಬಿರುಸಿನ ಮಾತಾಗಿದೆ. ಬೆಂಗಳೂರು ಉತ್ತರಕ್ಕೆ ಅಧ್ಯಕ್ಷರ ಬದಲಾವಣೆಗೆ ಅಶ್ವತ್ಥ ನಾರಾಯಣ ಸೂಚಿಸಿದ್ದಾರೆ. ಆದರೆ, ಹಳಬರನ್ನು ಮುಂದುವರಿಸಲು ವಿಜಯೇಂದ್ರ ಒಲವು ತೋರಿದ್ದಾರೆ ಎನ್ನಲಾಗಿದೆ. ಈ ವೇಳೆಯಲ್ಲಿ ಹೊಸಬರನ್ನು ನೇಮಕ ಮಾಡುವಂತೆ ಅಶ್ವತ್ಥ ನಾರಾಯಣ ಪಟ್ಟು ಹಿಡಿದಿದ್ದಾರೆ. ಈ ವಿಚಾರವಾಗಿ ವಾಗ್ಯುದ್ಧ ನಡೆಯುತ್ತಿದ್ದಾಗ, ಈ ವೇಳೆ ಪ್ರತಿಪಕ್ಷ ನಾಯಕ ಆರ್. ಅಶೋಕ ಮಧ್ಯಪ್ರವೇಶಿಸಿ ಪರಿಸ್ಥಿತಿ ತಿಳಿಗೊಳಿಸಿದ್ದಾರೆ. ಹೀಗಿದ್ದರೂ ರಾಜ್ಯಾಧ್ಯಕ್ಷರ ಬದಲಾವಣೆಯ ಪಟ್ಟು ಹಾಗೂ ಚುನಾವಣಾ ಪ್ರಕ್ರಿಯೆಯ ಕೂಗು ಮುಂದುವರಿದಿದೆ. ರಾಜ್ಯ ಉಸ್ತುವಾರಿ ಬಂದು ಇಲ್ಲಿ ಏನೇ ಸರಿದೂಗಿಸಲು ಪ್ರಯತ್ನಿಸಿದರೂ, ಅವರ ಬಗ್ಗೆಯೇ ವರಿಷ್ಠರಿಗೆ ದೂರು ನೀಡಲು ಮತ್ತೊಂದು ಬಣ ಸಿದ್ಧವಾಗಿದ್ದು, ಬಿಜೆಪಿಯಲ್ಲಿ ಒಳಬೇಗುದಿ ಶಮನವಾಗುವ ಲಕ್ಷಣ ಕಾಣುತ್ತಿಲ್ಲ.

### ಕಿತ್ತಾಟಕ್ಕೆ ಕಾರಣವೇನು?



ಗಣಿ ಪ್ರಕರಣದಲ್ಲಿ ಸಿಲುಕಿದ್ದ ಮಾಜಿ ಸಚಿವ ಜನಾರ್ದನ ರೆಡ್ಡಿ 12 ವರ್ಷದ ನಂತರ ಬಳ್ಳಾರಿಗೆ ಪ್ರವೇಶಿಸಿದ್ದಾರೆ. ಗಣಿನಾಡಲ್ಲಿ ಈಗ ಕಮಲ ಬಾಡಿ ಹೋಗಿದೆ. ಅಲ್ಲದೇ ಆಪ್ತ ಗೆಳೆಯರ ನಡುವೆ ಬಿರುಕು ಕಾಣಿಸಿಕೊಂಡಿದೆ. ಮೊದಲಿ ನಿಂದಲೂ ಆಪ್ತರಾಗಿದ್ದ ಇವರು, ರೆಡ್ಡಿ ಬೆಳಗಾವಿಗೆ ಬಂದಾಗ ಬಿಜೆಪಿ ಪಕ್ಷಕ್ಕೆ ಸೇರಿಸಿಕೊಂಡಿಲ್ಲ. ನಂತರ ರೆಡ್ಡಿ ಕೆಆರ್‌ಪಿ ಪಕ್ಷ ಕಟ್ಟಿದಾಗ ರಾಮುಲು ಅವರು 'ನಾನು ಬಿಜೆಪಿ ಬಿಟ್ಟು ಬರುವುದಿಲ್ಲ' ಎಂದು ಹೇಳಿದ್ದೇ ಇಬ್ಬರ ಮಧ್ಯೆ ವೈಮನಸ್ಸು ಆರಂಭವಾಗಿದೆ. 2023ರ ವಿಧಾನಸಭೆ ಚುನಾವಣೆಯಲ್ಲಿ ಬಳ್ಳಾರಿ ಗ್ರಾಮೀಣ ಕ್ಷೇತ್ರದಿಂದ ರಾಮುಲು ಸ್ಪರ್ಧೆ ಮಾಡಿದಾಗ ಒಳ ಏಟು ಕೊಟ್ಟ ರೆಡ್ಡಿ, ಕಾಂಗ್ರೆಸ್ ಅಭ್ಯರ್ಥಿ ಬಿ.ನಾಗೇಂದ್ರಗೆ ಬೆಂಬಲವಾಗಿ ನಿಲ್ಲುತ್ತಾರೆ. ಇದರಿಂದ ರಾಮುಲು ಸೋಲಬೇಕಾಯಿತು ಎಂದು ಸ್ಥಳೀಯವಾಗಿ ಹೇಳಲಾಗುತ್ತಿದೆ. ಲೋಕಸಭೆ ಚುನಾವಣೆಯಲ್ಲಿ ರಾಮುಲು ಸೋಲಿಗೆ ರೆಡ್ಡಿಯೇ ಕಾರಣ ಎಂದು ಆರೋಪ ಇದೆ. ಈ ಬೆಳವಣಿಗೆ ನಂತರವೂ ಸಹ ಸಂಡೂರು ಉಪಚುನಾವಣೆ ವೇಳೆ ಆಂತರಿಕ ಸಮಸ್ಯೆಯಿಂದ ಹಿಂದೆ ಸರಿದಿದ್ದ ರಾಮುಲು ಅವರನ್ನು ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಮನವೊಲಿಸಿದ್ದರು. ಆದರೆ ಇಬ್ಬರ ಗಾಯಕ್ಕೆ ವಿಜಯೇಂದ್ರ ಮದ್ದು ನೀಡಿದ್ದರೂ ಸಹ ಆ ಗಾಯ ವಾಸಿಯಾಗಿಲ್ಲ.

**ಮೂರು ದಿನಗಳ ಕಾಲ ನಡೆಯಲಿರುವ ಪುಸ್ತಕ ಹಾಗೂ ಆಹಾರ ಮೇಳ | ಬ್ಯಾಂಕ್ವೆಟ್ ಹಾಲ್‌ನಲ್ಲಿ ವಿವಿಧ ಪುಸ್ತಕಗಳ ಬಿಡುಗಡೆ ಕಾರ್ಯಕ್ರಮ | ಸಂವಾದಕ್ಕೂ ಅವಕಾಶ**

# ಶಕ್ತಿಸೌಧದಲ್ಲಿ ಸಾಹಿತ್ಯ ಸಂಸ್ಕೃತಿಯ ಅನಾವರಣ

• ರಂಜಿತ್ ಎಚ್.ಅಶ್ವತ್ಥ

**ಬೆಂಗಳೂರು:** ರಾಜಕೀಯ ಹೋರಾಟಗಳಿಗೆ ಸಾಕ್ಷಿಯಾಗಬೇಕಾದ ವಿಧಾನಸೌಧ ಸುತ್ತ-ಮುತ್ತ ಪುಸ್ತಕ ಮಾರಾಟದ ಭರಾಟೆ... ರಾಜ್ಯದ ಮೂಲೆ ಮೂಲೆಯ ಪ್ರಸಿದ್ಧ ಖಾದ್ಯಗಳ ಮಾರಾಟ... ಈ ಎರಡರ ನಡುವೆ ಗ್ರ್ಯಾಂಡ್ ಸ್ಟೆಪ್‌ನಲ್ಲಿ ರಾಜ್ಯದ ಕಲಾ-ಸಂಸ್ಕೃತಿಯ ಅನಾವರಣ. ಈ ಎಲ್ಲವನ್ನು ಸವಿದು ವಿಧಾನಸೌಧದ ಒಳಹೊಕ್ಕರೆ, ಬ್ಯಾಕ್ವೆಂಟ್ ಹಾಲ್‌ನಲ್ಲಿ ವಿವಿಧ ಸಾಹಿತಿಗಳ ಪುಸ್ತಕ ಬಿಡುಗಡೆ ಹಾಗೂ ಸಾಹಿತ್ಯ ಕ್ಷೇತ್ರಕ್ಕೆ ಸಂಬಂಧಿಸಿದ ವಿವಿಧ ಸಂವಾದ ಕಾರ್ಯಕ್ರಮ!

ಈ ಎಲ್ಲವೂ ಕನಸಿನಲ್ಲಿ ಅಲ್ಲ, ನನಸಾಗಿಸಲು ವಿಧಾನಸಭಾಧ್ಯಕ್ಷ ಯು.ಟಿ. ಖಾದರ್ ಸದ್ದಿಲ್ಲದೇ ಸಿದ್ಧತೆ ನಡೆಸಿಕೊಂಡಿದ್ದು, ಮುಂದಿನ ತಿಂಗಳು ವಿಧಾನಸೌಧ ರಾಜ್ಯ ಶಕ್ತಿಕೇಂದ್ರ ಮಾತ್ರವಾಗಿರದೇ, ಸಾಹಿತ್ಯ - ಸಂಸ್ಕೃತಿಯ ಸಂಗಮವೂ ಆಗಲಿದೆ. ಹೌದು, ದೇಶದ ಲ್ಲಿಯೇ ಮೊದಲ ಬಾರಿಗೆ ವಿಧಾನಸೌಧದ ಸುತ್ತಮುತ್ತ ಸಚಿವಾಲಯದ ವತಿಯಿಂದಲೇ ಪುಸ್ತಕ ಹಾಗೂ ಆಹಾರ ಮೇಳವನ್ನು ಆಯೋಜಿಸಲು ತೀರ್ಮಾನಿಸಲಾಗಿದೆ.

ಸಾಹಿತ್ಯದ ವೇದಿಕೆಯಲ್ಲಿ ರಾಜಕಾರಣಿ-ಸಾಹಿತಿ ಹಾಗೂ ಸಾರ್ವಜನಿಕರನ್ನು ಸಮ್ಮಿಲನಗೊಳಿಸಬೇಕು ಎನ್ನುವ ಕಾರಣಕ್ಕೆ ಯು.ಟಿ. ಖಾದರ್ ಈ ವಿನೂತನ ಯೋಜನೆಯನ್ನು ರೂಪಿಸಿದ್ದು, ಫೆಬ್ರವರಿಯ ಯಾವ ಸಮಯದಲ್ಲಿ ಈ ಮೇಳ ನಡೆಯಲಿದೆ ಎನ್ನುವುದು ಗುರುವಾರದ ಸಭೆಯ ಬಳಿಕ ಸ್ಪಷ್ಟನೆ ಸಿಗಲಿದೆ ಎಂದು ಸಚಿವಾಲಯದ ಅಧಿಕಾರಿಗಳು ತಿಳಿಸಿದ್ದಾರೆ.

**ಮೂರು ದಿನದ ಮೇಳ:** ಮೂಲಗಳ ಪ್ರಕಾರ ಮೂರು ದಿನಗಳ ಕಾಲ ಪುಸ್ತಕ ಹಾಗೂ ಆಹಾರ ಮೇಳವನ್ನು ಆಯೋಜಿಸಲು ತೀರ್ಮಾನಿಸಲಾಗಿದೆ. ರಾಜ್ಯ, ರಾಷ್ಟ್ರೀಯ ಮಾತ್ರವಲ್ಲದೇ ಅಂತಾರಾಷ್ಟ್ರೀಯ ಪ್ರಕಾಶಕರು ಈ ಮೇಳದಲ್ಲಿ ಭಾಗವಹಿಸುವ ಸಾಧ್ಯತೆಯಿದೆ. ಇದೇ ರೀತಿ ರಾಜ್ಯದ ಎಲ್ಲ ಜಿಲ್ಲೆಗಳ ವಿಶಿಷ್ಟ ತಿಂಡಿಗಳ ಮಾರಾಟಕ್ಕೆ ಮಳಿಗೆ ನೀಡುವ ರೀತಿಯಲ್ಲಿ ಮೇಳವನ್ನು ಆಯೋಜಿಸಲು ತೀರ್ಮಾನಿಸಲಾಗಿದೆ.

ಸುಮಾರು 500ಕ್ಕೂ ಹೆಚ್ಚು ಸ್ಟಾಲ್‌ಗಳನ್ನು ಹಾಕುವ ಸಾಧ್ಯತೆಯಿದ್ದು, ವಿಧಾನಸೌಧದ ಕಾಂಪೌಂಡ್‌ನೊಳಗೆ ಈ ಮಳಿಗೆಗಳನ್ನು ಹಾಕಲಾಗುವುದು. ಈ ಮೂಲಕ ಸಾರ್ವಜನಿಕರು ಪುಸ್ತಕ ಖರೀದಿ, ಆಹಾರವನ್ನು ಆಸ್ವಾದಿಸುವುದರೊಂದಿಗೆ ವಿಧಾನಸೌಧವನ್ನು ಸುತ್ತು ಹಾಕಬಹುದು. ಇದರಿಂದ ವಿಧಾನಸೌಧ ಸಾರ್ವಜನಿಕರಿಗೂ ಹತ್ತಿರವಾಗಲಿದೆ. ಪುಸ್ತಕ ಹಾಗೂ ಆಹಾರ ಮೇಳದೊಂದಿಗೆ ಮೂರು ದಿನಗಳ ಕಾಲ ನಡೆಯುವ ಈ ಮೇಳಕ್ಕೆ ಆಗಮಿಸುವ ಸಾರ್ವಜನಿಕರಿಗೆ ಮನೋರಂಜನೆಯ ಉದ್ದೇಶದಿಂದ ವಿಧಾನಸೌಧದ ಗ್ರ್ಯಾಂಡ್ ಸ್ಟೆಪ್‌ಗಳ ಮೇಲೆ ರಾಜ್ಯದ ವಿವಿಧ ಸಾಂಸ್ಕೃತಿಕ ತಂಡಗಳಿಂದ ಕಲಾಪ್ರದರ್ಶನವನ್ನೂ ಆಯೋಜಿಸಲು ತೀರ್ಮಾನಿಸಲಾಗಿದೆ.

**ಪುಸ್ತಕ ಬಿಡುಗಡೆ, ಸಂವಾದಕ್ಕೆ ಅವಕಾಶ:** ಪುಸ್ತಕ ಮೇಳಕ್ಕೆ ಈ ಕಾರ್ಯಕ್ರಮವನ್ನು ಸೀಮಿತಗೊಳಿಸದೇ, ಮೂರು ದಿನಗಳ ಕಾಲ ರಾಜ್ಯದ ವಿವಿಧ ಸಾಹಿತಿಗಳ ಪುಸ್ತಕ ಬಿಡುಗಡೆ ಕಾರ್ಯಕ್ರಮವನ್ನು ವಿಧಾನಸೌಧದ ಬ್ಯಾಕ್ವೆಂಟ್ ಹಾಲ್‌ನಲ್ಲಿ ಆಯೋಜಿಸಲು ಚಿಂತನೆ ನಡೆಸಲಾಗಿದೆ. ಇದೇ ರೀತಿ ವಿವಿಧ ಸಾಹಿತಿಗಳೊಂದಿಗೆ ಸಂವಾದವನ್ನು ಆಯೋಜಿಸುವ ಸಾಧ್ಯತೆಯಿದೆ. ಮೂರು ದಿನಗಳ ಕಾಲ ಏನೆಲ್ಲ ಇರಬೇಕು ಎನ್ನುವ ಬಗ್ಗೆ ಪ್ರಾಥಮಿಕ ಹಂತದಲ್ಲಿ ತಯಾರಿ ನಡೆಸಿದ್ದು, ಗುರುವಾರ ಮತ್ತೊಂದು ಹಂತದ ಸುತ್ತಿನ ಬಳಿಕ ಅಂತಿಮಗೊಳ್ಳಲಿದೆ ಎಂದು ಮೂಲಗಳು ತಿಳಿಸಿವೆ.

→ 9

### ಮೇಳದ ವಿಶೇಷತೆ ಏನು?

- ರಾಜ್ಯ, ರಾಷ್ಟ್ರ ಮಾತ್ರವಲ್ಲದೇ ಅಂತಾರಾಷ್ಟ್ರೀಯ ಪ್ರಕಾಶಕರೂ ಭಾಗವಹಿಸುವ ಸಾಧ್ಯತೆ
- ಮೇಳ ಹೇಗಿರಬೇಕು ಎನ್ನುವ ರೂಪು ರೇಷೆ ಸಿದ್ಧಪಡಿಸಲು ಸಾಹಿತಿಗಳ ಜ್ಯೂರಿ ಸಮಿತಿ
- ಮೂರು ದಿನದ ಕಾಲವೂ ಸಾರ್ವಜನಿಕರಿಗೆ ವಿಧಾನಸೌಧಕ್ಕೆ ಮುಕ್ತ ಅವಕಾಶ
- ಗ್ರ್ಯಾಂಡ್ ಸ್ಟೆಪ್‌ನಲ್ಲಿ ಮೂರು ದಿನ ನಿರಂತರ ಸಾಂಸ್ಕೃತಿಕ ಕಾರ್ಯಕ್ರಮಗಳ ಆಯೋಜನೆ

### ಇಂದು ಸಭೆ, ಅಂತಿಮ ರೂಪುರೇಷೆ ಪ್ರಕಟ

ಪುಸ್ತಕ ಹಾಗೂ ಆಹಾರ ಮೇಳವನ್ನು ಆಯೋಜಿಸಲು ವಿಧಾನಸಭಾ ಸಚಿವಾಲಯ ತೀರ್ಮಾನಿಸಿದ್ದರೂ ಇಡೀ ಕಾರ್ಯಕ್ರಮ ಯಾವ ರೀತಿಯಲ್ಲಿರಬೇಕು ಎನ್ನುವ ಅಂತಿಮ ರೂಪುರೇಷೆ ಗುರುವಾರ ತೀರ್ಮಾನವಾಗಲಿದೆ. ಈ ಮೇಳವನ್ನು ಯಾವುದೇ ರಾಜಕೀಯ ಸಿದ್ಧಾಂತಕ್ಕೆ ಸೀಮಿತಗೊಳಿಸದೇ, ಸಾಹಿತಿಗಳ ಸೂಚನೆಯಂತೆ ನಡೆಸುವ ಲೆಕ್ಕಾಚಾರದಲ್ಲಿ ಸಭಾಧ್ಯಕ್ಷ ಯು.ಟಿ. ಖಾದರ್ ಅವರಿದ್ದಾರೆ. ಆದ್ದರಿಂದ ಗುರುವಾರ ಈ ಸಂಬಂಧ ಅಧಿಕಾರಿಗಳೊಂದಿಗೆ ಸಭೆ ನಡೆಸಿ, ದಿನಾಂಕ ಹಾಗೂ ಮೇಳದ ನಿರ್ವಹಣೆಗೆ ಸಮಿತಿಯನ್ನು ರಚಿಸುವ ಸಾಧ್ಯತೆಯಿದೆ ಎನ್ನಲಾಗಿದೆ.

# ಆಸೆಯಿಂದ ಕರೆ ಮಾಡಿದರೆ ದುಃಖ ಖಚಿತ!

## ತಮ್ಮ ಮೊಬೈಲ್ ರಿಂಗ್ ಟೋನ್ ನಿಜವಾಗಿಸುತ್ತಿರುವ ಉಸ್ತುವಾರಿ ಸಚಿವರು | ಐದನೇ ದಿನವೂ ಸ್ಪಂದಿಸದ ಸಚಿವ ವೈದ್ಯ

**ಶಿರಸಿ:** ಆಸೆಯೇ ದುಃಖಕ್ಕೆ ಮೂಲ, ಅಸೂಯೆ ಒಳ್ಳೆಯದಲ್ಲ, ಬೆಳ್ಳಗೆ ಇರೋದು ಹಾಲಲ್ಲ, ಇಲ್ಯಾರೂ ಮೇಲಿಲ್ಲ, ಮೇಲು ಕೀಳಿಲ್ಲ... ಇದು ಉತ್ತರ ಕನ್ನಡ ಜಿಲ್ಲೆ ಉಸ್ತುವಾರಿ ಸಚಿವರಿಗೆ ಕರೆ ಮಾಡಿದಾಗ ಕೇಳಿ ಬರುವ ರಿಂಗ್ ಟೋನ್!

ನಿಜ, ಸಚಿವರಿಗೆ ಕರೆ ಮಾಡಿ ನಮ್ಮ ಅಳಲನ್ನು ಹೇಳಿಕೊಳ್ಳಲು ಆಸೆಯಿಂದ ಕರೆ ಮಾಡಿದರೆ ದುಃಖ ಆಗುವುದಂತೂ ಗ್ಯಾರಂಟಿ. ಯಾಕೆಂದರೆ ವೈದ್ಯರು ಕರೆಯನ್ನು ಸ್ವೀಕರಿಸುವುದಿಲ್ಲ. ವಿಶ್ವವಾಣಿ ಸೋದರ ಪತ್ರಿಕೆ ಲೋಕಧ್ವನಿಯ ರಿಯಾಲಿಟಿ ಚೆಕ್ ಮತ್ತು ಫಾಲೋ ಅಪ್‌ನಿಂದ ಸಚಿವರು ಜಾಗೃತರಾಗಿರಬಹುದು ಎಂದು ಭಾವಿಸಿ ಬುಧವಾರವೂ ಪುನಃ ವೈದ್ಯರು ಮತ್ತು ಅವರ ಪಿಎ ಅವರಿಗೆ ಕರೆ ಮಾಡಲಾಯಿತು. ಆದರೆ ಇಬ್ಬರೂ ಕರೆಯನ್ನು ಸ್ವೀಕರಿಸಲಿಲ್ಲ.

ಬುಧವಾರ ಬೆಳಗಿನ ಜಾವ ಯಲ್ಲಾಪುರ ತಾಲೂಕಿನ ಗುಳ್ಳಾಪುರ ಸಮೀಪ ನಡೆದ ಅಫಘಾತದ ಕುರಿತು ಉಸ್ತುವಾರಿ ಸಚಿವರ ಪ್ರತಿಕ್ರಿಯೆ ಪಡೆಯಲು ಕರೆಯನ್ನು ಮಾಡಲಾಗಿತ್ತು. ಬೆಳಗ್ಗೆ ಒಮ್ಮೆ, ನಂತರ ಮಧ್ಯಾಹ್ನವೂ ಕರೆ ಮಾಡಲಾಯಿತು. ಆದರೆ, ಸಚಿವರು ಕರೆಯನ್ನು ಸ್ವೀಕರಿಸಲಿಲ್ಲ. ಬೇರೆ, ಬೇರೆ ನಂಬರಿನಿಂದ ಕರೆ ಮಾಡಿದಾಗಲೂ ಸಚಿವರ ಮೊಬೈಲ್ ರಿಂಗಣಿಸಿತೇ ಹೊರತು ಪ್ರತಿಕ್ರಿಯೆ ಸಿಗಲಿಲ್ಲ. ಮೊಬೈಲ್ ಕರೆಗಳ ಬಗ್ಗೆ ಸಚಿವರಿಗೆ ಯಾಕೆ ಈ ದಿವ್ಯ ನಿರ್ಲಕ್ಷ್ಯ ಎನ್ನುವುದು ಮಾತ್ರ ಅರ್ಥವಾಗದ ವಿಚಾರವಾಗಿದೆ.

## ಸಮಾಚಾರ ಸಣ್ಣದಲ್ಲ

### ಆನೆ ದಂತ ಸಾಗಾಟ: ಇಬ್ಬರ ಬಂಧನ

**ಚಾಮರಾಜನಗರ:** ಕಾಡು ರಕ್ಷಕನಿಂದಲೇ ಆನೆ ದಂತ ಸಾಗಾಟ ನಡೆದಿರುವ ಘಟನೆ ಬೆಳಕಿಗೆ ಬಂದಿದೆ. ಆನೆ ದಂತ ಸಾಗಿಸುತ್ತಿದ್ದ ಫಾರೆಸ್ಟ್ ವಾಚರ್ ಹಾಗೂ ಆತನ ಸಂಬಂಧಿಯನ್ನು ಬಂಧಿಸಲಾಗಿದೆ. ಚಾಮರಾಜ ನಗರ ಜಿಲ್ಲೆಯ ಕೊಳ್ಳೇಗಾಲ ಪಟ್ಟಣದ ಮೋಳೆ ರಿಂಗ್ ರಸ್ತೆಯಲ್ಲಿ ಘಟನೆ ನಡೆದಿದೆ. ಅರಣ್ಯ ವೀಕ್ಷಕರೊಬ್ಬರು ತನ್ನ ಸಂಬಂಧಿಕರೊಂದಿಗೆ ಆನೆ ದಂತ ಸಾಗಿಸುತ್ತಿದ್ದ. ಆನೆ ದಂತ ಸಾಗಿಸುತ್ತಿದ್ದ ವೇಳೆ ಸಂಚಾರಿ ಅರಣ್ಯ ದಳ ಕಾರ್ಯಾಚರಣೆ ನಡೆಸಿದೆ. ಬೈಕ್‌ನಲ್ಲಿ ಆನೆ ದಂತ ಸಾಗಿಸುತ್ತಿದ್ದ ವೇಳೆ ಮಾಲು ಸಮೇತ ಖದೀಮರು ಸಿಕ್ಕಿಬಿದ್ದಿದ್ದಾರೆ. ವಾಚರ್ ಚಂದ್ರಶೇಖರ್ ಹಾಗೂ ಬಸವರಾಜ್ ಬಂಧನವಾಗಿದೆ. ಮತ್ತೊಬ್ಬ ಆರೋಪಿ ಪುಟ್ಟಸ್ವಾಮಿ ಪರಾರಿಯಾಗಿದ್ದಾನೆ. ಅರಣ್ಯ ಸಂಚಾರಿ ದಳ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಓದುಗರ ಮಾತು

ಸಚಿವ ಮಾಂಕಾಳ ವೈದ್ಯರ ಮೊಬೈಲ್ ಕರೆ ಅಲರ್ಜಿ ಬಗ್ಗೆ ಹೊನ್ನಾವರದ ಮಾಡಗೇರಿ ಶಂಕರನಾರಾಯಣ ಭಟ್ ಎಂಬುವವರು ಕಳುಹಿಸಿದ ಇಮೇಲ್ ಮಾಡಿದ್ದು ಅದು ಇಂತಿದೆ.

ಲೋಕಧ್ವನಿ ರಿಯಾಲಿಟಿ ಚೆಕ್ ಸಚಿವ ಮಂಕಾಳ ವೈದ್ಯ ನಾಟ್ ರೀಚೆಬಲ್', ನಿಜಕ್ಕೂ ಆಶ್ಚರ್ಯ ವೆನಿಸುತ್ತಿದೆ. ಈ ಹಿಂದೆ, ಜಿಪಂ ಸದಸ್ಯರಾಗಿದ್ದಾಗ, ಒಬ್ಬ ಶಾಸಕ ಆಗಿದ್ದಾಗ, ಸಾಮಾನ್ಯ ಜನರಿಗೂ ಹತ್ತಿರವಾಗಿದ್ದ ವರು ಈಗ ಮಂತ್ರಿಗಿರಿ ಸಿಕ್ಕ ಮೇಲೆ ಇಷ್ಟೊಂದು ಬದಲಾವಣೆ ಆಗಿದ್ದು ನಿಜವಿರಬಹುದೆ? ಯಾಕೀ ಅನುಮಾನವೆಂದರೆ, ಸಾಮಾನ್ಯವಾಗಿ ಈ ಭಾಗದ ಜನರು ಮತ್ತು ಕೆಲ ಮಾಧ್ಯಮಗಳು ಹೇಳಿಕೊಳ್ಳುವಂತೆ, ಮಂಕಾಳ ವೈದ್ಯ ಅತ್ಯಂತ ಸರಳ, ಸಜ್ಜನ ರಾಜಕಾರಣಿ. ಜನರ ಕುಂದು-ಕೊರತೆಗಳ ಬಗ್ಗೆ ಅತ್ಯಂತ ಕಾಳಜಿ ಮತ್ತು ಕಳಕಳಿ ಉಳ್ಳವರಾಗಿ, ಯಾವುದೇ ಹಮ್ಮು -ಬಿಮ್ಮಿಲ್ಲದೇ ಸ್ಪಂದಿಸುವ ವ್ಯಕ್ತಿ ಎಂದು ಕೇಳಿದವರಿಗೆ ಈಗ ಒಮ್ಮೆಲೇ 'ನಾಟ್ ರೀಚೆಬಲ್'ಆಗಲು ಸಾಧ್ಯವೇ ಎಂಬ ಅನುಮಾನ ಕಾಡಿದರೂ ವಿಶೇಷವಲ್ಲ. ಏಕೆಂದರೆ ಆ ವ್ಯಕ್ತಿಯ ವ್ಯಕ್ತಿತ್ವವೇ ಹಾಗೆ.

ಆದರೊಂದು, ಈ ಅಧಿಕಾರದ ಕುದುರೆ ಏರಿದವರಿಗೆ, ನೆಲದ ಮೇಲಿರುವವರು ಅಷ್ಟು ಸಲೀಸಾಗಿ ಕಾಣುವುದಿಲ್ಲ. ಅಧಿಕಾರ ಅಂದರೇನೇ ಹಾಗೆ. ಅದು ಕುರುಡನ್ನಾಗಿಸಬಹುದು, ಕಿವುಡರನ್ನಾಗಿಸಬಹುದು. ಈಗ ಆಗಿರುವುದು ಅದೇ ಇರಬಹುದೆ? ಸ್ವತಃ ಅವರ ಪಕ್ಷದವರೇ ಹೇಳುವಂತೆ 'ನಮ್ಮ ನಾಯಕರು ಹೇಗಿದ್ದವರು ಹೀಗೇಕಾದರು' ಎಂಬುದು. ಕೇವಲ 'ಆಪ್ತ ವಲಯ' ದವರಿಗಷ್ಟೇ ನಿಲುಕುವ ವ್ಯಕ್ತಿಯಾಗಿ ಬಿಟ್ಟರೆ ? ಅಥವಾ ಹೀಗೂ ಇದ್ದಿರಲು ಸಾಕು. ಒಬ್ಬ ಮಂತ್ರಿಯಾಗಿ, ಉಸ್ತುವಾರಿ ಸಚಿವನಾಗಿ, ಎಲ್ಲರಿಗೂ, ಎಲ್ಲ ಸಮಯದಲ್ಲೂ ನಿಲುಕುವಂತಾದರೆ ತನ್ನ 'ವರ್ಚಸ್ಸಿ' ಗೇ ಧಕ್ಕೆ ಎಂದುಕೊಂಡಿರಬಹುದೆ? ಇದು ವರ್ಚಸ್ಸನು ಕಾಪಿಟ್ಟುಕೊಳ್ಳುವ ಒಂದು ಬಗೆ ಎಂದುಕೊಂಡರೆ ತಪ್ಪೇ?

ಹೌದು. ನಾವೂ ಬಯಸುವುದು ಅದೇನೇ ಅಲ್ಲವೆ? ಒಬ್ಬ ಪ್ರತಿಷ್ಠಾವಂತ, ಸಮಾಜದಲ್ಲಿ ಹೆಸರು ಮಾಡಿದವ, ಕಲಾವಿದ, ಕ್ರೀಡಾಪಟು, ವಾಗ್ಮಿ, ಶ್ರೀಮಂತ, ಒಂದಿಷ್ಟು ಡಿಸ್ಟೆನ್ಸ್ ಕಾದಿಟ್ಟುಕೊಳ್ಳಬೇಕು ಎನ್ನುವುದು. ಇಲ್ಲ ಅಂದರೆ 'ಅಗ್ಗ' ದ ವ್ಯಕ್ತಿಯಾಗಿ ಬಿಡುತ್ತಾನೆ. ಅಷ್ಟೇ ಅಲ್ಲ, ತಾನೊಬ್ಬ ಅತ್ಯಂತ ಬ್ಯುಸಿ ಮನುಷ್ಯ, ಹಾಗೆಲ್ಲ ಕರೆ ಮಾಡಿದಾಗೆಲ್ಲ ಲಭಿಸುವ ವ್ಯಕ್ತಿ ಅಲ್ಲ ಎಂಬುದನ್ನು ಜನರಿಗೆ ತಿಳಿ ಹೇಳುವ ಪ್ರಯತ್ನ ಅಂದುಕೊಂಡರೂ ಅಡ್ಡಿ ಇಲ್ಲವೇನೋ? ಇಲ್ಲ ಅಂದರೆ ಒಮ್ಮೆಲೇ ಯಾರೂ ಅಷ್ಟೊಂದು ಬದಲಾಗಲಾರರು. ನೋಡೋಣ. ಇನ್ನು ಸ್ವಲ್ಪ ದಿನಗಳಲ್ಲಿ ಸಾಮಾನ್ಯರ ಮತ್ತು ಅವರ ಪಕ್ಷದ ಕಾರ್ಯಕರ್ತರ ಅಭಿಪ್ರಾಯ ಬದಲಾದೀತೆ ಎಂಬುದನ್ನು.

-ಮಾಡಗೇರಿ ಶಂಕರನಾರಾಯಣ ಭಟ್ ಹೊನ್ನಾವರ

### 20 ಸಾವಿರ ರು. 'ದೂರ'ವಾಣಿ ಭತ್ಯೆ!

ರಿಯಾಲಿಟಿ ಚೆಕ್

ಸರಕಾರದ ಬೊಕ್ಕಸದಿಂದ ಪ್ರತಿ ಜನಪ್ರತಿನಿಧಿಗಳಿಗೆ 20 ಸಾವಿರ ರು. ದೂರವಾಣಿ ಭತ್ಯೆ ನೀಡಲಾಗುತ್ತದೆ. ಜನರಿಂದ ಆಯ್ಕೆಯಾಗಿ ಬಂದ ಶಾಸಕರು, ನಂತರ ಸಚಿವ ಸ್ಥಾನಕ್ಕೇರಿದ ವರು ತಮ್ಮ ಕ್ಷೇತ್ರ ಮತ್ತು ತಮ್ಮ ಜಿಲ್ಲೆಯ ವ್ಯಾಪ್ತಿಯ ಸಾರ್ವಜನಿಕರಿಂದ ಒಂದ ಕರೆಯನ್ನು ಸ್ವೀಕಾರ ಮಾಡ ಬೇಕು. ಜನರಿಗೆ ಹತ್ತಿರವಾಗಿ ಇರಬೇಕು ಎನ್ನುವ ಕಾರಣ ದಿಂದ ಶಾಸಕರ ಕರೆ ವೆಚ್ಚಗಳನ್ನು ಸರಕಾರದ ದುಡ್ಡಲ್ಲಿ ಭರಿಸಲಾಗುತ್ತದೆ. ಈಗಿನ ಸಂಪರ್ಕ ಕ್ರಾಂತಿ ಯುಗದಲ್ಲಿ ಅನ್ ಲಿಮಿಟೆಡ್ ಪ್ಲ್ಯಾನ್ ತೆಗೆದು ಕೊಂಡರೂ, 10 ಎಫ್‌ಟಿಟಿಎಚ್ ಲೈನ್, 10 ದೂರವಾಣಿ ಯನ್ನು ಇಟ್ಟುಕೊಳ್ಳ ಬಹುದು. ಹೀಗಿರುವಾಗ ಕರೆ ಸ್ವೀಕರಿಸಲು ಅಡ್ಡಿಯಾಗುವ ತೊಂದರೆ ಏನು ಎನ್ನುವುದು ಸಾರ್ವಜನಿಕರ ಪ್ರಶ್ನೆ.

## ..ವಾರಗಟ್ಟಲೇ ಪ್ರವಾಸ

← ಮೊದಲಪುಟದಿಂದ

ಈ ಎಲ್ಲ ಪ್ರವಾಸಕ್ಕೂ ಕೆಎಸ್‌ಟಿಡಿಸಿಯ ಐಷಾರಾಮಿ ಬಸ್‌ಗಳನ್ನು ಬಳಸಲಾಗುವುದು ಹಾಗೂ ಸರಕಾರದೊಂದಿಗೆ ಒಪ್ಪಂದ ಮಾಡಿಕೊಂಡಿರುವ ಹೋಟೆಲ್‌ಗಳಲ್ಲಿ ವಸತಿ, ಊಟದ ವ್ಯವಸ್ಥೆ ಕಲ್ಪಿಸಲಾಗುವುದು. ಆದ್ದರಿಂದ ಸುರಕ್ಷಿತವಾಗಿ ಪ್ರವಾಸಕ್ಕೆ ಹೆಚ್ಚಿನ ಒತ್ತು ನೀಡಲಾಗುವುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

**ಗುಂಪಿನಲ್ಲಿ ಹೋದರೆ ರಿಯಾಯಿತಿ:** ಈ ಪ್ರವಾಸಿ ಪ್ಯಾಕೇಜ್‌ನಲ್ಲಿ ಒಬ್ಬರು ಪ್ರವಾಸಿದರೆ ಒಂದು ದರವನ್ನು ನಿಗದಿಪಡಿಸಲಾಗಿದೆ. ಆದರೆ ಗುಂಪಿನಲ್ಲಿ ಪ್ರಯಾಣಿಸಲು ಮುಂದಾದರೆ ಭಾರಿ ರಿಯಾಯಿತಿಯನ್ನು ನೀಡಲಾಗಿದೆ. ಉದಾಹರಣೆಗೆ ಪಂಡರಾಪುರ-ಶಿರಡಿ-ನಾಸಿಕ್-ಕೊಲ್ಹಾಪುರದ ಆರು ದಿನದ ಟೂರ್‌ಗೆ ಒಬ್ಬರೇ ನೊಂದಣಿ ಮಾಡಿಕೊಂಡರೆ 18590 ರು. ವ್ಯಯಿಸಬೇಕು. ಆದರೆ ಮೂರು ಜನ ಒಟ್ಟಿಗೆ ನೊಂದಾವಣಿ ಮಾಡಿಕೊಂಡರೆ ತಲಾ ಒಬ್ಬರಿಗೆ 13930 ರು. ಪಾವತಿಸಬೇಕು. ಇದೇ ರೀತಿ ವಿವಿಧ ಪ್ಯಾಕೇಜ್‌ಗಳಿಗೆ ವಿವಿಧ ರಿಯಾಯಿತಿ ನೀಡಲಾಗಿದೆ.

- **ತಿರುವಣ್ಣಮಲೈ-ಗಿರಿವಲಂ**
ಪ್ರವಾಸದ ದಿನ : ಪ್ರವಾಸಿಗರ ಆಧಾರದಲ್ಲಿ
ಪ್ರವಾಸದ ಅವಧಿ : ಎರಡು ದಿನ
ದರ (ಒಬ್ಬರಿಗೆ) : 5210 ರು.
ಹಿರಿಯ ನಾಗರಿಕರಿಗೆ ಸಿಗುವ ರಿಯಾಯಿತಿ : 300

- **ನಂದ್ಯಾಲ- ಅಹೋಬಿಲ**
ಪ್ರವಾಸದ ದಿನ : ಪ್ರತಿ ಶುಕ್ರವಾರ
ಪ್ರವಾಸದ ಅವಧಿ : 4 ದಿನ
ದರ (ಒಬ್ಬರಿಗೆ) : 7450
ಹಿರಿಯ ನಾಗರಿಕರಿಗೆ ಸಿಗುವ ರಿಯಾಯಿತಿ : 600

- **ತಮಿಳುನಾಡು-ನವಗ್ರಹ**
ಪ್ರವಾಸದ ದಿನ : ಪ್ರತಿ ಶುಕ್ರವಾರ
ಪ್ರವಾಸದ ಅವಧಿ : ನಾಲ್ಕು ದಿನ
ದರ (ಒಬ್ಬರಿಗೆ) : 7820
ಹಿರಿಯ ನಾಗರಿಕರಿಗೆ ಸಿಗುವ ರಿಯಾಯಿತಿ : 600

- **ಪಂಡರಾಪುರ-ಶಿರಡಿ-ಎಲ್ಲೋರ-ಕೊಲ್ಹಾಪುರ**
ಪ್ರವಾಸದ ದಿನ : ಪ್ರತಿ ಬುಧವಾರ
ಪ್ರವಾಸದ ಅವಧಿ : 6 ದಿನ
ದರ (ಒಬ್ಬರಿಗೆ) : 18590
ಹಿರಿಯ ನಾಗರಿಕರಿಗೆ ಸಿಗುವ ರಿಯಾಯಿತಿ : 200

- **ತೆಕ್ಕಡಿ-ಆಲೆಪ್ಪಿ ಬೋಟ್ ಹೌಸ್-ಮುನ್ನಾರ್**
ಪ್ರವಾಸದ ದಿನ : ಪ್ರತಿ ಬುಧವಾರ
ಪ್ರವಾಸದ ಅವಧಿ : 6 ದಿನ
ದರ (ಒಬ್ಬರಿಗೆ) : 20050
ಹಿರಿಯ ನಾಗರಿಕರಿಗೆ ಸಿಗುವ ರಿಯಾಯಿತಿ : 900

- **ತೆಕ್ಕಡಿ-ಮುನ್ನಾರ್**
ಪ್ರವಾಸದ ದಿನ : ಪ್ರತಿ ಗುರುವಾರ
ಪ್ರವಾಸದ ಅವಧಿ : ಐದು ದಿನ
ದರ (ಒಬ್ಬರಿಗೆ) : 13030
ಹಿರಿಯ ನಾಗರಿಕರಿಗೆ ಸಿಗುವ ರಿಯಾಯಿತಿ : 750

## ಆರೋಪಿಗೆ ಕಾಲಿಗೆ ಗುಂಡೇಟು

**ಕಲಬುರಗಿ:** ಕಲಬುರಗಿ ಹೊರ ವಲಯದ ಜಾಫರಾಬಾದ್ ಗುಡ್ಡದ ಬಳಿ ಫೈರಿಂಗ್ ಮಾಡಲಾಗಿದೆ. ಇಮ್ತಿಯಾಜ್ ಗಿಣಿ ಕಾಲಿಗೆ ಪೊಲೀಸರು ಗುಂಡು ಹಾರಿಸಿದ್ದಾರೆ. ಉಪನಗರ ಠಾಣೆ ಪಿಎಸ್‌ಐ ಬಸವರಾಜ್ ಫೈರಿಂಗ್ ಮಾಡಿದ್ದಾರೆ. ದರೋಡೆಯ ಬಗ್ಗೆ ಮಾಹಿತಿ ತಿಳಿದು ಬಂಧಿಸಲು ತೆರಳಿದ್ದ ವೇಳೆ ಪೊಲೀಸರ ಮೇಲೆಯೇ ಹಲ್ಲೆಗೆ ಯತ್ನಿಸಿದ ಹಿನ್ನೆಲೆಯಲ್ಲಿ ಆತ್ಮರಕ್ಷಣೆಗಾಗಿ ಆರೋಪಿ ಕಾಲಿಗೆ ಗುಂಡು ಹಾರಿಸಿ ವಶಕ್ಕೆ ಪಡೆದುಕೊಳ್ಳಲಾಗಿದೆ.

ಆತನನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ಆರೋಪಿ ವಿರುದ್ಧ ವಿವಿಧ ಠಾಣೆಗಳಲ್ಲಿ 6 ಕೇಸುಗಳಿವೆ. ಉಪನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

KEA

ಕರ್ನಾಟಕ ಸರ್ಕಾರ
**ಕರ್ನಾಟಕ ಪರೀಕ್ಷಾ ಪ್ರಾಧಿಕಾರ**
ಸಂಪಿಗೆ ರಸ್ತೆ, 18ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-560 012.
ವೆಬ್‌ಸೈಟ್ http://cetonline.karnataka.gov.in/kea/ e-mail: keaugcet25@gmail.com

ಸಂಖ್ಯೆ: ಇಡಿ/ಕೆಇಎ/ಆಡಳಿತ/ಸಿ.ಆರ್.02/2025-26 ದಿನಾಂಕ: 22.01.2025

**ಅಧಿಸೂಚನೆ**

**2025-26 ನೇ ಸಾಲಿಗೆ ಕರ್ನಾಟಕದ ರಾಜ್ಯದಲ್ಲಿನ ವೃತ್ತಿಪರ ಕೋರ್ಸುಗಳಿಗೆ ಪ್ರವೇಶ**

1. ವೃತ್ತಿಪರ ಶಿಕ್ಷಣ ಸಂಸ್ಥೆಗಳಲ್ಲಿನ ಸರ್ಕಾರಿ ಸೀಟುಗಳ ಪ್ರವೇಶಕ್ಕಾಗಿ ಕರ್ನಾಟಕ ಅಭ್ಯರ್ಥಿಗಳ ಆಯ್ಕೆ, 2006 ನಿಯಮಗಳು (ತಿದ್ದುಪಡಿಗಳು) ನಿಯಮ 3, ನಿಯಮ 6 (3) ಮತ್ತು ನಿಯಮ (7) ರ ಅನ್ವಯ ಹಾಗು ಸರ್ಕಾರದ ಆದೇಶದ ಅನುಸಾರವಾಗಿ, ಕರ್ನಾಟಕ ಪರೀಕ್ಷಾ ಪ್ರಾಧಿಕಾರವು, ಕರ್ನಾಟಕ **ಸಾಮಾನ್ಯ ಪ್ರವೇಶ ಪರೀಕ್ಷೆ-2025**ಕ್ಕೆ, ಅರ್ಹತೆ / ಮೆರಿಟ್‌ಅನ್ನು ಆಧರಿಸಿ, ಕರ್ನಾಟಕ ರಾಜ್ಯದಲ್ಲಿರುವ ಸರ್ಕಾರಿ / ವಿಶ್ವವಿದ್ಯಾಲಯ / ಖಾಸಗಿ ಅನುದಾನಿತ / ಖಾಸಗಿ ಅನುದಾನರಹಿತ ವೃತ್ತಿ ಶಿಕ್ಷಣ ಸಂಸ್ಥೆಗಳಲ್ಲಿರುವ ಇಂಜಿನಿಯರಿಂಗ್, ತಂತ್ರಜ್ಞಾನ, ಯೋಗ ಮತ್ತು ನ್ಯಾಚುರೋಪತಿ, ಬಿ-ಫಾರ್ಮ, 2ನೇ ವರ್ಷದ ಬಿ-ಫಾರ್ಮ ಮತ್ತು ಫಾರ್ಮಾ-ಡಿ, ಕೃಷಿ ವಿಜ್ಞಾನ ಕೋರ್ಸುಗಳು, ವೆಟರಿನರಿ ಹಾಗು ಬಿ.ಎಸ್.ಸಿ. (ನರ್ಸಿಂಗ್) ಕೋರ್ಸುಗಳಲ್ಲಿ ಲಭ್ಯವಿರುವ ಸರ್ಕಾರದ ಪಾಲಿನ ಸೀಟುಗಳಿಗೆ ಸಂಬಂಧಿಸಿದಂತೆ, ಪೂರ್ಣಾವಧಿ ಕೋರ್ಸುಗಳ ಮೊದಲನೇ ವರ್ಷಕ್ಕೆ ಅಥವಾ ಮೊದಲನೇ ಸೆಮಿಸ್ಟರ್‌ಗೆ ಸರ್ಕಾರವು ನೀಡುವ ಸೀಟ್ ಮ್ಯಾಟ್ರಿಕ್ಸ್ ನಂತೆ 2025-26ನೇ ಸಾಲಿಗೆ ಅನ್ವಯಿಸುವಂತೆ ಪ್ರವೇಶ ನೀಡುವುದಕ್ಕೆ ಅರ್ಹ ಕರ್ನಾಟಕದ ವಿದ್ಯಾರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.
2. ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಮುಖಾಂತರ ಈ ಮೇಲಿನ ವೃತ್ತಿಪರ ಕೋರ್ಸುಗಳಿಗೆ ಪ್ರವೇಶ ಪಡೆಯುವುದಕ್ಕೆ ಅಭ್ಯರ್ಥಿಗಳು ಆನ್‌ಲೈನ್ ಮೂಲಕ ನೊಂದಾಯಿಸಿಕೊಂಡು, ಆನ್‌ಲೈನ್ ಅರ್ಜಿ ಸಲ್ಲಿಸಿ, ಅರ್ಜಿ ಶುಲ್ಕ ಪಾವತಿಸಿ, ಪ್ರವೇಶ ಪತ್ರ ಡೌನ್‌ಲೋಡ್ ಮಾಡಿಕೊಂಡು ನಂತರ ಕೆಇಎ ನಡೆಸುವ **ಸಾಮಾನ್ಯ ಪ್ರವೇಶ ಪರೀಕ್ಷೆ 2025ಕ್ಕೆ** ಹಾಜರಾಗಬೇಕಿರುತ್ತದೆ. ಆನ್‌ಲೈನ್ ಅರ್ಜಿ ಸಲ್ಲಿಸುವಿಕೆಯು Application-Cum-Verification Module ಆಗಿರುವುದರಿಂದ ಅಭ್ಯರ್ಥಿಗಳು ಎಲ್ಲಾ ವಿವರಗಳನ್ನು ಕಡ್ಡಾಯವಾಗಿ ಎಚ್ಚರಿಕೆಯಿಂದ ಭರ್ತಿ ಮಾಡಲು ಮತ್ತು ಅಗತ್ಯವಿರುವ ಆರ್‌ಡಿ ಸಂಖ್ಯೆಗಳನ್ನು ದಾಖಲಿಸಲು ಸೂಚಿಸಲಾಗಿದೆ. ಅರ್ಜಿಯಲ್ಲಿ ಅಭ್ಯರ್ಥಿಯು ಕ್ಲೇಮ್ ಮಾಡಿರುವ ವಿವರಗಳನ್ನು (ಕ್ಲೇಮ್ಸ್ ಸರ್ಟಿಫಿಕೇಟ್) ಮುದ್ರಿಸಲಾಗುವುದು.
3. Claim Certificate ನಲ್ಲಿ "Successfully Verified" ಎಂದು ನಮೂದಿಸಿದ್ದರೆ ಅಂತಹ ಅಭ್ಯರ್ಥಿಗಳು ದಾಖಲೆ ಪರಿಶೀಲನೆಗೆ ಯಾವುದೇ ಕಚೇರಿಗೆ / ಕಾಲೇಜಿಗೆ ಹೋಗುವ ಅವಶ್ಯಕತೆ ಇರುವುದಿಲ್ಲ. ಸಿಇಟಿ ಫಲಿತಾಂಶದ ನಂತರ ವೆರಿಫಿಕೇಶನ್ ಸ್ಲಿಪ್ ಅನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು.
4. "Claimed Verified OR Claimed not verified OR not Claimed" ಎಂದು Claim Certificate ನಮೂದಾಗಿದ್ದರೆ ಅಭ್ಯರ್ಥಿಗಳು 2ನೇ ಪಿಯುಸಿ / 12ನೇ ತರಗತಿಯನ್ನು ವ್ಯಾಸಂಗ ಮಾಡುತ್ತಿರುವ ಆಯಾ ಕಾಲೇಜಿಗೆ ಭರ್ತಿ ಮಾಡಿದ ಅರ್ಜಿಯನ್ನು ಮತ್ತು ಕ್ಲೇಮ್ಸ್ ಮಾಡಿರುವ ಎಲ್ಲಾ ಮೂಲ ದಾಖಲೆಗಳನ್ನು ಪ್ರಾಂಶುಪಾಲರಿಗೆ ತೋರಿಸಿ ಒಂದು ಸೆಟ್ ಪ್ರತಿಗಳನ್ನು ಕ್ಲೇಮ್ಸ್ ಸರ್ಟಿಫಿಕೇಟ್ ನೊಂದಿಗೆ ಸಲ್ಲಿಸುವುದು ಕಡ್ಡಾಯವಾಗಿದೆ. ಕಾಲೇಜಿನವರು ಕ್ಲೇಮ್ಸ್ ಸರ್ಟಿಫಿಕೇಟ್ ನೊಂದಿಗೆ ಪರಿಶೀಲನೆ ಮಾಡಿದ ನಂತರ ಅಭ್ಯರ್ಥಿಯ ವಿವರಗಳನ್ನು ಅನುಮೋದಿಸುತ್ತಾರೆ. ಸಿಇಟಿ ಫಲಿತಾಂಶದ ನಂತರ ವೆರಿಫಿಕೇಶನ್ ಸ್ಲಿಪ್ ಅನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು.
5. ವಿವಿಧ ವೃತ್ತಿಪರ ಕೋರ್ಸುಗಳ ಪ್ರವೇಶಕ್ಕಾಗಿ ಸಿಇಟಿ-2025 ರ ಪರೀಕ್ಷೆಗೆ ಹಾಜರಾಗಬೇಕಾದ ವಿಷಯಗಳ ವಿವರ

| ಕ್ರ. ಸಂ. | ಮೊದಲನೇ ವರ್ಷದ ಪ್ರವೇಶ ಕೋರ್ಸುಗಳು | ಸಿಇಟಿ-2025 ರ ಯಾವ ವಿಷಯಗಳಿಗೆ ಹಾಜರಾಗಬೇಕು |
|---|---|---|
| a | ಇಂಜಿನಿಯರಿಂಗ್ ಮತ್ತು ತಂತ್ರಜ್ಞಾನ | ಭೌತಶಾಸ್ತ್ರ, ರಸಾಯನ ಶಾಸ್ತ್ರ, ಗಣಿತ (PCM) |
| b | ಕೃಷಿ ವಿಜ್ಞಾನ ಕೋರ್ಸುಗಳು [ಬಿ.ಎಸ್‌ಸಿ. (ಆನರ್ಸ್) ಕೃಷಿ, ಬಿ.ಎಸ್‌ಸಿ. (ಆನರ್ಸ್) ಅರಣ್ಯ ವಿಜ್ಞಾನ, ಬಿ.ಎಸ್‌ಸಿ. (ಆನರ್ಸ್) ರೇಷ್ಮೆಕೃಷಿ, ಬಿ.ಎಸ್‌ಸಿ. (ಆನರ್ಸ್) ತೋಟಗಾರಿಕೆ, ಬಿ.ಎಸ್‌ಸಿ. (ಆನರ್ಸ್) ಸಮುದಾಯ ವಿಜ್ಞಾನ, ಬಿ.ಟೆಕ್. (ಕೃಷಿ ಇಂಜಿನಿಯರಿಂಗ್), ಬಿ.ಟೆಕ್. (ಬಯೋಟೆಕ್ನಾಲಜಿ), ಬಿ.ಟೆಕ್. (ಹೈನುಗಾರಿಕೆ ತಂತ್ರಜ್ಞಾನ), ಬಿ.ಎಫ್.ಎಸ್‌ಸಿ. (ಮೀನುಗಾರಿಕೆ), ಬಿ.ಟೆಕ್. (ಆಹಾರ ತಂತ್ರಜ್ಞಾನ), ಬಿ.ಎಸ್‌ಸಿ. (ಆನರ್ಸ್) ಕೃಷಿ ವ್ಯವಹಾರ ನಿರ್ವಹಣೆ] | ಭೌತಶಾಸ್ತ್ರ, ರಸಾಯನ ಶಾಸ್ತ್ರ, ಗಣಿತ, ಜೀವಶಾಸ್ತ್ರ (PCMB) |
| c | ಪಶು ವೈದ್ಯಕೀಯ ಮತ್ತು ಪಶುಸಂಗೋಪನೆ, ಯೋಗ ಮತ್ತು ನ್ಯಾಚುರೋಪತಿ, ಬಿ.ಎಸ್.ಸಿ (ನರ್ಸಿಂಗ್) | ಭೌತಶಾಸ್ತ್ರ, ರಸಾಯನ ಶಾಸ್ತ್ರ, ಜೀವಶಾಸ್ತ್ರ (PCB) |
| d | ಬಿ.ಫಾರ್ಮ, 2ನೇ ವರ್ಷದ ಬಿ-ಫಾರ್ಮ ಮತ್ತು ಫಾರ್ಮಾ-ಡಿ | (PCM or PCB) |

**6. ಇತರೆ ಕೋರ್ಸುಗಳಿಗೆ ಅಭ್ಯರ್ಥಿಗಳು ಹಾಜರಾಗಬೇಕಾದ ಪ್ರವೇಶ ಪರೀಕ್ಷೆಗಳು-2025**

| | | | |
|---|---|---|---|
| a | ವೈದ್ಯಕೀಯ, ದಂತವೈದ್ಯಕೀಯ ಮತ್ತು ಆಯುಷ್ ಕೋರ್ಸುಗಳು | ಯುಜಿನೀಟ್ (UGNEET) | ಅಭ್ಯರ್ಥಿಗಳು ಕೆಇಎ ಮೂಲಕ ಸೀಟು ಹಂಚಿಕೆಯಲ್ಲಿ ಭಾಗವಹಿಸಲು ಸಿಇಟಿ-2025ಕ್ಕೆ ಆನ್‌ಲೈನ್ ಮೂಲಕ ನೊಂದಾಯಿಸಿ ಕೊಂಡು, ಆನ್‌ಲೈನ್ ಅರ್ಜಿ ಸಲ್ಲಿಸಿ, ಅರ್ಜಿ ಶುಲ್ಕ ಪಾವತಿಸುವುದು ಕಡ್ಡಾಯವಾಗಿರುತ್ತದೆ. |
| b | ಆರ್ಕಿಟೆಕ್ಚರ್ | ನಾಟಾ (NATA) | |
| c | ಬಿಪಿಟಿ, ಬಿಪಿಒ, **ಬಿಎಸ್‌ಸಿ ಅಲೈಡ್ ಹೆಲ್ತ್ ಸೈನ್ಸ್ ಕೋರ್ಸುಗಳ ಪ್ರವೇಶಾತಿಗೆ ಅರ್ಹತೆ ಪಿಯು ಅಂಕಗಳ ಆಧಾರದ ಮೇಲೆ** | **ಯಾವುದೇ ಪ್ರವೇಶ ಪರೀಕ್ಷೆ ಇಲ್ಲ-ಆದರೆ** ಅಭ್ಯರ್ಥಿಗಳು ಸಿಇಟಿ-2025ಕ್ಕೆ ಆನ್‌ಲೈನ್ ಮೂಲಕ ನೊಂದಾಯಿಸಿಕೊಂಡು, ಆನ್‌ಲೈನ್ ಅರ್ಜಿ ಸಲ್ಲಿಸಿ, ಅರ್ಜಿ ಶುಲ್ಕ ಪಾವತಿಸುವುದು ಕಡ್ಡಾಯವಾಗಿರುತ್ತದೆ. | |

7. ಸರ್ಕಾರದ ಆದೇಶ ಸಂಖ್ಯೆ ಎಂಇಡಿ 51 ಆರ್‌ಜಿಯು 2023 ದಿನಾಂಕ 13.04.2023ರ ಅನ್ವಯ ಬಿ.ಎಸ್.ಸಿ (ನರ್ಸಿಂಗ್) ಕೋರ್ಸುಗಳ ಪ್ರವೇಶಕ್ಕೂ ಸಹ ಕರ್ನಾಟಕ ಮತ್ತು ಕರ್ನಾಟಕೇತರ ಅಭ್ಯರ್ಥಿಗಳು ಪ್ರಾಧಿಕಾರವು ನಡೆಸುವ 2025ರ ಸಾಮಾನ್ಯ ಪ್ರವೇಶ ಪರೀಕ್ಷೆಗೆ ಹಾಜರಾಗಬೇಕಿರುತ್ತದೆ. **ಕರ್ನಾಟಕೇತರ ಅಭ್ಯರ್ಥಿಗಳು ಇಂಜಿನಿಯರಿಂಗ್ ಮುಂತಾದ ಕೋರ್ಸುಗಳ ಪ್ರವೇಶಕ್ಕೆ ಅರ್ಹರಾಗುವುದಿಲ್ಲ ಮತ್ತು ಕರ್ನಾಟಕೇತರ ಅಭ್ಯರ್ಥಿಗಳಿಗೆ ಯಾವುದೇ ಮೀಸಲಾತಿಯ ಸವಲತ್ತುಗಳು ಅನ್ವಯಿಸುವುದಿಲ್ಲ.**
ಕರ್ನಾಟಕ ರಾಜ್ಯದಲ್ಲಿ ಯಾವುದೇ ವೃತ್ತಿಪರ ಕೋರ್ಸುಗಳ ಪ್ರವೇಶಕ್ಕಾಗಿ ಅನ್‌ಲೈನ್ ಮೂಲಕ ನೊಂದಾಯಿಸುವ ಮೊದಲು, ಅಭ್ಯರ್ಥಿಗಳು ಮಾಹಿತಿ ಪುಸ್ತಕವನ್ನು ಓದಲು, ಮತ್ತು ಅರ್ಹತಾ ಷರತ್ತುಗಳು, ಸೀಟುಗಳ ವರ್ಗೀಕರಣ (ವಿವಿಧ ವರ್ಗದ ಸೀಟುಗಳು) ಮತ್ತು ಅಂತಹ ಸೀಟುಗಳನ್ನು ಪಡೆಯಲು ಇರುವ ಅರ್ಹತೆಗಳನ್ನು ಅರ್ಥ ಮಾಡಿಕೊಳ್ಳಲು ಈ ಮೂಲಕ ತಿಳಿಸಲಾಗಿದೆ.
**ಅರ್ಹತೆ:** ನಿಯಮ 5 (1) ರ Karnataka Selection of Candidates for Admission to Government seats in Professional Educational Institutions Rules, 2006, ಅನ್ವಯ ಅರ್ಜಿ ಸಲ್ಲಿಸುವ ಅಭ್ಯರ್ಥಿಯು ಭಾರತೀಯ ಪ್ರಜೆಯಾಗಿರಬೇಕು ಮತ್ತು ನಿಗದಿ ಪಡಿಸಿರುವ ಅರ್ಹತಾ ಕಂಡಿಕೆಗಳಲ್ಲಿ ಯಾವುದಾದರು ಒಂದರಲ್ಲಿ ಅರ್ಹತೆ ಹೊಂದಿರಬೇಕು, ಇಲ್ಲದಿದ್ದಲ್ಲಿ ಅಂತಹ ಅಭ್ಯರ್ಥಿಗಳು ಸರ್ಕಾರಿ ಕೋಟದ ಸೀಟುಗಳನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಮೂಲಕ ಪಡೆಯಲು ಅರ್ಹತೆಯನ್ನು ಹೊಂದುವುದಿಲ್ಲ. Eligibility for OCI / PIO candidates for Government seats shall be as per the directions of the Government.
8. ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವ ವಿಧಾನ, ಅರ್ಹತಾ ಕಂಡಿಕೆಗಳು, ಶೈಕ್ಷಣಿಕ ಅರ್ಹತೆ ಹಾಗು ಇತರೆ ವಿವರಗಳನ್ನು ಒಳಗೊಂಡ "ಯುಜಿಸಿಇಟಿ-2025-ಮಾಹಿತಿ ಪುಸ್ತಕ" ವನ್ನು ಪ್ರಾಧಿಕಾರದ ವೆಬ್‌ಸೈಟ್‌ನಲ್ಲಿ ಪ್ರಚುರ ಪಡಿಸಲಾಗುವುದು. ಅಭ್ಯರ್ಥಿಗಳು ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಅಭ್ಯರ್ಥಿಗಳು ಕೆಇಎ ನಡೆಸುವ ಸಿಇಟಿ ಮೂಲಕ ವೃತ್ತಿ ಶಿಕ್ಷಣ ಕೋರ್ಸುಗಳಿಗೆ ಪ್ರವೇಶ ಪಡೆಯಲು ವಿವರಗಳನ್ನು ಆನ್‌ಲೈನ್ ಅರ್ಜಿಯಲ್ಲಿ ಭರ್ತಿ ಮಾಡಿ ಸಲ್ಲಿಸಬೇಕು.
9. ಸಿಇಟಿ-2025ಕ್ಕೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಕೆ - ಶುಲ್ಕ ಪಾವತಿ - ವೇಳಾಪಟ್ಟಿ.

| | | |
|---|---|---|
| a | ನೊಂದಣಿ ಹಾಗು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಪ್ರಾರಂಭಿಕ ದಿನಾಂಕ | 23.01.2025 ಬೆ. 11:00ರ ನಂತರ |
| b | ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ | 18.02.2025 ರಾತ್ರಿ 11:59 |
| c | ಶುಲ್ಕವನ್ನು ಪಾವತಿ ಮಾಡಲು ಕೊನೆಯ ದಿನಾಂಕ | 20.02.2025 |
| d | ಪ್ರವೇಶ ಪತ್ರಗಳನ್ನು ಡೌನ್‌ಮಾಡಿಕೊಳ್ಳುವುದು | 25.03.2025ರ ನಂತರ |

**ಸಾಮಾನ್ಯ ಪ್ರವೇಶ ಪರೀಕ್ಷೆ 2025ರ ವೇಳಾಪಟ್ಟಿ**

| ದಿನಾಂಕ | ದಿನ | ಸಮಯ | ವಿಷಯ | ಅಂಕಗಳು / ಪ್ರಶ್ನೆಗಳು |
|---|---|---|---|---|
| 16.04.2025 | ಬುಧವಾರ | ಬೆಳಿಗ್ಗೆ 10:30 ರಿಂದ 11:50ರವರೆಗೆ | ಭೌತಶಾಸ್ತ್ರ Physics | 60 |
| | | ಮಧ್ಯಾಹ್ನ 2:30 ರಿಂದ 3:50ರವರೆಗೆ | ರಸಾಯನಶಾಸ್ತ್ರ Chemistry | 60 |
| 17.04.2025 | ಗುರುವಾರ | ಬೆಳಿಗ್ಗೆ 10:30 ರಿಂದ 11:50ರವರೆಗೆ | ಗಣಿತಶಾಸ್ತ್ರ Mathematics | 60 |
| | | ಮಧ್ಯಾಹ್ನ 2:30 ರಿಂದ 3:50ರವರೆಗೆ | ಜೀವಶಾಸ್ತ್ರ Biology | 60 |

ಹೊರನಾಡು ಹಾಗೂ ಗಡಿನಾಡು ಕನ್ನಡಿಗ ಅಭ್ಯರ್ಥಿಗಳಿಗೆ **ಕನ್ನಡ ಭಾಷಾ ಪರೀಕ್ಷೆ**
**(ಬೆಂಗಳೂರು, ಬೆಳಗಾವಿ, ವಿಜಯಪುರ ಮತ್ತು ಮಂಗಳೂರು ಜಿಲ್ಲಾ ಕೇಂದ್ರಗಳಲ್ಲಿ ಮಾತ್ರ)**

| | | | | |
|---|---|---|---|---|
| 18.04.2025 | ಶುಕ್ರವಾರ | ಬೆಳಿಗ್ಗೆ 10.30 ರಿಂದ 11.30ರ ವರೆಗೆ | 4ನೇ ತರಗತಿಯ ಮಟ್ಟದ | 50 |

**ಸೂಚನೆ:**
1. ಸಾಮಾನ್ಯ ಪ್ರವೇಶ ಪರೀಕ್ಷೆಯ ಪ್ರಶ್ನೆ ಪತ್ರಿಕೆಗಳು ಕರ್ನಾಟಕ ರಾಜ್ಯದ ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು ಇವರು ನಿರ್ಧರಿಸುವ ಮೊದಲನೇ ಮತ್ತು ಎರಡನೇ ಪಿಯುಸಿ ಪಠ್ಯಕ್ರಮವನ್ನು ಅವಲಂಬಿಸಿರುತ್ತದೆ. ಸಿಇಟಿ-2025 ರ ಸಾಮಾನ್ಯ ಪ್ರವೇಶ ಪರೀಕ್ಷೆಗೆ ಅಳವಡಿಸಿಕೊಳ್ಳುವ ಪಠ್ಯಕ್ರಮದ ಕುರಿತು ಶಾಲಾ ಶಿಕ್ಷಣ (ಪದವಿ ಪೂರ್ವ) ಇಲಾಖೆಯ ವಿಷಯ ತಜ್ಞರು ಕರ್ನಾಟಕ ರಾಜ್ಯದ ಪ್ರಥಮ ಮತ್ತು ದ್ವಿತೀಯ ಪಿಯು ತರಗತಿಗಳಿಗೆ ಅಳವಡಿಸಿಕೊಂಡಿರುವ ಪಿಸಿಎಂಬಿ (PCMB) ವಿಷಯಗಳ ಪಠ್ಯಕ್ರಮವನ್ನು ಪರಿಶೀಲಿಸಿ, ಸಿಇಟಿ 2025ಕ್ಕೆ ಅಳವಡಿಸಿಕೊಳ್ಳುವ ಪಠ್ಯಕ್ರಮವನ್ನು ವಿದ್ಯಾರ್ಥಿಗಳ ಮಾಹಿತಿಗಾಗಿ ವೆಬ್‌ಸೈಟಿನಲ್ಲಿ ಪ್ರಕಟಿಸಲಾಗಿದೆ.
2. ಅಭ್ಯರ್ಥಿಗಳು ಆನ್‌ಲೈನ್ ಅರ್ಜಿಯನ್ನು ಭರ್ತಿ ಮಾಡುವ ಬಗ್ಗೆ ಸಂದೇಹಗಳಿದ್ದಲ್ಲಿ, ಅವರು ಕರ್ನಾಟಕದಲ್ಲಿ ವ್ಯಾಸಂಗ ಮಾಡುತ್ತಿರುವ ಆಯಾ ಕಾಲೇಜುಗಳಲ್ಲಿ ಸಂಪರ್ಕಿಸಿ ಸಂದೇಹಗಳನ್ನು ಪರಿಹರಿಸಿಕೊಳ್ಳಬಹುದಾಗಿದೆ.

ಸಹಿ/- (ಹೆಚ್. ಪ್ರಸನ್ನ ಭಾ.ಆ.ಸೇ.)
ಕಾರ್ಯನಿರ್ವಾಹಕ ನಿರ್ದೇಶಕರು.

ವಾಸಾಸಂಇ/ವಾ.ಪ್ರ/4521/2024-25

ವೆಬ್‌ಸೈಟ್: http://cetonline.karnataka.gov.in/kea e-mail: keaugcet25@gmail.com Twitter-X: @KEA_KARNATAKA
ಕೆಇಎ ಸಹಾಯವಾಣಿ ಸಂಖ್ಯೆಗಳು: 080- 23460460-(ಐದು ಲೈನುಗಳು-ಬೆ. 10.00 ರಿಂದ ಸಂ. 6.00-ಸಾರ್ವತ್ರಿಕ ರಜಾ ದಿನಗಳನ್ನು ಹೊರತುಪಡಿಸಿ)

**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**
ಮುಖ್ಯ ಆರೋಗ್ಯ ಅಧಿಕಾರಿ (ಕ್ಲಿನಿಕಲ್)ರವರ ಕಛೇರಿ, 2ನೇ ಮಹಡಿ, ಆನೆಕ್ಸ್-2 ಕಟ್ಟಡ, ಎನ್. ಆರ್. ಚೌಕ, ಬೆಂಗಳೂರು - 560 002.

ಸಂ: ಬಿಬಿಎಂಪಿ/2024-25/ಇಂಡ್0106 ದಿನಾಂಕ:22.01.2025

**ಟೆಂಡರ್ ಪ್ರಕಟಣೆ** (ಕೆಪಿಪಿ ಪೋರ್ಟಲ್ ಮುಖಾಂತರ ಮಾತ್ರ)

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಇವರು, **"Injection Ferric Carboxymaltose"** ನ ಸರಬರಾಜಿಗಾಗಿ ಅರ್ಹ ಬಿಡ್ಡುದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

| | |
|---|---|
| ಟೆಂಡರ್ ಉಲ್ಲೇಖ ಸಂಖ್ಯೆ | BBMP/2024-25/IND0106 |
| ಟೆಂಡರ್ ದಸ್ತಾವೇಜುಗಳನ್ನು ಡೌನ್‌ಲೋಡ್ ಮಾಡಿಕೊಳ್ಳಲು ಪ್ರಾರಂಭಿಕ ದಿನಾಂಕ: | 22.01.2025 ರಿಂದ |
| ಪೂರ್ವಭಾವಿ ಸಭೆ ದಿನಾಂಕ ಮತ್ತು ಸ್ಥಳ | 27.01.2025 ರ 11.00 ಗಂಟೆಗೆ. ಮುಖ್ಯ ಆರೋಗ್ಯ ಅಧಿಕಾರಿ (ಕ್ಲಿನಿಕಲ್)ರವರ ಕಛೇರಿ, 2ನೇ ಮಹಡಿ, ಆನೆಕ್ಸ್-3 ಕಟ್ಟಡ, ಎನ್.ಆರ್.ಚೌಕ, ಬೆಂಗಳೂರು-560002. |
| ಕೆಪಿಪಿ ಪೋರ್ಟಲ್‌ನಲ್ಲಿ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: | 05.02.2025ರ ಸಂಜೆ 5.00 ಗಂಟೆಯವರೆಗೆ |
| ಕೆಪಿಪಿ ಪೋರ್ಟಲ್‌ನಲ್ಲಿ ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: | 06.02.2025 ರ ಸಂಜೆ 5.10 ಗಂಟೆಗೆ |

ಹೆಚ್ಚಿನ ಮಾಹಿತಿಗಾಗಿ ಕೆಪಿಪಿ ಪೋರ್ಟಲ್ https://kppp.karnataka.gov.in ಅಥವಾ ಕೆಳಸಹಿದಾರರ ಕಛೇರಿಯನ್ನು ಸಂಪರ್ಕಿಸಬಹುದು.

ಸಹಿ/- ಮುಖ್ಯ ಆರೋಗ್ಯ ಅಧಿಕಾರಿ(ಕ್ಲಿನಿಕಲ್).

ಕರ್ನಾಟಕ ಸರ್ಕಾರ
ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ
ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ, ಪಂಚಾಯತ ರಾಜ್ ಇಂಜಿನೀಯರಿಂಗ ವಿಭಾಗ
ಕಾರವಾರ, ಅಲಿಗದ್ದಾ ಬೈತಖೋಲ, ಕಾರವಾರ-581301
ದೂರವಾಣಿ: 08382-220556(ಕ) ಫ್ಯಾಕ್ಸ: 08382-220795 ಇ-ಮೇಲ್: predkarwar@gmail.com
ಕ್ರ.ಸಂ:ಪಂರಾಇಂವಿ:ಕಾರವಾರ:ಉಗ್ರಾಣ:ಬಾಡಿಗೆ ವಾಹನ:2024-25/1234 ದಿನಾಂಕ: 21-01-2025

**ಅಲ್ಪಾವಧಿ ಟೆಂಡರ ಪ್ರಕಟಣೆ**

ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಪಂಚಾಯತ ರಾಜ್ ಇಂಜಿನೀಯರಿಂಗ್ ಉಪ-ವಿಭಾಗ, ಹೊನ್ನಾವರ ಇವರ ಕಚೇರಿಗೆ ಖಾಸಗಿ ವಾಹನ ಮಾಲೀಕರಿಂದ ಹೊರಗುತ್ತಿಗೆ ಆಧಾರದ ಮೇಲೆ 11 ತಿಂಗಳ ಅವಧಿಗೆ ಹವಾ ನಿಯಂತ್ರಿತ ಸಹಿತ / ರಹಿತ / ಸ್ವಿಫ್ಟ್ ಡಿಜಾಯರ್ (Dzire) ಕಾರ್ ವಾಹನ ಒದಗಿಸುವ ಬಗ್ಗೆ ಅರ್ಹ ಟೆಂಡರದಾರರಿಂದ ಟೆಂಡರ ಅರ್ಜಿ ಆಹ್ವಾನಿಸಲಾಗಿದೆ. ಟೆಂಡರ್ ನಲ್ಲಿ ಭಾಗವಹಿಸಲಿಚ್ಚಿಸುವವರು ಜಿ.ಎಸ್.ಟಿ. ಸೇರಿ ಒಟ್ಟು ರೂ. 300-00 ಗಳ ಡಿ.ಡಿ. ಯನ್ನು ಕಾರ್ಯನಿರ್ವಾಹಕ ಅಭಿಯಂತರರು, ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ, ಕಾರವಾರ ಇವರ ಹೆಸರಿನಲ್ಲಿ ಡಿ.ಡಿ.ಮೂಲಕ ಪಾವತಿಸಿ ನಿಗಧಿತ ಟೆಂಡರ ಅರ್ಜಿ ಫಾರ್ಮನ್ನು ದಿನಾಂಕ: 21-01-2025 ರಿಂದ 04-02-2025 ರಂದು 3.00 ಘಂಟೆಯೊಳಗೆ ಪಡೆಯಬಹುದಾಗಿದೆ. ಭರ್ತಿ ಮಾಡಿದ ಟೆಂಡರ ಅರ್ಜಿ ಸಲ್ಲಿಸಲು ಅಂತಿಮ ದಿನಾಂಕ: 5-02-2025 ರಂದು ಸಾಯಂಕಾಲ 3.00 ಘಂಟೆಯೊಳಗೆ ಇ.ಎಂ.ಡಿ. ರೂ. 12,000-00 (ಎಫ್.ಡಿ.ಆರ್) ಟೆಂಡರ ತೆರೆಯುವ ದಿನಾಂಕ: 05-02-2025 ರಂದು ಸಾಯಂಕಾಲ 4.00 ಘಂಟೆಗೆ ಷರತ್ತು ಮತ್ತು ನಿಯಮಗಳಿಗೆ ಒಳಪಟ್ಟಿದ್ದು ಹೆಚ್ಚಿನ ಮಾಹಿತಿಗಾಗಿ ಕಾರ್ಯನಿರ್ವಾಹಕ ಅಭಿಯಂತರರು ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ, ಕಾರವಾರ ಕಚೇರಿಯ ಸೂಚನಾ ಫಲಕ ನೋಡಬಹುದು. ಹಾಗೂ ಈ ಕಚೇರಿಯ ಅವಧಿಯೊಳಗೆ ಸಂಪರ್ಕಿಸಬಹುದಾಗಿದೆ.

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು,
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಕಾರವಾರ
DIPR/KWR/KSMCA/776/24-25 dt. 22.01.2025

**ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟ**
ಕುಲಸಚಿವರ ಕಾರ್ಯಾಲಯ, ಉದ್ಯಾನಗಿರಿ, ನವನಗರ,
ಬಾಗಲಕೋಟ - 587104, ಕರ್ನಾಟಕ. ದೂ.: 08354-230276/278/280
ಮಿಂಚಂಚೆ : registrar@uhsbagalkot.edu.in

ಸಂಖ್ಯೆ : ಕು.ಸ./ತೋ.ವಿ.ವಿ./ಘಟಿಕೋತ್ಸವ-14/1573/2024-25
ದಿನಾಂಕ : 21-01-2025

**ಅಧಿಸೂಚನೆ**

**ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟದ 14 ನೇ ಘಟಿಕೋತ್ಸವವು ಜೂನ್ 2025 ರ ಮೊದಲ ಪಕ್ಷದಲ್ಲಿ ಜರುಗಲಿದೆ.** ಕಾರಣ ಈ ವಿಶ್ವವಿದ್ಯಾಲಯದ ಅಧೀನದಲ್ಲಿ ಬರುವ **ಮಹಾವಿದ್ಯಾಲಯಗಳಲ್ಲಿ ಸ್ನಾತಕ ಹಾಗೂ ಸ್ನಾತಕೋತ್ತರ ಪದವಿಗಳಲ್ಲಿ ದಿನಾಂಕ : 28-02-2025 ರ ಒಳಗಾಗಿ ತೇರ್ಗಡೆ ಹೊಂದಿರುವ ಅಭ್ಯರ್ಥಿಗಳು ಸದರಿ ಘಟಿಕೋತ್ಸವದಲ್ಲಿ "ಸಮಕ್ಷಮ" ಇಲ್ಲವೇ "ಅನುಪಸ್ಥಿತಿಯಲ್ಲಿ" ಪದವಿಯನ್ನು ಪಡೆಯಬಹುದಾಗಿದೆ.**

**ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ : 28-02-2025. ವಿವರವಾದ ಅಧಿಸೂಚನೆ, ಅರ್ಜಿ ನಮೂನೆ, ಚಲನ್ ಪ್ರತಿ, ಹಾಗೂ ಇತರೆ ಹೆಚ್ಚಿನ ಮಾಹಿತಿಯನ್ನು ವಿಶ್ವವಿದ್ಯಾಲಯದ ವೆಬ್‌ಸೈಟ್ : https://uhsbagalkot.karnataka.gov.in ನಲ್ಲಿ ಪಡೆಯಬಹುದು.**

ಸಹಿ/- ಕುಲಸಚಿವರು,
ತೋ.ವಿ.ವಿ., ಬಾಗಲಕೋಟ.
ಡಿಐಪಿಆರ್/ಬಾಗಲಕೋಟೆ/439/ಮಣಿಪಾಲ್/2024-25

ಕರ್ನಾಟಕ ಸರ್ಕಾರ
**ಕೊಪ್ಪಳ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ (ರಿ), ಕೊಪ್ಪಳ**
(ಕರ್ನಾಟಕ ಸರಕಾರದ ಸ್ವಾಯತ್ತ ಸಂಸ್ಥೆ)
ನೊಂದಣಿ ಸಂಖ್ಯೆ:KOL-S243-2012-13 ದಿನಾಂಕ:15-03-2013
Website : www.kimskoppal.com
email :directorkimskoppal@gmail.com
Office : 08539 225522 Office : 08539-225523

ಸಂಖ್ಯೆ: ಕಿಮ್ಸ್/ಕೊಪ್ಪಳ/ಮರುಟೆಂಡರ್/ಸಿದ್ಧಪಡಿಸಿದ ಆಹಾರ/ಎಸ್.ಟಿ.ಪಿ/02&03/2024-25/871 ದಿನಾಂಕ: 21.01.2025

**ಮರು-ಟೆಂಡರ್ ಅಧಿಸೂಚನೆ**

ಆಸಕ್ತ ಟೆಂಡರ್‌ದಾರರಿಂದ 1) ಸಿದ್ಧ ಪಡಿಸಿದ ಪಥ್ಯಾಹಾರವನ್ನು ಪೂರೈಸಲು ಹಾಗೂ 2) ಕಿಮ್ಸ್ ಸಂಸ್ಥೆಯ & ಬೋಧಕ ಆಸ್ಪತ್ರೆಯ ಎಸ್.ಟಿ.ಪಿ ಪ್ಲಾಂಟ್‌ಗಳನ್ನು ಒಂದು ವರ್ಷದ ಅವಧಿಗೆ ನಿರ್ವಹಣೆ ಮಾಡಲು ಕಿಮ್ಸ್ ಸಂಸ್ಥೆಯಿಂದ ಇ-ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ಫಾರ್ಮಗಳನ್ನು ಕರ್ನಾಟಕ ಸರ್ಕಾರದ ಇ-ಸಂಗ್ರಹಣ ಕೋಶದ ವೆಬ್‌ಸೈಟ್ http://kppp.karnataka.gov.in ರಿಂದ ಪಡೆಯಬಹುದು. ಟೆಂಡರ್ ಪಾರಂಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವ ಪ್ರಾರಂಭ **ದಿನಾಂಕ: 23.01.2025,** ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ: 07.02.2025,** ಟೆಂಡರ್‌ಗಳ ಅಂದಾಜು ಮೊತ್ತ- ಸಿದ್ದ ಪಡಿಸಿದ ಪಥ್ಯಾಹಾರವನ್ನು ಪೂರೈಸಲು ರೂ. 130.00 ಲಕ್ಷಗಳು ಮತ್ತು ಎಸ್.ಟಿ.ಪಿ ನಿರ್ವಹಣೆ ಮೊತ್ತ **ರೂ.31.00 ಲಕ್ಷಗಳು.** ಟೆಂಡರ್‌ನ ವಿವರವಾದ ವೇಳಾಪಟ್ಟಿ, ಷರತ್ತು ಹಾಗೂ ನಿಬಂಧನೆಗಳನ್ನು ಟೆಂಡರ್ ದಾಖಲೆಯಲ್ಲಿ ವಿಕ್ಷೀಸಬಹುದು.

ಸಹಿ/- ನಿರ್ದೇಶಕರು, ಕೊಪ್ಪಳ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಕೊಪ್ಪಳ.
ಡಿಐಪಿಆರ್/ಕೊಪ್ಪಳ/688/ಕೆಎಸ್‌ಎಂಸಿಎ/2024-25

**ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು.**
ಝಾನ್ಸಿಲಕ್ಷ್ಮೀಬಾಯಿ ರಸ್ತೆ, ಮೈಸೂರು- 570 005.

ಸಂಖ್ಯೆ:ಮೈನಪ್ರಾ:ನಯೋಶಾ:ಭೂಉಬ:ನಯೋ-1:2024-25, ದಿನಾಂಕ: 20.01.2025

**ಸಾರ್ವಜನಿಕ ಪ್ರಕಟಣೆ**

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಪ್ರಕರಣ 14(ಎ)ರನ್ವಯ **ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಕ್ಯಾತಮಾರನಹಳ್ಳಿ ಗ್ರಾಮದ ಸ.ನಂ.191/2ರಲ್ಲಿ 00ಎಕರೆ 03.08ಗುಂಟೆ, 191/7ರಲ್ಲಿ 02ಎಕರೆ 02ಗುಂಟೆ ಮತ್ತು 191/8ರಲ್ಲಿ 00ಎಕರೆ 07.08ಗುಂಟೆ ಒಟ್ಟು 02ಎಕರೆ 13ಗುಂಟೆ** ವಿಸ್ತೀರ್ಣದ ಜಮೀನುಗಳನ್ನು ಕೆ.ಟಿ.ಸಿ.ಪಿ. ಕಾಯ್ದೆ 1961ರ ಪ್ರಕರಣ 14(ಎ) ರನ್ವಯ **ಕೈಗಾರಿಕೆ ವಲಯದಿಂದ ವಸತಿ ವಲಯಕ್ಕೆ ಭೂ ಉಪಯೋಗ ಬದಲಾವಣೆ ಮಾಡುವಂತೆ ನಿರ್ದೇಶಕರು, ಟ್ರೀ ಸಿಟಿ ವೆಂಚರ್ ಪ್ರೈವೇಟ್ ಲಿಮಿಟೆಡ್ ಇವರು ಅರ್ಜಿ ಸಲ್ಲಿಸಿರುತ್ತಾರೆ.** ಭೂ ಉಪಯೋಗ ಬದಲಾವಣೆ ಯಿಂದ "ಈ ಜಮೀನುಗಳಲ್ಲಿ ವಿನ್ಯಾಸ ಅಭಿವೃದ್ಧಿಪಡಿಸುವುದರಿಂದ ಬಡವರು ಮತ್ತು ಮಧ್ಯಮ ವರ್ಗದವರಿಗೆ ಹಾಗೂ ಸಾರ್ವಜನಿಕರಿಗೆ ಯೋಗ್ಯ ಬೆಲೆಯಲ್ಲಿ ನಿವೇಶನಗಳು ಲಭ್ಯವಾಗುತ್ತವೆ. ವಿನ್ಯಾಸ ಅಭಿವೃದ್ಧಿ ಕಾಮಗಾರಿಗಳು ನಡೆಯುವ ಸಂಧರ್ಭದಲ್ಲಿ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ ಮತ್ತು ಈ ವಿನ್ಯಾಸ ಅಭಿವೃದ್ಧಿಯಿಂದ ಸುತ್ತಲಿನ ಪ್ರದೇಶದ ಅಭಿವೃದ್ಧಿ ಹೊಂದುತ್ತದೆ" ಎಂದು ಸಾರ್ವಜನಿಕ ಹಿತಾಸಕ್ತಿ ಕುರಿತು ಮನವಿಯಲ್ಲಿ ತಿಳಿಸಿರುತ್ತಾರೆ. ಸದರಿ ಜಮೀನಿನ ಭೂ ಉಪಯೋಗದ ಬದಲಾವಣೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದಲ್ಲಿ ಸಾರ್ವಜನಿಕರು ಈ ಪ್ರಕಟಣೆಯ ಪತ್ರಿಕೆಯಲ್ಲಿ ಪ್ರಕಟವಾದ **ದಿನಾಂಕದಿಂದ 15 ದಿನಗಳೊಳಗಾಗಿ** ನಗರ ಯೋಜಕ ಸದಸ್ಯರು, ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು-570005 ಇವರಿಗೆ ಮುದ್ದಾಂ ಅಥವಾ ನೋಂದಾಯಿತ ಅಂಚೆ ಮೂಲಕ ತಲುಪಿಸಬಹುದಾಗಿದೆ.

KFY PI AN




LAND IN QUESTION

ಸಹಿ/- ನಗರ ಯೋಜಕ ಸದಸ್ಯರು,
ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು.
DIPR/MYS/RO1152/2024-25

## ಬೇಸಿಗೆಯಲ್ಲಿ ಲೋಡ್ ಶೆಡ್ಡಿಂಗ್ ಇರಲ್ಲ: ಜಾರ್ಜ್

**ಬಾಗಲಕೋಟೆ:** ಬರಗಾಲ ಇದ್ದಾಗಲೇ ರಾಜ್ಯದಲ್ಲಿ ಲೋಡ್ ಶೆಡ್ಡಿಂಗ್ ಮಾಡಿಲ್ಲ. ಈ ವರ್ಷ ಬೇಸಿಗೆಯಲ್ಲಿ ಲೋಡ್ ಶೆಡ್ಡಿಂಗ್ ಸಮಸ್ಯೆ ಇರಲ್ಲ. ರಾಜ್ಯದಲ್ಲಿ ಕೊರತೆ ಉಂಟಾದಲ್ಲಿ ಬೇರೆ ಕಡೆಯಿಂದ ಖರೀದಿ ಮಾಡುತ್ತೇವೆ ಎಂದು ಇಂಧನ ಸಚಿವ ಕೆ.ಜೆ.ಜಾರ್ಜ್ ಹೇಳಿದರು. ಸುದ್ದಿಗಾರ ರೊಂದಿಗೆ ಮಾತನಾಡಿ, ಈಗ 16ರಿಂದ 17 ಸಾವಿರ ಮೆಗಾ ವ್ಯಾಟ್ ಬೇಡಿಕೆ ಬರುತ್ತಿದೆ. ಕೊರತೆ ಉಂಟಾದರೆ ಬೇರೆ ಕಡೆಯಿಂದ ಖರೀದಿ ಮಾಡು ತ್ತೇವೆ ಎಂದರು. ಸ್ವಪಕ್ಷ-ವಿಪಕ್ಷ ದಲ್ಲಿ ರಾಜಕೀಯ ಜಗ್ಗಾಟದ ನಡುವೆ ಜನಸಾಮಾನ್ಯರ ಗತಿ ಏನು ಎಂಬ ಪ್ರಶ್ನೆಗೆ ಪ್ರತಿಕ್ರಿಯಿ ಸಿದ ಅವರು, ಆಡಳಿತ ಪಕ್ಷದಲ್ಲಿ ಗೊಂದಲವೇ ಇಲ್ಲ. ಇದು ಮಾಧ್ಯಮಗಳು ಸೃಷ್ಟಿ ಮಾಡು ತ್ತೇವೆ. ಟೀ ಕಪ್ ನಲ್ಲಿ ಬಿರುಗಾಳಿ ಬಂದಿರುವ ರೀತಿ ಮಾಡುತ್ತಿ ದ್ದೀರಿ. ನಮ್ಮ ಪ್ರಜಾಪ್ರಭುತ್ವದ ಪಕ್ಷ, ನಾವು ಪಕ್ಷದಲ್ಲಿ ಎಲ್ಲರೂ ಚರ್ಚೆ ಮಾಡುತ್ತೇವೆ. ಹೊರ ಗಡೆ ಮಾಡುವುದು ಏನಿಲ್ಲ. ಹೈ ಕಮಾಂಡ್ ಜತೆಗೆ ಕೂತು ಬಗೆ ಹರಿಸಿಕೊಳ್ಳುತ್ತೇವೆ ಎಂದರು.

## ಕೈನಲ್ಲೂ ತ್ಯಾಗದ ಮನೋಭಾವ ಕಡಿಮೆ: ಪರಂ

**ತುಮಕೂರು:** ಬೆಳಗಾವಿಯಲ್ಲಿ ಮಲ್ಲಿಕಾರ್ಜುನ ಖರ್ಗೆ ತ್ಯಾಗದ ಬಗ್ಗೆ ಮಾತನಾಡಿರೋದು ಯಾವ ಅರ್ಥದಲ್ಲಿ ಅನ್ನೋದು ಗೊತ್ತಿಲ್ಲ. ಕಾಂಗ್ರೆಸ್ ಪಕ್ಷ ಸ್ವಾತಂತ್ರ್ಯ ಹೋರಾಟದಿಂದಲೂ ತ್ಯಾಗ ಮಾಡುತ್ತಾ ಬಂದಿದೆ. ಆದರೆ ಈಗಿನ ಆಧುನಿಕ ಸಮಾ ಜಕ್ಕೆ ತ್ಯಾಗದ ಮನೋಭಾವ ಕಡಿಮೆಯಾಗಿದೆ ಎಂಬ ಅರ್ಥ ದಲ್ಲಿ ಹೇಳಿರಬಹುದು. ಅದರಂತೆ ಸ್ವಾಭಾವಿಕವಾಗಿ ಕಾಂಗ್ರೆಸ್‌ನಲ್ಲೂ ತ್ಯಾಗದ ಮನೋಭಾವ ಕಡಿಮೆ ಆಗಿದೆ ಎಂದು ಹೇಳಿರಬಹುದು ಎಂದರು. ಸುದ್ದಿಗಾರರೊಂದಿಗೆ ಮಾತನಾಡಿ, ಮೈಕ್ರೋ ಫೈನಾನ್ಸ್‌ನವರು ಗೈಡ್‌ಲೈನ್ಸ್ ಉಲ್ಲಂಘಿಸಿ ಸಾಲಗಾರರಿಗೆ ತೊಂದರೆ ಕೊಡುತ್ತಿದ್ದಾರೆ. ಸಂತ್ರ ಸ್ತರು ದೂರು ಕೊಟ್ಟರೆ ಕ್ರಮ ಕೈಗೊಳ್ಳುತ್ತೇವೆ. ಈಗಾಗಲೇ ಹಲವು ಜನರ ಮೇಲೆ ಕ್ರಮ ಕೈಗೊಂಡಿದ್ದೇವೆ. ಹಾಗೆಯೇ ಲೈಸೆನ್ಸ್ ಇಲ್ಲದ ಫೈನಾನ್ಸ್ ನವರ ಸರ್ವೇಯನ್ನು ಹಣಕಾಸು ಇಲಾಖೆ ಮಾಡಬೇಕು ಎಂದು ನುಣುಚಿಕೊಂಡರು.

ಓದುಗರಿಗೆ ದಿನ ನಿತ್ಯದ ಸುದ್ದಿಗಳ ಸಮಾಚಾರದ ಜತೆಗೆ ವಿಶೇಷ ಲೇಖನಗಳನ್ನು ನೀಡುತ್ತಾ, ಸ್ಪುಟವಾಗಿ ಸುದ್ದಿ ಮುದ್ರಿಸಿ ಓದುಗರಿಗೆ ತಲುಪಿಸುತ್ತಿರುವ ರಾಜ್ಯ ಮಟ್ಟದ ದಿನಪತ್ರಿಕೆ ವಿಶ್ವವಾಣಿ ದಶಕದ ಸಂಭ್ರಮದಲ್ಲಿದೆ. ಪತ್ರಿಕೆಯ ಶ್ರೇಯೋಭಿವೃದ್ಧಿಗಾಗಿ ದುಡಿಯುತ್ತಿರುವ ಎಲ್ಲಾ ನೌಕರ ವರ್ಗದವರಿಗೂ ಶುಭವಾಗಲಿ.

**-ಸಿ.ಸತ್ಯಭಾಮ, ಜಿಲ್ಲಾಧಿಕಾರಿ,** ಹಾಸನ

ನಾನು ಧಾರವಾಡದಲ್ಲಿ ವಿದ್ಯಾರ್ಥಿ ಆಗಿದ್ದಾಗಿನಿಂದ ವಿಶ್ವೇಶ್ವರ ಭಟ್ ಅವರ ಲೇಖನ ಓದಿಕೊಂಡು ಬೆಳೆದಿದ್ದೇನೆ. ಅವರ ಲೇಖನಗಳ ಕ್ರೂಢೀಕೃತ ಸಾಕಷ್ಟು ಪುಸ್ತಕಗಳ ಸಂಗ್ರಹ ಕೂಡ ನನ್ನ ಬಳಿ ಇದೆ. ವಿಶ್ವೇಶ್ವರ ಭಟ್ ಅವರ ಸಂಪಾದಕತ್ವದಲ್ಲಿ ಪ್ರಕಟವಾಗುತ್ತಿರುವ ವಿಶ್ವವಾಣಿ ಪತ್ರಿಕೆ 10 ವರ್ಷ ಪೂರೈಸಿರುವುದು ಸಂತಸದ ವಿಷಯ. ಮಾಹಿತಿ, ಮನರಂಜನೆ ಯೊಂದಿಗೆ ಜ್ಞಾನ ವೃದ್ಧಿಗೆ ಸಹಕಾರಿ ಯಾಗಿದೆ. ಓದುಗರನ್ನು ತನ್ನತ್ತ ಸೆಳೆಯುವ ಸೃಜನಾತ್ಮಕ ಪ್ರಯತ್ನದ ಫಲವೇ ವಿಶ್ವವಾಣಿ ಪತ್ರಿಕೆ. ವಿಶ್ವಕ್ಕೆ ವಾಣಿ ಯಾಗುವ ರೀತಿಯಲ್ಲಿ ವಿಶ್ವವಾಣಿ ಪತ್ರಿಕೆ ಬೆಳೆಯಲಿ. ಪತ್ರಿಕೆಯ ದಶಮಾನೋತ್ಸವದ ಸಂದರ್ಭದಲ್ಲಿ ವಿಶ್ವವಾಣಿಯ ತಂಡಕ್ಕೆ ಅಭಿನಂದಿಸುತ್ತೇನೆ.

**-ವಿರೂಪಾಕ್ಷಿ ಸ್ವಾಮಿ,** ಸಿಡಿಪಿಒ, ಕನಕಗಿರಿ

ಡಿಜಿಟಲ್ ಮಾಧ್ಯಮ ಲೋಕ ಸಾಕಷ್ಟು ಪ್ರಚಲಿತದಲ್ಲಿರುವ ಸಂದರ್ಭದಲ್ಲಿ ಪತ್ರಿಕೆಗಳನ್ನು ಉಳಿಸಿ,ಬೆಳೆಸುವುದು ಸವಾಲಿನ ಕೆಲಸವೇ ಸರಿ. ಆಕರ್ಷಕವಾದ ಪುಟ ವಿನ್ಯಾಸ ದೊಂದಿಗೆಚೊಕ್ಕದಾದ ಸುದ್ದಿ ಚೌಕಟ್ಟುಗಳನ್ನು ನೀಡುತ್ತಾ ಬಂದಿದೆ. ಹತ್ತು ವರ್ಷ ದಾಟಿ ಮುನ್ನುಗ್ಗುತ್ತಿರುವ ಓದುಗರ ನೆಚ್ಚಿನ ವಿಶ್ವವಾಣಿಗೆ ವಿಶ್ವದಾದ್ಯಂತ ಮತ್ತಷ್ಟು ಓದುಗರ ಬಳಗ ಲಭಿಸಿ,ಕೀರ್ತಿ ಇಮ್ಮಡಿಗೊಳ್ಳಲಿ ಎಂದು ಆಶಿಸುತ್ತೇನೆ.

**- ಸ್ವರೂಪ್ ಪ್ರಕಾಶ್,** ಶಾಸಕ

ವಿಶ್ವೇಶ್ವರ ಭಟ್ಟರ ಸಾರಥ್ಯದಲ್ಲಿ ಮೂಡಿಬರುತ್ತಿರುವ ವಿಶ್ವವಾಣಿ ಕನ್ನಡ ದಿನಪತ್ರಿಕೆ ತನ್ನ ವೈಶಿಷ್ಟಗಳಿಂದಲೇ ಜನ ಮನ ಗೆದ್ದಿದೆ. ಸದಾ ಹೊಸತನವನ್ನು ಮೈಗೂಡಿಸಿಕೊಂಡು ಓದುಗರ ಹೃದಯ ಮುಟ್ಟುವುದು ಸಾಮಾನ್ಯ ವಿಷಯವಲ್ಲ. ಆದರೆ ಕಳೆದ ಒಂಬತ್ತು ವರ್ಷಗಳಿಂದ ವಿಶ್ವವಾಣಿ ದಿನಪತ್ರಿಕೆ ಈ ಕೆಲಸ ಮಾಡಿದ್ದು ವಿಶೇಷ. ಪ್ರತಿದಿನ ವಿಶೇಷ ಪುರವಣಿಗಳ ಮೂಲಕ ಮೌಲ್ಯಾಧಾರಿತ ವಿಷಯಗಳಿಗೆ ಆದ್ಯತೆ ನೀಡಿ, ಅಭಿರುಚಿಗೆ ತಕ್ಕ ಹಾಗೆ ಮಾಹಿತಿಯನ್ನು ನೀಡುತ್ತಿದೆ.ನಾಡಿನ ಉದ್ದಗಲಕ್ಕೂ ಇನ್ನೂ ಹೆಚ್ಚಿನ ಕಂಪು ಪಸರಿಸಿ ಪತ್ರಿಕೆ ಉತ್ತರೋತ್ತರವಾಗಿ ಬೆಳೆಯಲಿ.

**ಶ್ರೀ ಪ್ರಭು ನೀಲಕಂಠ ಸ್ವಾಮೀಜಿ,** ಶಾಖಾ ಮೂರು ಸಾವಿರಮಠ, ಬೈಲಹೊಂಗಲ

# ವಿಶ್ವೇಶ್ವರ ಭಟ್ಟರಿಂದ ಹೊಸತನದ ಆವಿಷ್ಕಾರ



**ಡಾ.ಡಿ ವೀರೇಂದ್ರ ಹೆಗ್ಗಡೆ, ಧರ್ಮಾಧಿಕಾರಿ,** ಧರ್ಮಸ್ಥಳ

ವಿಶ್ವೇಶ್ವರ ಭಟ್ಟರ ಸಾರಥ್ಯದಲ್ಲಿ ಆರಂಭ ಗೊಂಡ ವಿಶ್ವವಾಣಿ ಕನ್ನಡ ದಿನ ಪತ್ರಿಕೆ ಕನ್ನಡ ಪತ್ರಿಕೋದ್ಯಮದಲ್ಲಿ ಸಾಕಷ್ಟು ಪ್ರಯೋಗ ಗಳನ್ನು ಮಾಡಿ ಓದುಗರ ವಿಶ್ವಾಸವನ್ನು ಗಳಿಸಿದೆ. ಒಂದು ದಶಕಗಳ ಕಾಲ ಪತ್ರಿಕೆಯನ್ನು ಮುನ್ನಡೆಸುವುದು ಎಂದರೆ ಈಗಿನ ಕಾಲಕ್ಕೆ ಸುಲಭದ ಮಾತಲ್ಲ. ಆ ಕಾರ್ಯ ವನ್ನು ವಿಶ್ವೇಶ್ವರ ಭಟ್ಟರು ತಮ್ಮ ಅವಿರತ ಪರಿಶ್ರಮದ ಮೂಲಕ ಸಮರ್ಥವಾಗಿ ಮಾಡಿ ತೋರಿಸಿ ಯಶಸ್ವಿಯಾಗಿದ್ದಾರೆ.

ವಿಶ್ವೇಶ್ವರ ಭಟ್ಟರು ಹಿರಿಯ ಪತ್ರಕರ್ತರಾಗಿ ಕನ್ನಡ ಪತ್ರಿಕೋದ್ಯಮದಲ್ಲಿ ತಮ್ಮದೇ ಖ್ಯಾತಿ ಗಳಿಸಿದವರು. ವಿವಿಧ ಪತ್ರಿಕೆಗಳ ಸಂಪಾದಕರಾಗಿ ಕರ್ತವ್ಯ ನಿರ್ವಹಿಸಿ ಯಶಸ್ಸಿನ ಉತ್ತುಂಗವನ್ನು ಅಲಂಕರಿಸಿದರು. ಒಬ್ಬ ಪತ್ರಕರ್ತರಾಗಿ ರಾಜ್ಯಮಟ್ಟದ ಪತ್ರಿಕೆಯನ್ನು ಹೊರತರಬೇಕೆಂಬ ಕನಸು ಕಂಡು ಅದನ್ನು ನನಸಾಗಿಸಿ ಬೆಳೆಸಿದ ರೀತಿ ನಿಜಕ್ಕೂ ಅಭಿನಂದನಾರ್ಹ ವಿಚಾರ.

ವಿಶ್ವೇಶ್ವರ ಭಟ್ಟರದು ಸದಾ ಹೊಸತನದ ಆವಿಷ್ಕಾರಗಳನ್ನು ಮಾಡುವ ವ್ಯಕ್ತಿತ್ವ. ಅದನ್ನು ನಾವು ಅವರ ಪ್ರತಿ ಕಾರ್ಯಗಳಲ್ಲೂ ಗಮನಿಸಬಹುದು. ಪತ್ರಿಕೆಯಲ್ಲಿ ಅವರ ಲೇಖನಗಳನ್ನು ಓದುವುದು ಎಂದರೆ ನನಗೂ ಅತ್ಯಂತ ಖುಷಿಯ ವಿಚಾರವಾಗಿದೆ. ದಿನ ಪತ್ರಿಕೆಗಳು ಆಯಾ ದಿನಕ್ಕೆ ಸೀಮಿತ. ಮರುದಿನ ತನ್ನ ಮೌಲ್ಯ ಕಳೆದುಕೊಳ್ಳುತ್ತದೆ. ಆದರೆ ವಿಶ್ವವಾಣಿ ಪತ್ರಿಕೆಯು ಇದಕ್ಕೆ ಹೊರತಾಗಿದೆ. ಪತ್ರಿಕೆಯಲ್ಲಿ ಪ್ರಕಟವಾಗುವ ಅರ್ಥಪೂರ್ಣ, ಮೌಲ್ಯಯುತ ಅಂಕಣಗಳು ಸಂಗ್ರಹ ಯೋಗ್ಯವಾಗಿದೆ. ತುಂಬಾ ಸಮಯ ಮೌಲ್ಯಯುತ ಲೇಖನಗಳು ತನ್ನತನ ಉಳಿಸಿಕೊಳ್ಳುವುದು ಪತ್ರಿಕೆ ವಿಶೇಷತೆಯಾಗಿದೆ.

ವಿಶ್ವವಾಣಿ ಈಗ ಕೇವಲ ದಿನಪತ್ರಿಕೆಯಾಗಿ ಉಳಿದಿಲ್ಲ. 10 ವರ್ಷದ ಹಿಂದೆ ದಿನಪತ್ರಿಕೆಯಾಗಿ ಆರಂಭವಾಗಿದ್ದ ವಿಶ್ವವಾಣಿ ಇದೀಗ ವಿಶ್ವವಾಣಿ ಮಾಧ್ಯಮ ಸಮೂಹವಾಗಿ ವೃದ್ಧಿಸುತ್ತಿದೆ. ಕನ್ನಡ ಪತ್ರಿಕೆಗಳಿಗೆ ಭವಿಷ್ಯವಿಲ್ಲ ಎನ್ನುವ ಕಾಲದಲ್ಲಿ ಉತ್ತರ ಕನ್ನಡಕ್ಕೆ ಸೀಮಿತವಾಗಿದ್ದ ಲೋಕಧ್ವನಿ ಪತ್ರಿಕೆಯನ್ನು ಕೈಗೆತ್ತಿಕೊಂಡು ಕಡಿಮೆ ಅಂತರದಲ್ಲಿ ಮೂರು ಆವೃತ್ತಿಗಳನ್ನು ಆರಂಭಿಸಿದ್ದಾರೆ. ಶೀಘ್ರದಲ್ಲಿಯೇ ಆ ಪತ್ರಿಕೆಯನ್ನು ರಾಜ್ಯ ಮಟ್ಟದ ಪತ್ರಿಕೆಯನ್ನು ಮಾಡುವ ಗುರಿಯನ್ನು ಹೊಂದಿದ್ದಾರೆ. ಇದಿಷ್ಟೇ ಅಲ್ಲದೇ, ಈಗಾಗಲೇ ಡಿಜಿಟಲ್‌ನಲ್ಲಿ ಕ್ರಾಂತಿ ಮಾಡಲು ಸಿದ್ಧತೆ ಆರಂಭಿಸಿದೆ. ಈ ಎರಡನ್ನು ಮೀರಿ, ಇದೀಗ ಭಟ್ಟರು ಪ್ರವಾಸೋದ್ಯಮಕ್ಕಾಗಿಯೇ 16 ಪುಟಗಳ ಪ್ರತ್ಯೇಕ ವಾರಪತ್ರಿಕೆಯನ್ನು ಆರಂಭಿಸಲು ಸಿದ್ಧತೆ ನಡೆಸಿದ್ದಾರೆ.

ಕನ್ನಡ ಪತ್ರಿಕೋದ್ಯಮದಲ್ಲಿ ಪ್ರವಾಸೋದ್ಯಕ್ಕೆಂದು ಈ ರೀತಿ ಪ್ರತ್ಯೇಕ ವಾರಪತ್ರಿಕೆಯನ್ನು ತರಬೇಕು ಎನ್ನುವ ಆಲೋಚನೆ ವಿಶ್ವೇಶ್ವರ ಭಟ್ಟರಿಂದ ಮಾತ್ರ ಸಾಧ್ಯ. ಅವರು ಶ್ರೀಕ್ಷೇತ್ರ ಧರ್ಮಸ್ಥಳದ ಧರ್ಮೋತ್ಥಾನ ಟ್ರಸ್ಟ್‌ನ ಸಲಹ ಸಮಿತಿಯ ಸದಸ್ಯರಾಗಿ ಅನೇಕ ಪುರಾತನ ದೇಗುಲಗಳ ಜೀರ್ಣೋದ್ಧಾರ ಕಾರ್ಯಗಳಲ್ಲೂ ತಮ್ಮ ಅಮೂಲ್ಯ ಸಲಹೆಗಳನ್ನು ನೀಡುತ್ತಿರುವುದು ಶ್ಲಾಘನೀಯ ವಿಚಾರವಾಗಿದೆ. ವಿಶ್ವವಾಣಿ ಪತ್ರಿಕೆ ದಶಮಾನೋತ್ಸವ ಸಂಭ್ರಮಕ್ಕೆ ಕಾಲಿಟ್ಟಿರು ವುದು ಸಂತಸದ ವಿಷಯವಾಗಿದೆ. ಮುಂಬರುವ ದಿನಗಳಲ್ಲೂ ಪತ್ರಿಕೆಯು ಸಮಾಜಮುಖಿಯಾಗಿ ಕರ್ತವ್ಯ ನಿರ್ವಹಿಸುತ್ತ ಜನರ ವಿಶ್ವಾಸಗಳಿಸುತ್ತ ಮತ್ತಷ್ಟು ಅಂದವಾಗಿ ಮೂಡಿಬರಲಿ, ಜನಮನ ಗೆಲ್ಲಲಿ ಎಂದು ಆಶಿಸುತ್ತೇನೆ. ವಿಶ್ವವಾಣಿ ತಂಡಕ್ಕೆ ಶುಭಾಶಯಗಳನ್ನು ಅರ್ಪಿಸುತ್ತೇನೆ. ಶ್ರೀ ಮಂಜುನಾಥ ಸ್ವಾಮಿಯ ಅನುಗ್ರಹವಿರಲಿ.

## ನಡೆದಾಡುವ ಶಬ್ದಕೋಶ ವಿಶ್ವೇಶ್ವರ ಭಟ್ಟರು

**ಯಶವಂತರಾಯಗೌಡ ವ್ಹಿ,** ಪಾಟೀಲ, ಶಾಸಕ

ವಿಶ್ವವಾಣಿ ಪತ್ರಿಕೆಯ ಪ್ರಧಾನ ಸಂಪಾದಕರಾದ ವಿಶ್ವೇಶ್ವರ ಭಟ್ಟರು ನಡೆದಾಡುವ ಶಬ್ದಕೋಶ. ಅವರ ಹೆಸರಿನಲ್ಲಿ ದೊಡ್ಡ ಶಕ್ತಿ ಅಡಗಿದೆ.ಆಡು ಮುಟ್ಟದ ಗಿಡವಿಲ್ಲ, ವಿಶ್ವೇಶ್ವರ ಭಟ್ಟರು ಬರವಣಿಗೆ ಇಲ್ಲದ ಪತ್ರಿಕೆಗಳಿಲ್ಲ. ಎಲ್ಲಾ ಪತ್ರಿಕೆಗಳನ್ನು ಹೆಮ್ಮರವಾಗಿ ಬೆಳೆಸಿದ ಅಕ್ಷರಗಳ ನುಡಿ ಬ್ರಹ್ಮ ಎಂದರೆ ತಪ್ಪಾಗುವುದಿಲ್ಲ. ವಿಶ್ವವಾಣಿ ಪತ್ರಿಕೆ ಅತ್ಯಂತ ವಿಶ್ವಾಸಾರ್ಹ ಪತ್ರಿಕೆಯಾಗಿದ್ದು, ಕಡಿಮೆ ಅವಧಿಯಲ್ಲಿ ಹೆಚ್ಚು ಜನಪ್ರಿಯತೆಯನ್ನು ಗಳಿಸಿದ ಏಕೈಕ ಪತ್ರಿಕೆ. ವಿಶ್ವೇಶ್ವರ ಭಟ್ಟರ ಅಂಕಣಗಳ ಬರವಣಿಗೆ ಬಹಳ ಬುದ್ಧಿವಂತಿಕೆಯಿಂದ ಸಮಾಜ, ದೇಶ, ವ್ಯಕ್ತಿಯ ಸರ್ವೋತೋಮುಖ ಅಭಿವೃದ್ಧಿ ಪೂರಕವಾಗಿವೆ. ದೇಶ ಸುತ್ತು ಕೋಶ ಓದು ಎಂಬ ನಾಣ್ನುಡಿಯಂತೆ ವಿಶ್ವದ ಅನೇಕ ರಾಷ್ಟ್ರಗಳ ಪ್ರವಾಸ ಮಾಡಿ ಅಲ್ಲಿನ ವಾಸ್ತವಿಕ ವರದಿ ಬಿತ್ತರಿಸಿ ಇಡೀ ವಿಶ್ವ ಹಿಡಿದಿಟ್ಟುಕೊಳ್ಳುವ ಸಾಮರ್ಥ್ಯ ಅವರಲ್ಲಿದೆ. ವಿಶ್ವವಾಣಿ ಪತ್ರಿಕೆ 10 ವರ್ಷ ಪೂರೈಸಿದ್ದು ಕನ್ನಡ ಪತ್ರಿಕೋದ್ಯಮದಲ್ಲೆ ಅಪಾರ ಓದುಗರ ಬಳಗ ಸೃಷ್ಟಿಸಿಕೊಂಡು ಮೌಲ್ಯಯುತ ಪತ್ರಿಕೆ ಎಂಬ ಹೆಗ್ಗಳಿಕೆಗೆ ಪಾತ್ರವಾಗಿ ಇಂದು ಹೆಮ್ಮರವಾಗಿ ಬೆಳೆದಿದೆ. ಈ ಬೆಳವಣಿಗೆಯ ಗರಿ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್ಟ ಇವರಿಗೆ ಸಲ್ಲುತ್ತದೆ. ಕನ್ನಡ ನಾಡಿನ ಹೆಸರುವಾಸಿಯಾದ ವಿಶ್ವವಾಣಿ ಪತ್ರಿಕೆ ಅನೇಕ ಆಯಾಮಗಳಿಂದ ಜಗಮಗಿಸುತ್ತಿದೆ, ಪತ್ರಿಕೆ ಇನ್ನಷ್ಟು ಎತ್ತರಕ್ಕೆ ಬೆಳೆಯಲಿ.

## ಸಮಾಜ ತಿದ್ದುವ ಕಾಯಕ ಮುಂದುವರಿಯಲಿ

**ಡಾ.ಶಿವಾನಂದ ಶಿವಾಚಾರ್ಯ ಸ್ವಾಮೀಜಿ,** ಹಿರೇಮಠ, ತುಮಕೂರು.

ಪ್ರತಿದಿನ ವೈಶಿಷ್ಟ್ಯ ಪೂರ್ಣವಾಗಿ ವಿಭಿನ್ನ ,ವಿನೂತನ ವಿಷಯಗಳೊಂದಿಗೆ ಓದುಗರ ಮನ ,ಮನೆ ಮುಟ್ಟುವ ವಿಶ್ವವಾಣಿ ಜಗದಗಲ ಓದುಗರನ್ನು ಸೃಷ್ಟಿಸಿಕೊಂಡು ಇತಿಹಾಸ ಸೃಷ್ಟಿಸಿದೆ.ಜಿಲ್ಲಾಮಟ್ಟದ ಪತ್ರಿಕೆಯಾಗಿದ್ದ ವಿಶ್ವವಾಣಿ ಇಂದು ಪ್ರಪಂಚದಾದ್ಯಂತ ಅಭಿಮಾನಿಗಳನ್ನು ಹೊಂದಿರುವುದು ಅಭೂತಪೂರ್ವ ಬೆಳವಣಿಯಾಗಿದೆ. ಪ್ರಧಾನ ಸಂಪಾದಕರಾದ ವಿಶ್ವೇಶ್ವರ ಭಟ್ ಅವರು ಪತ್ರಿಕೆಯನ್ನು ಸಂಕಷ್ಟದಲ್ಲಿಯೂ ಕೈಬಿಡದೆ ಉನ್ನತ ಹಂತಕ್ಕೆ ಬೆಳೆಸಿದ ಪರಿ ಪ್ರಶಂಸನೀಯ. ಮಕ್ಕಳಿಂದ ಹಿಡಿದು ಹಿರಿಯರವರೆಗೂ ಗಂಟೆಗಟ್ಟಲೆ ಪತ್ರಿಕೆಯನ್ನು ಓದುವಂತಹ ವಿಷಯಗಳನ್ನು ವಿಶ್ವವಾಣಿ ಹೊತ್ತು ತರುತ್ತಿದೆ. ಇನ್ನೂ ಎತ್ತರಕ್ಕೆ ಪತ್ರಿಕೆ ಬೆಳೆಯಲಿ. ಸಮಾಜವನ್ನು ತಿದ್ದುವ ಕಾಯಕವನ್ನು ಮುಂದುವರಿಸಲಿ. ಪತ್ರಿಕೆಯ ಬಳಗಕ್ಕೆ ಶುಭವಾಗಲಿ ಎಂದು ಆಶೀರ್ವದಿಸುತ್ತೇನೆ.

## ಜನಮಾನಸದಲ್ಲಿ ವಿಶ್ವವಾಣಿ

**ಲತಾ ಕುಮಾರಿ,** ಐಎಎಸ್

ವಿಶ್ವವಾಣಿ ಪತ್ರಿಕೆ ನಾಡಿನಲ್ಲಿ ಸಾಕಷ್ಟು ಪ್ರಸಿದ್ಧಿ ಪಡೆಯುವ ಮೂಲಕ ಆಗಸದೆತ್ತರಕ್ಕೆ ಬೆಳೆಯುತ್ತಿದೆ. ಹತ್ತು ವರ್ಷ ಪೂರೈಸಿರುವ ಪತ್ರಿಕೆ ವಿಶಿಷ್ಟ ಸ್ಥಾನಮಾನ ಹೊಂದಿದೆ.

ಪ್ರಚಲಿತ ವಿಷಯಗಳು, ರಾಜಕೀಯ, ಸಂಸ್ಕೃತಿ ಇತ್ಯಾದಿ ವಿಷಯಗಳನ್ನು ತುಂಬಾ ಅದ್ಭುತವಾಗಿ ವಿಶ್ವವಾಣಿ ಪತ್ರಿಕೆ ಜನಸಾಗರಕ್ಕೆ ತಲುಪಿಸುತ್ತಿದೆ. ವಿಶ್ವವಾಣಿ ದಿನಪತ್ರಿಕೆ 10ನೇ ವರ್ಷ ಕಾಲಿಟ್ಟಿದ್ದು, ಕನ್ನಡ ಪತ್ರಿಕೋದ್ಯಮದಲ್ಲೇ ಸುದ್ದಿಲೋಕದಲ್ಲಿ ಹೊಸ ಅಲೆ ಸೃಷ್ಟಿ ಮಾಡಿರುವ ದಾಖಲೆ ಇದೆ. ವಿನೂತನ, ವಿಭಿನ್ನ ಪ್ರಕಾರಗಳಲ್ಲಿ ಮೂಡಿಬರುತ್ತಿರುವ ವಿಶ್ವವಾಣಿ ವಿಶ್ವಮಟ್ಟದಲ್ಲಿ ಬೆಳೆಯುವ ಎಲ್ಲ ಶಕ್ತಿ ಹೊಂದಿದೆ. ರಾಜಕೀಯ, ವಿದ್ಯಮಾನಗಳು, ಅಂತಾರಾಷ್ಟ್ರೀಯ ಸಮಾಚಾರ, ಪುರವಣಿಗೆಗಳಲ್ಲಿ ಹೊಸತನ ಕಾಣಬಹುದಾಗಿದೆ. ವಿಶ್ವವಾಣಿ ಪತ್ರಿಕೆಯ ಸಾರಥಿ ವಿಶ್ವೇಶ್ವರ ಭಟ್ ಅವರ ನೇತೃತ್ವದಲ್ಲಿ ಪತ್ರಿಕೆ ಪ್ರಖ್ಯಾತಿ ಪಡೆದಿದೆ. 10 ವರ್ಷಗಳ ಇತಿಹಾಸದಲ್ಲಿ ಸಾಕಷ್ಟು ಸುದ್ದಿ ವಿಷಯದಲ್ಲಿ ಹೊಸ ಪ್ರಯೋಗಗಳನ್ನು ನಡೆಸಿದ ಕೀರ್ತಿ ವಿಶ್ವವಾಣಿಗೆ ಸಲ್ಲುತ್ತದೆ. ಸಮಾಜಮುಖಿಯಾಗಿಯೂ ಅನೇಕ ಸೇವೆಗಳಲ್ಲಿ ಮುಂಚೂಣಿಯಲ್ಲಿರುವುದು ಗಮನಾರ್ಹವಾಗಿದೆ.

ವಿಶ್ವವಾಣಿ ಪತ್ರಿಕೆಯಲ್ಲಿ ದಿನಕ್ಕೊಂದು ವಿಶೇಷತೆಯನ್ನು ಕಾಣಬಹುದಾಗಿದೆ. ಪುರವಣಿ ಪುಟಗಳು ಸೊಗಸಾಗಿ ಮೂಡಿ ಬರುತ್ತಿವೆ. ಸಾಮಾಜಿಕ ನ್ಯಾಯ, ಜನಪರ ಕಾಳಜಿ, ಪ್ರೋತ್ಸಾಹ ನೀಡುವ ಕಾಯಕದಲ್ಲಿ ಪತ್ರಿಕೆ ತೊಡಗಿರುವುದು ನಿಜಕ್ಕೂ ಸಂತಸ ತಂದಿದೆ. ವಿಶ್ವವಾಣಿ ಪತ್ರಿಕೆಯ ಪಂಚಿಂಗ್ ಹೆಡ್‌ಲೈನ್‌ಗಳು ಓದುವುದು ತುಂಬಾ ಇಷ್ಟ. ಹಾಗೆಯೇ ವಿಶ್ವವಾಣಿ ಪತ್ರಿಕೆಯ ಹೆಸರು ಕೇಳಿದ ಕೂಡಲೇ ತಾನಾಗಿಯೇ ಪತ್ರಿಕೆ ಓದಬೇಕೆಂಬ ಹಂಬಲ ಮೂಡಿಬರುತ್ತದೆ. ಆಧುನಿಕತೆಯಲ್ಲಿ ಪತ್ರಿಕೆಗಳು ಸಾಕಷ್ಟು ಸವಾಲುಗಳನ್ನು ಎದುರಿಸುತ್ತಿದ್ದರೂ ಜನಮಾನಸಕ್ಕೆ ಬೇಕಾದ ವಿಷಯಗಳನ್ನು ನೀಡುವಲ್ಲಿ ಯಾವತ್ತೂ ಹಿಂಜರಿದಿಲ್ಲ. ವಿಶ್ವವಾಣಿ ಪತ್ರಿಕೆ ಅನೇಕ ಸವಾಲುಗಳನ್ನು ಎದುರಿಸುವ ಮೂಲಕ ರಾಜ್ಯದಲ್ಲಿ ವಿಶೇಷ ಛಾಪನ್ನು ಮೂಡಿಸುತ್ತಿದೆ. ಜನರ ನೋವುಗಳಿಗೆ ಮಿಡಿಯುವ ಮೂಲಕ ಜನಸ್ನೇಹಿ ಪತ್ರಿಕೆಯಾಗಿ ಹೊರಹೊಮ್ಮಿದೆ. ವಿಶ್ವಮಟ್ಟದಲ್ಲಿಯೂ ಪ್ರಖ್ಯಾತಿ ಪಡೆಯುವ ಮೂಲಕ ಮನೆ ಮಾತಾಗಿದೆ. ಕನ್ನಡ ಪತ್ರಿಕಾ ಲೋಕದಲ್ಲಿ ಎಲ್ಲಾ ಪತ್ರಿಕೆಗಳೂ ತನ್ನದೇ ಆದ ಶ್ರೇಷ್ಠತೆ ಹೊಂದಿದೆ.

ನಾಡಿನ ಹಿರಿಯ ಪತ್ರಕರ್ತ ವಿಶ್ವೇಶ್ವರ ಭಟ್ ಅವರ ನೇತೃತ್ವದಲ್ಲಿ ವಿಶ್ವವಾಣಿ ಪತ್ರಿಕೆ ಜನ ಸಾಮಾನ್ಯರ ಧ್ವನಿಯಾಗಿ ಪ್ರಕಟವಾಗುತ್ತಿದೆ. ಜನರ ಭಾವನೆಗಳನ್ನು ಆಡಳಿತಕ್ಕೆ ಮುಟ್ಟಿಸುವ ಕೆಲಸವನ್ನು ಸಮರ್ಥವಾಗಿ ಮಾಡುತ್ತಿದೆ. ವಿಶ್ವೇಶ್ವರ ಭಟ್ ಅವರ ಬರಹಗಳನ್ನು ವಿಜಯ ಕರ್ನಾಟಕದ ಸಂಪಾದಕರಾಗಿದ್ದಾಗಿಂದ ನೋಡುತ್ತಾ ಬಂದಿದ್ದೇನೆ. ಪತ್ರಕರ್ತರೊಬ್ಬರು ಒಂದು ರಾಜ್ಯ ಮಟ್ಟದ ಪತ್ರಿಕೆಯನ್ನು 10 ವರ್ಷ ಸಮರ್ಥವಾಗಿ ನಡೆಸಿಕೊಂಡು ಬಂದಿರುವುದು ಸಣ್ಣ ಮಾತಲ್ಲ. ವಿಶ್ವೇಶ್ವರ ಭಟ್ ಸಾರಥ್ಯದ ವಿಶ್ವವಾಣಿ ಪತ್ರಿಕೆ ದಶಮಾನೋತ್ಸವ ಸಂಭ್ರಮದಲ್ಲಿರುವುದು ಕೂಡ ನನಗೆ ವೈಯಕ್ತಿಕವಾಗಿ ಖುಷಿ ಇದೆ. ಪತ್ರಿಕೆ ಇನ್ನಷ್ಟು ಉತ್ತರೋತ್ತರವಾಗಿ ಬೆಳೆಯಲಿ. ನಾಡಿನ ಜನರ ಧ್ವನಿಯಾಗಲಿ ಎಂದು ಹಾರೈಸುತ್ತೇನೆ.

**-ಪರಣ್ಣ ಮುನವಳ್ಳಿ,** ಮಾಜಿ ಶಾಸಕ



ವಿಶ್ವವಾಣಿ ಪತ್ರಿಕೆಯು ಸಮಾಜದಲ್ಲಿ ಎಲೆಮರೆಯ ಕಾಯಿಗಳಂತೆ ಕಾರ್ಯನಿರ್ವಹಿಸುವವರನ್ನು ಗುರುತಿಸುವ ಹೊಸ ವಿನೂತನ ಕಾರ್ಯಕ್ಕೆ ಪ್ರಯೋಗ ಮಾಡುತ್ತಾರೆ. ವಿಶ್ವೇಶ್ವರ ಭಟ್ಟರು ಪ್ರಪಂಚದ ಅನೇಕ ದೇಶವನ್ನು ಸುತ್ತಿರುವ ಅವರು ಅಪಾರ ಜ್ಞಾನ ಸಂಪದಾನೆಯನ್ನು ಮಾಡಿದ್ದಾರೆ, ಪತ್ರಿಕೆಯು ನಿತ್ಯ ನೂತನವಾಗಿ , ಸಮೃದ್ಧವಾಗಿ ಕಟ್ಟಿಕೊಡುವ ಸಂಕಲ್ಪ ಮತ್ತು ಕೈಂಕರ್ಯದಲ್ಲಿ ಯಾವ ರಾಜಿ ಇಲ್ಲದೇ ಕಾರ್ಯನಿರ್ವಹಿಸುತ್ತಿದೆ. ದಿನಪ್ರತಿ ಪತ್ರಿಕೆ ಓದಿದ್ದರೆ ಸಮಾಧಾನವಾಗುತ್ತಿದೆ, 10ರ ವಸಂತಕ್ಕೆ ಕಾಲಿಟ್ಟ ಪತ್ರಿಕೆಗೆ ಕಾರ್ಯನಿರ್ವಹಿಸುತ್ತಿರುವ ಪತ್ರಿ, ಒಬ್ಬ ಪರ್ತಕರ್ತರಿಗೂ ಶುಭ ಹಾರೈಸುತ್ತೇನೆ.

**ಆರ್.ಕೆ.ಪಾಟೀಲ್,** ಅಧ್ಯಕ್ಷರು ಕೆಎಂಎಫ್, ಕಲಬುರಗಿ.



ವಿಶ್ವವಾಣಿ ದಿನಪತ್ರಿಕೆ ವಿಶ್ವೇಶ್ವರ ಭಟ್ಟರ ಸಾರಥ್ಯದಲ್ಲಿ 10ನೇ ವರ್ಷಕ್ಕೆ ಕಾಲಿಟ್ಟಿರುವುದು ಸಂತೋಷದ ವಿಷಯ. ನಾಡಿನ ಮುಖವಾಣಿಯಾಗಿ ಕಾರ್ಯನಿರ್ವಹಿಸುತ್ತಿರುವುದು ಅಭಿಮಾನದ ಸಂಗತಿ. ಈ ಹಿಂದೆ ವಿಶ್ವವಾಣಿ ದಿ. ಪಾಟೀಲ ಪುಟ್ಟಪ್ಪನವರ ನೇತೃತ್ವದಲ್ಲಿ ಪ್ರಕಟವಾಗುತಿತ್ತು. ಸಮಗ್ರ ದೃಷ್ಟಿಕೋನದ ವಿಚಾರ ಹೊಂದಿರುವ ಪತ್ರಿಕೆ ನಾಡಿನ ಅಭ್ಯುದಯಕ್ಕೆ ಕಾಣ್ಕೆ ನೀಡಲಿ. ಈಗ ಮುಂದಿನ ದಿನಗಳಲ್ಲಿ ಪತ್ರಿಕೆ ಇನ್ನಷ್ಟೂ ಎತ್ತರಕ್ಕೆ ಬೆಳೆಯಲಿ ಹಾಗೂ ಜನ ಸಾಮಾನ್ಯರ ಧ್ವನಿಯಾಗಿ ಮೂಡಿಬರಲಿ.

**ಸುಭಾಷ ಆರ್. ಗುತ್ತೇದಾರ,** ಮಾಜಿ ಶಾಸಕ

ವಿರಾಮ
ಪ್ರತಿ ಭಾನುವಾರ




## ಲಾರಿ ಅಪಘಾತದಲ್ಲಿ ಒಂದೇ ಊರಿನ 10 ಮಂದಿ ಸಾವು | ಮುಗಿಲು ಮುಟ್ಟಿದ ಆಕ್ರಂದನ

# ಯಲ್ಲಾಪುರ ಭೀಕರ ಅಪಘಾತ: ಹತ್ತೂ ಮೃತರದ್ದು ಒಂದೊಂದು ಕಥೆ

**ಶಿರಸಿ:** ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪುರದಲ್ಲಿ ತಡರಾತ್ರಿ ನಡೆದ ಭೀಕರ ಅಪಘಾತದಲ್ಲಿ ಮೃತಪಟ್ಟವರೆಲ್ಲರೂ ಹಾವೇರಿ ಜಿಲ್ಲೆಯ ಸವಣೂರಿನವರು. ಅಪಘಾತದಲ್ಲಿ ಮೃತಪಟ್ಟ ಹತ್ತೂ ಮಂದಿಯದ್ದು ಒಂದೊಂದು ಕಥೆ. ಒಬ್ಬ ಮನೆಗೆ ಆಧಾರವಾಗಿದ್ದ, ಇನ್ನೊಬ್ಬ ತಂದೆಗೆ ಆಸರೆಯಾಗಲು ಎದೆ ಎತ್ತರಕ್ಕೆ ಬೆಳೆದು ನಿಂತಿದ್ದ, ಅದೆಷ್ಟೋ ಕನಸು ಕಂಡಿದ್ದ ಮನೆ ಮಕ್ಕಳು ವಿಧಿಯ ಕ್ರೂರ ಲೀಲೆಗೆ ಬಲಿಯಾಗಿದ್ದಾರೆ. ಸವಣೂರಿನಲ್ಲಿ ದುಃಖ ಮಡುಗಟ್ಟಿದೆ.

ಹಿಂದೆಂದೂ ಕಾಣದ ಸೂತಕದ ಛಾಯೆ ಸವಣೂರು ಪಟ್ಟಣದಲ್ಲಿ ಆವರಿಸಿದೆ. ಮೃತರ ಕುಟುಂಬಸ್ಥರ ಆಕ್ರಂದನ ಮುಗಿಲು ಮುಟ್ಟಿದೆ. ಮೃತರ ಮನೆಯ ಮುಂದೆ ಜನಸಾಗರವೇ ಹರಿದು ಬಂದಿದೆ. ಕಳೆದುಕೊಂಡ ನೋವನ್ನು ಅರಗಿಸಿಕೊಳ್ಳಲಾಗದೇ ಮನೆಯೊಳಗೆ ಹೆಣ್ಣುಮಕ್ಕಳು ಕಣ್ಣೀರು ಹಾಕುತ್ತಿರುವ ದೃಶ್ಯ ಎಂಥವರ ಮನ ಕಲುಕುವಂತಿದೆ.

**ಜೀವನೋಪಾಯಕ್ಕೆ ಹಣ್ಣು- ತರಕಾರಿ ಮಾರಿಕೊಂಡಿದ್ದ ಜನ:** ಜೀವನೋಪಾಯಕ್ಕೆ ಹಣ್ಣು, ತರಕಾರಿ ವ್ಯಾಪಾರ ಮಾಡಿಕೊಂಡಿದ್ದ 10 ಜನರ ದುರ್ಮರಣದಿಂದ ಕುಟುಂಬಗಳ ಆಧಾರಸ್ತಂಭವೇ ಕಳಚಿ ಬಿದ್ದಿದೆ. ಸರಕಾರ ತಮಗೆ ಸೂಕ್ತ ಪರಿಹಾರ ನೀಡಬೇಕು, ನೆರವಿಗೆ ಬರುವಂತೆ ಈ ಬಡ ಕುಟುಂಬಗಳು ಮನವಿ ಮಾಡಿಕೊಳ್ಳುತ್ತಿವೆ.

**ಸರಕಾರ ನಮ್ಮ ನೆರವಿಗೆ ಬರಬೇಕು:** ರಾತ್ರಿ 10 ಗಂಟೆಗೆ ಹೋಗಿದ್ದರು, ರಾತ್ರಿ ಮೂರು ಗಂಟೆಗೆ ಲಾರಿ ಪಲ್ಟಿಯಾಗಿದೆ. ನನಗೆ ಬೆಳಗ್ಗೆ 6 ಗಂಟೆಗೆ ವಿಚಾರ ತಿಳಿಯಿತು. ನಾನು ಹ್ಯಾಂಡಿಕ್ಯಾಪ್. ನನ್ನ ಮನೆ ನಡೆಸುತ್ತಿದ್ದದ್ದೂ ನನ್ನ ಮಗನೇ. ಕೊನೆಯದಾಗಿ ನಿನ್ನೆ ರಾತ್ರಿ 10 ಗಂಟೆಗೆ ನನಗೆ ಮಗ ಎಳನೀರು ತಂದು ಕುಡಿಸಿ ಹೋಗಿದ್ದ. ಮುಂದೆ ಜೀವನ ಹೇಗೆ, ನಾನೂ ಏನು ಮಾಡಬೇಕು ಎಂಬುದು ತಿಳಿದಿಲ್ಲ. ಸರಕಾರ ನೆರವಿಗೆ ಬರಬೇಕು ಎಂದು ಮೃತ ಸಾದಿಕ್ ತಂದೆ ಗೌಸ್ ಮುದ್ದೀನ್ ಅವರು ಮನವಿ ಮಾಡಿಕೊಂಡಿದ್ದಾರೆ.

**ಗಾಯಾಳುಗಳಿಗೆ ಚಿಕಿತ್ಸೆ ನೀಡಲು ವೈದ್ಯರೇ ಇರಲಿಲ್ಲ:** ಉತ್ತರ ಕನ್ನಡ ಜಿಲ್ಲೆಯ ಅರಬೈಲ್ ಬಳಿ ನಡೆದ ಭೀಕರ ಲಾರಿ ಅಪಘಾತದಲ್ಲಿ ಗಾಯಗೊಂಡವರಿಗೆ ಹುಬ್ಬಳ್ಳಿ ಕಿಮ್ಸ್‌ನ ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಆದರೆ, ಬುಧವಾರ ಬೆಳಿಗ್ಗೆ 6 ಗಂಟೆಗೆ ಘಟನಾ ಸ್ಥಳದಿಂದ ಗಾಯಾಳುಗಳನ್ನು ಕಿಮ್ಸ್ ಆಸ್ಪತ್ರೆಗೆ ಕರೆದುಕೊಂಡು ಬಂದರೂ ಆ ಸಮಯದಲ್ಲಿ ಚಿಕಿತ್ಸೆ ನೀಡಲು ಯಾವೊಬ್ಬ ವೈದ್ಯರೂ ಇರಲಿಲ್ಲ ಎಂಬ ದೂರುಗಳು ಕೇಳಿ ಬಂದಿವೆ.

ರಾಜ್ಯದಲ್ಲಿ ಸಂಭವಿಸಿರುವ ಎರಡು ಭೀಕರ ಅಪಘಾತಗಳಲ್ಲಿ 14 ಜನ ಸಾವನ್ನಪ್ಪಿರುವ ವಾರ್ತೆ ಕೇಳಿ ನನಗೆ ತೀವ್ರ ಆಘಾತ ಉಂಟಾಗಿದೆ. ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪುರ ಬಳಿಯ ಅರಬೈಲ್ ಬಳಿ ಸಂಭವಿಸಿದ ಅಪಘಾತದಲ್ಲಿ 10 ಜನರು ಹಾಗೂ ರಾಯಚೂರು ಜಿಲ್ಲೆಯ ಸಿಂಧನೂರು ಬಳಿ ರಸ್ತೆ ದುರಂತದಲ್ಲಿ ಮೂವರು ವಿದ್ಯಾರ್ಥಿಗಳು ಸೇರಿ ನಾಲ್ವರು ದುರ್ಮರಣಕ್ಕೆ ತುತ್ತಾಗಿರುವುದು ನನಗೆ ಅತೀವ ನೋವುಂಟು ಮಾಡಿದೆ

**-ಎಚ್.ಡಿ. ಕುಮಾರಸ್ವಾಮಿ ,** ಕೇಂದ್ರ ಸಚಿವ



ಹಾವೇರಿಯ ಸವಣೂರು ಭಾಗದ ಬಹುತೇಕರು ಪ್ರತಿ ವಾರವೂ ಸಂತೆಗಾಗಿ ಈ ಭಾಗಕ್ಕೆ ಬಂದು ವ್ಯಾಪಾರ ಮಾಡಿ ತೆರಳುತ್ತಿದ್ದರು. ಬಹುತೇಕರು ಬಡವರಾಗಿದ್ದಾರೆ. ಆದರೆ, ದುರದೃಷ್ಟವಶಾತ್ ಈ ಘಟನೆಯಿಂದ ಪ್ರಾಣ ಕಳೆದುಕೊಂಡಿದ್ದಾರೆ. ಲಾರಿಯಲ್ಲಿದ್ದ ತರಕಾರಿ ಹಾಗೂ ಹಣ್ಣಿನ ಮೇಲೆ ಮಲಗಿದ್ದಾಗ ಲಾರಿ ಪಲ್ಟಿಯಾಗಿದೆ. ಇದರಿಂದ ಎಲ್ಲರೂ ಲಾರಿ ಅಡಿ ಭಾಗದಲ್ಲಿ ಸಿಲುಕಿದ್ದರು. ಪೊಲೀಸರು ಹಾಗೂ ಸ್ಥಳೀಯರ ಸಮಯಪ್ರಜ್ಞೆಯಿಂದಾಗಿ ಲಾರಿ ಅಡಿ ಸಿಲುಕಿದ್ದ ಕೆಲವರನ್ನು ತಕ್ಷಣ ರಕ್ಷಣೆ ಮಾಡಿ ಆಸ್ಪತ್ರೆಗೆ ಸಾಗಿಸಿದ್ದಾರೆ. ಇನ್ನು ಘಟನೆಯನ್ನು ಸರಕಾರ ಕೂಡ ಗಂಭೀರವಾಗಿ ಪರಿಗಣಿಸಿದೆ.

**-ಶಿವರಾಮ್ ಹೆಬ್ಬಾರ್,** ಶಾಸಕ



ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪುರದ ಅರಬೈಲ್ ಬಳಿ ನಡೆದ ಲಾರಿ ಅಪಘಾತದಲ್ಲಿ ಹಾವೇರಿ ಜಿಲ್ಲೆಯ ಸವಣೂರು ತಾಲೂಕಿನ ಹತ್ತು ಜನರು ದುರಂತ ಸಾವಿಗೀಡಾದ ಸುದ್ದಿ ಮನಸ್ಸಿಗೆ ನೋವುಂಟು ಮಾಡಿದೆ. ಈ ಘಟನೆಯಲ್ಲಿ ಇನ್ನೂ ಕೆಲವರು ಗಾಯಗೊಂಡು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದು, ರಾಜ್ಯ ಸರಕಾರವು ಮೃತರ ಕುಟುಂಬಗಳಿಗೆ ಸೂಕ್ತ ಪರಿಹಾರ ನೀಡಬೇಕು, ಹಾಗೂ ಗಾಯಗೊಂಡವರ ಚಿಕಿತ್ಸಾ ವೆಚ್ಚವನ್ನು ಸರಕಾರವೇ ಭರಿಸಬೇಕು ಎಂದು ಆಗ್ರಹಿಸುತ್ತೇನೆ. ಮೃತರ ಆತ್ಮಕ್ಕೆ ಚಿರಶಾಂತಿ ಕೋರುತ್ತೇನೆ.

**-ಬಸವರಾಜ ಬೊಮ್ಮಾಯಿ,** ಸಂಸದ

### ಹಲವು ಜೀವಗಳನ್ನು ಕಾಪಾಡಿದ ಪೊಲೀಸರು

ಹಣ್ಣು ಮತ್ತು ತರಕಾರಿ ತುಂಬಿಕೊಂಡು ವ್ಯಾಪಾರಸ್ಥರೊಂದಿಗೆ ತೆರಳುತ್ತಿದ್ದ ಲಾರಿ ಬುಧವಾರ ಮುಂಜಾನೆ ಕಂದಕಕ್ಕೆ ಬಿದ್ದು 10 ಮಂದಿ ಸಾವನ್ನಪ್ಪಿದ್ದರೆ, ಹಲವು ಮಂದಿ ಗಾಯಗೊಂಡಿದ್ದಾರೆ. ಲಾರಿ ಬಿದ್ದಿರುವ ಸ್ಥಳ ಸಾಮಾನ್ಯವಾಗಿ ಯಾರಿಗೂ ಕಾಣುವುದಿಲ್ಲ. ಆದರೆ, ಈ ಬಗ್ಗೆ ಸ್ಥಳೀಯರು ಮಾಹಿತಿ ನೀಡಿದ ತಕ್ಷಣ ಸ್ಥಳಕ್ಕೆ ಆಗಮಿಸಿದ ಪೊಲೀಸರು ಲಾರಿ ಅಡಿ ಸಿಲುಕಿದ್ದವರನ್ನು ಹೊರ ತೆಗೆದು ಗಂಭೀರ ಗಾಯಗೊಂಡಿದ್ದವರನ್ನು ತಕ್ಷಣ ಆಸ್ಪತ್ರೆಗೆ ದಾಖಲಿಸಿ ಜೀವ ಕಾಪಾಡಿದ್ದಾರೆ ಎಂದು ಪಶ್ಚಿಮ ವಲಯ ಐಜಿಪಿ ಅಮಿತ್ ಸಿಂಗ್ ತಿಳಿಸಿದ್ದಾರೆ.

### ಮನೆಯ ಜವಾಬ್ದಾರಿ ನನ್ನ ತಮ್ಮನೇ ಹೊತ್ತಿದ್ದ

ಕುಮಟಾ, ಕಾರವಾರ, ಹೊನ್ನಾವರ ಸಂತೆಗೆ ಸುಮಾರು 12 ವರ್ಷದಿಂದ ಹಣ್ಣು-ತರಕಾರಿ ಮಾರಲು ಇವರೆಲ್ಲ ಹೋಗುತ್ತಿದ್ದರು. ತರಕಾರಿ, ಹಣ್ಣಿನ ವ್ಯಾಪಾರ ಮಾಡಿ ನಮ್ಮ ಮನೆ ನಡೆಸುತ್ತಿದ್ದದು ಅವನೇ (ಮೃತ ಇಮ್ತಿಯಾಜ್). ಉಳಿದ ನಾವು ಕೂಲಿ ಕೆಲಸಕ್ಕೆ ಹೋಗುತ್ತಿದ್ದೆವು. ಅದು ಕೆಲಸ ಇದ್ದರೆ ಮಾತ್ರ. ಹೀಗಿದ್ದಾಗ ಪ್ರಮುಖವಾಗಿ ಮನೆಯ ಜವಾಬ್ದಾರಿ ನನ್ನ ತಮ್ಮನೇ ಹೊತ್ತಿದ್ದ. ಅವನು ಮಂಗಳವಾರ ಸುಮಾರು 11 ಗಂಟೆಗೆ ಮನೆಯಿಂದ ಹೊರಟಿದ್ದ. ಅಪಘಾತವಾದ ವಿಚಾರ ನಮಗೆ ಬೆಳಗ್ಗೆ 4 ಗಂಟೆಗೆ ಗೊತ್ತಾಯಿತು. ಮನೆಯನ್ನು ಎಲ್ಲವನ್ನು ಅವನೇ ನಡೆಸುತ್ತಿದ್ದ ಎಂದು ಮೃತ ಇಮ್ತಿಯಾಜ್ ಅವರ ಸಹೋದರ ಸಾಧಿಕ್ ಅಹ್ಮದ್ ದುಃಖ ತೋಡಿಕೊಂಡರು.

### ಒಂದು ಗಂಟೆ ತರಕಾರಿ ಅಡಿ ಸಿಲುಕಿದ್ದರು

28 ಜನ ಪ್ರಯಾಣಿಸುತ್ತಿದ್ದ ಲಾರಿಯಲ್ಲಿ ಹಣ್ಣು, ತರಕಾರಿ ತುಂಬಿತ್ತು. ಅಪಘಾತ ಸಂಭವಿಸಿದಾಗ ಹಣ್ಣು, ತರಕಾರಿ ದೇಹದ ಮೇಲೆ ಬಿದ್ದಿತ್ತು. 1 ಗಂಟೆ ಬಳಿಕ ಕ್ರೇನ್ ತಂದು ಲಾರಿ ಮೇಲೆತ್ತಿದಾಗ ಜನ ಇರೋದು ಗೊತ್ತಾಯ್ತು. ಅಷ್ಟರಲ್ಲಾಗಲೇ 9 ಮಂದಿ ಉಸಿರುಗಟ್ಟಿ ಸ್ಥಳದಲ್ಲೇ ಸಾವನ್ನಪ್ಪಿದ್ದರು ಎಂದು ಎಸ್ಪಿ ನಾರಾಯಣ್ ಯಲ್ಲಾಪುರ ಅಪಘಾತದ ಕುರಿತು ಮಾಹಿತಿ ನೀಡಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ದಟ್ಟ ಮಂಜು ಇದ್ದ ಕಾರಣ ಅಪಘಾತ ಸಂಭವಿಸಿದೆ. ಮಂಜು ಮುಸುಕಿದ್ದರಿಂದ ಎದುರಿಗೆ ಬರುತಿದ್ದ ವಾಹನಕ್ಕೆ ಸೈಡ್ ಕೊಡಲು ಹೋಗಿ ವಿದ್ಯುತ್ ಕಂಬಕ್ಕೆ ಡಿಕ್ಕಿ ಹೊಡೆದಿದೆ. ಇದರಿಂದ ಲಾರಿ ಪಲ್ಟಿಯಾಗಿದೆ. ವಾಹನದಲ್ಲಿ ಹಣ್ಣು, ತರಕಾರಿಗಳಿತ್ತು, 28 ಜನ ಪ್ರಯಾಣಿಸುತಿದ್ದರು. ಲಾರಿ ಪಲ್ಟಿಯಾದ ಕಾರಣ ಜನರ ಮೇಲೆ ತರಕಾರಿ ಬಿದ್ದು ಉಸಿರುಗಟ್ಟಿ 9 ಜನ ಸಾವನ್ನಪ್ಪಿದ್ದಾರೆ ಎಂದು ತಿಳಿಸಿದ್ದಾರೆ.

## ಶಿವಸ್ವಾಮಿ ನಿಧನ

**ಬೆಂಗಳೂರು:** ಖಾಸಗಿ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಶಿವಸ್ವಾಮಿ (56) ಅವರು ಮಂಗಳವಾರ ತಡರಾತ್ರಿ ಕೊನೆಯುಸಿರು ಎಳೆದಿದ್ದಾರೆ. 'ವಿಶ್ವವಾಣಿ' ದಿನಪತ್ರಿಕೆಯ ಹಣಕಾಸು ವಿಭಾಗದ ಮುಖ್ಯಸ್ಥೆ ಬೃಂದಾ ಅವರ ತಂದೆಯಾಗಿರುವ ಶಿವಸ್ವಾಮಿ ಅವರು ಅನಾರೋಗ್ಯಕ್ಕೆ ತುತ್ತಾಗಿದ್ದರು. ಅಲ್ಪಕಾಲಿಕ ಅನಾರೋಗ್ಯದಿಂದ ಬಳಲಿದ್ದ ಶಿವಸ್ವಾಮಿ ಅವರಿಗೆ ಚಿಕಿತ್ಸೆ ಫಲಕಾರಿಯಾಗದೇ ಮಂಗಳವಾರ ರಾತ್ರಿ ಆಸ್ಪತ್ರೆಯಲ್ಲಿ ಕೊನೆಯುಸಿರು ಎಳೆದಿದ್ದಾರೆ ಎಂದು ಕುಟುಂಬದ ಮೂಲಗಳು ತಿಳಿಸಿವೆ. ಬುಧವಾರದಂದು ಶಿವಸ್ವಾಮಿ ಅವರ ಹುಟ್ಟೂರಿನಲ್ಲಿ ಅಂತಿಮ ವಿಧಿವಿಧಾನಗಳನ್ನು ನೆರವೇರಿಸಲಾಗಿದೆ. ವಿಶ್ವವಾಣಿ ಆಡಳಿತ ಮಂಡಳಿ ಹಾಗೂ ಸಿಬ್ಬಂದಿ ಶಿವಸ್ವಾಮಿ ಅವರ ನಿಧನಕ್ಕೆ ಸಂತಾಪ ಸೂಚಿಸಿದ್ದಾರೆ.

## ಅಪಘಾತದಲ್ಲಿ ನಾಲ್ವರ ಸಾವು: ಮಂತ್ರಾಲಯ ಶ್ರೀ ಸಂತಾಪ

**ರಾಯಚೂರು:** ಮಂತ್ರಾಲಯ ಸಂಸ್ಕೃತ ವಿದ್ಯಾಪೀಠದ ವಿದ್ಯಾರ್ಥಿಗಳು ಹಾಗೂ ಚಾಲಕ ಸೇರಿ ನಾಲ್ಕು ಜನ ಅಪಘಾತದಲ್ಲಿ ಸಾವನ್ನಪ್ಪಿರುವ ಘಟನೆ ಹಿನ್ನೆಲೆ ಮಂತ್ರಾಲಯ ಮಠದ ಪೀಠಾಧಿಪತಿ ಸುಬುಧೇಂದ್ರ ತೀರ್ಥ ಸ್ವಾಮಿ ಮೃತರ ಆತ್ಮಕ್ಕೆ ಶಾಂತಿ ಕೋರಿದ್ದಾರೆ.

ಕೊಪ್ಪಳದ ಆನೆಗುಂದಿಯಲ್ಲಿ ಭಾವುಕರಾಗಿ ಮಾತನಾಡಿರುವ ಮಂತ್ರಾಲಯ ಶ್ರೀಗಳು, ಅಪಘಾತದಲ್ಲಿ ಮೃತರಾದವರ ಆತ್ಮಕ್ಕೆ ಸದ್ಗತಿಯಾಗಲಿ ಎಂದು ಭಗವಂತನಲ್ಲಿ ಪ್ರಾರ್ಥಿಸೋಣ. ನರಹರಿ ತೀರ್ಥರ ಆರಾಧನಾ ಉತ್ಸವದಲ್ಲಿ ಪಾಲ್ಗೊಳ್ಳಲು ಮಂತ್ರಾಲಯದಿಂದ ಉತ್ಸಾಹದಿಂದ ಹೊರಟಿದ್ದ ನಮ್ಮ ವಿದ್ಯಾರ್ಥಿಗಳ ವಾಹನ ತಾಂತ್ರಿಕ ದೋಷದಿಂದ ಅಪಘಾತಕ್ಕೀಡಾಗಿದೆ. ಮೂವರು ವಿದ್ಯಾರ್ಥಿಗಳು ಹಾಗೂ ಚಾಲಕ ತೀವ್ರ ಗಾಯಗಳಿಂದ ಸಾವನ್ನಪ್ಪಿದ್ದಾರೆ. ಓರ್ವ ವಿದ್ಯಾರ್ಥಿ ಆಸ್ಪತ್ರೆಗೆ ದಾಖಲಾಗಿದ್ದಾನೆ. ತೀವ್ರ ಗಾಯ ಹಾಗೂ ಭಯದಿಂದ ವಿದ್ಯಾರ್ಥಿಗಳು ಸಾವನ್ನಪ್ಪಿದ್ದಾರೆ. ಅವರ ಆತ್ಮಕ್ಕೆ ಶಾಂತಿ ಸಿಗಲಿ ಎಂದರು.

# ಕಲಬುರಗಿಗೆ ರೈಲ್ವೆ ವಿಭಾಗೀಯ ಕಚೇರಿ ಸ್ಥಾಪನೆಗೆ ಆಗ್ರಹ

**ಕಲಬುರಗಿ:** ದಿನೇದಿನೇ ಬೆಳೆಯುತ್ತಿರುವ ಕಲ್ಯಾಣ ಕರ್ನಾಟಕದ ಹೆಬ್ಬಾಗಿಲು ಕಲಬುರಗಿಯಲ್ಲಿ ರೈಲ್ವೆ ವಿಭಾಗೀಯ ಕಚೇರಿ ಸ್ಥಾಪಿಸಬೇಕು ಎಂದು ಆಗ್ರಹಿಸಿ ಇದೇ ಜ.24ರಂದು ರೈಲು ರೋಕೋ ಅಭಿಯಾನ ನಡೆಸಲಾಗುತ್ತಿದೆ ಎಂದು ಕೆಕೆಸಿಸಿಐ ಅಧ್ಯಕ್ಷ ಶಶಿಕಾಂತ ಪಾಟೀಲ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಲ್ಯಾಣ ಕರ್ನಾಟಕ ಭಾಗ ಅತ್ಯಂತ ಹಿಂದುಳಿದ ಪ್ರದೇಶವಾಗಿದ್ದು, ಇಲ್ಲಿನ ಅಭಿವೃದ್ಧಿಗಾಗಿ ಕೂಡಲೇ, ಕಲಬುರಗಿಯಲ್ಲಿ ವಿಭಾಗೀಯ ಕಚೇರಿ ಸ್ಥಾಪನೆಗಾಗಿ ಜ. 24ರಂದು ಬೆಳಗ್ಗೆ 9ಗಂಟೆಗೆ ನಗರದ ಸರ್ದಾರ್ ವಲ್ಲಭಭಾಯ್ ಪಟೇಲ್ ವೃತ್ತದಿಂದ ಕಾಲ್ನಡಿಗೆ ಮೂಲಕ ಕಲಬುರಗಿ ರೈಲ್ವೆ ನಿಲ್ದಾಣಕ್ಕೆ ತೆರಳಿ ಶತಾಬ್ದಿ ಎಕ್ಸ್‌ಪ್ರೆಸ್ ರೈಲು ರೋಕೋ ಮಾಡಲಾಗುತ್ತದೆ ಎಂದು ಮಾಹಿತಿ ನೀಡಿದರು.

ಸುದ್ದಿಗೋಷ್ಠಿಯಲ್ಲಿ ಕೆಕೆಸಿಸಿಐ ಅಧ್ಯಕ್ಷ ಶಶಿಕಾಂತ ಪಾಟೀಲ ಮಾತನಾಡಿದರು.

ಕೆಕೆಸಿಸಿಐ ಮಾಜಿ ಅಧ್ಯಕ್ಷ ಉಮಾಕಾಂತ್ ನಿಗ್ಗುಡಗಿ ಮಾತನಾಡಿ, ರೈಲ್ವೆ ವಿಭಾಗದ ಪಿಂಕ್ ಡೈರಿಯಲ್ಲಿ ಹಾಗೂ ನಂಜುಂಡಪ್ಪ ವರದಿಯಲ್ಲಿ ಸಹ ಈ ಭಾಗದ ಅನುಕೂಲಕ್ಕಾಗಿ ಕಲಬುರಗಿಯಲ್ಲಿ ರೈಲ್ವೆ ವಿಭಾಗ ಸ್ಥಾಪನೆಯಾಗಬೇಕೆಂಬ ಉಲ್ಲೇಖವಿದ್ದು, ಈ ಭಾಗದ ರಾಜಕೀಯ ನಾಯಕರ ಇಚ್ಛಾಶಕ್ತಿ ಕೊರತೆಯಿಂದಾಗಿ ದಶಕಗಳ ಬೇಡಿಕೆ ಈಡೇರದ ಹಾಗೇ ಉಳಿದಿದೆ ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಹೋರಾಟ ಸಮಿತಿಯ ಗೌರವಾಧ್ಯಕ್ಷ ಡಾ.ಲಿಂಗರಾಜಪ್ಪ ಅಪ್ಪಾ, ಅರುಣಕುಮಾರ ಪಾಟೀಲ್ ಕೊಡಲಹಂಗರಗಾ ಮಾತನಾಡಿದರು. ಈ ಸಂದರ್ಭದಲ್ಲಿ ಯಾದಗಿರಿ ಕೆಕೆಸಿಸಿಐ ಅಧ್ಯಕ್ಷ ಮಲ್ಲಿಕಾರ್ಜುನ ಅಕ್ಕಿ, ಮಂಜುನಾಥ್ ಜೇವರ್ಗಿ, ಶ್ರೀನಿವಾಸ ಸಿರನೂರಕರ್, ಶರಣು ಪಪ್ಪಾ, ಸುನೀಲ್ ಕುಲಕರ್ಣಿ ಸೇರಿ ಹಲವು ಸದಸ್ಯರು ಉಪಸ್ಥಿತರಿದ್ದರು.

ಅಭಿವೃದ್ಧಿ ದೃಷ್ಟಿಯಿಂದ ರೈಲ್ವೆ ವಿಭಾಗ ಸ್ಥಾಪನೆಯಾದರೇ 5 ಸಾವಿರ ನೇರ ಉದ್ಯೋಗ ಸೃಷ್ಟಿಯಾಗಲಿವೆ.2500 ಐಟಿಐ ಕಲಿತವರಿಗೆ ನೌಕರಿ, ರೈಲ್ವೆ ವಿಭಾಗದ ಸ್ಥಾಪನೆಯಿಂದ ಕಲ್ಯಾಣ ಕರ್ನಾಟಕ ಭಾಗದ ಹಲವು ದಿನಗಳ ಬೇಡಿಕೆ ಈಡೇರಿದಂತಾಗುತ್ತದೆ. ಕೇಂದ್ರ ಸರಕಾರದ ಬರುವ ಬಜೆಟ್ ನಲ್ಲಿ ಕಲಬು ರಗಿಗೆ ರೈಲ್ವೆ ವಿಭಾಗ ಘೋಷಣೆ ಮಾಡಬೇಕು.

**-ಶಶಿಕಾಂತ ಪಾಟೀಲ್,** ಅಧ್ಯಕ್ಷ, ಕೆಕೆಸಿಸಿಐ.

**ವಿಶ್ವವಾಣಿ**

## ಸಂಪಾದಕೀಯ

# ಶಿಸ್ತಿನ ಪಕ್ಷದಲ್ಲಿ ಅಶಿಸ್ತಿನ ತಾಂಡವ

ಬಿಜೆಪಿ ಬಣ ಜಗಳ ತಾರಕಕ್ಕೇರಿದೆ. ಪಕ್ಷದ ಇನ್ನೊಬ್ಬ ಹಿರಿಯ ನಾಯಕ ಮಾಜಿ ಸಚಿವ ಶ್ರೀರಾಮುಲು ಒಂದು ಕಾಲದ ತಮ್ಮ ಆಪ್ತ ಸ್ನೇಹಿತ ಜನಾರ್ದನ ರೆಡ್ಡಿ ಮತ್ತು ಬಿಜೆಪಿ ರಾಜ್ಯ ಉಸ್ತುವಾರಿ ರಾಧಾಮೋಹನ್ ದಾಸ್ ವಿರುದ್ಧವೇ ತಿರುಗಿ ಬಿದ್ದಿದ್ದಾರೆ. ಸಂಡೂರು ಚುನಾವಣೆ ಸೋಲಿಗೆ ಶ್ರೀರಾಮುಲು ಕಾರಣ ಎಂದು ಪರಾಜಿತ ಅಭ್ಯರ್ಥಿ ಬಂಗಾರು ಹನುಮಂತು ಹೈಕಮಾಂಡ್‌ಗೆ ದೂರು ಕೊಟ್ಟಿದ್ದರು. ಈ ಹಿನ್ನೆಲೆಯಲ್ಲಿ ಮಂಗಳವಾರ ನಡೆದ ಕೋರ್ ಕಮಿಟಿ ಸಭೆಯಲ್ಲಿ ರಾಜ್ಯ ಉಸ್ತುವಾರಿ ರಾಮುಲು ಅವರು ಶ್ರೀರಾಮುಲು ಅವರನ್ನು ತರಾಟೆಗೆ ತೆಗೆದುಕೊಂಡಿದ್ದರು. ಇದರಿಂದ ಅಸಮಾಧಾನಗೊಂಡ ರಾಮುಲು, ''ಜನಾರ್ದನ ರೆಡ್ಡಿ ನನ್ನ ಟಾರ್ಗೆಟ್ ಮಾಡ್ತಾ ಇದ್ದಾರೆ. ಸಭೆಯಲ್ಲಿ ವಿಜಯೇಂದ್ರ ನನ್ನ ಪರ ಇರಲಿಲ್ಲ. ನಾನು ಪಕ್ಷ ಬಿಡುತ್ತೇನೆ, ನಿಮಗೆ ನಾನು ಬೇಡ ಅಂದ್ರೆ ಹೇಳಿ '' ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಇದರೊಂದಿಗೆ ಶಿಸ್ತಿನ ಪಕ್ಷದಲ್ಲಿ ಅಶಿಸ್ತು ಬಿಟ್ಟರೆ ಬೇರೇನೂ ಉಳಿದಿಲ್ಲ ಎಂಬ ಸನ್ನಿವೇಶ ನಿರ್ಮಾಣವಾಗಿದೆ. ಕೇಂದ್ರ ನಾಯಕರ ಎಚ್ಚರಿಕೆಗೂ ಮಣಿಯದೆ ರಾಜ್ಯ ಬಿಜೆಪಿ ನಾಯಕರು ಪರಸ್ಪರ ವಾಗ್ದಾಳಿ ಮಾತ್ರವಲ್ಲ, ಗಣ್ಯರಿಗೆ ತಕ್ಕುದಲ್ಲದ ಕೆಳಮಟ್ಟದ ಭಾಷೆಯಲ್ಲಿ ಮಾತನಾಡುತ್ತಿದ್ದಾರೆ. ಕೇಂದ್ರ ಮತ್ತು ರಾಜ್ಯದಲ್ಲಿ ಅಧಿಕಾರಕ್ಕೆ ಬರುವ ಮುನ್ನ ಬಿಜೆಪಿ ತನ್ನನ್ನು ಪಾರ್ಟಿ ವಿದ್ ಡಿಫರೆನ್ಸ್ ಎಂದು ಹೇಳಿಕೊಂಡಿತ್ತು. ಈಗ ಈ ವಿಶೇಷಣ 'ಪಾರ್ಟಿ ವಿದ್ ಮೆನಿ ಡಿಫರೆನ್ಸಸ್' ಎಂದು ಬದಲಾಗಿದೆ. ಹಿರಿಯ ನಾಯಕ ಬಸನಗೌಡ ಯತ್ನಾಳ ಬಿವೈವಿ ವಿರುದ್ಧ ಹಿಂದಿನಿಂದಲೂ ವಾಗ್ದಾಳಿ ನಡೆಸುತ್ತಲೇ ಬಂದಿದ್ದಾರೆ. ಇದೀಗ ಪಕ್ಷದ ಇನ್ನೊಬ್ಬ ಹಿರಿಯ ನಾಯಕ ಸುನಿಲ್ ಕುಮಾರ್ ಪಕ್ಷದ ಪ್ರಧಾನ ಕಾರ್ಯದರ್ಶಿ ಸ್ಥಾನ ತೊರೆಯಲು ಮುಂದಾಗಿದ್ದಾರೆ ಎನ್ನಲಾಗುತ್ತಿದೆ. ಹಾಸನದಲ್ಲಿ ಯುವ ನಾಯಕ ಪ್ರೀತಂ ಗೌಡ ಬಿಜೆಪಿ ತೊರೆದು ಕಾಂಗ್ರೆಸ್ ಸೇರುವ ತವಕದಲ್ಲಿದ್ದಾರೆ. ಬಿಜೆಪಿ ಕಾರ್ಯಕರ್ತರು ನಾಯಕರ ಜಗಳ ಕಂಡು ಭ್ರಮನಿರಶನಗೊಂಡಿದ್ದರೆ ಅಚ್ಚರಿ ಇಲ್ಲ.

## ಸೊಂಪಾದಕೀಯ

# 'ಬಣ' 'ಗುಟ್ಟು'ತ್ತಿರುವ ಬಿಜೆಪಿ

ರಾಜ್ಯ ಬಿಜೆಪಿಯಲ್ಲಿ ಮತ್ತೆ ಅಪಸ್ವರದ್ದೇ ಮೇಲುಗೈ ಆಗಿದೆ. ಇತ್ತೀಚೆಗೆ ಸಿದ್ದರಾಮಯ್ಯ ಸರಕಾರದ ವಿರುದ್ಧ ಗುಟುರು ಹಾಕುತ್ತಿದ್ದ ಬಿಜೆಪಿ ನಾಯಕರಿಗೆ ಇದರಿಂದ ಕೊಂಚ ಹಿನ್ನಡೆ ಉಂಟಾದಂತಿದೆ. ಹಾಗಾಗಿ ಕಾಂಗ್ರೆಸ್ ಸರಕಾರದ ವಿರುದ್ಧ ಗುಟುರು ಹಾಕೋದನ್ನು ಕಡಿಮೆ ಮಾಡಿ, ತಮ್ಮ ಪಕ್ಷದಲ್ಲಿ ಬಣಗುಟ್ಟುತ್ತಿರುವವರ ಗುಟ್ಟು ತಿಳಿಯಲು ಹರಸಾಹಸ ಮಾಡುವಂತಾಗಿದೆ. ರೆಬೆಲ್ ಶಾಸಕ ಎಂದೇ ಹೆಸರಾಗಿರುವ ಬಸನಗೌಡ ಪಾಟೀಲ್ ಯತ್ನಾಳ್ ಬಹಳ ದಿನಗಳಿಂದ ಬಿಜೆಪಿಯಲ್ಲಿ ತಮ್ಮದೇ ಬಣ ಸೃಷ್ಟಿ ಮಾಡಿಕೊಂಡು ಪಕ್ಷದ ವಿರುದ್ಧ ಹೇಳಿಕೆಗಳನ್ನು ಕೊಡುತ್ತಾ ಇರೋದು ಎಲ್ಲರಿಗೂ ಗೊತ್ತು. ಆದರೆ ಅವರನ್ನು ಸಹಿಸಿಕೊಂಡು ಬಿಜೆಪಿ ಹೈಕಮಾಂಡ್ ಯಾಕೆ ಸುಮ್ಮನಿದೆ ಅನ್ನೋದು ಮಾತ್ರ ಯಾರಿಗೂ ಗೊತ್ತಿಲ್ಲ. ಈಗ ಬಸನಗೌಡ ಪಾಟೀಲ್ ಅವರಿಗೆ ಇನ್ನೊಬ್ಬ ಶಾಸಕ ರಮೇಶ್ ಜಾರಕಿಹೊಳಿ ಕೂಡ ಸಾಥ್ ನೀಡುತ್ತಿದ್ದಾರೆ. ಪಕ್ಷದಲ್ಲಿ ಇರೋರು, ತಮ್ಮದೇ ಪಕ್ಷದ ಬಗ್ಗೆ ಆಗಾಗ ಅಸಮಾಧಾನ ವ್ಯಕ್ತಪಡಿಸೋದು ಕಾಮನ್. ಆದರೆ ಹಾಗೆ ಮಾತನಾಡಿದವರು ಹೈಕಮಾಂಡ್ ಭಯದಿಂದಲೋ ಅಥವಾ ಇನ್ಯಾವ ಒತ್ತಡಕ್ಕೋ, ನಾನು ಹೇಳಿದ್ದು ಹಾಗಲ್ಲ, ಹೀಗೆ ಅಂತ ತಿಪ್ಪೆ ಸಾರಿಸೋದನ್ನು ನಾವು ನೋಡಿದ್ದೇವೆ. ಆದರೆ ರಮೇಶ್ ಜಾರಕಿಹೊಳಿ ಸಾಫ್ಟ್ ಆಗಿಯೂ ಮಾತಾಡುತ್ತಿಲ್ಲ ಅಥವಾ ನಿನ್ನೆ ಹೇಳಿದ್ದನ್ನು ಇವತ್ತು ಅಲ್ಲಗಳೆದು ಜಾರಿಕೊಳ್ಳುವ ಕೆಲಸವನ್ನೂ ಮಾಡುತ್ತಿಲ್ಲ. ಬದಲಾಗಿ ನೇರವಾಗಿ ತಮ್ಮ ಪಕ್ಷ ಮತ್ತು ಅದರ ರಾಜ್ಯಾಧ್ಯಕ್ಷರ ವಿರುದ್ಧ ಕೆಂಡ ಕಾರುತ್ತಿದ್ದಾರೆ. ಯಡಿಯೂರಪ್ಪ ಪುತ್ರ ವಿಜಯೇಂದ್ರ, ಜಾರಕಿಹೊಳಿ ಅವರ ನೇರ ಟಾರ್ಗೆಟ್ ಆಗಿದ್ದಾರೆ. ಹಾಗಾಗಿ ಶಿಸ್ತಿನ ಪಕ್ಷ ಅಂತ ಹೇಳಿಕೊಳ್ಳುತ್ತಿದ್ದ ಬಿಜೆಪಿಗೆ ಈಗ ಇದೇನು ಪರಿಸ್ಥಿತಿ ಬಂತು ನೋಡಿ ಅಂತ ಕಾಂಗ್ರೆಸ್ ಪಕ್ಷದವರು ಆಡಿಕೊಳ್ಳಲು ಅವಕಾಶ ಸಿಕ್ಕಿದಂತಾಗಿದೆ. ಈ ಬಣ ಸಂಘರ್ಷಕ್ಕೆ ಕಡಿವಾಣ ಹಾಕಲು ರಾಜ್ಯ ಉಸ್ತುವಾರಿ ಸಮ್ಮುಖದಲ್ಲಿ ಸಭೆ ನಡೆದಿದೆ. ಆದರೆ, 'ಬಣಕಾರರು' ಅತ್ತ ಮುಖವನ್ನೇ ಮಾಡಿಲ್ಲ ಅನ್ನೋದು ಈಗ ಸುದ್ದಿ. ಜಾರಕಿಹೊಳಿ ಈ ಸಭೆಗೆ ಹೋಗದೆ ಜಾರಿಕೊಂಡಿದ್ದರೆ, ಯತ್ನಾಳ್ ಕೂಡ ಆ ಕಡೆ ತಲೆ ಹಾಕುವ ಯತ್ನವನ್ನೇ ಮಾಡಿಲ್ಲ. ಅವರ ಜತೆಗೆ ಶಿವರಾಮ ಹೆಬ್ಬಾರ್ ಮತ್ತು ಎಸ್.ಟಿ.ಸೋಮಶೇಖರ್ ಕೂಡ ಗೈರು ಹಾಜರಾಗಿದ್ದಾರೆ. ಇದು ರಾಜ್ಯ ಬಿಜೆಪಿಯನ್ನು ಕಂಗೆಡಿಸಿರೋದಂತೂ ಸತ್ಯ.

## ಸಂಪಾದಕರ ಸದ್ಯಶೋಧನೆ

# ಪ್ರವಾಸಿ ತಾಣಗಳಾದ ಮ್ಯಾನ್ ಹೋಲ್ !

ಜಪಾನಿನ ಬೀದಿಗಳಲ್ಲಿ ಓಡಾಡುವಾಗ, ಅಲ್ಲಿನ ಒಳಚರಂಡಿಗಳ ಮ್ಯಾನ್ ಹೋಲ್ ಮುಚ್ಚಳ ಸಾಮಾನ್ಯವಾಗಿ ಗಮನ ಸೆಳೆಯದೇ ಹೋಗುವುದಿಲ್ಲ. ನಾನು ಟೋಕಿಯೋದಲ್ಲಿ ಉಳಿದುಕೊಂಡ ಹೋಟೆಲಿನ ಸುತ್ತಮುತ್ತ ಬೆಳಗ್ಗೆ ವಾಕಿಂಗ್ ಹೋದಾಗ, ಬಣ್ಣ ಬಣ್ಣದ ಚಿತ್ರಗಳಿರುವ ಒಂದು ಮ್ಯಾನ್ ಹೋಲ್ ಮುಚ್ಚಳ ಕಣ್ಣಿಗೆ ಬಿತ್ತು. ಇದು ಯಾವನೋ ಕೆಲಸವಿಲ್ಲದನ ಕೈಚಳಕವಿದ್ದಿರಬಹುದು ಎಂದು ಅಂದುಕೊಂಡೆ.

ಸುಮಾರು ನೂರು ಅಡಿ ಮುಂದೆ ಹೋಗುತ್ತಿದ್ದಂತೆ, ಇನ್ನೊಂದು ಮ್ಯಾನ್ ಹೋಲ್ ಮುಚ್ಚಳದ ಮೇಲೆ ಸುಂದರ ಚಿತ್ರ ಕಾಣಿಸಿತು. ಅದರ ಮೇಲೆ ಸೊಂಡಿಲು ಎತ್ತಿದ ಆನೆಯ ಚಿತ್ರವಿತ್ತು. ಅದು ಉಕ್ಕಿನ ಮುಚ್ಚಳ. ನಂತರ ತುಸು ದೂರ ಕ್ರಮಿಸಿದ ಬಳಿಕ ಕಂಡ ಮತ್ತೊಂದು ಮ್ಯಾನ್ ಹೋಲ್ ಮುಚ್ಚಳವೂ ಸುಂದರ ಚಿತ್ತಾರಗಳಿಂದ ಆಕರ್ಷಕವಾಗಿತ್ತು. ಇದೇನು ಈ ದೇಶದ ಮ್ಯಾನ್ ಹೋಲ್ ಮುಚ್ಚಳಗಳೂ ಇಷ್ಟೊಂದು ಸುಂದರವಾಗಿದೆಯಲ್ಲ ಅಂತ ಅಂದುಕೊಂಡು ನನ್ನ ಪಾಡಿಗೆ ಹೋಟೆಲಿಗೆ ಬಂದು, ನಮ್ಮ ಗೈಡ್ ಗೆ ಕೇಳಿದರೆ ಆಕೆ ಮ್ಯಾನ್ ಹೋಲ್ ಮುಚ್ಚಳಗಳ ಬಗ್ಗೆ ದೊಡ್ಡ ಪುರಾಣವನ್ನೇ ಬಿಚ್ಚಿಟ್ಟಳು.'' ಜಪಾನಿನ ರಸ್ತೆಗಳು ಕೇವಲ ವಾಹನ ಅಥವಾ ಮನುಷ್ಯರ ಸಂಚಾರಕ್ಕೆ ಸೀಮಿತವಾದ ಸ್ಥಳವಲ್ಲ, ಅದು ಕಲೆ ಮತ್ತು ವಿನ್ಯಾಸವನ್ನು ಪ್ರತಿನಿಧಿಸುವ ಸ್ಥಳವೂ ಹೌದು. ಮನೆಗಳಿಗೆ ನೀರು, ತ್ಯಾಜ್ಯ ನಿರ್ವಹಣೆ ಮತ್ತು ಪೈಪ್‌ಲೈನ್ ವ್ಯವಸ್ಥೆಗಳನ್ನು ನಿರ್ವಹಿಸಲು ಬಳಸುವ ಒಳಚರಂಡಿಗಳ ಮ್ಯಾನ್ ಹೋಲ್ ಮುಚ್ಚಳಗಳು ಇಲ್ಲಿನ ಜನಜೀವನದ ಕಲಾಕೃತಿಗಳಾಗಿವೆ'' ಎಂದಾಗ ನಿಜಕ್ಕೂ ಅಚ್ಚರಿಯಾಯಿತು. ಜಗತ್ತಿನ ಯಾವುದೇ ದೇಶದ, ಯಾವುದೇ ನಗರಗಳಿಗೆ ಹೋದರೂ ಮ್ಯಾನ್ ಹೋಲುಗಳನ್ನು ನೋಡಬಹುದು. ಸಾಮಾನ್ಯವಾಗಿ ಎಲ್ಲೆಡೆ ಸುಣ್ಣ-ಬಣ್ಣ ಕಾಣದ, ತುಕ್ಕು ಹಿಡಿದ ಸ್ಥಿತಿಯಲ್ಲಿರುವ ಮುಚ್ಚಳಗಳನ್ನು ನೋಡಬಹುದು. ಆದರೆ ಮ್ಯಾನ್ ಹೋಲ್ ಮುಚ್ಚಳಕ್ಕೂ ಕಲಾಕೃತಿಯ ಲೇಪ, ಪ್ರಾಮುಖ್ಯ ನೀಡಿರುವುದು ಜಪಾನಿನಲ್ಲಿ ಮಾತ್ರವೇನೋ. ನಗರ ಸೌಂದರ್ಯವನ್ನು ವೃದ್ಧಿಸಲು ರಸ್ತೆಗಳು ಎಷ್ಟು ಮುಖ್ಯವೋ, ರಸ್ತೆಗೆ ಹೊಂದಿಕೊಂಡಿರುವ ಮ್ಯಾನ್ ಹೋಲ್ ಮುಚ್ಚಳಗಳೂ ಅಷ್ಟೇ ಮುಖ್ಯ ಎಂಬ ಅಂಶವನ್ನು ಜಪಾನಿನ ಪುರಪಿತೃಗಳು ಅರ್ಥ ಮಾಡಿಕೊಂಡಿದ್ದು ಹೆಮ್ಮೆಪಡುವಂಥದ್ದು. 1970ರ ದಶಕದಲ್ಲಿ ಜಪಾನ್‌ನಲ್ಲಿ ಮ್ಯಾನ್ ಹೋಲ್ ಮುಚ್ಚಳಗಳನ್ನು ವಿನೂತನವಾಗಿ ವಿನ್ಯಾಸಗೊಳಿಸುವ ಪರಿಕಲ್ಪನೆ ಆರಂಭವಾಯಿತು. ಆಗ ಟೋಕಿಯೋ ತನ್ನ ಜಲಮಂಡಳಿಯನ್ನು ಮರು ನಿರ್ಮಿಸುವ ದೊಡ್ಡ ಯೋಜನೆಯನ್ನು ಕೈಗೊಂಡಿತ್ತು. ಜನರಿಗೆ ಈ ವ್ಯವಸ್ಥೆಯ ಪ್ರಾಮುಖ್ಯವನ್ನು ವಿವರಿಸಲು ಮತ್ತು ಯೋಜನೆಯ ಬಗ್ಗೆ ಆಸಕ್ತಿ ಹುಟ್ಟಿಸಲು, ಸರಕಾರವು ಮ್ಯಾನ್ ಹೋಲ್ ಮುಚ್ಚಳಗಳನ್ನು ಕಲಾತ್ಮಕವಾಗಿ ವಿನ್ಯಾಸಗೊಳಿಸಲು ನಿರ್ಧರಿಸಿತು.

ಇದನ್ನು ಸರಕಾರ ಕೇವಲ ಉಪಯುಕ್ತತೆಯ ದೃಷ್ಟಿಯಿಂದ ನೋಡದೇ, ಸ್ಥಳೀಯ ಸಂಸ್ಕೃತಿಯನ್ನು ಪ್ರತಿನಿಧಿಸುವ ಸಂಕೇತಗಳಾಗಿ ಪರಿಗಣಿಸಿದರೆ, ಜನರಲ್ಲಿ ಮ್ಯಾನ್ ಹೋಲ್ ಬಗ್ಗೆ ಹೆಚ್ಚಿನ ಜಾಗೃತಿ ಮತ್ತು ಗೌರವ ಹೆಚ್ಚಾಗುತ್ತದೆ ಎಂದು ಭಾವಿಸಿತು. ಅದಾಗಿ ಮೂರು ವರ್ಷಗಳಲ್ಲಿ ' ಜಪಾನ್ ಸೊಸೈಟಿ ಆಫ್ ಮ್ಯಾನ್ ಹೋಲ್ ಕವರ್ಸ್' ಎಂಬ ಸಂಸ್ಥೆ ಅಸ್ತಿತ್ವಕ್ಕೆ ಬಂದಿತು. ಮ್ಯಾನ್ ಹೋಲ್ ಮೇಲೆ ಯಾವ ಚಿತ್ರವಿರಬೇಕು, ಅದನ್ನು ಹೇಗೆ ವಿನ್ಯಾಸಗೊಳಿಸಬೇಕು, ಯಾವ ಬಣ್ಣ ಮಿಶ್ರಣವಿದ್ದರೆ ಚೆಂದವಾಗಿ ಕಾಣುತ್ತದೆ... ಮುಂತಾದವುಗಳನ್ನು ನಿರ್ಧರಿಸಿ ಜಾರಿಗೆ ತರುವ ಹೊಣೆಗಾರಿಕೆಯನ್ನು ಆ ಸಂಸ್ಥೆಗೆ ವಹಿಸಲಾಯಿತು. ಮ್ಯಾನ್ ಹೋಲ್ ಗಳನ್ನು ನಿರ್ಮಿಸುವಾಗ ದೀರ್ಘಕಾಲದಲ್ಲಿ ವಿನ್ಯಾಸಗಳು ನಾಶವಾಗದಂತೆ ಗುಣಮಟ್ಟದ ಲೋಹಗಳನ್ನು ಬಳಸುವುದು, ವಿನ್ಯಾಸಗಳು ಎದ್ದು ಕಾಣುವಂತೆ ಬಣ್ಣಗಳನ್ನು ಆಯ್ಕೆ ಮಾಡುವುದು, ಸ್ಥಳೀಯ ಕಲೆ ಮತ್ತು ಇತಿಹಾಸವನ್ನು ಪ್ರತಿನಿಧಿಸುವ ಚಿತ್ರಗಳನ್ನು ಆಯ್ಕೆ ಮಾಡುವುದು... ಈ ಎಲ್ಲ ಆಯ್ಕೆಗಳನ್ನು ಆ ಸಂಸ್ಥೆಯೇ ನಿರ್ಧರಿಸುತ್ತದೆ. ಜಪಾನಿನ ಮ್ಯಾನ್ ಹೋಲ್ ಕವರ್‌ಗಳನ್ನು ವೈಜ್ಞಾನಿಕವಾಗಿ ಮತ್ತು ಅತ್ಯಂತ ಶ್ರದ್ಧೆಯೊಂದಿಗೆ ತಯಾರಿಸುವುದು ವಿಶೇಷ. ಪ್ರತಿ ಕವರ್‌ನ್ನು ವಿನ್ಯಾಸಗೊಳಿಸಲು ತಜ್ಞ ಕಲಾವಿದರನ್ನು ನೇಮಿಸಲಾಗುತ್ತದೆ. ಆರಂಭದಲ್ಲಿ, ಕಾಗದದಲ್ಲಿ ಚಿತ್ತಾರ ಅಥವಾ ಡಿಜಿಟಲ್ ಆಕೃತಿಗಳನ್ನು ರಚಿಸಲಾಗುತ್ತದೆ. ನಂತರ ಈ ವಿನ್ಯಾಸವನ್ನು ಕಾಸ್ಟ್ ಐರನ್ ಮೇಲೆ ಕೆತ್ತಲಾಗುತ್ತದೆ. ಅಲ್ಲಿನ ಮ್ಯಾನ್ ಹೋಲ್ ಗಳನ್ನು ಕೂಡ ಪ್ರವಾಸಿ ತಾಣಗಳಾಗಿ ಅಭಿವೃದ್ಧಿಪಡಿಸಲಾಗಿದೆ ಅಂದ್ರೆ ಸೋಜಿಗವಾಗಬಹುದು.

---

# ಒಂದು ಮರದ ಕೊಂಬೆ ಅಲ್ಲಾಡಿಸಿದ್ದಕ್ಕೆ ಕ್ಯಾತೆ ತೆಗೆದಿದ್ದ ಜಪಾನಿಯರು!

**ನೂರೆಂಟು ವಿಶ್ವ**

ವಿಶ್ವೇಶ್ವರ ಭಟ್
vbhat@me.com

ಟೋಕಿಯೋದ ಶಾಪಿಂಗ್ ಮಾಲ್‌ನ ಒಂದೆಡೆ ಅಕ್ಕಪಕ್ಕದಲ್ಲಿ ಕೆಂಟುಕಿ ಫ್ರೈಡ್ ಚಿಕನ್ (ಕೆಎಫ್‌ಸಿ), ಸ್ಟಾರ್ ಬಕ್ಸ್, ಮೆಕ್ ಡೊನಾಲ್ಡ್, ಮಿಸ್ಟರ್ ಡೋನಟ್, ಬರ್ಗರ್ ಕಿಂಗ್ ಮತ್ತು ಪಿಜ್ಜಾ ಹಟ್ ಔಟ್‌ಲೆಟ್‌ಗಳಿದ್ದವು. ಇವೆಲ್ಲವೂ ಅಮೆರಿಕ ಮೂಲದ ಫಾಸ್ಟ್ ಫುಡ್ ಬಹುರಾಷ್ಟ್ರೀಯ ಕಂಪನಿಗಳು ತಾನೇ. ಪ್ರಾಯಶಃ ಇವು ಇಲ್ಲದ ದೇಶಗಳಿರಲಿಕ್ಕಿಲ್ಲ. ಅಮೆರಿಕದಲ್ಲಿ ಸರಕಾರಿ ಕಚೇರಿ ಬಾಗಿಲು ಮುಚ್ಚಿದರೆ ಯಾರೂ ತಲೆ ಕೆಡಿಸಿಕೊಳ್ಳುವುದಿಲ್ಲ. ಆದರೆ ಈ ಫಾಸ್ಟ್‌ಫುಡ್ ಅಂಗಡಿಗಳೇನಾದರೂ ಮುಚ್ಚಿದರೆ ಹಾಹಾಕಾರ ಗ್ಯಾರಂಟಿ. ನಾನು ಕುತೂಹಲದಿಂದ ಈ ಫಾಸ್ಟ್‌ಫುಡ್ ಅಂಗಡಿಗಳ ಮುಂದೆ ನಿಂತು ಆಕರ್ಷಕ ಚಿತ್ರಗಳ display ಗಳೊಂದಿಗೆ ಅವುಗಳ ಮೆನು ನೋಡುತ್ತಿದ್ದೆ. ಮೆಕ್ ಡೊನಾಲ್ಡ್ ಔಟ್ ಲೆಟ್‌ನಲ್ಲಿ ವೆಜಿಟೇಬಲ್ ಜ್ಯೂಸು, ರೋಸ್ ಹಿಪ್ - ಹೈಬಿಸ್ಕಸ್ ಟೀ, ಕಾರ್ನ್ ಪೊಟೇಜ್ ಸೂಪ್ ಲಭ್ಯ ಎಂಬ ಫಲಕ ಕಾಣಿಸಿತು!

ಇವ್ಯಾವವೂ ಅಮೆರಿಕದಲ್ಲಿ ಸಿಗಲಿಕ್ಕಿಲ್ಲ. ಕಾರಣ ಇವೆಲ್ಲ ಅಪ್ಪಟ ಜಪಾನೀ ಆಹಾರಗಳು. ಕೆಎಫ್‌ಸಿ ಅಂಗಡಿಯ ಮುಂದೆ ಟೊಕುಮಾರಿ ಫಿಶ್ ಕೇಕ್, ಚೈನೀಸ್ ಕೇಕ್, ಬೇಕನ್ ಆ ಗ್ರೆಟಿನ್ ಸಿಗುವುದೆಂಬ ಬೋರ್ಡ್ ಇತ್ತು. ಇವೂ ಸಹ ಶುದ್ಧ ಜಪಾನಿ ಖಾದ್ಯಗಳೇ. ಇಟಾಲಿಯನ್ ಫಾಸ್ಟ್ ಫುಡ್ ಔಟ್‌ಲೆಟ್ ಮುಂದೆ 'ಜಪೋಲಿಟನ್' ಫುಡ್ ಲಭ್ಯ ಎಂಬ ಬೋರ್ಡ್ ಇತ್ತು. ಇದೇನಿದು ಜಪೋಲಿಟನ್ ಅಂತ ವಿಚಾರಿಸಿದರೆ, ಜಪಾನೀ ಮತ್ತು ಇಟಾಲಿಯನ್ ಎರಡೂ ಆಹಾರಗಳು ಸೇರಿ ಹಾಗೆ (ಜಪೋಲಿಟನ್) ಆಗಿದ್ದವು. ಇಟಾಲಿಯನ್ ಖಾದ್ಯಗಳೆಲ್ಲ ತಮ್ಮ ವ್ಯಕ್ತಿತ್ವ ಕಳೆದುಕೊಂಡು ಜಪಾನೀಸ್ ಆಹಾರಗಳಾಗಿದ್ದವು. ಅಪ್ಪಟ ಮಲೆನಾಡಿನ ಪತ್ರೊಡೆ, ಸುಟ್ಟೇವು, ತೊಡೆದೇವು, ಗೆಣಸಲೆ..ಗಳನ್ನೂ ಜಪಾನಿಯರು ಅದರ ಮೂಲ ಸ್ವರೂಪ ಮತ್ತು ರುಚಿಯನ್ನು ಬೇರೆ ಮಾಡಿ ಅದಕ್ಕೆ ತಮ್ಮದೇ ಒಗ್ಗರಣೆ ಹಾಕಿ, ಜಪಾನೀ ಹೆಸರಿಟ್ಟು ತಮ್ಮದೇ ಆಹಾರವನ್ನಾಗಿ ಮಾಡಿಕೊಳ್ಳಬಲ್ಲರು.

ಅಂದ ಹಾಗೆ, ಜಪಾನಿನಲ್ಲಿ ಒಂದು ಮಾತಿದೆ - In Japan, nothing seems so foreign and everything is Japanese. ಜಪಾನಿಯರು ತಮ್ಮ ದೇಶದಲ್ಲಿ ಏನೇ ವಿದೇಶಿ ಅಂಶಗಳನ್ನು ಕಂಡರೂ, ಅದನ್ನು ತಮ್ಮದನ್ನಾಗಿಸಿಕೊಳ್ಳುವ ತನಕ ವಿರಮಿಸುವುದಿಲ್ಲ. ಜಪಾನಿತನ ಅವರ ರಕ್ತದಲ್ಲಿದೆ. ಮೊದಲನೆಯದಾಗಿ ಅವರು ಎರವಲು ಸಂಸ್ಕೃತಿಯನ್ನು ಇಷ್ಟಪಡುವುದಿಲ್ಲ. ಆದರೆ ಎರವಲು ಅನಿವಾರ್ಯವಾದರೆ, ಅದನ್ನು ಹೇಗೆ ತಮ್ಮದನ್ನಾಗಿ ಮಾಡಿಕೊಳ್ಳುವುದು ಎಂದು ಯೋಚಿಸುತ್ತಾರೆ. ಇದು ಆಹಾರ ಪದಾರ್ಥಗಳಿಗೆ ಮಾತ್ರ ಸೀಮಿತವಲ್ಲ. ತಂತ್ರಜ್ಞಾನಕ್ಕೂ ಈ ಮಾತು ಅನ್ವಯ.

ಅಮೆರಿಕದ ಅಥವಾ ಯುರೋಪಿನ ಉತ್ತಮ ಗುಣಗಳನ್ನು ಹೀರಿಕೊಳ್ಳಲು ಜಪಾನಿಯರು ಹಿಂದೇಟು ಹಾಕುವುದಿಲ್ಲ. ಆದರೆ ಅಂಧಾನುಕರಣೆಯನ್ನು ಸಹಿಸಿಕೊಳ್ಳುವುದಿಲ್ಲ. ಜಪಾನಿನ ಮೇಲೆ ಚೀನಾದ ಗಾಢವಾದ ಪ್ರಭಾವವಿದೆ. ಹಾಗಂತ ತಮ್ಮ ದೇಶವನ್ನು ಚೀನಾದ ನಕಲು ಪ್ರತಿಯನ್ನಾಗಿ ಮಾಡಿಲ್ಲ. ಚೀನಾ ಮತ್ತು ಜಪಾನಿಗೆ ಅಲ್ಲಲ್ಲಿ ಸಾಮ್ಯ ಕಂಡರೂ, ಜಪಾನಿಯರು ತಮ್ಮ ಅಸ್ಮಿತೆಯನ್ನು ಕಾಪಾಡಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ. ಅಮೆರಿಕ ಮತ್ತು ಚೀನಾ ಇಂದು ಎಲ್ಲ ರಂಗಗಳಲ್ಲೂ ಜಾಗತಿಕ 'ಹಿರಿಯಣ್ಣ'ನ ಸ್ಥಾನಗಳನ್ನು ಗಳಿಸಿಕೊಂಡಿವೆ. ತಂತ್ರಜ್ಞಾನ ಮತ್ತು ಸುಧಾರಿತ ಜೀವನ ವ್ಯವಸ್ಥೆಯನ್ನು ಅಳವಡಿಸಿಕೊಂಡಿದ್ದಾರೆ. ಆದರೂ ಅಮೆರಿಕನ್ನರು ಮತ್ತು ಚೀನಿಯರು ಜಪಾನಿಗೆ ಬಂದರೆ ಒಂದು ಕ್ಷಣ Cultural Shock ನಿಂದ ಅವಾಕ್ಕಾಗುತ್ತಾರೆ. ಜಪಾನಿನಲ್ಲಿರುವ ಅತಿಯಾದ ಸ್ವಚ್ಛತೆಯೂ ಅಮೆರಿಕನ್ನರನ್ನು ಗರಬಡಿಯುವಂತೆ ಮಾಡುತ್ತದೆ.

ಜಪಾನಿಯರ ಮೆಂಟಾಲಿಟಿ ಬಹಳ ವಿಚಿತ್ರ. ಅವರು ಪ್ರತಿಯೊಂದರಲ್ಲೂ ಶ್ರೇಷ್ಠತೆಯನ್ನು, ಪರಿಪೂರ್ಣತೆಯನ್ನು ಕಾಣುವವರು. ಅಗ್ಗದ ದರಕ್ಕೆ ಮುಗ್ಗಲು ಅಕ್ಕಿ ಸಿಗುವುದೆಂದು ಅದನ್ನು ತಿನ್ನುವ ಮನೋಭಾವದವರಲ್ಲ. ಟೋಕಿಯೋ ಪ್ರಪಂಚದಲ್ಲಿಯೇ ಅತ್ಯಂತ ಜನನಿಬಿಡ ನಗರ. ಆದರೆ ಇಡೀ ನಗರವನ್ನು ಅವರು ಕೊಳಗೇರಿಗಳನ್ನಾಗಿ ಮಾಡಿಲ್ಲ. ನಗರ ಜೀವನದ ಎಲ್ಲ ಅನಿಷ್ಟಗಳನ್ನು ಸುರುವಿಕೊಂಡು functional anarchy ಯನ್ನಾಗಿ ಮಾಡಿಲ್ಲ. ನ್ಯೂಯಾರ್ಕ್ ನಗರಕ್ಕಿಂತ ಸುಂದರವಾಗಿಟ್ಟುಕೊಂಡಿದ್ದಾರೆ. 'ನಮ್ಮನ್ನು ನ್ಯೂಯಾರ್ಕಿಗೆ ಹೋಲಿಸಬೇಡಿ. ನಾವು ಅದಕ್ಕಿಂತ ಎಷ್ಟೋ ಪಾಲು ಚೆನ್ನಾಗಿದ್ದೇವೆ' ಎಂದು ಟೋಕಿಯೋವಾಸಿಗಳು ಅಭಿಮಾನದಿಂದ ಹೇಳುತ್ತಾರೆ. ಟೋಕಿಯೋ ಜಗತ್ತಿನಲ್ಲಿಯೇ ಸುರಕ್ಷಿತ ನಗರ. ಅಲ್ಲಿ ಕ್ರೈಂ ರೇಟ್ ಇಲ್ಲ ಎನ್ನುವಷ್ಟು ಕಮ್ಮಿ. ಇದಕ್ಕಾಗಿ Tokyo is a very safe city. At night it becomes quiet the way New York never does ಎಂದು ಹೇಳುವುದುಂಟು.

ನಗರೀಕರಣದ ಎಲ್ಲ ಅಪಸವ್ಯಗಳನ್ನು ನುಂಗಿ ನೀರು ಕುಡಿದು ಜೀರ್ಣಿಸಿಕೊಂಡಿರುವ ಟೋಕಿಯೋ, ಒಂದು ಜನನಿಬಿಡನಗರ ಎಷ್ಟು ಸುಂದರವಾಗಿ ಇರಲು ಸಾಧ್ಯವಿದೆ ಎಂಬುದನ್ನು ತೋರಿಸಿಕೊಟ್ಟಿದೆ. ಇಡೀ ನಗರದಲ್ಲಿ ಒಂದು ಗುಲಗಂಜಿಯಷ್ಟು ಕಸವನ್ನು ಕಾಣಲು ಸಾಧ್ಯವಿಲ್ಲ. ಇಡೀ ನಗರದಲ್ಲಿ ಒಂದು ಸುತ್ತು ಹಾಕಿದರೆ, ಎಲ್ಲೂ ಅಸಹನೀಯ ಎನಿಸುವ ಯಾವ ಸಂಗತಿಗಳೂ ಗೋಚರಿಸುವುದಿಲ್ಲ. ಎಲ್ಲವೂ ಹೇಗಿರಬೇಕೋ, ಹಾಗೆ ಇವೆ. ಒತ್ತಡದ ನಗರ ಜೀವನದ ಮಧ್ಯೆಯೂ ಟೋಕಿಯೋವಾಸಿಗಳು ಸೌಜನ್ಯ, ಅಂತಃಕರಣವಿರುವ ಮನುಷ್ಯರಂತೆ ವರ್ತಿಸುತ್ತಿರುವುದು ಅಚ್ಚರಿ ಹುಟ್ಟಿಸುತ್ತದೆ. 3.71 ಕೋಟಿ ಜನ ವಾಸಿಸುವ ಟೋಕಿಯೋ ನಗರ, ಗಡಿಯಾರದ ಮುಳ್ಳುಗಳಂತೆ ಕರಾರುವಾಕ್ಕಾಗಿ ಅದರ ಪಾಡಿಗೆ ನಡೆಯುತ್ತಿರುತ್ತದೆ. ಆ ಜನದಟ್ಟಣೆಯಲ್ಲೂ ಎರಡಕ್ಕಿಂತ ಹೆಚ್ಚು ಜನ ಹೋಗುತ್ತಿದ್ದರೆ ಕ್ಯೂದಲ್ಲಿ ಸಾಗುತ್ತಾರೆ. ಸಣ್ಣ ಸಹಾಯ, ಉಪಕಾರಕ್ಕೂ ನಡುಬಗ್ಗಿಸಿ ಕೃತಜ್ಞತೆ ಸಲ್ಲಿಸಿ ಕೃತಾರ್ಥತೆ ಕಾಣುತ್ತಾರೆ. ಸಣ್ಣ ಅಚಾತುರ್ಯಕ್ಕೆ ಅದೇನೋ ದೊಡ್ಡ ಅಪರಾಧ ಮಾಡಿದವರಂತೆ ಪದೇ ಪದೆ ಕ್ಷಮೆಯಾಚಿಸಿ ಪ್ರಾಯಶ್ಚಿತ್ತ ಭಾವ ಮೆರೆಯುತ್ತಾರೆ.

ಯಾವುದೇ ಸಂಗತಿ ಹೇಗಿರಬೇಕೋ, ಹಾಗಿರಬೇಕು. ಹೇಗಿದ್ದರೂ ನಡೆದೀತು ಎಂಬುದಕ್ಕೆ ಜಪಾನಿನಲ್ಲಿ ಆಸ್ಪದವಿಲ್ಲ. ಒಂದು ನಗರ ಅಥವಾ ದೇಶದ ಚರಂಡಿಯ ಮುಚ್ಚಳ (ಮ್ಯಾನ್ ಹೋಲ್) ವೂ ಕಲಾತ್ಮಕವಾಗಿರಬೇಕು ಎಂದು ಜಪಾನಿಯರು ಯೋಚಿಸುವವರು. ಇಡೀ ನಗರದ ಮ್ಯಾನ್ ಹೋಲ್ ಮೇಲೆ ಯಾವ ರೀತಿ ಡಿಸೈನ್ ಇರಬೇಕು ಎಂಬುದನ್ನು Japan Society for Manhole Covers ಎಂಬ ಸಂಸ್ಥೆ ನಿರ್ಧರಿಸುತ್ತದೆ. ಅದು ಅನುಮೋದಿಸಿದ ವಿನ್ಯಾಸದ ಮ್ಯಾನ್ ಹೋಲ್ ಮುಚ್ಚಳವನ್ನೇ ಬಳಸಬೇಕು. ಅಂಥ ಸಣ್ಣ-ಪುಟ್ಟ ಸಂಗತಿಗಳ ಬಗ್ಗೆಯೂ ಜಪಾನಿಯರು ಎಚ್ಚರವಹಿಸುತ್ತಾರೆ. ಒಂದು ರಸ್ತೆಯನ್ನು ಅಗೆಯುವ ಪ್ರಸಂಗ ಬಂದರೆ ಅದನ್ನು ಹದಿನೆಂಟು ಗಂಟೆಯೊಳಗೆ ಮುಚ್ಚಿ, ಮೊದಲು ಹೇಗಿತ್ತೋ ಹಾಗೆ ಮಾಡಿಟ್ಟಿರಬೇಕು. ಅದಕ್ಕಿಂತ ಹೆಚ್ಚಿನ ಸಮಯ ಹಿಡಿದರೆ, ಆ ಪ್ರದೇಶದವಾಸಿಗಳಿಗೆ ಮುಂಚಿತವಾಗಿಯೇ ತಿಳಿಸಬೇಕು. ಇಂಥ ಸಂಗತಿಗಳ ಬಗ್ಗೆ ಕೂಡ ಅಲ್ಲಿನ ಆಡಳಿತ ಸಂವೇದಿಯಾಗಿದೆ ಅಂದರೆ ಅಲ್ಲಿ ಸ್ಥಾಪಿತವಾಗಿರುವ ಮನಸ್ಥಿತಿ ಅದೆಷ್ಟು ಸೂಕ್ಷ್ಮವಾಗಿರಬಹುದು ಎಂಬುದನ್ನು ಊಹಿಸಬಹುದು.

ಜಪಾನಿಯರ ಮನಸ್ಥಿತಿಯ ಪ್ರಧಾನ ತಂತು ಅಂದರೆ ಜೀವನಮಟ್ಟವನ್ನು ದಿನದಿಂದ ದಿನಕ್ಕೆ ಉತ್ತಮಪಡಿಸಿಕೊಳ್ಳಲು ಶ್ರಮಿಸುವುದು. ಒಂದು ವ್ಯವಸ್ಥೆಯಲ್ಲಿ ದೋಷವಿದೆ ಎಂಬುದು ಕಂಡುಬಂದರೆ ಅದನ್ನು ಅವರು ತಕ್ಷಣ ಬದಲಿಸುತ್ತಾರೆ ಅಥವಾ ಸುಧಾರಿಸುತ್ತಾರೆ. ಯಾವ ಕಾರಣಕ್ಕೂ ಅದನ್ನು ಒಪ್ಪಿಕೊಳ್ಳುವುದಿಲ್ಲ. ಅವ್ಯವಸ್ಥೆಗೇ ಒಗ್ಗಿಕೊಳ್ಳುವುದಿಲ್ಲ. ಟೋಕಿಯೋದಲ್ಲಿರುವ ನನ್ನ ಸ್ನೇಹಿತರೊಬ್ಬರು ಹೇಳಿದ್ದು - If transportation technology was moving along as fast as microprocessor technology, then the day after tomorrow I would be able to get in a taxi cab and be in Tokyo in 30 seconds. ಜಪಾನಿಯರು ಅದನ್ನೂ ಸಾಧಿಸಬಲ್ಲರು. ನಮ್ಮಲ್ಲಿ ದುರಸ್ತಿಗೆಂದು ರಸ್ತೆ ಅಗೆದು ಒಂದು ವರ್ಷವಾದರೂ ಅದನ್ನು ಸರಿಪಡಿಸಿರುವುದಿಲ್ಲ. ರಸ್ತೆಯಲ್ಲಿರುವ ಹೊಂಡಗಳನ್ನು ಮುಚ್ಚಿರುವುದಿಲ್ಲ. ಇಂಥ ಅಸಹ್ಯಗಳನ್ನು ಅಲ್ಲಿ ನೋಡಲು ಸಾಧ್ಯವೇ ಇಲ್ಲ. ರಸ್ತೆಗಳಿಗೆ ಬಳಿದ ಬಣ್ಣ ಮಾಸಿದಾಗ, ತಕ್ಷಣ ಬಣ್ಣ ಬಳಿಯುವಂತೆ ಸೂಚಿಸುವ ಸೆನ್ಸರ್‌ಗಳನ್ನು ಅಭಿವೃದ್ಧಿಪಡಿಸಬೇಕು, ಅದೊಂದು ಕಾರಣಕ್ಕೆ ವಾಹನ ಚಾಲಕರಿಗೆ ಮತ್ತು ಪಾದಚಾರಿಗಳಿಗೆ ಸಮಸ್ಯೆಯಾಗಬಾರದು ಎಂದು ಯೋಚಿಸುವಷ್ಟು ಜಪಾನಿಯರು ಸಣ್ಣ ಸಂಗತಿಗಳ ಮೇಲೆ ಕಣ್ಣಿಡುವವರು. ಈ ಕಾರಣಕ್ಕಾಗಿಯೇ ಒಂದು ಬೀದಿ ದೀಪ ಕೆಟ್ಟು ಹೋದರೂ, ಅದನ್ನು ಅದೇ ದಿನ ಸರಿಪಡಿಸುತ್ತಾರೆ. ಕಂಬ ವಾಲಿದರೆ, ತಂತಿ ಜಗ್ಗಿದರೆ ತಕ್ಷಣ ಸರಿಪಡಿಸುತ್ತಾರೆ. ಹೀಗೆ ಸುಮ್ಮನೆ ನೋಡಿದರೂ ಎಲ್ಲೂ ಸಹ ಒಂದು ಸಣ್ಣ ದೋಷವನ್ನು ಕಂಡು ಹಿಡಿಯಲು ಸಾಧ್ಯವಿಲ್ಲ.

ಜನಜೀವನದ ಪ್ರತಿ ಅಂಶಗಳ ಬಗ್ಗೆಯೂ ಜಪಾನಿಯರು ಗಮನ ನೀಡುತ್ತಾರೆ. ಟೋಕಿಯೋ ನಗರದ ಟ್ಯಾಕ್ಸಿ ಚಾಲಕ, ಪ್ರಯಾಣಿಕರಿಗೆ ಬಾಗಿಲು ತೆರೆದು ಸ್ವಾಗತಿಸುವಷ್ಟು ಸೂಕ್ಷ್ಮ ಮನಸ್ಸಿನವನು. ಪ್ರಯಾಣ ಮುಗಿಸಿ, ನೀವು ನೋಟನ್ನು ನೀಡಿದರೆ ಅವನು ಒಂದೇ ಕೈಯಲ್ಲಿ ಸ್ವೀಕರಿಸುವುದಿಲ್ಲ. ಎರಡೂ ಕೈಯಲ್ಲಿ ತೆಗೆದುಕೊಂಡು, ಎರಡೂ ಕೈಗಳಲ್ಲಿ ಟ್ರೇ ಹಿಡಿದು ಅದರಲ್ಲಿ ಚಿಲ್ಲರೆ ಹಣವನ್ನು ಇಟ್ಟು ಕೊಡುತ್ತಾನೆ. ಆತ ಅಷ್ಟು ನಯ-ವಿನಯ, ಶಿಷ್ಟಾಚಾರ ಮತ್ತು ಮೃದು ಸ್ವಭಾವದವ. ಜಪಾನಿಯರು ಒಂದೇ ಕೈಯಲ್ಲಿ ಉಡುಗೊರೆಯನ್ನು ಕೊಡುವುದೂ ಇಲ್ಲ, ಸ್ವೀಕರಿಸುವುದೂ ಇಲ್ಲ.

ಬಹುಪಾಲು ಟ್ಯಾಕ್ಸಿ ಚಾಲಕರು ಜಪಾನಿ ಭಾಷೆಯಲ್ಲಿಯೇ ಮಾತಾಡುತ್ತಾರೆ. 2020ರ ಟೋಕಿಯೋ ಒಲಿಂಪಿಕ್ಸ್ ಸಂದರ್ಭದಲ್ಲಿ ಐವತ್ತು ಸಾವಿರ ಟ್ಯಾಕ್ಸಿ ಚಾಲಕರಿಗೆ ಇಂಗ್ಲಿಷ್‌ನಲ್ಲಿ ವ್ಯವಹರಿಸಲು ತರಬೇತಿ ನೀಡಲಾಯಿತು. ಆದರೆ ಇಂದಿಗೂ ಅಲ್ಲಿನ ಟ್ಯಾಕ್ಸಿ ಚಾಲಕರಿಗೆ ಚೂರುಪಾರು ಇಂಗ್ಲಿಷ್ ಬಂದರೂ, ಅರ್ಥವಾದರೂ ಅವರು ಮಾತಾಡುವುದು

ಜಪಾನೀ ಭಾಷೆಯಲ್ಲೇ. ಯಾವ ದೇಶದ ಜನ ಉಳಿದವುಗಳಿಗಿಂತ ತಮ್ಮ ಮಾತೃಭಾಷೆಯಲ್ಲೇ ಮಾತಾಡಲು, ವ್ಯವಹರಿಸಲು ಇಷ್ಟಪಡುತ್ತಾರೋ, ಅವರು ಹೆಚ್ಚು ಆತ್ಮವಿಶ್ವಾಸಿಗಳಾಗಿರುತ್ತಾರಂತೆ. ಜಪಾನಿಯರು ತಮಗೆ ಇಂಗ್ಲಿಷ್ ಬರುವುದಿಲ್ಲ ಎಂಬುದನ್ನು ಹೆಮ್ಮೆಯಿಂದ ಹೇಳುತ್ತಾರೆ. ಅದು ತಮ್ಮ ಆತ್ಮಬಲ ಎಂದು ಅವರು ಪರಿಗಣಿಸುತ್ತಾರೆ. ಇಂದು ಇಂಗ್ಲಿಷ್ ಭಾಷೆ ಆ ದೇಶದ ಎದೆಯಭಾಗವನ್ನು ಹೊಕ್ಕಿದ್ದರೂ, ಜಪಾನಿಯರ ಹೃದಯದೊಳಗಿಳಿದಿಲ್ಲ. ಜಪಾನೀ ಭಾಷೆಯ ಸಮಾಧಿಯ ಮೇಲೆ ಇಂಗ್ಲಿಷ್ ಅರಳುತ್ತಿಲ್ಲ. ಇಂದಿಗೂ ಅಲ್ಲಿ ಇಂಗ್ಲಿಷ್ ಒತ್ತಾಯದ, ಒತ್ತಡದ, ಒಲ್ಲದ ಮನದ ಭಾಷೆಯೇ.

ಯಾವ ದೇಶದ ಜನ ತನ್ನಿಂದಾಗಿ ಬೇರೆಯವರ ಖಾಸಗಿತನಕ್ಕೆ ಧಕ್ಕೆ ಬರುತ್ತದೆ ಎಂದು ಭಾವಿಸುತ್ತಾರೋ, ಅವರು ತಮ್ಮಷ್ಟೇ ಬೇರೆಯವರ ಖಾಸಗಿತನವನ್ನು ಗೌರವಿಸುತ್ತಾರೆಂದರ್ಥ. ಸಾರ್ವಜನಿಕ ಸ್ಥಳಗಳಲ್ಲಿ ಊರಿಗೇ ಕೇಳುವ ಹಾಗೆ ಮೊಬೈಲಿನಲ್ಲಿ ಗಟ್ಟಿದನಿಯಲ್ಲಿ ಮಾತಾಡುತ್ತಾ ಹೋಗುವುದಿಲ್ಲ. ರೈಲಿನಲ್ಲಿ ಸಂಚರಿಸುವಾಗಂತೂ ಮೊಬೈಲನ್ನು ಸೈಲೆಂಟ್ ಮೋಡ್‌ನಲ್ಲಿಯೇ ಇಟ್ಟಿರುತ್ತಾರೆ. ಕರೆಗಳು ಬಂದರೂ ಸ್ವೀಕರಿಸುವುದಿಲ್ಲ, ತೀರಾ ತುರ್ತು ಕರೆಯನ್ನು ಹೊರತುಪಡಿಸಿ. ಟ್ರೇನಿನಲ್ಲಿ ಕುಳಿತಾಗ ಆಹಾರಗಳನ್ನು ಸಹ ಸೇವಿಸುವುದಿಲ್ಲ. (ಭಾರತದಲ್ಲಿ ರೈಲಿನಲ್ಲಿಯೇ ಅಡುಗೆ ಮಾಡಿ ದಾಸೋಹ ಮಾಡುವ ಚಿತ್ರಣವನ್ನು ಒಮ್ಮೆ ಚಿತ್ರಿಸಿಕೊಳ್ಳಿ) ಇವನ್ನೆಲ್ಲ ಯಾರೋ ನಿಯಮ ಮಾಡಿ ಜಾರಿಗೆ ತಂದಿದ್ದಲ್ಲ. ಹಾಗೆ ಮಾಡಿದ್ದಿದ್ದರೆ ಅನೇಕರು ನಿತ್ಯವೂ ಉಲ್ಲಂಘಿಸಿರುತ್ತಿದ್ದರು ಅಥವಾ ಅವರನ್ನು ಕಾಯಲು ಪೊಲೀಸರನ್ನು ನೇಮಿಸಿರಬೇಕಾಗುತ್ತಿತ್ತು. ಆದರೆ ಈ ಎಲ್ಲ ಸಾರ್ವಜನಿಕ ವರ್ತನೆಗಳು, ಅಭ್ಯಾಸಗಳು, ಶಿಷ್ಟಾಚಾರಗಳು ಅವರಲ್ಲಿ ರಕ್ತಗುಣವಾಗಿ ಅಂತರ್ಗತವಾಗಿವೆ. ಮೂರ್ನಾಲ್ಕು ಜನರಿರುವ ಒಂದು ಮನೆಯಲ್ಲಿ ಜಾರಿಯಲ್ಲಿರುವ ನಿಯಮಗಳು ಉಲ್ಲಂಘನೆಯಾಗಬಹುದು, ಆದರೆ ಸಾರ್ವಜನಿಕವಾಗಿ ಯಾರೂ ಸ್ಥಾಪಿತ ನಿಯಮಗಳನ್ನು ಉಲ್ಲಂಘಿಸುವುದಿಲ್ಲ. ನಗರದ ನಿಯಮವನ್ನು ಉಲ್ಲಂಘಿಸುವುದು ಹೇಗೆ ಎಂದು ಯಾರೂ ಯೋಚಿಸುವುದಿಲ್ಲ. ಅವನ್ನು ಪಾಲಿಸುವುದು ಹೇಗೆ ಎಂದೇ ಬಯಸುತ್ತಾರೆ. ಟೋಕಿಯೋದಲ್ಲಿ 44 X 21 ಅಡಿ (ಅಂದರೆ 924 ಚದರ ಅಡಿ) ವಿಸ್ತೀರ್ಣದ ಜಾಗದಲ್ಲಿ ಇಪ್ಪತ್ತೊಂದು ಮಹಡಿ ಕಟ್ಟಡವನ್ನು ಕಾನೂನುಬದ್ಧವಾಗಿ ನಿರ್ಮಿಸಿರುವುದೇ ಇದಕ್ಕೊಂದು ನಿದರ್ಶನ.

ಜಪಾನಿಯರು ಹಬ್ಬ-ಹರಿದಿನಗಳ ಆಚರಣೆ ಪ್ರಿಯರು. ಆ ಸಂದರ್ಭದಲ್ಲಿ ಭಾರಿ ಸಂಖ್ಯೆಯಲ್ಲಿ ಜನ ಸೇರುತ್ತಾರೆ. ದೊಡ್ಡ ಪ್ರಮಾಣದ ಜನದಟ್ಟಣೆ ಸಾರ್ವಜನಿಕ ಸುವ್ಯವಸ್ಥೆಗೆ ಅಡ್ಡಿ-ಆತಂಕ ಆಗುವುದಿಲ್ಲ. ಧಾರ್ಮಿಕ ಆಚರಣೆ ಸಂದರ್ಭದಲ್ಲಿ ಐವತ್ತು ಸಾವಿರ ಜನ ಸೇರಿದರೆ, ಅವರನ್ನು ನಿಯಂತ್ರಿಸಲು ಹೆಚ್ಚೆಂದರೆ ಮೂವತ್ತು ಪೊಲೀಸರು ಸಾಕು! ಮೂವರು ಜನರಿರುವಾಗಲೇ ಕ್ಯೂನಲ್ಲಿ ನಿಲ್ಲುವ ಅಲ್ಲಿನ ಜನ, ಅಷ್ಟೊಂದು ಪ್ರಮಾಣದಲ್ಲಿ ಸೇರಿದಾಗ ಹೇಗೆ ವರ್ತಿಸಬಹುದು ಊಹಿಸಿ.

ಇಲ್ಲಿ 2017ರಲ್ಲಿ ನಡೆದ ಒಂದು ಸಣ್ಣ ಘಟನೆಯನ್ನು ಪ್ರಸ್ತಾಪಿಸಬೇಕು. ಟೋಕಿಯೋ ನಗರದಲ್ಲಿ ಚೆರ್ರಿ ಹೂವು (ಸಾಕುರಾ) ಅರಳುವ ಸಂದರ್ಭದಲ್ಲಿ ಅದನ್ನು ನೋಡಲು ಜಗತ್ತಿನೆಲ್ಲೆಡೆಗಳಿಂದ ಲಕ್ಷಾಂತರ ಜನ ಆಗಮಿಸುತ್ತಾರೆ. ಆ ವರ್ಷ ಸುಮಾರು ಹತ್ತು-ಹದಿನೈದು ಚೀನೀ ಪ್ರವಾಸಿಗರ ಪೈಕಿ ಕೆಲವರು ಸೆಲ್ಫಿ ತೆಗೆದುಕೊಳ್ಳುವಾಗ ಹಿನ್ನೆಲೆ ದೃಶ್ಯ (ಬ್ಯಾಕ್ ಡ್ರಾಪ್) ವನ್ನು ಸುಂದರವಾಗಿ ಸೆರೆ ಹಿಡಿಯಲೆಂದು ಚೆರ್ರಿ ಮರವನ್ನೇರಿ ಟೊಂಗೆಗಳನ್ನು ಜೋರಾಗಿ ಅಲುಗಾಡಿಸಿದರು. ಹೂವುಗಳು ಬೀಳುವ ದೃಶ್ಯವನ್ನು ಸೆರೆ ಹಿಡಿಯುವುದು ಅವರ ಉದ್ದೇಶವಾಗಿತ್ತು. ಆದರೆ ಆ ಘಟನೆ ದೊಡ್ಡ ವಿವಾದವನ್ನೇ ಸೃಷ್ಟಿಸಿಬಿಟ್ಟಿತು. ಜಪಾನಿನ ಸಾಂಸ್ಕೃತಿಕ ಸಾಂಪ್ರದಾಯಿಕತೆಯ ದೃಷ್ಟಿಯಿಂದ ಸಾಕುರಾ ಹೂವುಗಳಿಗೆ ವಿಶೇಷ ಮಹತ್ವ. ಅವುಗಳನ್ನು ಗೌರವಪೂರ್ವಕವಾಗಿ ನೋಡಲಾಗುತ್ತದೆ. ಈ ಘಟನೆಯು ಜಪಾನಿ ನಾಗರಿಕರಲ್ಲಿ ಅಸಮಾಧಾನ ಹಾಗೂ ವಿದೇಶಿ ಪ್ರವಾಸಿಗರ ಆಚಾರ-ವಿಚಾರ, ವರ್ತನೆ ಬಗ್ಗೆ ಆಕ್ರೋಶವನ್ನು ಹೊರಹಾಕಿತು.

ಸಾಕುರಾ ಹೂವುಗಳನ್ನು ಕೇವಲ ಅಲಂಕಾರಿಕವಾಗಿ ಮಾತ್ರವಲ್ಲ, ಶಾಶ್ವತತೆ ಮತ್ತು ಜೀವನದ ಕ್ಷಣಭಂಗುರತೆಯ ಸಂಕೇತವೂ ಹೌದು. ಸಾಕುರಾ ಹೂಗಳು ಅರಳುವ ಸೀಸನ್‌ನಲ್ಲಿ 'ಹನಾಮಿ' ಎಂಬ ಹಬ್ಬವನ್ನು ಆಚರಿಸುತ್ತಾರೆ. ಇದರಲ್ಲಿ ಕುಟುಂಬ, ಸ್ನೇಹಿತರು ಒಟ್ಟಾಗಿ ಸೇರಿ ಚೆರ್ರಿ ಹೂಗಳಡಿ ಹಬ್ಬದ ಸಡಗರದಲ್ಲಿ ಭಾಗವಹಿಸುತ್ತಾರೆ. ಹೀಗಾಗಿ ಈ ಹೂವುಗಳಿಗೆ ಹಾನಿ ಉಂಟಾಗುವುದನ್ನು ಜಪಾನೀ ಸಂಸ್ಕೃತಿಯಲ್ಲಿ ಅವಹೇಳನವೆಂದೇ ಪರಿಗಣಿಸಲಾಗುತ್ತದೆ. ಈ ಘಟನೆಯ ನಂತರ, ಟೋಕಿಯೋ ಹಾಗೂ ಇತರ ಪ್ರವಾಸಿ ಕೇಂದ್ರಗಳಲ್ಲಿ ಹೊಸ ನಿಯಮಗಳನ್ನು ಜಾರಿಗೊಳಿಸಲಾಯಿತು. ಈ ಘಟನೆಗೆ ಪ್ರತಿಕ್ರಿಯೆಯಾಗಿ, ಚೀನೀ ಪ್ರವಾಸೋದ್ಯಮ ಸಂಸ್ಥೆಗಳು ತಮ್ಮ ಪ್ರವಾಸಿಗರಿಗೆ ವಿದೇಶಿ ಸಂಸ್ಕೃತಿಯ ಗೌರವದ ಬಗ್ಗೆ ಅಭಿಯಾನಗಳನ್ನು ಆರಂಭಿಸಿದವು. ಸಾಮಾಜಿಕ ಜಾಲತಾಣಗಳಲ್ಲಿ ಕೋಟ್ಯಂತರ ಚೀನಿಯರು ಈ ಘಟನೆಗೆ ಕ್ಷಮೆಯಾಚಿಸಿದರು. ಒಂದು ಸಾಕುರಾ ಮರವೇರಿ ಕೊಂಬೆಯನ್ನು ಹಿಡಿದು ಅಲ್ಲಾಡಿಸಿದ ಘಟನೆ ಅವರ ಮನಸ್ಸನ್ನು ಕಲಕಿತ್ತು, ಕುಲುಕಿತ್ತು. ಜಪಾನಿಯರ ಸೂಕ್ಷ್ಮ ಭಾವನೆಗೆ ಈ ಘಟನೆಯೇ ಸಾಕ್ಷಿ. ಇಂದಿಗೂ ಒಂದು ಸಾಕುರಾ ಮರವನ್ನು ಕಡಿಯುವ ಪ್ರಸಂಗ ಬಂದರೆ, ಅದಕ್ಕೆ ಪ್ರತಿಯಾಗಿ ನೂರು ಗಿಡಗಳನ್ನು ನೆಡುತ್ತಾರೆ. ಇದು ಜಪಾನಿಯರ ಮೆಂಟಾಲಿಟಿ.

ಜಪಾನ್ ಇಂದು ಜಾಗತಿಕ ಶಕ್ತಿಯಾಗಿ, ಒಂದು ಅನೂಹ್ಯ, ಅಪರೂಪದ ದೇಶವಾಗಿ ತಲೆಯೆತ್ತಿ ನಿಂತಿದ್ದರೆ ಈ ಮೆಂಟಾಲಿಟಿಯೇ ಕಾರಣ.

---

# ಡೊನಾಲ್ಡ್ ಟ್ರಂಪ್ ದೌಲತ್ತಿನಿಂದ ಜಗತ್ತಿಗೆ ಆತಂಕ!

**ಸಂಗತ**

ಡಾ.ವಿಜಯ್ ದರಡಾ
vveditoped@gmail.com

ಅಮೆರಿಕದ ಅಧ್ಯಕ್ಷರಾಗಿ ಡೊನಾಲ್ಡ್ ಟ್ರಂಪ್ ಅಧಿಕಾರ ಸ್ವೀಕರಿಸಿದ್ದಾರೆ. ಇದು ಅವರಿಗೆ ಎರಡನೇ ಅವಧಿ. ಹಿಂದೆ ಅವರು ಅಧ್ಯಕ್ಷರಾಗಿ ಅಧಿಕಾರ ಪೂರ್ಣಗೊಳಿಸಿ ಅಮೆರಿಕದ ಚುಕ್ಕಾಣಿಯನ್ನು ಜೋ ಬೈಡೆನ್‌ಗೆ ಹಸ್ತಾಂತರಿಸಿದ ಮೇಲೆ ಜಗತ್ತಿನಲ್ಲಿ ಸಾಕಷ್ಟು ಬದಲಾವಣೆಗಳಾಗಿವೆ. ಆದರೆ, ಟ್ರಂಪ್ ಅವರ ದೌಲತ್ತು, ಜಂಭ, ಬಡಾಯಿ, ತೀಕ್ಷ್ಣ ಮಾತುಗಳು, ಉಪದ್ವ್ಯಾಪಿತನ ಹಾಗೂ ಹುಚ್ಚಾಟಗಳು ಯಾವುವೂ ಬದಲಾಗಿಲ್ಲ. ಅವೆಲ್ಲವೂ ಥೇಟ್ ನಾಲ್ಕು ವರ್ಷ ಹಿಂದೆ ಇದ್ದಂತೆಯೇ ಇವೆ. ವಾಸ್ತವವಾಗಿ ಈಗ ಅವು ಇನ್ನೂ ಸ್ವಲ್ಪ ಜಾಸ್ತಿಯಾಗಿರುವಂತೆ ಕಾಣುತ್ತಿವೆ. ಈ ಬಾರಿ ಅಧಿಕಾರ ಸ್ವೀಕಾರಕ್ಕೂ ಮೊದಲೇ ಅವರು ತಮ್ಮ ಹರಿತ ಮಾತುಗಳಿಂದ ಎರಡು ಅಲಗಿನ ಕತ್ತಿ ಝಳಪಿಸಲು ಆರಂಭಿಸಿದ್ದಾರೆ. ಅದನ್ನು ನೋಡಿ ಜಗತ್ತು ಕಂಗಾಲಾಗಿದೆ. ಟ್ರಂಪ್ ಇನ್ನು ಮುಂದಿನ ನಾಲ್ಕು ವರ್ಷಗಳಲ್ಲಿ ಏನೇನು ಮಾಡುವವರಿದ್ದಾರೆ? ಮಾತನಾಡುತ್ತಿರುವಂತೆಯೇ ನಡೆದುಕೊಂಡುಬಿಟ್ಟರೆ ಜಗತ್ತಿನ ಕತೆ ಏನಾಗಬೇಕು ಎಂದು ಎಲ್ಲರೂ ಯೋಚಿಸುತ್ತಿದ್ದಾರೆ. ಅವರ ಡೌಲು ಜಗತ್ತಿನಾದ್ಯಂತ ಒಂದಷ್ಟು ಆತಂಕದ ಅಲೆಗಳನ್ನು ಹುಟ್ಟುಹಾಕಿರುವುದಂತೂ ಸತ್ಯ!

ಅಮೆರಿಕದ ಅಧ್ಯಕ್ಷೀಯ ಚುನಾವಣೆಯಲ್ಲಿ ಜಯಗಳಿಸಿದ ಮೇಲೆ, ಅಧಿಕಾರ ಸ್ವೀಕಾರಕ್ಕೂ ಮೊದಲೇ ಅವರು ಕೆನಡಾದ ಬಗ್ಗೆ ಭಯಾನಕ ಹೇಳಿಕೆಯೊಂದನ್ನು ನೀಡಿದ್ದರು. ಕೆನಡಾ ದೇಶವು ಅಮೆರಿಕದ 51ನೇ ರಾಜ್ಯವಾಗಬೇಕು ಎಂದು ಅವರು ಹೇಳಿದ್ದನ್ನು ಕೇಳಿ ಎಲ್ಲರೂ ಮೂಗಿನ ಮೇಲೆ ಬೆರಳಿಟ್ಟುಕೊಂಡಿದ್ದರು. ಈ ಹೇಳಿಕೆಯ ಉದ್ದೇಶವೇನು ಎಂಬುದು ಇವತ್ತಿಗೂ ಸ್ಪಷ್ಟವಾಗಿಲ್ಲ. ಆದರೆ ಅದು ಕೆನಡಾದಲ್ಲಿ ರಾಜಕೀಯ ಭೂಕಂಪನವನ್ನೇ ಉಂಟುಮಾಡಿತು. ಅದೊಂದು ಹೇಳಿಕೆ ಎಷ್ಟು ಅನಾಹುತ ಸೃಷ್ಟಿಸಿತು ಅಂದರೆ, ಕೆನಡಾದ ಪ್ರಧಾನಿಯಾಗಿದ್ದ ಜಸ್ಟಿನ್ ಟ್ರೂಡೊ ರಾಜೀನಾಮೆ ನೀಡಿ ಕುರ್ಚಿಯಿಂದ ಕೆಳಗಿಳಿಯಬೇಕಾಯಿತು. ಟ್ರೂಡೊ ಮೇಲೆ ಮೊದಲಿನಿಂದಲೂ ಟ್ರಂಪ್‌ಗೆ ಕಣ್ಣಿತ್ತು. ಅದರ ಜತೆಗೆ ಆತ ತಮ್ಮ ಎಡವಟ್ಟುಗಳಿಂದಾಗಿ ಸಾಕಷ್ಟು ಹೆಸರು ಕೆಡಿಸಿಕೊಂಡಿದ್ದರು. ಭಯೋತ್ಪಾದಕರಿಗೆ ಬೆಂಬಲ ನೀಡುತ್ತಿದ್ದ ಆರೋಪ ಕೂಡ ಟ್ರೂಡೊ ಮೇಲಿತ್ತು. ಅದೆಲ್ಲದರ ಪರಿಣಾಮವಾಗಿ ಅವರ ಕುರ್ಚಿ ಹೋಯಿತು. ವಸ್ತುಸ್ಥಿತಿ ಏನೆಂದರೆ, ಕೆನಡಾ ಅಗಾಧ ಭೂಪ್ರದೇಶ ಹೊಂದಿರುವ ದೇಶ. ಅದರ ಗಾತ್ರ ಅಮೆರಿಕಕ್ಕಿಂತ 1,50,000 ಚದರ ಕಿಲೋಮೀಟರ್ ಜಾಸ್ತಿ ಇದೆ. ಎರಡೂ ದೇಶಗಳು ನ್ಯಾಟೋದ ಸಂಸ್ಥಾಪಕ ಸದಸ್ಯರು. ಎರಡೂ ದೇಶಗಳ ನಡುವೆ ಮಿಲಿಟರಿ ಒಪ್ಪಂದಗಳಿವೆ. ಈ ಹಿನ್ನೆಲೆಯಲ್ಲಿ ನೋಡಿದರೆ, ಕೆನಡಾವನ್ನು ಅಮೆರಿಕ ಕಬಳಿಸಲು ಹೇಗೆ ಸಾಧ್ಯ? ಆದರೆ ಟ್ರಂಪ್ ಈಗಾಗಲೇ ತಮ್ಮ ವ್ಯೂಹಾತ್ಮಕ ಕಾರ್ಯಾಚರಣೆ ಆರಂಭಿಸಿದ್ದಾರೆ. ಕೆನಡಾದ ಮೇಲೆ ಭಾರಿ ತೆರಿಗೆ ವಿಧಿಸುವ ಯೋಜನೆ ಹಾಕಿಕೊಂಡಿದ್ದಾರೆ. ಅದರಿಂದಾಗಿ ಇಂದಲ್ಲಾ ನಾಳೆ ಕೆನಡಾ ಮಂಡಿಯೂರಿ ಕುಳಿತು ಅಮೆರಿಕದ ಮುಂದೆ ದೇಹಿ ಅನ್ನಲೇಬೇಕು. ಹೀಗಾಗಿ ಅಧಿಕಾರಕ್ಕೆ ಬರುವುದಕ್ಕೂ ಮೊದಲೇ ಕೆನಡಾವನ್ನು ಟ್ರಂಪ್ ಬೆಚ್ಚಿಬೀಳಿಸಿದ್ದಾಗಿದೆ.

ಗ್ರೀನ್‌ಲ್ಯಾಂಡ್ ಬಗ್ಗೆಯೂ ಟ್ರಂಪ್ ನೀಡಿದ ಇಂಥದೇ ಹೇಳಿಕೆ ವಿವಾದಕ್ಕೆ ಕಾರಣವಾಗಿದೆ. ಗ್ರೀನ್‌ಲ್ಯಾಂಡ್ ಮೇಲೆ ಡೆನ್ಮಾರ್ಕ್ ತನ್ನ ಹಿಡಿತ ಕೈಬಿಡದೆ ಇದ್ದರೆ ಅಮೆರಿಕ ಭಾರಿ ತೆರಿಗೆ ವಿಧಿಸಲಿದೆ ಎಂದು ಟ್ರಂಪ್ ಎಚ್ಚರಿಕೆ ನೀಡಿದ್ದಾರೆ. ಗ್ರೀನ್‌ಲ್ಯಾಂಡ್‌ನ ಶೇ.85ರಷ್ಟು ಭೂಭಾಗ ದಟ್ಟವಾದ ಹಿಮದಿಂದ ಆವೃತವಾಗಿದೆ. ಆ ಹಿಮದ ಕೆಳಗೆ ಭರಪೂರ ಖನಿಜಗಳಿವೆ. ಅದರ ಮೇಲೆ ಟ್ರಂಪ್ ಕಣ್ಣಿಟ್ಟಿದ್ದಾರೆ. ಆದರೆ ಟ್ರಂಪ್ ಹೇಳಿಕೆಯನ್ನು ಈಗಾಗಲೇ ಗ್ರೀನ್‌ಲ್ಯಾಂಡಿನ ಪ್ರಧಾನಿ ಮ್ಯೂಟ್ ಎಗೆಡೆ ಸಾರಾಸಗಟಾಗಿ ತಿರಸ್ಕರಿಸಿದ್ದಾರೆ. ಯಾವುದೇ ಕಾರಣಕ್ಕೂ ನಾವು ಅಮೆರಿಕದಲ್ಲಿ ವಿಲೀನವಾಗುವ ಪ್ರಶ್ನೆಯೇ ಇಲ್ಲ ಎಂದು ಅವರು ಹೇಳಿದ್ದಾರೆ. ಆದರೆ ಅಮೆರಿಕದ ಜತೆಗೆ ಇನ್ನಷ್ಟು ಹೆಚ್ಚು ಸಹಕಾರದಿಂದ ವ್ಯವಹರಿಸಲು ಸಿದ್ಧರಿದ್ದೇವೆ ಎಂದೂ ಸ್ಪಷ್ಟಪಡಿಸಿದ್ದಾರೆ. ಗ್ರೀನ್‌ಲ್ಯಾಂಡಿನ ಜನಸಂಖ್ಯೆ 57,000ಕ್ಕಿಂತ ಕಡಿಮೆ. ಅಂಥ ಸಣ್ಣ ಜನಸಂಖ್ಯೆಯ ದೇಶವನ್ನು ಗೆಲ್ಲುವುದು ಟ್ರಂಪ್‌ಗೆ ಅಸಾಧ್ಯವೇನಲ್ಲ. ಗ್ರೀನ್‌ಲ್ಯಾಂಡಿನ ಮೇಲೆ ಹಿಡಿತ ಹೊಂದಿರುವ ಡೆನ್ಮಾರ್ಕ್‌ಗೂ ಟ್ರಂಪ್‌ರನ್ನು ಎದುರಿಸುವುದು ಕಷ್ಟ. ಹೀಗಾಗಿ ಡೆನ್ಮಾರ್ಕ್ ಮತ್ತು ಗ್ರೀನ್‌ಲ್ಯಾಂಡ್‌ಗೆ ಇರುವ ಏಕೈಕ ಆಯ್ಕೆಯೆಂದರೆ ಅಮೆರಿಕದ ಜತೆಗೆ ಮಾತುಕತೆ ನಡೆಸಿ ಆಪತ್ತು ನಿವಾರಿಸಿಕೊಳ್ಳುವುದೇ ಆಗಿದೆ.

ಇನ್ನು, ಮೆಕ್ಸಿಕನ್ ಕೊಲ್ಲಿಗೆ 'ಅಮೆರಿಕನ್ ಕೊಲ್ಲಿ' ಎಂದು ಮರುನಾಮಕರಣ ಮಾಡುವುದಾಗಿಯೂ ಟ್ರಂಪ್ ಘೋಷಿಸಿದ್ದಾರೆ. ತನ್ಮೂಲಕ ಈ ಹಿಂದೆ ಮೆಕ್ಸಿಕೋ ವಿಷಯದಲ್ಲಿ ತಾವು ಯಾವ ರೀತಿಯಲ್ಲಿ ಕಠಿಣವಾಗಿ ನಡೆದುಕೊಂಡಿದ್ದರೋ ಅದೇ ಧೋರಣೆಯನ್ನು ಈ ಅವಧಿಯಲ್ಲೂ ಮುಂದುವರಿಸುವ ಸ್ಪಷ್ಟ ಸೂಚನೆಯನ್ನು ನೀಡಿದ್ದಾರೆ. ಮೊದಲ ಅವಧಿಯಲ್ಲಿ ಮೆಕ್ಸಿಕೋದ ಗಡಿಯಲ್ಲಿ ಟ್ರಂಪ್ ಗೋಡೆ ಕಟ್ಟಿಸುವುದಾಗಿ ಘೋಷಿಸಿದ್ದರು. ಅಂದನ್ನು ಪೋಪ್ ಟೀಕಿಸಿದಾಗ 'ಈ ವಿಷಯದಲ್ಲಿ ಪೋಪ್ ಮೂಗು ತೂರಿಸುವ ಅಗತ್ಯವಿಲ್ಲ' ಎಂದು ನೇರಾನೇರವಾಗಿ ಕುಟುಕಿದ್ದರು! ಕೊನೆಗೆ ಗಡಿಯಗುಂಟ ಒಂದಷ್ಟು ಜಾಗದಲ್ಲಿ ಗೋಡೆ ಕಟ್ಟಿಸಿಯೇಬಿಟ್ಟಿದ್ದರು. ಮೆಕ್ಸಿಕೋದಿಂದ ಅಕ್ರಮ ವಲಸಿಗರು ಅಮೆರಿಕಕ್ಕೆ ದೊಡ್ಡ ಸಂಖ್ಯೆಯಲ್ಲಿ ನುಸುಳುತ್ತಾರೆ. ಅದನ್ನು ತಡೆಯುವುದು ಟ್ರಂಪ್ ನೀತಿಗಳಲ್ಲೊಂದು. ವಾಸ್ತವವಾಗಿ, ಚೀನಾವನ್ನು ಹದ್ದುಬಸ್ತಿನಲ್ಲಿ ಇಡಬೇಕು ಅಂದರೆ ಮೆಕ್ಸಿಕೋ ದೇಶಕ್ಕೆ ಮೂಗುದಾರ ಹಾಕುವುದು ಟ್ರಂಪ್‌ಗೆ ಅತ್ಯಗತ್ಯ. ಏಕೆಂದರೆ, ಮೆಕ್ಸಿಕೋದಲ್ಲಿರುವ ದೊಡ್ಡ ದೊಡ್ಡ ಕಾರ್ಖಾನೆಗಳಲ್ಲಿ ಚೀನಾ ತನ್ನ ಸರಕುಗಳನ್ನು ಉತ್ಪಾದಿಸಿ ಅಮೆರಿಕದ ಮುಕ್ತ ಮಾರುಕಟ್ಟೆಯಲ್ಲಿ ಮಾರಾಟ ಮಾಡುತ್ತದೆ. ಇದು ಅಮೆರಿಕದ ಆರ್ಥಿಕತೆಗೆ ಹೊಡೆತ ನೀಡುತ್ತಿದೆ. ಹೀಗಾಗಿ ಮೆಕ್ಸಿಕೋ ಜತೆಗಿನ ಟ್ರಂಪ್ ಸಂಘರ್ಷ ಇನ್ನಷ್ಟು ಉಲ್ಬಣಗೊಳ್ಳುವುದು ಗ್ಯಾರಂಟಿ.

ಎರಡನೇ ಅವಧಿಯ ಚುನಾವಣೆಯಲ್ಲಿ ಗೆದ್ದ ತಕ್ಷಣ ಟ್ರಂಪ್ ಅವರು ಇಸ್ರೇಲ್ ಮತ್ತು ಹಮಾಸ್ ಯುದ್ಧ ನಿಲ್ಲಿಸಬೇಕು ಎಂದು ಗುಡುಗಿದ್ದರು. ನಾನು ಅಧಿಕಾರ ಸ್ವೀಕರಿಸುವುದಕ್ಕಿಂತ ಮುಂಚೆ ನಿಮ್ಮ ಜಗಳ ನಿಲ್ಲಬೇಕು ಎಂದು ತಾಕೀತು ಮಾಡಿದ್ದರು. ಅದು ಎಂಥಾ ಪರಿಣಾಮ ಉಂಟುಮಾಡಿತು ಅಂದರೆ, ಈಗ ಇಸ್ರೇಲ್ ಮತ್ತು ಹಮಾಸ್ ನಡುವೆ ಕದನವಿರಾಮ ಜಾರಿಗೆ ಬಂದಿದೆ. ಟ್ರಂಪ್ ಇಸ್ರೇಲ್‌ಗೆ ಬಹಿರಂಗ ಬೆಂಬಲ ಘೋಷಿಸಿರುವ ವ್ಯಕ್ತಿ. ಅವರ ಮೊದಲ ಅವಧಿಯಲ್ಲಿ ಇಸ್ರೇಲ್‌ನ ಬಯಕೆಯಂತೆ ಜೆರುಸಲೇಂ ನಗರಕ್ಕೆ ಇಸ್ರೇಲ್‌ನ ರಾಜಧಾನಿಯ ಮಾನ್ಯತೆ ನೀಡಿ, ಇಸ್ರೇಲ್‌ನಲ್ಲಿರುವ ಅಮೆರಿಕದ ದೂತಾವಾಸವನ್ನು ಜೆರುಸಲೇಂಗೆ ಸ್ಥಳಾಂತರ ಮಾಡಿದ್ದರು.

ಇನ್ನು, ರಷ್ಯಾ ಮತ್ತು ಉಕ್ರೇನ್ ನಡುವಿನ ಸಂಘರ್ಷದಲ್ಲಿ ಟ್ರಂಪ್ ಏನು ಮಾಡುತ್ತಾರೆಂಬುದು ಇನ್ನೂ ಸ್ಪಷ್ಟವಿಲ್ಲ. ಜೋ ಬೈಡೆನ್ ಉಕ್ರೇನ್‌ಗೆ ಉದಾರವಾಗಿ ನೆರವು ನೀಡಿದ್ದರು. ಟ್ರಂಪ್ ಅದನ್ನು ಮುಂದುವರಿಸುತ್ತಾರೋ ಇಲ್ಲವೋ ಎಂಬುದು ಗೊತ್ತಿಲ್ಲ. ಏಕೆಂದರೆ ಟ್ರಂಪ್‌ಗೆ ರಷ್ಯಾದ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಜತೆಗೂ ಸ್ನೇಹವಿದೆ. ಹೀಗಾಗಿ ರಷ್ಯಾವನ್ನು ಎದುರು ಹಾಕಿಕೊಂಡು ಉಕ್ರೇನ್ ಪರ ಅವರ ನಿಲ್ಲುತ್ತಾರೆಯೇ ಎಂಬುದು ಯಕ್ಷಪ್ರಶ್ನೆ. ಈ ಜಟಿಲ ಸಂಬಂಧ ಹೇಗೆ ಮುಂದುವರಿಯುತ್ತದೆ ಎಂಬುದಕ್ಕೆ ಕಾಲವೇ ಉತ್ತರಿಸಬೇಕು.

ರಾಜತಾಂತ್ರಿಕವಾಗಿ ನೋಡುವುದಾದರೆ, ಟ್ರಂಪ್ ಅವಧಿಯಲ್ಲಿ ಭಾರತವು ಅಮೆರಿಕಕ್ಕೆ ಇನ್ನಷ್ಟು ಹತ್ತಿರವಾಗಬಹುದು. ಏಕೆಂದರೆ ಚೀನಾವನ್ನು ಎದುರಿಸಲು ಅಮೆರಿಕಕ್ಕೆ ಭಾರತದ ನೆರವು ಬೇಕು. ಪ್ರಧಾನಿ ನರೇಂದ್ರ ಮೋದಿ ಜತೆಗೆ ಟ್ರಂಪ್ ಹೊಂದಿರುವ ಆತ್ಮೀಯ ಸಂಬಂಧ ಎಲ್ಲರಿಗೂ ತಿಳಿದಿದೆ. ಆದರೆ 'ಅಮೆರಿಕ ಮೊದಲು' ಎಂಬುದು ಟ್ರಂಪ್ ನೀತಿ. ಹೀಗಾಗಿ ಭಾರತದ ಜತೆಗೆ ವ್ಯವಹರಿಸುವಾಗಲೂ ಅಮೆರಿಕದ ಹಿತಾಸಕ್ತಿಯನ್ನೇ ಟ್ರಂಪ್ ಪ್ರಬಲವಾಗಿ ಪ್ರತಿಪಾದಿಸುತ್ತಾರೆ. ಅದು ಭಾರತಕ್ಕೆ ಇರಿಸುಮುರಿಸು ಉಂಟುಮಾಡಬಹುದು. ತಮ್ಮ ಮೊದಲ ಅವಧಿಯಲ್ಲಿ ಟ್ರಂಪ್, ಅಮೆರಿಕದ ಹಾರ್ಲೆ ಡೇವಿಡ್ಸನ್ ಬೈಕ್‌ಗಳಿಗೆ ಭಾರತದ ಸರಕಾರ ದುಬಾರಿ ತೆರಿಗೆ ವಿಧಿಸುತ್ತಿರುವುದಕ್ಕೆ ಆಕ್ಷೇಪ ವ್ಯಕ್ತಪಡಿಸಿದ್ದರು. ಅದಕ್ಕೆ ಪ್ರತಿಯಾಗಿ ಅಮೆರಿಕದಲ್ಲಿ ಮಾರಾಟವಾಗುವ ಭಾರತದ ಸರಕುಗಳಿಗೆ ಹೆಚ್ಚು ತೆರಿಗೆ ವಿಧಿಸುವ ಕಠಿಣ ನಿರ್ಧಾರ ಕೈಗೊಂಡಿದ್ದರು. ಇದು ಭಾರತದ ರಫ್ತು ವ್ಯವಹಾರಗಳಿಗೆ ಹೊಡೆತ ನೀಡಿತ್ತು. ಈ ಬಾರಿ ಟ್ರಂಪ್ ರಕ್ಷಣಾ ವ್ಯವಹಾರಗಳಲ್ಲಿ ಭಾರತವು ಅಮೆರಿಕಕ್ಕೆ ಆದ್ಯತೆ ನೀಡಬೇಕು ಎಂದು ಒತ್ತಡ ಹೇರುವ ಸಾಧ್ಯತೆಯಿದೆ. ಅದಕ್ಕೆ ಭಾರತ ಒಪ್ಪದಿದ್ದರೆ ಪ್ರತೀಕಾರದ ಕ್ರಮ ಕೈಗೊಳ್ಳುವುದಾಗಿ ಬೆದರಿಸುವ ಸಂಭವವಿದೆ. ಅದೇ ರೀತಿ, ಎಚ್-1ಬಿ ವೀಸಾ ವಿಷಯದಲ್ಲಿ ಟ್ರಂಪ್ ತಾಳಿರುವ ಕಠಿಣ ನಿಲುವುಗಳು ಭಾರತದ ಮೇಲೆ ದುಷ್ಪರಿಣಾಮ ಬೀರಬಹುದು. ಅಮೆರಿಕದ ಎಚ್-1ಬಿ ವೀಸಾದ ಪ್ರಮುಖ ಫಲಾನುಭವಿಗಳು ಭಾರತದ ಟೆಕಿಗಳಾಗಿದ್ದಾರೆ. ಇನ್ನೊಂದು ಹೆಜ್ಜೆ ಮುಂದೆಹೋಗಿ, ಅಮೆರಿಕದಲ್ಲಿ ಜನಿಸಿದ ಮಾತ್ರಕ್ಕೆ ವಿದೇಶಿಗರಿಗೆ ಅಮೆರಿಕದ ಪೌರತ್ವ ಸಿಗುವ ವ್ಯವಸ್ಥೆ ಸರಿಯಿಲ್ಲ ಎಂದು ಟ್ರಂಪ್ ಈಗಾಗಲೇ ಹೇಳಿದ್ದಾರೆ. ಇದನ್ನೆಲ್ಲ ನೋಡಿದರೆ, ಭಾರತಕ್ಕೆ ಟ್ರಂಪ್ ತಮ್ಮ ಕಠಿಣ ನಿಲುವುಗಳಲ್ಲಿ ಒಂದಷ್ಟು ವಿನಾಯಿತಿ ನೀಡುತ್ತಾರೋ ಇಲ್ಲವೋ ಎಂಬುದು ಅನುಮಾನಾಸ್ಪದವಾಗಿದೆ. ಆದರೆ, ಅಮೆರಿಕ ಮತ್ತು ಚೀನಾ ನಡುವಿನ ವೈರತ್ವವನ್ನು ಗಮನಿಸಿದರೆ, ಭಾರತದ ವಿಷಯದಲ್ಲಿ ಟ್ರಂಪ್ 'ಶತ್ರುವಿನ ಶತ್ರು ನಮಗೆ ಮಿತ್ರ' ಎಂಬ ನಿಲುವು ತಾಳುವ ಸಾಧ್ಯತೆಯೂ ಇದೆ. ಹೀಗಾಗಿ ಭಾರತ ತೀರಾ ಆತಂಕಪಡುವ ಅಗತ್ಯವೇನೂ ಇಲ್ಲ.

ಆದರೆ ಎಷ್ಟೆಂದರೂ ಟ್ರಂಪ್ ಅಂದರೆ ಟ್ರಂಪ್! ಅವರ ನಾಯಕತ್ವದ ಶೈಲಿಯನ್ನು ಯಾರೂ ಊಹಿಸಲು ಸಾಧ್ಯವಿಲ್ಲ. 78 ವರ್ಷದ ವೃದ್ಧನಾಗಿದ್ದರೂ ಅವರು ಚುನಾವಣೆಯ ಸಮಯದಲ್ಲಿ 200 ರ್ಯಾಲಿಗಳನ್ನು ನಡೆಸಿದ್ದಾರೆ. ಯುವಕರೂ ನಾಚುವಂಥ ಉತ್ಸಾಹ ಅವರಲ್ಲಿದೆ. ತಮ್ಮ ತಂಡದ ಸದಸ್ಯರನ್ನು ಸಾಕಷ್ಟು ಅಳೆದು ತೂಗಿ ಆರಿಸಿಕೊಂಡಿದ್ದಾರೆ. ಎಲಾನ್ ಮಸ್ಕ್‌ರಂಥ ಘಟಾನುಘಟಿಗಳು ಅದರಲ್ಲಿದ್ದಾರೆ. ಸ್ಟಾರ್‌ಶಿಪ್ ಏರ್‌ಕ್ರಾಫ್ಟ್ ಪತನಗೊಂಡಿದ್ದರೂ ಸ್ಪೇಸೆಕ್ಸ್ ಮಾಲೀಕ ಎಲಾನ್ ಮಸ್ಕ್ ಎದೆಗುಂದಿಲ್ಲ. ಅಂಥ ವ್ಯಕ್ತಿಯನ್ನು ಜತೆಗಿಟ್ಟುಕೊಂಡಿರುವ ಟ್ರಂಪ್, ಯಾರಿಗೂ ಅಂಜದೆ ಮುನ್ನುಗ್ಗುವುದರಲ್ಲಿ ಅನುಮಾನವೇ ಇಲ್ಲ. ನ್ಯಾಯಾಂಗವು ತಮ್ಮ ಬಗ್ಗೆ ಕೆಲ ತೀಕ್ಷ್ಣ ಟಿಪ್ಪಣಿಗಳನ್ನು ಮಾಡಿದಾಗ ಅದಕ್ಕೂ ಡೋಂಟ್ ಕೇರ್ ಎನ್ನದ ಟ್ರಂಪ್, 'ಅಧ್ಯಕ್ಷರ ಬಳಿ ಎಲ್ಲವನ್ನೂ ಮೀರಿದ ಅಧಿಕಾರವಿದೆ' ಎಂದು ಹೇಳಿದ್ದರು. ತಮ್ಮ ಅಧಿಕಾರ ಸ್ವೀಕಾರ ಸಮಾರಂಭಕ್ಕೂ ಅವರು ಸೀಮಿತ ಸಂಖ್ಯೆಯ ಜಾಗತಿಕ ನಾಯಕರಿಗೆ ಮಾತ್ರ ಆಹ್ವಾನ ನೀಡಿದ್ದರು. ಬಹಳ ವರ್ಷಗಳಿಂದ ಅಮೆರಿಕದ ಸ್ನೇಹಿತ ರಾಷ್ಟ್ರವಾಗಿದ್ದ ಪಾಕಿಸ್ತಾನಕ್ಕೆ ಆಹ್ವಾನ ನೀಡಿರಲಿಲ್ಲ. ಈ ವಿಷಯ ಪಾಕಿಸ್ತಾನದಲ್ಲಿ ದೊಡ್ಡ ಆಕ್ರೋಶಕ್ಕೆ ಕಾರಣವಾಗಿದೆ. ಜಗತ್ತು ಪಾಕಿಸ್ತಾನವನ್ನು ಗಂಭೀರವಾಗಿ ಪರಿಗಣಿಸುತ್ತಿಲ್ಲ ಎಂದು ಆ ದೇಶದ ಒಳಗೆ ಚರ್ಚೆಗಳು ನಡೆಯುತ್ತಿವೆ.

ಒಟ್ಟಿನಲ್ಲಿ ತಮ್ಮೆಲ್ಲಾ ಜೋಶ್‌ನೊಂದಿಗೆ ಟ್ರಂಪ್ ಮರಳಿ ಬಂದಿದ್ದಾರೆ. ಜಾಗತಿಕ ವೇದಿಕೆಯಲ್ಲಿ ತಮಗೊಂದು ಪ್ರಮುಖ ಸ್ಥಾನ ಇರಬೇಕು ಅಂತಾದರೆ ತಮ್ಮದೇ ವಿಶಿಷ್ಟ ಶೈಲಿಯಲ್ಲಿ ಅಧಿಕಾರ ಚಲಾಯಿಸಬೇಕು ಎಂಬುದು ಅವರಿಗೆ ಗೊತ್ತಿದೆ. ಏನಾಗುತ್ತದೋ ನೋಡೋಣ. ವೆಲ್‌ಕಮ್ ಮಿಸ್ಟರ್ ಟ್ರಂಪ್!

**(ಲೇಖಕರು ಹಿರಿಯ ಪತ್ರಿಕೋದ್ಯಮಿ)**

## ಭಟ್ಟರ್ ಸ್ಕಾಚ್

- **ಉಜ್ಜನಿ ಜಲೇಂದ್ರ, ಮಲ್ಲುಂಗೆರೆ**
ಭಟ್ರೇ, ಹೆಂಡತಿ ಮಾತನ್ನು ಪಾಲಿಸುವವನೇ ನಿಜವಾದ ಗಂಡನಾ?
– **ಈ ವಿಷಯದಲ್ಲಿ ನಿನಗೆ ಅನುಮಾನ ಯಾಕೋ ಬಂತೋ ಗೊತ್ತಿಲ್ಲ!**

- **ಡಾ.ಆನಂದ ಕುಲಿಗೋಡ, ಧಾರವಾಡ**
ಭಟ್ರೇ, 'ವಿಶ್ವವಾಣಿ ಟಿವಿ'ಯಲ್ಲಿ ಶ್ರೀನಗರ ಕಿಟ್ಟಿಯೊಂದಿಗೆ ಮಾತುಕತೆ ಎಂಬ ಕಾರ್ಯಕ್ರಮ ಪ್ರಸಾರ ಮಾಡುತ್ತೀರಾ?
– **ಆ ಕಾರ್ಯಕ್ರಮವನ್ನು ಮ್ಯೂಟ್ ಮಾಡಿ ನೋಡ್ತೀನಿ ಅಂದ್ರೆ, ಪ್ರಸಾರ ಮಾಡ್ತೀವಿ!**

- **ಎಲ್.ವಿ.ಸತೀಶ, ಮೈಸೂರು**
ಭಟ್ರೇ, ಶ್ರೀಲಂಕಾದಿಂದ ಮರಳಿ ಬಂದು ಒಂದು ವಾರವಾಯ್ತು. ಏನೂ ಬರೆದಿಲ್ಲವಲ್ಲ?
– **ಮಾಜಿ ಪ್ರೇಯಸಿ ಜಪಾನ್ ಇನ್ನೂ ಬಿಡ್ತಾ ಇಲ್ವೇ?!**

- **ಮಹಾನಂದ ಪಾಟೀಲ, (ಇಮೇಲ್ ಮೂಲಕ)**
ಭಟ್ರೇ, ಕುಂಭಮೇಳದಲ್ಲಿ ನಿಮ್ಮನ್ನು ನೋಡಿದ ಹಾಗಾಯ್ತು?
– **ಹೂಂ.. ಆ ನಾಗಾಸಾಧುಗಳ ಮಧ್ಯೆ ಮೈತುಂಬಿ ಬಟ್ಟೆ ಹೊದ್ದುಕೊಂಡ ಒಬ್ಬ ವ್ಯಕ್ತಿ ಇದ್ರಲ್ಲ, ಅವನೇ ನಾನು!**

- **ವಿ.ಹೇಮಂತಕುಮಾರ, ಬೆಂಗಳೂರು**
ಭಟ್ರೇ, ಕಷ್ಟದಲ್ಲಿದ್ದಾಗ ಕೈ ಹಿಡಿಯುವುದನ್ನು ಬಿಟ್ಟು ತಪ್ಪುಗಳನ್ನು ಎತ್ತಿ ಹಿಡಿಯುತ್ತಾರಲ್ಲ?
– **ಇನ್ನು ಕೆಲವರು ತಪ್ಪನ್ನು ಎತ್ತಿ ಹಿಡಿಯುವ ಭರದಲ್ಲಿ ತಮ್ಮ ಪತ್ನಿಯರನ್ನು ಎತ್ತಿ ಹಿಡಿಯುವುದುಂಟು !**

- **ರಾಮು ಮಲ್ಲಿಕಟ್ಟೆ, ಕೋಣಂದೂರು**
ಭಟ್ರೇ, ಬಿಜೆಪಿ ನಾಯಕರು ನಾಯಿ ಥರಾ ಕಚ್ಚಾಡ್ತಾರಲ್ಲ?
– ನೀವು ನಾಯಿಗಳನ್ನು ಆ ನಾಯಕರಿಗೆ ಹೋಲಿಸಿದ್ದನ್ನು ಉಗ್ರವಾಗಿ ಖಂಡಿಸುತ್ತೇನೆ!

- **ವೇಣುಗೋಪಾಲ ಕಂಚಿತೋಟ, ಕಡೂರು**
ಭಟ್ರೇ, ಮನೆಯಲ್ಲಿ ಜಗಳವಾಡಿದರೆ ಹೊರಗೆ ಹಾಕ್ತಾರೆ. ಬಿಗ್ ಬಾಸ್ ಮನೆಯಲ್ಲಿ?
– **ಅಲ್ಲಿ ಜಗಳವಾಡೋದನ್ನು ನಿಲ್ಲಿಸಿದರೆ ಹೊರಗೆ ಹಾಕ್ತಾರೆ!**

- **ಶ್ರೀರಂಗ, ಮಂಡ್ಯ**
ಭಟ್ರೇ, ನಿಮಗೆ ಕನ್ನಡದ ಯಾವ ನಟಿ ಅಂದ್ರೆ ಇಷ್ಟ?
– **ಯಾರ ಹೆಸರನ್ನು ಹೇಳಿದರೂ ಉಳಿದವರು ಜಗಳ ಆಡ್ತಾರಲ್ಲ?!**

- **ವೀರೇಶ ಕಮತಗಿ, ಅಡಗೂರು**
ಭಟ್ರೇ, ರಾತ್ರಿ ಭಯಾನಕ ಕನಸುಗಳು ಬೀಳುವುದೇಕೆ?
– **ಮೊಯಿಲಿ ಮಹಾಕಾವ್ಯ ಓದಿ ಮಲಗಿದಾಗಲೆಲ್ಲ ನನಗೂ ಹಾಗೆ ಆಗುವುದುಂಟು!**

# ಶಾಲೆಗೆ ನೂರು, ನೆನಪುಗಳು ನೂರಾರು

**ಊರಿಗೊಂದು ಸರಕಾರಿ ಶಾಲೆಯಿರುವುದು ಆ ಊರಿನ ಸೌಭಾಗ್ಯ. ಸರಕಾರಿ ಶಾಲೆಗಳು ಮುಚ್ಚುತ್ತಿರುವ ಹೊತ್ತಿನಲ್ಲಿ ಈ ಮಾತನ್ನು ಮತ್ತೆ ಮತ್ತೆ ಹೇಳಬೇಕು. ಖಾಸಗಿ ಶಾಲೆಗಳು ಒಬ್ಬ ವ್ಯಕ್ತಿಯನ್ನಷ್ಟೆ ಶ್ರೀಮಂತಗೊಳಿಸಬಲ್ಲುದಾದರೆ, ಸರಕಾರಿ ಶಾಲೆಗಳು ಇಡೀ ಊರನ್ನೇ ಶ್ರೀಮಂತಗೊಳಿಸಬಲ್ಲುವು.**

ಕಾಡುದಾರಿ
ಹರೀಶ್ ಕೇರ
vveditoped@gmail.com

ಹೀಗೇ ನೋಡಿದರೆ ಎಲ್ಲ ಗ್ರಾಮೀಣ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಗಳಂತೆ, ಸುತ್ತಮುತ್ತ ಹಸಿರು ಕಾಡು ಗುಡ್ಡಗಳ ನಡುವೆ, ಸಾಗಿಹೋಗುವ ಒಂದು ಡಾಮರು ರಸ್ತೆಯ ಪಕ್ಕದಲ್ಲಿ, ಆಚೆ ಈಚೆ ನಿಂತ ಕೆಲವು ಅಂಗಡಿ ಮುಂಗಟ್ಟುಗಳ ನಡುವೆ ಈ ಶಾಲೆಯೂ ಇದೆ. ಅರ್ಧ ಭಾಗ ಮಂಗಳೂರು ಹಂಚು ಹೊದ್ದ ಹಳೆಯ ಕಟ್ಟಡ, ಇನ್ನರ್ಧ ಹೊಸದಾಗಿ ಕಟ್ಟಿಸಿದ ತಾರಸಿ ಕಟ್ಟಡ. ನಡುವೆ ಮಕ್ಕಳು ಆಟವಾಡುತ್ತಿರುವ ಕೆಮ್ಮಣ್ಣಿನ ಅಂಗಳ ಮತ್ತು ಆಗಾಗ ಕಲರವ ಎಬ್ಬಿಸುವ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುವ ಸಭಾಂಗಣ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ದೇವಚಳ್ಳ ಪ್ರಾಥಮಿಕ ಶಾಲೆಗೆ ನೂರು ವರ್ಷ ತುಂಬಿತು ಅಂತ ಯಾರಾದರೂ ಹೇಳದಿದ್ದರೆ ಗೊತ್ತೇ ಆಗುವುದಿಲ್ಲ. ಆದರೆ ನನ್ನಂತೆ ಇಲ್ಲಿ ಓದುಬರಹ ಕಲಿತ ಸಾವಿರಾರು ಮಂದಿಯ ಭಾವಕೋಶದಲ್ಲಿ ಈ ಶಾಲೆಗೆ ವಿಶೇಷ ಸ್ಥಾನ.

ಒಂದು ಪ್ರಾಥಮಿಕ ಶಾಲೆಗೆ ನೂರು ವರ್ಷ ತುಂಬುವುದು ಯಾಕಾದರೂ ಮುಖ್ಯವಾಗಬೇಕು? ಅದು ಬರಿಯ ಸರಕಾರಕ್ಕಷ್ಟೇ ಸಾಧನೆಯ ಸಂಗತಿಯಲ್ಲ, ಅದು ಊರಿನ ಹೆಮ್ಮೆಯ ಕಿರೀಟದ ಗರಿ. ಅಲ್ಲಿ ಕಲಿತ ಮಕ್ಕಳ, ಇಂದು ಹಿರಿಯರಾಗಿರುವವರ ಮನೋಮಂದಿರದ ಸಿರಿ. ಅಲ್ಲಿ ಕಲಿಸಿದ ಟೀಚರ್‌ಗಳ ಕೈಗಳು ಹಚ್ಚಿದ ದೀಪಮಾಲೆ. ಅಲ್ಲಿನ ಬೆಂಚು ಡೆಸ್ಕುಗಳು ಹೇಳುವ ಕತೆಗಳು. ಬೆಲ್ ಹೊಡೆದ ಸದ್ದಿಗೆ ಹೊರಬಂದು ಅಂಗಳದಲ್ಲಿ ಚಲಿಸುವ ರಂಗೋಲಿಗಳಂತೆ ಹರಡಿಕೊಳ್ಳುವ ಮಕ್ಕಳಿಗೆ ತಮ್ಮ ಹಿಂದೆ ನೂರು ವರ್ಷದ ಇತಿಹಾಸವಿದೆ ಎಂದು ತಿಳಿದಿರಲಿಕ್ಕಿಲ್ಲ. ಆದರೆ ಹಲವು ಪರಿವರ್ತನೆಗಳನ್ನು ಕಂಡ ಶಾಲೆಯ ಕಟ್ಟಡ ನಕ್ಕ ಮುಗುಳುನಗುವಿನಲ್ಲಿ ಸಾವಿರಾರು ಮನೋ-ಬುದ್ಧಿಗಳನ್ನು ಬೆಳಗಿದ ಬೆಳಕಿನ ಕಿಡಿಗಳಿರುತ್ತವೆ. ಹೀಗಾಗಿ ಯಾವುದೇ ಒಂದು ಶಾಲೆ ನೂರು ವರ್ಷಗಳನ್ನು ಕಂಡು, ಇಂದೂ ದೃಢವಾಗಿ ನಡೆಯುತ್ತಿದೆ ಎಂದಾದರೆ, ಅದು ಇತಿಹಾಸದಲ್ಲಿ ದಾಖಲಾಗಬೇಕಾದ ವಿಷಯವೇ.

1920ರಲ್ಲಿ ಆಗಿನ ಡಿಸ್ಟ್ರಿಕ್ಟ್ ಬೋರ್ಡ್ ಎಲಿಮೆಂಟರಿ ಶಾಲೆಯಾಗಿ ಎಲಿಮಲೆ ಸ್ಕೂಲ್ ಆರಂಭವಾಯಿತು. ಇದಕ್ಕೆ ವಿಸ್ತಾರವಾದ ಜಾಗವನ್ನು ಅಹಮದ್ ಸಾಹುಕಾರ್ ಎಂಬ ಹಿರಿಯರು ಆಗ ದಾನ ಮಾಡಿದರು ಎಂಬ ಒಂದು ಸಂಗತಿಯನ್ನು ಇಲ್ಲಿ ನೆನೆಯುವಾಗ, ಹರೇಕಳ ಹಾಜಬ್ಬ ಅವರ ಸಾಧನೆಯೂ ಜತೆಜತೆಗೇ ನೆನಪಾಗಿ ಹೃದಯ ತುಂಬಿಬರುತ್ತದೆ. ಸ್ವತಃ ಅಹಮದ್ ಸಾಹುಕಾರರು ಎಷ್ಟು ಕಲಿತಿದ್ದರೋ ಇಂದು ತಿಳಿಯದು; ಆದರೆ ಊರಿನ ಮಕ್ಕಳೆಲ್ಲ ಕಲಿತು ದೊಡ್ಡ ಸಾಧಕರಾಗಲಿ ಎಂಬ ಲೋಕಹಿತದ ಅಖಂಡ ಬಯಕೆಯೊಂದು ಅವರಲ್ಲಿ ಇದ್ದಿತೆಂಬುದು ಮುಖ್ಯ. 1960ರಲ್ಲಿ ಹಿರಿಯ ಪ್ರಾಥಮಿಕ ಶಾಲೆಯಾಗಿ ಮೇಲ್ದರ್ಜೆಗೇರಿದ ಈ ಶಾಲೆಯಲ್ಲಿ ಇಂದಿನವರೆಗೂ ಸುಮಾರು 4500 ಮಕ್ಕಳು ಕಲಿತಿರಬಹುದು ಎಂಬ ಅಂದಾಜು. ಸುತ್ತಮುತ್ತಲಿನ ದೇವಚಳ್ಳ, ನೆಲ್ಲೂರು ಕೆಮ್ರಾಜೆ, ಅಮರಮುಡ್ನೂರು, ಮರ್ಕಂಜ ಗ್ರಾಮಗಳಿಗೆಲ್ಲ ಆಗ ಇದೇ ಕೇಂದ್ರ. ಆಗ ಮೂರು ಕೊಠಡಿಗಳ ಮಂಗಳೂರು ಹಂಚಿನ ಪುಟ್ಟ ಕಟ್ಟಡವಾಗಿ ಆರಂಭವಾದ ಇದು ಇಂದು ಸುಸಜ್ಜಿತವಾಗಿ ಬೆಳೆದುದರಲ್ಲಿ ನಮ್ಮ ನಾಡಿನ ಎಲ್ಲ ಸರಕಾರಿ ಶಾಲೆಗಳ ಏಳುಬೀಳುಗಳ ಕತೆಯನ್ನು ಗುರುತಿಸಬಹುದು. ಕನ್ನಡ ಪ್ರಾಥಮಿಕ ಶಾಲೆಯಲ್ಲಿ ಕಲಿತವನು ತಾನು ಎಂದು ಹೆಮ್ಮೆಯಲ್ಲಿ ಹೇಳಿಕೊಳ್ಳುವ ಹಳೆಯ ವಿದ್ಯಾರ್ಥಿಗಳಲ್ಲಿ ನಾವು ಇಂದು ವಿಜ್ಞಾನಿಗಳು, ವೈದ್ಯರು, ಎಂಜಿನಿಯರ್‌ಗಳು, ಅಧಿಕಾರಿಗಳನ್ನೆಲ್ಲಾ ಕಾಣಬಹುದು. ಕಳೆದ ವರ್ಷ ಎಲ್‌ಕೆಜಿ, ಯುಕೆಜಿಯನ್ನೂ ಶುರು ಮಾಡಿದ ಈ ಶಾಲೆಯಲ್ಲಿ ಈ ವರ್ಷ ಆಂಗ್ಲ ಮಾಧ್ಯಮ ಒಂದನೇ ತರಗತಿ ಕೂಡ ಶುರುವಾಗುತ್ತಿದೆ. ಒಂದು ಸಮಾಜ ಬದಲಾದಂತೆ ಅಲ್ಲಿನ ಶಿಕ್ಷಣವನ್ನು ನೋಡುವ ನೋಟ ಕೂಡ ಬದಲಾಗುತ್ತದೆ. ಮೂರು ದಶಕಗಳ ಹಿಂದೆ ಇಲ್ಲಿ ಪ್ರತಿವರ್ಷ ಸರಾಸರಿ 350 ಮಕ್ಕಳು ಇರುತ್ತಿದ್ದರು. ಈ ವರ್ಷ 167 ಮಕ್ಕಳು ಮಾತ್ರ ಇದ್ದಾರೆ. ಇದರ ಎರಡು ಪಟ್ಟು ಮಕ್ಕಳು ಹೊಸದಾಗಿ ಶುರುವಾದ ಇಂಗ್ಲಿಷ್ ಮೀಡಿಯಂ ಶಾಲೆಗಳಿಗೆ ಹೋಗುತ್ತಿದ್ದಾರೆ. ಶಾಲೆಯ ಕಟ್ಟಡವೇನೋ ದೃಢವಾಗಿದೆ, ಕನ್ನಡದ ಪಂಚಾಂಗ ಮಾತ್ರ ನಡುಗುತ್ತಿದೆ, ಆ ಮಾತು ಬೇರೆ.

ಶಾಲೆಯೆಂದರೆ ಕಟ್ಟಡ ಮಾತ್ರವೇ? ಹಳೆ ವಿದ್ಯಾರ್ಥಿಗಳ ಭಾವಕೋಶದಲ್ಲಿ ಶಾಲೆಯೆಂದರೆ ಕಟ್ಟಡದ ಕೆಲವಂಶ ಮಾತ್ರ. ಉಳಿದ ಭಾಗವನ್ನು ಅಲ್ಲಿ ಕಲಿಸಿದ ಮೇಸ್ಟ್ರುಗಳು, 'ಟೀಚಾ'ಗಳು, ಸಂಗಡ ಕುಳಿತ ಸಹಪಾಠಿಗಳು ತುಂಬಿಕೊಳ್ಳುತ್ತಾರೆ. 'ಸವಿ ಸವಿ ನೆನಪು ಸಾವಿರ ನೆನಪು' ಎಂದು ಒಂದೊಂದನ್ನೇ ಹೆಕ್ಕುವಂತಾಗುತ್ತದೆ. ಆರರಿಂದ ಹದಿನಾರು ವರ್ಷ- ಅದು ಮನುಷ್ಯನ ಒಟ್ಟಾರೆ ಪ್ರಜ್ಞೆಯ ಸ್ವರೂಪವನ್ನು ನಿರ್ಧರಿಸುವ ಕಾಲ. ಯಾರೋ ಮೇಸ್ಟ್ರು ನಿಮ್ಮಲ್ಲಿರುವ ಹಾಡುವ ಪ್ರತಿಭೆಯನ್ನು ಗುರುತಿಸುತ್ತಾರೆ. ಇನ್ಯಾರೋ ಟೀಚರು ನಿಮ್ಮಲ್ಲಿರುವ ನೃತ್ಯ ಪ್ರತಿಭೆಯನ್ನು ಹೊರತೆಗೆಯುತ್ತಾರೆ. ಇಂದು ನೀವು ಒಳ್ಳೆಯ ಗಾಯಕರೋ ಡ್ಯಾನ್ಸರೋ ಆಗಿದ್ದೀರಿ. ಗಣಪತಿ ಮಾಸ್ಟ್ರು ವಾರದ ಕೊನೆಯ ಸಾಂಸ್ಕೃತಿಕ ಕಾರ್ಯಕ್ರಮದ ವೇಳೆ ನಿಮ್ಮ ಕೈಗೆ ಬಲವಂತವಾಗಿ ಮೈಕು ಕೊಟ್ಟು 'ಭಾಷಣ ಮಾಡು' ಎಂದು ಹೇಳುತ್ತಾರೆ. ಅದುವರೆಗೂ ವೇದಿಕೆ ಎಂದರೆ ಮೈಕೈ ನಡುಗುತ್ತಿತ್ತು; ಅಂದಿನಿಂದ ನೀವು ಹೊಸ ಮನುಷ್ಯನಾಗಿದ್ದೀರಿ. ಎಷ್ಟು ಜನರ ಮುಂದೆ ಮಾತನಾಡಲೂ ಅಂಜಿಕೆಯಾಗುವುದಿಲ್ಲ.

ನನಗೆ ಹೀಗೆ ಸಿಕ್ಕಿದವರು ರಾಮ ಅಜಿಲರು. ತಂಪು ಹೊತ್ತಿನಲ್ಲಿ ನೆನೆಯಬೇಕು ಅವರನ್ನು. ಶಾಲೆಯ ಲೈಬ್ರರಿಯಲ್ಲಿದ್ದ ಶಿವರಾಮ ಕಾರಂತರ, ನಾ.ಡಿಸೋಜರ ಕಾದಂಬರಿಗಳು, ಕುವೆಂಪು ಪದ್ಯಗಳನ್ನೆಲ್ಲ ಕೊಟ್ಟು ಓದಿಸಿದರು. ಕ್ಲಾಸಿಗೆ ಬಂದಾಗ ಪಾಠಕ್ಕಿಂತ ಹೆಚ್ಚಾಗಿ ಕತೆ ಹೇಳಿದರು. 'ಶಾಲಾ ದಿನಕ್ಕೆ ಯಕ್ಷಗಾನ ತಾಳಮದ್ದಲೆ ಮಾಡುತ್ತೇವೆ' ಎಂದರೆ ಸೈ ಎಂದು ರಿಹರ್ಸಲ್ ಮಾಡಿಸಿ ತಾವೇ ಎಲ್ಲಿಂದಲೋ ತಂದ ಚೆಂಡೆ ಬಾರಿಸಿದರು. ಮತ್ತೊಮ್ಮೆ ಶಾಲಾ ವಾರ್ಷಿಕೋತ್ಸವದ ದಿನ 'ಕೌಂಡ್ಲಿಕ ವಧೆ' ಯಕ್ಷಗಾನ ಆಡಿಸಿದ್ದರು. ಇದು ದ್ರೌಪದಿಯ ಪ್ರತಾಪದ ಕತೆ ಹೊಂದಿರುವ ಯಕ್ಷಗಾನ. ಇದರಲ್ಲಿ ದ್ರೌಪದಿ ಕೌಂಡ್ಲಿಕ ಎಂಬ ರಾಕ್ಷಸನನ್ನು ಕೊಲ್ಲುತ್ತಾಳೆ. ರಾಮ ಅಜಿಲರೇ ಕೌಂಡ್ಲಿಕನ ಪಾತ್ರ ಮಾಡಿದರು. ಅದು ತಡರಾತ್ರಿ, ಬೆಳಗಿನ ಜಾವ ನಿದ್ರೆಗಣ್ಣಿನಲ್ಲಿದ್ದಾಗ ನಡೆದ ಪ್ರಸಂಗ. ಅವರು ಅಂದು ರಂಗದ ಮೇಲೆ ಅಬ್ಬರಿಸಿದ ರೀತಿ ನೋಡಿದರೆ, ಕ್ಲಾಸಿನಲ್ಲಿ ನಿತ್ಯ ಕಾಣುವ ಸಾಧು ಸ್ವಭಾವದ ರಾಮ ಮಾಸ್ಟ್ರು ಇವರೇನಾ ಎಂದುಕೊಳ್ಳುವಂತಾಗಿತ್ತು.

ಸೋಮಣ್ಣ ಮಾಸ್ಟ್ರು ವರ್ಷಂಪ್ರತಿ ನಡೆಯುತ್ತಿದ್ದ ಶಾರದಾ ಪೂಜೆಯ ಹೊತ್ತಿಗೆ ಒಂದಷ್ಟು ಹಣ ಕೊಟ್ಟು 'ಹೋಗಿ ಮಮ್ಮದೆಯ ಅಂಗಡಿಯಿಂದ ಅವಲಕ್ಕಿ ಬೆಲ್ಲ ತೆಂಗಿನಕಾಯಿ ತೆಗೆದುಕೊಂಡು ಬನ್ನಿ' ಎಂದು ಕಳಿಸುತ್ತಿದ್ದರು. ಶಾಲೆಯ ಗಾರ್ಡನ್‌ನಲ್ಲಿ ಬಿಡುತ್ತಿದ್ದ ದೀವಿ ಹಲಸು, ತೆಂಗಿನಕಾಯಿಗಳನ್ನೆಲ್ಲ ಮಕ್ಕಳ ನಡುವೇ ಏಲಂ ಮಾಡುತ್ತಿದ್ದರು. ಅದರಲ್ಲೇ ವ್ಯಾಪಾರದ ಅನುಭವ ಆಗುತ್ತಿತ್ತು. ಶಾರದಾ ಪೂಜೆಗೆ ಪುಸ್ತಕಗಳನ್ನು



ಜೋಡಿಸುವಲ್ಲಿ ರಶೀದ್, ಫಾತಿಮಾ, ಆಂಟನಿ ನೆರವಾಗುತ್ತಿದ್ದರು. ಪದ್ಮಯ್ಯ ಮಾಸ್ಟ್ರು, ಬೊಳಿಯಮ್ಮ ಟೀಚರ್, ವೆಂಕಟರಮಣ ಮಾಸ್ಟ್ರು, ಗಣಪಯ್ಯ ನಾಯಕರು ಎಲ್ಲರೂ ಒಂದೊಂದು ಗುಣವನ್ನು ಮಕ್ಕಳಲ್ಲಿ ರೂಢಿಸಿದವರು. ಇವೆಲ್ಲಾ ನನ್ನೊಬ್ಬನ ಅನುಭವ ಅಲ್ಲ; ಹಳ್ಳಿಯ ಪ್ರಾಥಮಿಕ ಶಾಲೆಗಳಲ್ಲಿ ಕಲಿತ ಎಲ್ಲರ ಅನುಭವ, ಆದ್ದರಿಂದ ಇದು ಸಾರ್ವತ್ರಿಕವಾದದ್ದು.

ನೆನಪಿನ ರಂಗಸ್ಥಳದಲ್ಲಿ ಎಷ್ಟೊಂದು ಗೆಳೆಯರು, ಗೆಳತಿಯರು ಹಾದುಹೋಗುತ್ತಾರೆ. ಪಕ್ಕದಲ್ಲಿ ಕುಳಿತವರು, ಹಿಂದೆ ಕುಳಿತು ಬೆನ್ನಿನಲ್ಲಿ ಬರೆದವರು, ಕಬಡ್ಡಿಯಲ್ಲಿ ಸದಾ ಪೈಪೋಟಿ ಕೊಡುತ್ತಿದ್ದವರು, ಗಣಿತ ಪೀರಿಯೆಡ್‌ನಲ್ಲಿ ಮೂತ್ರಶಂಕೆ ಅಂತ ಸುಳ್ಳು ಹೇಳಿ ಗುಡ್ಡಕ್ಕೆ ಓಡುತ್ತಿದ್ದಾಗ ಜತೆ ನೀಡಿದವರು, ಹೋಂವರ್ಕ್ ಕಾಪಿ ಮಾಡಲು ಕೊಡುತ್ತಿದ್ದವರು, ರಾಕೆಟ್ ಮಾಡಿ ಎಸೆಯುತ್ತಿದ್ದವರು, ಮಾರ್ಕು ತೆಗೆಯುತ್ತಿದ್ದವರು ಮತ್ತು ಸೊನ್ನೆ ಸುತ್ತುತ್ತಿದ್ದವರು... ಎಲ್ಲ ಎಲ್ಲೆಲ್ಲಿದ್ದಾರೋ. ಎಲ್ಲೋ ಒಮ್ಮೊಮ್ಮೆ ಸಹಪಾಠಿಗಳು ಸಿಗುತ್ತಾರೆ. ಅಂದಿನ ದಿನಗಳನ್ನು ಇಂದಿನ ಯಾವ ಲೇಪವಿಲ್ಲದೆ ಮುಗ್ಧವಾಗಿ ನೆನಪಿಸಿಕೊಂಡು ನಕ್ಕುನಲಿಯುವ ಮನಸ್ಸು ಎದುರಾದರೆ ಅದು ಪುಣ್ಯ. ಎಷ್ಟೋ ಸಲ ಸರಿದು ಬಿಟ್ಟಿರುತ್ತೇವೆ ನಮ್ಮದೇ ಆದ ಬದುಕಿನ ಸಮುದ್ರಗಳಂಚಿಗೆ. ಅಂಥ ಗೆಳೆಯರನ್ನು ಈ ಶಾಲೆಗಳು ಒಟ್ಟುಗೂಡಿಸಲಿ. ಮತ್ತು ಇದಕ್ಕೆ ಶಾಲೆಗಳಿಗೆ ನೂರಾಗುವುದಕ್ಕೂ ಕಾಯುವುದು ಬೇಡ.

ಖಾಸಗಿ ಶಾಲೆಗಳಂತಲ್ಲದೆ, ಸರಕಾರಿ ಶಾಲೆಯೆಂದರೆ ಸಮುದಾಯದ ಆಸ್ತಿ. ಅಲ್ಲಿ ಜಾತಿ-ಧರ್ಮ-ಲಿಂಗ-ವಯಸ್ಸಿನ ಭೇದವಿಲ್ಲದೆ ಎಲ್ಲರೂ ಬರುತ್ತಾರೆ, ಬರಬೇಕು. ಮಿತ್ರ ಸಮಾಜದವರು ನಾಟಕ ಆಡಿದರೆ, ಗೆಳೆಯರ ಬಳಗದವರು ಯಕ್ಷಗಾನ ಮಾಡಿದರೆ ರಿಹರ್ಸಲ್ ಮಾಡುವುದಕ್ಕೆಲ್ಲಾ ಇದೇ ಜಾಗ. ದುರ್ಗಾಪರಮೇಶ್ವರಿ ಯಕ್ಷಗಾನ ಮಂಡಳಿಯ ಶನಿವಾರ ರಾತ್ರಿಯ ತಾಳಮದ್ದಳೆ ಕೂಟಕ್ಕೂ ಶಾಲೆಯ ಜಗಲಿಯೇ ಆಶ್ರಯ. ಮಹಿಳಾ ಸಂಘದ ವಾರದ ಸಭೆಗೆ ಇದೇ ತಾಣ. ಪಂಚಾಯತಿಯ ಹಾಲ್‌ಗಳಂಥ ಸಾಮುದಾಯಿಕ ಜಾಗಗಳು ಇನ್ನೂ ರೂಪುಗೊಂಡಿಲ್ಲದ ಕಾಲದಲ್ಲಿ ಶಾಲಾ ಜಗುಲಿಗಳೇ ಊರವರು ಸೇರುವ ನೆಲೆ. ಹೀಗಾಗಿ ಊರಿನವರಿಗೆ ಶಾಲೆಯ ಮೇಲೆ ಎಲ್ಲಿಲ್ಲದ ಹಕ್ಕು. ಇಂದು ಅದೇ ಹಕ್ಕೇ ಶಾಲೆಯನ್ನು ಚಂದಗೊಳಿಸುವಲ್ಲಿಯೂ ನೆರವಾಗಿದೆ. ಊರಿನ ಪ್ರತಿಯೊಬ್ಬನೂ ಈ ಶಾಲೆ ತನ್ನದು ಎಂಬ ಭಾವನೆಯಲ್ಲಿ ದುಡ್ಡು ಹಾಕಿ, ಶ್ರಮದಾನ ಮಾಡಿ ಶಾಲೆಗೆ ಹೊಸ ಕೊಠಡಿಗಳು, ರಂಗಮಂದಿರ ಎಲ್ಲ ಮಾಡಿಸಿದ್ದಾರೆ. ಇದು ಪ್ರತಿ ಊರಿನಲ್ಲೂ ಆಗಬೇಕು.

ಊರಿಗೊಂದು ಸರಕಾರಿ ಶಾಲೆಯಿರುವುದು ಆ ಊರಿನ ಸೌಭಾಗ್ಯ. ಸರಕಾರಿ ಶಾಲೆಗಳು ಮುಚ್ಚುತ್ತಿರುವ ಹೊತ್ತಿನಲ್ಲಿ ಈ ಮಾತನ್ನು ಮತ್ತೆ ಮತ್ತೆ ಹೇಳಬೇಕು. ಖಾಸಗಿ ಶಾಲೆಗಳು ಒಬ್ಬ ವ್ಯಕ್ತಿಯನ್ನಷ್ಟೆ ಶ್ರೀಮಂತಗೊಳಿಸಬಲ್ಲುದಾದರೆ, ಸರಕಾರಿ ಶಾಲೆಗಳು ಇಡೀ ಊರನ್ನೇ ಶ್ರೀಮಂತಗೊಳಿಸಬಲ್ಲುವು. ಅದರ ಶ್ರೀಮಂತಿಕೆ ಅದರ ಬಹುತ್ವ, ಎಲ್ಲರನ್ನು ಒಳಗೊಳ್ಳುವ ಸಾಂವಿಧಾನಿಕ ನೆಲೆ, ಇಡೀ ಸಮುದಾಯವನ್ನು ಆವರಿಸಿಕೊಳ್ಳುವ ವೈಶಾಲ್ಯಗಳಲ್ಲಿದೆ. ಒಂದು ಊರಿನ ಭಾವಕೋಶವಾಗಿ ಶಾಲೆ ಬೆಳೆಯುವುದು ಮತ್ತು ಆ ಶಾಲೆಯಲ್ಲಿ ಬೆಳೆದವರು ಅದನ್ನು ತಮ್ಮ ಜೀವನವಿಡೀ ಎದೆಯಲ್ಲಿ ಪದಕದಂತೆ ಧರಿಸಿರುವುದು ಎಷ್ಟು ಚಂದ!

ಪ್ರಸ್ತುತ
ಲೀನಾ ಜೋಷಿ ಕಾಮತ್
vveditoped@gmail.com

## ವರುಷವೊಂದು ಸಂದಿತು ರಾಮಮಂದಿರಕೆ...

ಇನ್ನಷ್ಟು ಬೇಕೆನ್ನ ಹೃದಯಕ್ಕೆ ರಾಮ!
ನಿನ್ನಷ್ಟು ನೆಮ್ಮದಿಯು ಎಲ್ಲಿಹುದೋ ರಾಮ!

ಒಂದು ವರುಷವಾಯಿತು ರಾಮನಿಗೊಂದು ದೇಗುಲ ಕಟ್ಟಿ. ಕಳೆದೊಂದು ವರ್ಷದಿಂದ ಈ ಹಾಡನ್ನು ಎಷ್ಟು ಕೇಳಿದರು ಸಾಲದು. ಪದೇ ಪದೇ ಕೇಳಬೇಕು ಎನಿಸುತ್ತದೆ. ರಾಮ ನಾಮದಲ್ಲೇ ಅದೇನೋ ಶಕ್ತಿ, ದಿವ್ಯ ಅನುಭೂತಿ ! ರಾಮ ನಾಮ ಭಾರತೀಯರೆಲ್ಲರ ಜೀವನದ ಅವಿಭಾಜ್ಯ ಅಂಗ. ರಾಮನ ಹೆಸರಿನೊಂದಿಗೆ ಸಮ್ಮಿಳಿತವಾದ ಹೆಸರುಗಳನ್ನು ಪಟ್ಟಿ ಮಾಡುತ್ತಾ ಹೋದರೆ ಅದಕ್ಕೆ ಕೊನೆ ಇಲ್ಲ. ರಾಮ ಈ ಭೂಮಿಯ ಮೇಲೆ ಜೀವಿಸಿ, ಗತಿಸಿ ಅದೆಷ್ಟು ಸಾವಿರ ವರ್ಷಗಳು ಕಳೆದರೂ ರಾಮನ ನಾಮ, ರಾಮನ ಜೀವನ, ರಾಮನ ತ್ಯಾಗ, ರಾಮನ ಪ್ರೇಮ , ರಾಮಾಯಣದ ಪ್ರತಿ ಪಾತ್ರಗಳು ಇಂದಿಗೂ ಎಂದೆಂದಿಗೂ ಜನ ಮಾನಸದಲ್ಲಿ ಜೀವಂತ. ಭ್ರಾತೃತ್ವ, ತ್ಯಾಗ, ನಿರ್ಮಲ ಪ್ರೀತಿಯ ವಿಷಯ ಬಂದಾಗ ಮೊದಲು ನೆನಪಿಗೆ ಬರುವುದೇ 'ರಾಮಾಯಣ'. ರಾಮಾಯಣದ ಪ್ರತಿಯೊಂದು ಪಾತ್ರಗಳು ಜೀವನದುದ್ದಕ್ಕೂ, ಪ್ರತಿಯೊಂದು ಸನ್ನಿವೇಶ, ಸಂದರ್ಭಗಳಲ್ಲಿ ಅನುಸರಿಸಿದ, ಜೀವನದ ಪ್ರತಿಯೊಂದು ಪರೀಕ್ಷೆಯನ್ನು ಎದುರಿಸಿದ ರೀತಿ ಎಂದಿಗೂ ಪ್ರಾತಃ ಸ್ಮರಣೀಯ. ರಾಮ ನಡೆದ ಹಾದಿ, ರಾಮನ ಆದರ್ಶಪ್ರಾಯ ಜೀವನ, ಅವನು ಅನುಭವಿಸಿದ ಕಷ್ಟಗಳು, ಅವುಗಳಿಂದ ಹೊರಬರಲು ತೆಗೆದುಕೊಂಡ ಪ್ರತಿ ನಿರ್ಧಾರಗಳನ್ನು ನೆನೆಸಿಕೊಂಡರೆ, ಅನಿಸುವುದು ಒಂದೇ . ಹೀಗೂ ನಡೆದಿತ್ತಾ ತ್ರೇತಾಯುಗದಲ್ಲಿ?

ರಾಮನ ಜೀವನದಲ್ಲಿ ಬರುವ ಘಟನಾವಳಿಗಳನ್ನು, ರಾಮಾಯಣದ ಪ್ರತಿ ಪಾತ್ರಧಾರಿಯನ್ನು ಈ ಕಲಿಯುಗದಲ್ಲಿ ಒಮ್ಮೆ ಹೋಲಿಸಿ ನೋಡಿ. ಇದು ಸಾಧ್ಯವಾ ? ಈ ರೀತಿಯೂ ಬದುಕಿದ್ದರಾ? ಬದುಕಬಹುದಾ? ಎಂಬ ಪ್ರಶ್ನೆ ಸುಳಿಯದೇ ಇರಲಾರದು. ದಶರಥನ ನಾಲ್ಕು ಮಕ್ಕಳು ರಾಮ, ಭರತ ಲಕ್ಷ್ಮಣ, ಮತ್ತು ಶತ್ರುಘ್ನ ಎಲ್ಲರಿಗಿಂತಲೂ ತುಸು ಭಿನ್ನ. ತಾಯಂದಿರು ಬೇರೆ ಬೇರೆಯಾದರೂ ಅಣ್ಣತಮ್ಮಂದಿರಲ್ಲಿ ಚಿಕ್ಕಂದಿನಿಂದಲೂ ಅವಿನಾಭಾವ ಸಂಬಂಧ. ಒಬ್ಬರನೊಬ್ಬರು ಎಂದಿಗೂ ಬಿಟ್ಟುಕೊಡದ ಅಪರೂಪದ ಸಹೋದರರು. ಒಂದೇ ತಾಯಿಯ ಮಕ್ಕಳಾದರೂ, ಒಡಹುಟ್ಟಿದವರಲ್ಲಿ ಅದೆಷ್ಟು ಅಸೂಯೆ, ದ್ವೇಷದ ಭಾವನೆಗಳಿರುತ್ತವೆ. ಆದರೆ ಅಯೋಧ್ಯೆಯ ರಾಜಕುಮಾರರದ್ದು, ಅಕ್ಷರಗಳಲ್ಲಿ ವರ್ಣಿಸಲಾಗದ ಪ್ರೀತಿ, ಬಾಂಧವ್ಯ! ಮೂವರು ಸಹೋದರರಿಗೆ ಅಣ್ಣನಲ್ಲಿ ಅಷ್ಟೊಂದು ಪ್ರೀತಿ, ಗೌರವ ಇರಬೇಕೆಂದರೆ ಅಣ್ಣ ಅದೆಷ್ಟು ಸಹೃದಯಿಯಾಗಿರಬೇಡ? ಅಣ್ಣನಿಗೆ ಅದೆಷ್ಟು ಮಮತೆ, ಅಕ್ಕರೆ, ತಮ್ಮಂದಿರ ಮೇಲಿರಬೇಕು? ಈ ಬಾಂಧವ್ಯದಲ್ಲಿ, ಅವರ ತಾಯಂದಿರ ಪಾತ್ರವು ಅಷ್ಟೇ ಮಹತ್ವದ್ದು. ಕೌಸಲ್ಯ, ಸುಮಿತ್ರೆ ಮತ್ತು ಕೈಕೇಯಿ ಎಂದಿಗೂ ತಮ್ಮ ಮಕ್ಕಳಲ್ಲಿ ವಿಷಬೀಜ ಬಿತ್ತಿರಲಿಲ್ಲ. ಸವತಿಯ ಮಕ್ಕಳಲ್ಲೂ ಬಹುಶಃ ಸ್ವಂತ ಮಕ್ಕಳ ತರಹವೇ ತಾಯ್ತನದ ಮಮತೆಯನ್ನು ತೋರಿಸಬೇಕು, ಇಲ್ಲವಾದಲ್ಲಿ ಈ ಪರಿ ಅನ್ಯೋನ್ಯತೆ ಕಾಣಲು ಸಾಧ್ಯವೇ? ರಾಮಾಯಣದ ಸನ್ನಿವೇಶಗಳನ್ನು ಇಂದಿನ ಕಲಿಯುಗದ ಜೀವನದಲ್ಲೊಮ್ಮೆ ಅಳವಡಿಸಿ ನೋಡಿದಾಗಲೇ, ಆ ಯುಗದ ಆ ಸಹೋದರರ ಕಥೆಯ ಅಗಾಧತೆ ಅರಿವಾಗುವುದು.

1. ಅಪ್ಪ, ತನ್ನ ಮೂರನೇ ಹೆಂಡತಿಯ ಮಾತಿಗೆ ತಲೆಗೊಟ್ಟು, ಆಸ್ತಿಯಿಂದ/ಪಾಲಿನಿಂದ ಹೊರಗಟ್ಟಿದರೆ, ಮೊದಲನೆ ಹೆಂಡತಿಯ ಮಗ, ಮರು ಮಾತನಾಡದೆ, ಕೊನೆಪಕ್ಷ ತನ್ನ ತಪ್ಪಾದರು ಏನು ತಂದೆ ಎಂಬ ಪ್ರಶ್ನೆ ಕೇಳದೆ, ಎಲ್ಲವನ್ನೂ ಬಿಟ್ಟು, ಉಟ್ಟ ಬಟ್ಟೆಯಲ್ಲಿಯೇ ,ಊರು ಬಿಟ್ಟು ಹೋಗುವನೇ ?
2. ಶ್ರೀಮಂತನ ಮಗಳಾಗಿ ಹುಟ್ಟಿ, ಸುಖದ ಸುಪ್ಪತ್ತಿಗೆಯಲ್ಲಿ ಬೆಳೆದ, ಅಪ್ಪನಿಗಿಂತಲೂ ದೊಡ್ಡ ರಾಜಮನೆತನದ ಹಿರಿಯ ಸೊಸೆಯಾಗಿ ಬಂದವಳು, ಗಂಡ ತನಗೇನು ಬೇಡ, ಊರು ಬಿಟ್ಟು ಹೋಗುತ್ತೇನೆ ಎಂದಾಗ, ಅವನನ್ನು ಅನುಸರಿಸುವಳೇ ಅಥವಾ ನಮ್ಮಪ್ಪನ ಮನೆಗೆ ಹೋಗಿ, ಅಪ್ಪನ ಬಳಿ ಸಹಾಯ ಕೇಳಿ, ಅಪ್ಪನ ಊರಲ್ಲೇ ಯಾವುದೋ ವ್ಯಾಪಾರ, ಉದ್ಯೋಗ ಮಾಡೋಣ ಎಂದು ರಚ್ಚೆ ಹಿಡಿಯುವಳೇ ?
3. ಹೊಸದಾಗಿ ಮದುವೆಯಾದ ಹೆಂಡತಿಗೆ, ಮಾವನ ಮನೆಯಲ್ಲಿ ಇದ್ದು ತನ್ನ ತಾಯಿಯನ್ನು ನೋಡಿಕೋ ಎಂದು ಊರು ಬಿಟ್ಟ ಅಣ್ಣನೊಂದಿಗೆ ತಾನೂ ಕೂಡ ಊರು ಬಿಟ್ಟು ಬರುವ ಲಕ್ಷ್ಮಣನಂತಹ ತಮ್ಮಂದಿರಿರಲು ಸಾಧ್ಯವೇ?
4. ಗಂಡ ತನ್ನನ್ನು ಬಿಟ್ಟು, ಅತ್ತಿಗೆ ಮತ್ತು ಬಾವನ ಜೊತೆಗೆ ಊರು ಬಿಟ್ಟು ಹೋದರೂ, ಕೋಪಗೊಳ್ಳದೆ ತವರು ಮನೆಗೂ ಹೋಗದೆ, ಅತ್ತೆಯ ಮನೆಯಲ್ಲಿಯೇ ಉಳಿದ ಊರ್ಮಿಳೆಯಂತಾಗಲೂ ಸಾಧ್ಯವೇ?
5. ಅಣ್ಣನಿಗೆ ಅಪ್ಪ ಆಸ್ತಿ ಕೊಡಲಿಲ್ಲ ಎಂದು, ತಾಯಿಯನ್ನೇ ಅಪರಾಧಿ ಸ್ಥಾನದಲ್ಲಿ ನಿಲ್ಲಿಸಿ, ಅಣ್ಣನಿಗಿಲ್ಲದ ಪಾಲು, ನನಗೂ ಬೇಡ ಎಂದು ಮನೆ ತೊರೆದು, ಊರಿನ ಮೂಲೆಯಲ್ಲೊಂದು ಮನೆ ಮಾಡಿ ಒಬ್ಬಂಟಿ ಜೀವನ ಸಾಗಿಸುವ ಭರತನಂತಾಗಲು ಸಾಧ್ಯವೇ?
6. ತನ್ನ ಮಗನ ಪಾಲಿಗೆ ಕಂಟಕವಾದ ಸವತಿ ಕೈಕೇಯಿಗೆ ಒಂದು ಮಾತು ಹೇಳದೆ, ಮಗ ತಿರುಗಿ ಬರುವನೆಂಬ ನಂಬಿಕೆಯೊಂದಿಗೆ, ಮನೆಯಲ್ಲೇ ಉಳಿದ ಕೌಸಲ್ಯೆಯಾಗಲು ಸಾಧ್ಯವೇ?
7. ಅಣ್ಣನಿಗೆ ಪಾಲು ಕೊಡಲಿಲ್ಲ ಎಂದು ಸಿಟ್ಟಿನಿಂದ ಮನೆ ಬಿಟ್ಟು ಹೋದ ಗಂಡನ ಆಜ್ಞೆಯಂತೆ, ಮನೆಯಲ್ಲಿಯೇ ಉಳಿದ 'ಮಾಂಡವಿ' ಯಂತಾಗಲು ಸಾಧ್ಯವೇ?
8. ತಂದೆಯ ಸಾವಿಗೆ ಕಾರಣಳಾದ, ಬಲವಂತವಾಗಿ ಊರು ಬಿಡ ಲು ಕಾರಣಳಾದ, ಅಪ್ಪನ ಮೂರನೇ ಹೆಂಡತಿಯನ್ನು , ಸ್ವಂತ ತಾಯಿಯಂತೆ ಗೌರವಿಸಿದ ಶ್ರೀರಾಮನಾಗಲು ಸಾಧ್ಯವೇ?
9. ಅಪ್ಪನೇ ಮೂರು ಮದುವೆ ಆಗಿರುವಾಗ, ನಾನೇಕೆ ಆಗಬಾರ ದೆಂದು ಯೋಚನೆ ಕೂಡ ಮಾಡದೇ , ಕೊನೆಯವರೆಗೂ ಏಕಪತ್ನಿವ್ರತಸ್ಥನಾಗಿಯೇ ಉಳಿದ ಶ್ರೀರಾಮನೆಲ್ಲಿ?
10. ಜನರ ಮಾತಿಗೆ ಬೆಲೆ ಕೊಟ್ಟು, ಒಂದು ಮಾತು ಹೇಳದೆ ತುಂಬು ಗರ್ಭಿಣಿಯನ್ನು ಕಾಡಿಗೆ ಕಳುಹಿಸಿದ ಗಂಡನನ್ನು, ಗಂಡನ ಮನೆಯವರನ್ನು, ಬೀದಿಯಲ್ಲಿ ನಿಂದಿಸದೆ ,ಅಪ್ಪನ ಮನೆಗೂ ಹೋಗದೆ, ಕೊನೆಗೆ ಗಂಡನ ಮನೆಗೆ ಕರೆದರೂ ಬಾರದೆ, ಭೂಮಿಯಲ್ಲಿ ಐಕ್ಯವಾದ ಸೀತೆ ! ಇದು ಸಾಧ್ಯವೇ?
11. ತಾನೆಷ್ಟೇ ಬಲಶಾಲಿಯಾದರೂ, ಒಡೆಯನ ವಿರುದ್ಧ ಒಂದೇ ಒಂದು ಅಪಸ್ವರವೆತ್ತದ, ರಾಮನನ್ನು ಹೃದಯದಲ್ಲಿಟ್ಟು ಪೂಜಿ ಸಿದ, ಕೊನೆವರೆಗೂ ತಲೆಯೆತ್ತಿ ವಾದಿಸದ, ಹನುಮಂತನಂಥ ವ್ಯಕ್ತಿತ್ವ ಸಾಧ್ಯವೇ?
12. ಅಣ್ಣ ಅತ್ತಿಗೆ ಜೊತೆಯಾಗಿ ಇರುವಾಗ, ನಾನೇಕೆ ನವ ಮಡದಿಯನ್ನು ಊರಲ್ಲಿ ಒಬ್ಬಂಟಿಯಾಗಿ ಬಿಟ್ಟು ಬಂದೆ ಎಂದು ಒಮ್ಮೆ ಯೂ ಯೋಚಿಸದ ಲಕ್ಷ್ಮಣನಂಥ ತಮ್ಮನಾಗಲು ಸಾಧ್ಯವೇ?

ಆಸ್ತಿಯಲ್ಲಿ ಒಂದು ಅಂಗುಲ ಜಾಗ ಕಡಿಮೆಯಾದರೂ, ಕೋರ್ಟ್ ಮೆಟ್ಟಿಲೇರುವ ಅಣ್ಣತಮ್ಮಂದಿರಲ್ಲಿ ? ದಶರಥ ರಾಜನ ಮಕ್ಕಳೆಲ್ಲಿ? ಪ್ರತಿಬಾರಿ ರಾಮಾಯಣ ಓದಿದಾಗ, ಪಾತ್ರಗಳೆಲ್ಲಾ ಕಣ್ಣ ಮುಂದೆ ಸಾಗಿ ಹೋದಾಗ ಮನಸ್ಸು ತೇವವಾಗುತ್ತದೆ. ಎಲ್ಲ ಸುಖ ಸಂಪತ್ತನ್ನು ಬಿಟ್ಟು ಬಂದ ಹೆಂಡತಿ, 12 ವರ್ಷಗಳ ಕಾಲ ಕಾಡಲ್ಲಿ ಜೊತೆಯಾಗಿ ಕಷ್ಟ ಸಹಿಸಿದ ಹೆಂಡತಿ, ಒಮ್ಮೆಲೇ ಕಣ್ಮರೆಯಾಗಿಬಿಟ್ಟಾಗ, ರಾಮ ತನ್ನ ದುಃಖವನ್ನು ಅಯೋಧ್ಯೆಯ ಸಹೋದರರೊಂದಿಗೆ, ಅಮ್ಮನೊಂದಿಗೆ, ಮನೆಯವರೊಂದಿಗೆ, ಸೀತೆಯ ತಂದೆಯೊಂದಿಗೆ, ನೆರೆಹೊರೆಯ ರಾಜರೊಂದಿಗೆ ತೋಡಿ ಕೊಳ್ಳಲಿಲ್ಲ. ಯಾವ ರಾಜರ ಬಳಿಯೂ ಸಹಾಯ ಭಿಕ್ಷೆ ಬೇಡಲಿಲ್ಲ, ಸ್ವಪ್ರಯತ್ನದಿಂದಲೇ, ಯಾರು ಊಹಿಸದ, ಅನನುಭವಿ ವಾನರ ಸೈನ್ಯ ಕಟ್ಟಿಕೊಂಡು, ಯಾರು ನೋಡಿರದ ದ್ವೀಪ ರಾಷ್ಟ್ರಕ್ಕೆ, ಕೇವಲ ಕಲ್ಲಿನ ಸೇತುವೆ ಕಟ್ಟಿ , ವೀರೋಚಿತವಾಗಿ ಹೋರಾಡಿ, ರಾವಣನನ್ನು ಅವನದ್ದೇ ರಾಜ್ಯದಲ್ಲಿ ಸೋಲಿಸಿ ಮಡದಿಯನ್ನು ಬಂಧನದಿಂದ ಮುಕ್ತಿಗೊಳಿಸಿದ್ದು ಅಸಾಮಾನ್ಯ! ಶತ್ರುವನ್ನೇ ನೋಡದ, ಅವನ ಶಕ್ತಿಯ, ಅವನ ಅಪಾರ ಸೈನ್ಯ ಬಲದ ಬಗ್ಗೆ ಕಿಂಚಿತ್ತು ಅರಿವಿಲ್ಲದ ವ್ಯಕ್ತಿಯೊಬ್ಬ, ಕೇವಲ ಮನೋಬಲದ ಮೇಲೆ, ಸತ್ಯ, ಧರ್ಮ, ನ್ಯಾಯವೊಂದನ್ನೇ ಜೀವನದ ಪರಮ ಉದ್ದೇಶವೆಂದು ನಂಬಿದ, ಜೀವನವಿಡಿ ಪಾಲಿಸಿದ ಶ್ರೀ ರಾಮನಿಂದ ಮಾತ್ರ ರಾವಣನನ್ನು ಸೋಲಿಸಲು ಸಾಧ್ಯ. ರಾಮಾಯಣ ಸತ್ಯವಲ್ಲ, ಕೇವಲ ಕಾದಂಬರಿ ಕಾಲ್ಪನಿಕ ಎಂದು ನಂಬಿಸುವ ಪ್ರಯತ್ನಗಳು ಅದೆಷ್ಟೋ ಶತಮಾನಗಳಿಂದ ನಿರಂತರವಾಗಿ ನಡೆಯುತ್ತಿದೆ. ಆದರೆ ಅದೆಷ್ಟೋ ಯುಗಗಳು ಕಳೆದರೂ, ಭಾರತೀಯರ ನಂಬಿಕೆ, ರಾಮನಲ್ಲೆಂದೂ ಕಿಂಚಿತ್ತು ಕಡಿಮೆಯಾಗಲಿಲ್ಲ, ಆಗುವುದು ಇಲ್ಲ !

# ನಿಮ್ಮ ಹೆಸರಿನಲ್ಲಿ ಎಷ್ಟು ಸಿಮ್‌ಗಳಿವೆ ಎಂದು ನಿಮಗೆ ಗೊತ್ತೆ?

**ನಿಮ್ಮ ಆಧಾರ್ ಸಂಖ್ಯೆ, ಮೊಬೈಲ್ ಸಂಖ್ಯೆಯನ್ನು ಕೇಂದ್ರ ಸರಕಾರದ 'ಸಂಚಾರಸಾಥಿ' ವೆಬ್‌ಸೈಟ್‌ನಲ್ಲಿ ಹಾಕಿದರೆ, ನಿಮ್ಮ ಹೆಸರಿನಲ್ಲಿ ಖರೀದಿಸಿರುವ ಒಟ್ಟು ಸಿಮ್‌ಗಳ ಅಧಿಕೃತ ಮಾಹಿತಿ ಪಡೆಯಬಹುದಾಗಿದೆ. ನಿಮಗೆ ಮಾಹಿತಿ ಇಲ್ಲದೆ ಖರೀದಿಸಿದ್ದರೆ, ಅವುಗಳನ್ನು ನೀವು ಬ್ಲಾಕ್ ಸಹ ಮಾಡಬಹುದಾಗಿದೆ.**

ಗಂಟಾಘೋಷ
ಗುರುರಾಜ್ ಗಂಟಿಹೊಳೆ
vveditoped@gmail.com

ನಿತ್ಯ ಜೀವನದಲ್ಲಿ ನಾವು ಒಂದಿಲ್ಲೊಂದು ರಾಂಗ್ ನಂಬರ್‌ನಿಂದ ಫೋನ್ ಕರೆ ಸ್ವೀಕರಿಸುತ್ತಲೇ ಇರುತ್ತವೆ ಅಥವಾ ಕರೆ ಸ್ವೀಕಾರಕ್ಕೂ ಮೊದಲೇ ಅದು ಕಟ್ ಆಗಿರುತ್ತದೆ. ಇತ್ತೀಚಿನ ದಿನಗಳಲ್ಲಿ ಅದು ಜಾಸ್ತಿಯೇ ಆಗಿದೆ. ಹಾಗೆ ನೋಡಿದರೆ ಇದು ರಾಂಗ್ ನಂಬರ್‌ನಿಂದ ಬಂದಿರುವ ಕರೆಗಳಲ್ಲ. ನಮ್ಮನ್ನು ಉದ್ದೇಶಪೂರ್ವಕವಾಗಿ ಕಾಡಲು ಬಂದಿರುವ ಕರೆಗಳು. ಅನೇಕರ ಸಂದರ್ಭದಲ್ಲಿ ನಾವು ನಮಗೆ ಅರಿವಿಲ್ಲದಂತೆಯೇ ಕಾರ್ಯದ ಒತ್ತಡದಲ್ಲಿ ಯಾವುದೋ ಅನಾಮಧೇಯ ಕರೆ ಸ್ವೀಕರಿಸಿ, ಅವರು ಕೇಳಿದ್ದೆಲ್ಲ ಮಾಹಿತಿಯನ್ನು ಕೊಟ್ಟೇ ಬಿಡುತ್ತೇವೆ. ಆನಂತರ ಅದರ ಬಗ್ಗೆ ಯೋಚನೆಯನ್ನೂ ಮಾಡುವುದಿಲ್ಲ. ಕೆಲ ಗಂಟೆಗಳ ನಂತರ ನಮ್ಮ ಮಾಹಿತಿ ಇನ್ನೆಲ್ಲೋ ಸಾಮಾಜಿಕ ಜಾಲತಾಣಗಳಲ್ಲಿ ಸೋರಿಕೆಯಾದಾಗ ಅಥವಾ ಬ್ಯಾಂಕ್ ಅಕೌಂಟ್‌ನಿಂದ ಏಕಾಏಕಿ ಹಣ ಕಟ್ ಆದಾಗ ಪಶ್ಚಾತ್ತಾಪ ಪಡುತ್ತೇವೆ. ಸೆನ್ ಪೊಲೀಸ್ ಠಾಣೆಯ ಕದ ತಟ್ಟುತ್ತೇವೆ. ಆದರೆ ಪೊಲೀಸರೂ ಈ ವಿಷಯದಲ್ಲಿ ನಮಗೆ ಪೂರ್ಣ ನ್ಯಾಯ ಒದಗಿಸಲಾರರು. ಕಾರಣ ಇತ್ತೀಚಿನ ದಿನಗಳಲ್ಲಿ ಸೈಬರ್ ಕ್ರೈಮ್ ದೊಡ್ಡ ಜಾಲವಾಗಿ ಬೆಳೆದಿದೆ. ಈ ಬಗ್ಗೆ ಸ್ವಯಂ ಜಾಗೃತಿಯೇ ನಮ್ಮನ್ನು ಸದಾ ಕಾಲ ಕಾಪಾಡುವುದು. ಹಾಗಂತ ಸರಕಾರಗಳು, ಇಲಾಖೆಗಳು ಜನ ಸಾಮಾನ್ಯರ ಸುರಕ್ಷತೆಯ ಬಗ್ಗೆ ಕ್ರಮ ತೆದುಕೊಳ್ಳಬಾರದೆಂದಲ್ಲ. ಸರಕಾರಗಳು ಸೈಬರ್ ಕ್ರೈಮ್ ತಡೆಯುವ ನಿಟ್ಟಿನಲ್ಲಿ ಕಠಿಣ ಕ್ರಮ ತೆಗೆದುಕೊಳ್ಳುವ ತುರ್ತು ಅಗತ್ಯವಿದೆ. ಆಧುನಿಕತೆ, ಮಾಹಿತಿ ತಂತ್ರಜ್ಞಾನ ಸದ್ಬಳಕೆಯಾಗಬೇಕೇ ವಿನಃ ದುರ್ಬಳಕೆಯಾಗಬಾರದು. ಈ ನಿಟ್ಟಿನಲ್ಲಿ ಸರಕಾರ ಕೆಲವು ಕಠಿಣ ಕ್ರಮ ವಹಿಸಬೇಕು. ಈಗಾಗಲೇ ಒಂದು ನಿರುಪಯುಕ್ತ ಹಾಗೂ ಫ್ರಾಡ್ ಆ್ಯಪ್‌ಗಳನ್ನು ಸರಕಾರ ಬ್ಯಾನ್ ಕೂಡ ಮಾಡಿದೆ. ಅಷ್ಟಾದರೂ ನಿತ್ಯವೂ ಫೋನ್ ಕಾಲ್ ಮೂಲಕ ನಮಗೆ ಕಿರಿಕಿರಿ ತಪ್ಪಿದ್ದಲ್ಲ.

ಬೆಂಗಳೂರು ನಗರದ ಹಿರಿಯ ಪೊಲೀಸ್ ಅಧಿಕಾರಿಯೊಬ್ಬರಿಗೆ ಇದೇ ರೀತಿ ಸಂದೇಶ ಬಂದಿದ್ದನ್ನು ನಗರ ಕಮಿಷನರ್ ದಯಾನಂದ್ ಅವರು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿ, ಈ ಕುರಿತು ಎಚ್ಚರ ವಹಿಸುವಂತೆ ನಾಗರಿಕರಿಗೆ ಸೂಚಿಸಿದ್ದನ್ನು ತಾವು ಗಮನಿಸಿರುತ್ತೀರಿ.

ಅಷ್ಟಕ್ಕೂ ಏನಿದು Simcard Scam ಎಂಬುದನ್ನು ಆಳವಾಗಿ ಗಮನಿಸುತ್ತ ಹೋದಾಗ, ಇದರ ಹಿಂದೆ ಬಹುದೊಡ್ಡ ಮಾಫಿಯಾ ಮತ್ತು ಕಾಣದ ಕೈಗಳ ಬೃಹತ್ ಜಾಲವೇ ನಿರಂತರವಾಗಿ ಕೆಲಸ ಮಾಡುತ್ತಿದೆ. 2024ರ ಮೊದಲ 9 ತಿಂಗಳ ಅವಧಿಯಲ್ಲಿ 11,333 ಕೋಟಿಗಳಷ್ಟು ಹಣವನ್ನು ವಿವಿಧ ಸೈಬರ್ ಅಪರಾಧಗಳ ಮೂಲಕ ಜನರು ಕಳೆದುಕೊಂಡಿದ್ದನ್ನು ಕೇಂದ್ರ ಗೃಹ ಮಂತ್ರಾಲಯದ ವಿಭಾಗಕ್ಕೆ ಒಳಪಡುವ Indian Cyber Crime Coordination Centre ಅಂಗವು ಅಧಿಕೃತವಾಗಿ ತಿಳಿಸಿದೆ. ಅಂದರೆ, ಇದರ ವ್ಯಾಪ್ತಿ, ಇದರ ಹಿಂದಿರುವ ಕೈಗಳ ಬಲಿಷ್ಠತೆ ತಮಗೆ ಅರಿವಾಗಬಹುದು!

The Citizen financial cyber fraud management system ಪ್ರಕಾರ, 2021ರಿಂದ ಇಲ್ಲಿಯವರೆಗೆ 35 ಲಕ್ಷಕ್ಕೂ ಅಧಿಕ ಸೈಬರ್ ಸಂಬಂಧಿತ ದೂರುಗಳು ಬಂದಿರುವುದನ್ನು ತಿಳಿಸಿದೆ. ಇನ್ನೂ ನಿರಂತರವಾಗಿ ಬರುತ್ತಲೇ ಇವೆಯಂತೆ. ಒಂದು ಮಾಹಿತಿಯ ಪ್ರಕಾರ, ಒಟ್ಟಾರೆಯಾಗಿ ಸೈಬರ್ ಜಗತ್ತಿನಲ್ಲಿ ಪ್ರತಿದಿನಕ್ಕೆ 4000ಕ್ಕೂ ಅಧಿಕ ಸೈಬರ್ ಕ್ರೈಮ್‌ಗಳು ನಡೆಯುತ್ತಿವೆಯೆಂದು ಹೇಳಲಾಗುತ್ತಿದೆ.

ಇದರಲ್ಲಿ ಪ್ರಮುಖವಾಗಿ Fishing, Ransomware Attacks, Identity theft, Online Scams, Data Breaches ಐದು ಪ್ರಕಾರಗಳು ವಿಶ್ವವ್ಯಾಪಿಯಾಗಿ ಬಳಕೆಯಲ್ಲಿವೆ ಎಂದು ಸೈಬರ್ ತಜ್ಞರು ತಿಳಿಸುತ್ತಾರೆ.

ಇವುಗಳಲ್ಲಿ ಮೊಬೈಲ್ ಸಂಬಂಧಿತ ಸೈಬರ್ ಅಪರಾಧಗಳಲ್ಲಿ ಅತಿ ಹೆಚ್ಚು ಸದ್ದು ಮಾಡುತ್ತಿರುವುದೇ ಫಿಶಿಂಗ್ ಸ್ಕ್ಯಾಮ್. ಸದ್ಯಕ್ಕೆ ಭಾರತದಲ್ಲಿ ಇದರ ಬಳಕೆಯ ಮೂಲಕ, ಬ್ಯಾಂಕ್ ಖಾತೆಯ ಮೂಲಕ ಹಣ ಲಪಟಾಯಿಸುವುದು ನಡೆಯುತ್ತಿದೆ.ಸಿಮ್ ಕಾರ್ಡುಗಳನ್ನು ಆರಂಭದ ಕಾಲದಲ್ಲಿ ಕೆಲ ನಿರ್ದಿಷ್ಟ ಗುಂಪುಗಳ ಜನರು ರಾಶಿರಾಶಿಯಾಗಿ ಖರೀದಿಸಿದರು. ಇದಕ್ಕೆ ವಿವಿಧ ರೂಪಗಳಲ್ಲಿ ಸಂಗ್ರಹಿಸಿದ್ದ ಬೇರೆ ಯಾರದ್ದೋ ದಾಖಲೆಗಳನ್ನು ಒದಗಿಸಿ, ಉಗ್ರಕೃತ್ಯಕ್ಕೆ ಕೆಲ ನಂಬರ್‌ಗಳನ್ನು, ಮಾನವ ಮತ್ತು ಅಪ್ರಾಪ್ತ ಹೆಣ್ಣುಮಕ್ಕಳ ಕಳ್ಳಸಾಗಾಣಿಕೆ ದಂಧೆಗಳಲ್ಲಿ ಸಹ ಈ ಕೃತ್ಯವಾಗಿರುವುದು ವರದಿಯಾಗಿವೆ.ಹಾಗೆಯೇ, ರಸ್ತೆಬದಿಗಳಲ್ಲಿ ಕಡಿಮೆ ಬೆಲೆಯಲ್ಲಿ ಅಥವಾ ವಿಶೇಷ ಆಫರ್ ಎಂದು ಆಮಿಷ ನೀಡಿ, ಬಳಕೆದಾರರ ಹಲವು ದಾಖಲೆಗಳನ್ನು ಪಡೆಯುವ ಮೂಲಕ ವಂಚಿಸುವ ಜಾಲವೂ ಇತ್ತೀಚೆಗೆ ಮಹಾರಾಷ್ಟ್ರದಲ್ಲಿ ಬೆಳಕಿಗೆ ಬಂದಿದೆ.

ಹಾಗಾಗಿ, ಎಫ್‌ಸಿಸಿಯ ಹೊಸ ನಿಯಮಗಳು ಈ ವಂಚನೆಗಳನ್ನು ಎದುರಿಸುವ ಗುರಿಯನ್ನು ಹೊಂದಿದ್ದು, ನಮ್ಮ ದೈನಂದಿನ ಡಿಜಿಟಲ್ ಸಂವಹನಗಳಲ್ಲಿ ಹೆಚ್ಚಿನ ಜಾಗರೂಕತೆಯ ಅಗತ್ಯವನ್ನು ತಿಳಿಸುತ್ತವೆ.

ಅಷ್ಟಕ್ಕೂ ಈ ಸಿಮ್ ಸ್ವಾಪ್ ವಂಚನೆ ಬಗ್ಗೆ ಸರಳವಾಗಿ ಹೇಳುವುದಾದರೆ, ವಂಚಕರು ನಿಮ್ಮ ಮೊಬೈಲ್ ಸೇವಾ ಪೂರೈಕೆದಾರರ ಮೂಲಕ ನಿಮ್ಮ ನೋಂದಾಯಿತ ಮೊಬೈಲ್ ಸಂಖ್ಯೆಗೆ ಪರ್ಯಾಯವಾಗಿ ಹೊಸ ಸಿಮ್ ಕಾರ್ಡ್ ಅನ್ನು ನಿಮ್ಮದೇ ದಾಖಲೆ ನೀಡುವ ಮೂಲಕ ಪಡೆಯುತ್ತಾರೆ. ಈ ಮೂಲಕ, ನಿಮ್ಮ ಬ್ಯಾಂಕ್ ಖಾತೆಯ ಮೂಲಕ ಹಣಕಾಸಿನ ವಹಿವಾಟುಗಳನ್ನು ನಡೆಸಲು ಅಗತ್ಯವಾದ ಒನ್ ಟೈಮ್ ಪಾಸ್‌ವರ್ಡ್‌ಗಳಂತಹ (OTP) ಮಾರ್ಗಗಳನ್ನು ಬಳಸಿ, ನಿಮ್ಮ ಹಣ ದೋಚುವುದಾಗಿದೆ. ಕ್ರಿಪ್ಟೋಕರೆನ್ಸಿ ಹೂಡಿಕೆದಾರ ಮೈಕೆಲ್ ಟರ್ಪಿನ್ ಪ್ರಕರಣ ಇದಕ್ಕೆ ಒಂದು ಪ್ರಮುಖ ಉದಾಹರಣೆಯಾಗಿದೆ. ವಂಚಕರು ಟರ್ಪಿನ್ ಅವರ ಮೊಬೈಲ್ ಕ್ಯಾರಿಯರ್‌ಗೆ ಅವರ ಫೋನ್ ಸಂಖ್ಯೆಯನ್ನು ಹೊಸ ಸಿಮ್ ಕಾರ್ಡ್‌ಗೆ ವರ್ಗಾಯಿಸಲು ಮನವಿ ಮಾಡಿದರು ಮತ್ತು ಹಂತಹಂತವಾಗಿ ಕರೆಯ ಮೂಲಕ, ಮಾರ್ಗದರ್ಶನ ನೀಡುತ್ತಾ ಕೊನೆಗೆ ಟರ್ಪಿನ್ ಖಾತೆಯ ನಿರ್ವಹಣೆಯನ್ನು ಕೈಗೆ ತೆಗೆದುಕೊಂಡ ನಂತರ, ಟರ್ಪಿನ್ ಅವರ ಕ್ರಿಪ್ಟೋಕರೆನ್ಸಿ ಖಾತೆಗಳಲ್ಲಿದ್ದ 24 ಮಿಲಿಯನ್ ಹಣಕ್ಕೆ ಕನ್ನ ಹಾಕಿದರು. ಈ ಸುದ್ದಿ ಇತ್ತೀಚೆಗೆ ಭಾರೀ ಸದ್ದು ಮಾಡಿತು.

ಸಿಮ್ ಸ್ವಾಪ್ ವಂಚನೆಯ ಮೊದಲ ಹಂತವೇ ಮಾಹಿತಿ ಸಂಗ್ರಹಣೆ. ಫಿಶಿಂಗ್ ಇಮೇಲ್‌ಗಳು, ಮಾಲ್ವೇರ್, ಸಾಮಾಜಿಕ ಎಂಜಿನಿಯರಿಂಗ್, ಡಾರ್ಕ್‌ವೆಬ್‌ನಲ್ಲಿ ಮಾಹಿತಿಯನ್ನು ಖರೀದಿಸುವುದು ಅಥವಾ ಬಲಿಪಶುವಿನ ಸಾಮಾಜಿಕ ಮಾಧ್ಯಮ ಪ್ರೊಫೈಲ್‌ಗಳನ್ನು ಗಮನಿಸುವುದು ಸೇರಿದಂತೆ ವಿವಿಧ ವಿಧಾನಗಳ ಮೂಲಕ ಈ ಮಾಹಿತಿಯನ್ನು ಪಡೆಯುತ್ತಾರೆ.

ಈ ವಿಷಯದಲ್ಲಿ ನಾವು ಹಲವು ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳುವ ಮೂಲಕ ಇಂತಹ ಸೈಬರ್ ಅಪರಾಧಗಳನ್ನು ಯಶಸ್ವಿಯಾಗಿ ತಡೆಗಟ್ಟಬಹುದಾಗಿದೆ. ಇದನ್ನು ತಡೆಗಟ್ಟಲೆಂದೇ ಕೇಂದ್ರ ಸರಕಾರವು ವಿಶೇಷ ತಾಂತ್ರಿಕ ವ್ಯವಸ್ಥೆಯನ್ನು ರೂಪಿಸಿದ್ದು, ನಿಮ್ಮ ಹೆಸರಿನಲ್ಲಿ ಎಷ್ಟು ಸಿಮ್ ಕಾರ್ಡುಗಳನ್ನು ಖರೀದಿಸಲಾಗಿದೆ, ಎಷ್ಟು ಮೊಬೈಲ್ ನಂಬರ್‌ಗಳು ಚಾಲನೆಯಲ್ಲಿವೆ ಎಂಬ ಮಾಹಿತಿಯನ್ನು ಸಂಚಾರಸಾಥಿ ಮೂಲಕ ಸಮಗ್ರವಾಗಿ ತಿಳಿದುಕೊಳ್ಳಬಹುದಾಗಿದೆ. ಮೊಬೈಲ್ ಕಳೆದುಹೋದರೆ, ನಿಮ್ಮದಲ್ಲದ ನಂಬರುಗಳನ್ನು ಸಹ ನೀವೇ ನಿಷೇಧಿಸಲು ಕೋರಿಕೆ ಸಲ್ಲಿಸಬಹುದಾಗಿದೆ. ಇದಕ್ಕಾಗಿ ಸಂಚಾರಸಾಥಿ ಎಂಬ ಮೊಬೈಲ್ ತಂತ್ರಾಂಶವನ್ನು ಕೇಂದ್ರ ದೂರ ಸಂಪರ್ಕ ಇಲಾಖೆಯು ಬಿಡುಗಡೆ ಮಾಡಿದೆ. ಇದರ ವೆಬ್‌ಸೈಟ್‌ಗೂ ಭೇಟಿ ನೀಡಿ ಹೆಚ್ಚಿನ ಮಾಹಿತಿ ಪಡೆಯಬಹುದಾಗಿದೆ. ಈ ಮೂಲಕ, ಬಹುಕೋಟಿ ಅಕ್ರಮ ಹಣ ವಹಿವಾಟುಗಳನ್ನು ನಿಮಗೇ ಅರಿವಿಲ್ಲದಂತೆ ಕೇವಲ ನಕಲಿ ಸಿಮ್ ಬಳಸಿ ಮಾಡಬಹುದು ಎಂಬ ವಿಚಾರವೇ ಬೆಚ್ಚಿಬೀಳಿಸುವಂತಹದ್ದಾಗಿದೆ. ಹಾಗಾಗಿ, ನಿಮ್ಮ ಸಿಮ್‌ಗಳನ್ನು, ವೈಯಕ್ತಿಕ ಮಾಹಿತಿಗಳನ್ನು ಅನ್ಯರ ಬಳಿ ಹಂಚಿಕೊಳ್ಳುವಾಗ ಒಂದಲ್ಲ ಹತ್ತು ಬಾರಿ ಯೋಚಿಸುವುದು ಒಳಿತು. ಹೀಗಾಗಿ ಸರಕಾರಗಳು ಅಥವಾ ಯಾವುದೇ ಇಲಾಖೆ ನಮ್ಮನ್ನು ದಿನಪೂರ್ತಿ ಸುರಕ್ಷಿತವಾಗಿಡಲು ಪ್ರಯತ್ನಿಸುತ್ತಿರಬಹುದು. ಆದರೆ ಅದು ಕಾರ್ಯಸಾಧುವಲ್ಲ. ಹೀಗಾಗಿ ನಮ್ಮ ಸಂಪೂರ್ಣ ಸುರಕ್ಷತೆಯನ್ನು ಆರಂಭಿಕ ಹಂತದಲ್ಲಿ ನಾವೇ ಮಾಡಿಕೊಳ್ಳಬೇಕು. ಅಚಾನಕ್ ಆಗಿ ಕೈ ಮೀರಿದಾಗ ಸರಕಾರ ಅಥವಾ ಪೊಲೀಸ್ ಇಲಾಖೆ ಮೊರೆ ಇಡುವುದು ಇದ್ದೇ ಇರುತ್ತದೆ. ಆ ಪರಿಸ್ಥಿತಿ ತಂದುಕೊಳ್ಳುವುದು ಬೇಡ.

ಸರಕಾರಗಳು ಕೂಡ ಸೈಬರ್ ಅಪರಾಧ ಕಡಿಮೆ ಮಾಡುವ ನಿಟ್ಟಿನಲ್ಲಿ ಹೊಸ ಟಾಸ್ಕ್‌ಫೋರ್ಸ್ ರಚನೆ ಮಾಡುವ ತುರ್ತು ಅಗತ್ಯವಿದೆ. ವ್ಯಕ್ತಿಯ ವೈಯಕ್ತಿಕ ಮಾಹಿತಿಗಳು ಯಾವುದೇ ಮೂಲದಿಂದಲೂ ಸೋರಿಕೆ ಆಗದಂತೆ ಎಚ್ಚರ ವಹಿಸಬೇಕು. ವಿನಾಕಾರಣ ಟೆಲಿಕಾಂ ಸಂಸ್ಥೆಯ ಹೆಸರಿನಡಿ ಬರುವ ಫ್ರಾಡ್ ಕಾಲ್‌ಗಳಿಗೆ ಕಡಿವಾಣ ಹಾಕಬೇಕು. ಡಿಜಿಟಲ್ ಅರೆಸ್ಟ್, ಏರ್ ಫೋರ್ಸ್ ಅಧಿಕಾರಿಗಳು, ಸಿಬಿಐ ಅಧಿಕಾರಿಗಳು ಹೀಗೆ ಉನ್ನತಾಧಿಕಾರಿಗಳ ಸೋಗಿನಲ್ಲಿ ಜನರಿಗೆ ಮೋಸ, ವಂಚನೆ ಮಾಡುವುದು ನಿಲ್ಲಬೇಕು. ಬ್ಯಾಂಕ್‌ಗಳು ಸುರಕ್ಷತೆಗೆ ಇನ್ನಷ್ಟು ಕ್ರಮ ವಹಿಸಬೇಕು.

ಇದೆಲ್ಲದ ನಡುವೆ ವ್ಯಕ್ತಿಯು ವೈಯಕ್ತಿಕ ಸಂರಕ್ಷಣೆಗಾಗಿ ಸಾಮಾಜಿಕ ಜಾಲತಾಣಗಳಲ್ಲಿ ತೀರ ವೈಯಕ್ತಿಕ ಮಾಹಿತಿ ಹಂಚಿಕೊಳ್ಳುವುದನ್ನು, ಅನಗತ್ಯ ಫೋಟೋ, ವಿಡಿಯೋಗಳನ್ನು ಶೇರ್ ಮಾಡುವುದನ್ನು ನಿಲ್ಲಿಸಬೇಕು. ಅನಾಮಧೇಯ ಕರೆಗಳು ಬಂದಾಗ ತಕ್ಷಣ ಪ್ರತಿಕ್ರಿಯೆ ನೀಡಿದೇ ಪುನರ್ ಪರಿಶೀಲಿಸಿ ಅಥವಾ ಯೋಚಿಸಿ ಉತ್ತರ ನೀಡಬೇಕು. ಆಧಾರ್ ಕಾರ್ಡ್, ಪ್ಯಾನ್‌ಕಾರ್ಡ್, ರೇಷನ್ ಕಾರ್ಡ್ ಸಹಿತ ಅಗತ್ಯ ದಾಖಲೆಗಳ ತಿದ್ದುಪಡಿ ನೆಪದಲ್ಲಿ ಬರುವ ಕಾಲ್‌ಗಳಿಗೆ ಮಾಹಿತಿ ನೀಡಬಾರದು. ಅವುಗಳ ತಿದ್ದುಪಡಿ ಇದ್ದರೆ ಬ್ಯಾಂಕ್ ಅಥವಾ ಸಿಎಸ್‌ಸಿ ಕೇಂದ್ರಕ್ಕೆ ಹೋಗಿ ಮಾಡಿಸಿಕೊಳ್ಳಬೇಕು.

ಯಾರೊಂದಿಗೂ, ವಿಶೇಷವಾಗಿ ಅನಾಮಧೇಯ ವ್ಯಕ್ತಿಗಳೊಂದಿಗೆ ಬ್ಯಾಂಕ್ ವ್ಯವಹಾರ ಮಾಡುವಾಗಲೂ ಇರಲಿ ಎಚ್ಚರ. ಅನಗತ್ಯವಾಗಿ ಒಟಿಪಿಗಳನ್ನು ಶೇರ್ ಮಾಡಕೂಡದು. ಇದು ಡಿಜಿಟಲ್ ಯುಗ ಒಂದು ಕ್ಲಿಕ್‌ನಿಂದ ಸಂಪೂರ್ಣ ಮಾಹಿತಿ ಸೋರಿಕೆ ಆಗಬಹುದು. ಹೀಗಾಗಿ ಎಪಿಕೆ ಫೈಲ್ ಡೌನ್‌ಲೋಡ್ ಮಾಡಬಾರದು, ಅನಗತ್ಯ ಲಿಂಕ್ಗಳನ್ನು ಕ್ಲಿಕ್ ಮಾಡುವುದು ಮಾಡಬಾರದು. ನಾವು ಜಾಗೃತರಾದರೆ ಸೈಬರ್ ಸುರಕ್ಷತೆಯೂ ಸುಲಭ. ಕನಿಷ್ಠ ಎಚ್ಚರ ವಹಿಸಬೇಕು. ಫೋನ್, ಇಮೇಲ್, ವಾಟ್ಸಾಪ್ ಮೂಲಕ ಎಷ್ಟೇ ದೊಡ್ಡ ಆಫರ್ ಬಂದರೂ ತಕ್ಷಣ ಪ್ರತಿಕ್ರಿಯಿಸಕೂಡದು ಎಂಬ ಪ್ರಜ್ಞೆ ನಮ್ಮಲ್ಲಿ ಸದಾ ಜಾಗೃತವಾಗಬೇಕು.

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:10, Issue: 09

## ಸಮಾಚಾರ ಸಣ್ಣದಲ್ಲ

### ಕುಂಭಮೇಳದಲ್ಲಿ 29ಕ್ಕೆ ಮೌನಿ ಅಮಾವಾಸ್ಯೆ

**ಮಹಾಕುಂಭ ನಗರ:** ಉತ್ತರ ಪ್ರದೇಶ ರಾಜ್ಯದ ಪ್ರಯಾಗ್ ರಾಜ್ ನಲ್ಲಿ ಜರುಗುತ್ತಿರುವ ಮಹಾ ಕುಂಭ ಮೇಳದಲ್ಲಿ ಜನವರಿ 29ರಂದು ಮೌನಿ ಅಮಾವಾಸ್ಯೆ ಅಂಗವಾಗಿ ಮತ್ತೊಮ್ಮೆ ಅಮೃತ ಸ್ನಾನ ನಡೆಯಲಿದೆ. ಮಹಾಕುಂಭ ಮೇಳದಲ್ಲಿ ಮೌನಿ ಅಮಾವಾಸ್ಯೆಯ ದಿನಕ್ಕೆ ಅತ್ಯಂತ ಹೆಚ್ಚಿನ ಮಹತ್ವ ನೀಡಲಾಗಿದೆ. ಈ ದಿನವನ್ನು ಬಹಳ ಶುಭ ದಿನ ಎಂದು ಕರೆಯಲಾಗುತ್ತದೆ. ಎರಡನೇ ಅಮೃತ ಸ್ನಾನ ನಡೆಯಲಿದೆ. ಅದಕ್ಕಾಗಿ 10 ಕೋಟಿ ಭಕ್ತರು ಆಗಮಿಸುವ ನಿರೀಕ್ಷೆಯಿದೆ. ಪ್ರಯಾಗ್ ರಾಜ್ ರೈಲ್ವೆ ವಿಭಾಗ 150 ವಿಶೇಷ ರೈಲುಗಳ ಸಂಚಾರಕ್ಕೆ ವ್ಯವಸ್ಥೆ ಮಾಡಲು ನಿರ್ಧರಿಸಿದೆ. ಈ ರೈಲುಗಳು ಪ್ರಯಾಗ್ ರಾಜ್ ನ ಎಲ್ಲಾ 9 ರೈಲು ನಿಲ್ದಾಣಗಳಿಂದ ಸಂಚಾರ ನಡೆಸಲಿವೆ, ಮಹಾಕುಂಭ ಮೇಳದ ಭಕ್ತರಿಗೆ ಸುಗಮ ಪ್ರಯಾಣ ಖಾತ್ರಿಪಡಿಸುತ್ತವೆ. ಜತೆಗೆ ಬಣ್ಣದ ಕೋಡೆಡ್ ಟಿಕೆಟಿಂಗ್ ವಸತಿ ವ್ಯವಸ್ಥೆ ಕೂಡಾ ಮಾಡಲಾಗಿದೆ. ಹೆಚ್ಚಿನ ರೈಲು ಪ್ರಯಾಗರಾಜ್ ಜಂಕ್ಷನ್ನಿಂದ ಸಂಚರಿಸಲಿವೆ ಎಂದು ವಿಭಾಗದ ಹಿರಿಯ ಸಾರ್ವಜನಿಕ ಸಂಪರ್ಕ ಅಧಿಕಾರಿ ಅಮಿತ್ ಮಾಳವಿಯ ಹೇಳಿದ್ದಾರೆ.

### ಟರ್ಕಿ ಬೆಂಕಿ ದುರಂತ: ಮೃತರ ಸಂಖ್ಯೆ 76ಕ್ಕೆ

**ಅಂಕಾರ:** ಟರ್ಕಿಯ ಬೋಲು ಪ್ರಾಂತ್ಯದ ಕಾರ್ಟಲ್ಕಾಯಾ ಸ್ಕೀ ರೆಸಾರ್ಟ್‌ನಲ್ಲಿರುವ 12 ಅಂತಸ್ತಿನ ಗ್ರ್ಯಾಂಡ್ ಕಾರ್ತಾಲ್ ಹೋಟೆಲಲ್ಲಿ ಮಂಗಳವಾರ ಅಗ್ನಿ ಅವಘಡವಾಗಿದ್ದು, ಮೃತರ ಸಂಖ್ಯೆ 76 ಕ್ಕೆ ಏರಿಕೆ ಆಗಿದೆ. ಬೆಂಕಿ ಅವಘಡಕ್ಕೆ ಕಾರಣ ಇನ್ನೂ ತಿಳಿದುಬಂದಿಲ್ಲ. ಹೋಟೆಲ್ನಲ್ಲಿ 234 ಅತಿಥಿಗಳು ತಂಗಿದ್ದರು. ಬೆಂಕಿ ಅವಘಡ ವೇಳೆ ರೆಸಾರ್ಟ್‌ನಲ್ಲಿದ್ದ ಅತಿಥಿಗಳು ಭಯಗೊಂಡರು. ಅವರಲ್ಲಿ ಕೆಲವರು ಕಟ್ಟಡದಿಂದ ಹಾರಿ ಸಾವನ್ನಪ್ಪಿದರೆ, ಹಲವರು ಬೆಂಕಿಯಲ್ಲಿ ಜೀವಂತ ದಹಿಸಿ ಹೋದರು. ಅವಘಡದಲ್ಲಿ ಒಟ್ಟು 76 ಮಂದಿ ಸಾವನ್ನಪ್ಪಿದ್ದು, 50ಕ್ಕೂ ಹೆಚ್ಚು ಮಂದಿ ಗಂಭೀರವಾಗಿ ಗಾಯಗೊಂಡಿದ್ದಾರೆ ಎಂದು ಸ್ಥಳೀಯ ಮಾಧ್ಯಮಗಳು ವರದಿ ಪ್ರಕಟಿಸಿವೆ.

### ಕೇಂದ್ರ ಸಚಿವ ಮಾಂಝಿ ರಾಜೀನಾಮೆ ಬೆದರಿಕೆ

**ಪಟನಾ:** ವರ್ಷದ ಅಂತ್ಯಕ್ಕೆ ನಡೆಯಲಿರುವ ವಿಧಾನಸಭಾ ಚುನಾವಣೆಗೂ ಮುನ್ನ ತಮ್ಮ ಹಿಂದೂಸ್ತಾನಿ ಅವಾಮ್ ಮೋರ್ಚಾ(ಎಚ್‌ಎಎಂ) ಪಕ್ಷಕ್ಕೆ ಹೆಚ್ಚಿನ ಕ್ಷೇತ್ರಗಳಲ್ಲಿ ಸ್ಪರ್ಧಿಸಲು ಅವಕಾಶ ಸಿಗದೆ ಇದ್ದರೆ ಕೇಂದ್ರ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡುವುದಾಗಿ ಜಿತನ್ ರಾಮ್ ಮಾಂಝಿ ಬುಧವಾರ ಬೆದರಿಕೆ ಹಾಕಿದ್ದಾರೆ. ಮುಂಗೇರ್‌ನಲ್ಲಿ ಸಾರ್ವಜನಿಕ ಸಭೆಯಲ್ಲಿ ಮಾತನಾಡಿದ ಮಾಂಝಿ, ಎನ್‌ಡಿಎಯಿಂದ ಎಚ್‌ಎಎಂ ನಿರ್ಲಕ್ಷ್ಯಕ್ಕೊಳಗಾಗಿದೆ ಎಂದು ತೀವ್ರ ಅಸಮಾಧಾನ ವ್ಯಕ್ತಪಡಿಸಿದರು.

ಹಿಂದಿನ ಶಿಂಧೆ ಸರಕಾರದ ಕೆಲ ನಿರ್ಧಾರಗಳು ರದ್ದು, ತನಿಖೆಗೆ ಆದೇಶ | ಫಡ್ನವೀಸ್ ನಡೆಗೆ ಶಿವಸೇನೆ ಕೆಂಡ | ಮಿತ್ರ ಪಕ್ಷಗಳ ನಡುವೆ ಭಿನ್ನಾಭಿಪ್ರಾಯ

# ಮಹಾಯುತಿ ಮೈತ್ರಿ ಸರಕಾರದಲ್ಲಿ ಬಿಕ್ಕಟ್ಟು

**ಮುಂಬೈ:** ಬಿಜೆಪಿ, ಶಿವಸೇನೆ ಮತ್ತು ಎನ್ ಸಿಪಿ ಒಳಗೊಂಡ ಮಹಾಯುತಿ ಮೈತ್ರಿಕೂಟದಲ್ಲಿ ಮೊದಲ ಬಾರಿಗೆ ಬಹು ದೊಡ್ಡ ಬಿರುಕು ಮೂಡಿದೆ. ಮಿತ್ರ ಪಕ್ಷ ಶಿವಸೇನೆ ನೇತೃತ್ವದ ಹಿಂದಿನ ಸರಕಾರದ ಕೆಲವು ನಿರ್ಧಾರಗಳ ಬಗ್ಗೆ ಹಾಲಿ ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ಅನುಮಾನ ವ್ಯಕ್ತಪಡಿಸಿರುವುದೇ ಈಗಿನ ಸಮಸ್ಯೆಗೆ ಕಾರಣವಾಗಿದೆ.

ಈ ಮೊದಲು ಮುಖ್ಯಮಂತ್ರಿ ಆಗಿದ್ದ ಶಿವಸೇನೆ ಮುಖ್ಯಸ್ಥ ಏಕನಾಥ ಶಿಂಧೆ ಅವರ ಸರಕಾರ ತೆಗೆದುಕೊಂಡ ಕೆಲವು ನಿರ್ಧಾರಗಳನ್ನು ಹಠಾತ್ ರದ್ದುಗೊಳಿಸಿರುವ ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್, ಆ ನಿರ್ಧಾರಗಳನ್ನು ತನಿಖೆ ನಡೆಸುವುದಕ್ಕೂ ಮುಂದಾಗಿದ್ದಾರೆ.

ಅವರ ಈ ಕ್ರಮದಿಂದ ಶಿವಸೇನೆ ಸಿಟ್ಟಿಗೆದ್ದಿದೆ. ಪರಿಣಾಮ ಮಹಾಯುತಿ ಮೈತ್ರಿಕೂಟದಲ್ಲಿ ಬಹು ದೊಡ್ಡ ಬಿರುಕು ಮೂಡುವಂತೆ ಮಾಡಿದೆ. ಪಾಲುದಾರ ಪಕ್ಷಗಳಾದ ಬಿಜೆಪಿ ಮತ್ತು ಶಿವಸೇನೆ ನಡುವಿನ ಸಂಬಂಧ ಹದಗೆಡುವಂತಾಗಿದೆ. ಫಡ್ನವೀಸ್ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡ ಸ್ವಲ್ಪ ಕಾಲದಲ್ಲೇ ಇಂತಹ ನಡೆಗೆ ಮುಂದಾಗಿರುವುದು ಮಹಾರಾಷ್ಟ್ರ ರಾಜಕಾರಣ ಬೇರೊಂದು ಹೊಸ ದಿಕ್ಕಿನಲ್ಲಿ ಸಾಗುವ ಸಾಧ್ಯತೆಯನ್ನು ಸೂಕ್ಷ್ಮವಾಗಿ ತೋರುತ್ತಿದೆ. ಶಿಂಧೆ ಅವರ ಆಡಳಿತ ಅವಧಿಯಲ್ಲಿ ಕೆಲವು ಟೆಂಡರ ಪ್ರಕ್ರಿಯೆಗಳಲ್ಲಿ ನಿಯಮಗಳ ಉಲ್ಲಂಘನೆ ಆಗಿದೆ ಎಂಬ ಕಾರಣಕ್ಕೇ ಮುಖ್ಯಮಂತ್ರಿ ದೇವೇಂದ್ರ ಫಡ್ನವಿಸ್ ಟೆಂಡರುಗಳ ಪ್ರಕ್ರಿಯೆ ಸ್ಥಗಿತಗೊಳಿಸಿದ್ದಾರೆ.

**ಯಾವ ನಿರ್ಧಾರಕ್ಕೆ ಶಂಕೆ:** ಸಾರ್ವಜನಿಕ ಸಾರಿಗೆ ವ್ಯವಸ್ಥೆಗೆ ಖಾಸಗಿ ಕಂಪನಿಗಳಿಂದ 1310 ಬಸ್‌ಗಳನ್ನು ಬಾಡಿಗೆಗೆ ಪಡೆಯುವ ಸಾರಿಗೆ ಇಲಾಖೆಯ 2000 ಕೋಟಿ ರು. ಮೊತ್ತದ ಒಪ್ಪಂದದ ಬಗ್ಗೆ ತನಿಖೆ ನಡೆಸಲು ದೇವೇಂದ್ರ ಫಡ್ನವಿಸ್ ಆದೇಶಿಸಿದ್ದಾರೆ ಎಂದು ಉನ್ನತ ಮೂಲಗಳು ತಿಳಿಸಿವೆ. ಬಸ್‌ಗಳನ್ನು ಬಾಡಿಗೆಗೆ ನೀಡುವ ಕೆಲವು ನಿರ್ದಿಷ್ಟ ಖಾಸಗಿ ಕಂಪನಿಗಳ ಮೇಲೆ ಅಧಿಕಾರಿಗಳು ಹೆಚ್ಚಿನ ಒಲವು ತೋರಿದ್ದಾರೆ ಎಂಬುದು ತನಿಖಾ ವರದಿಯಿಂದ ತಿಳಿದುಬಂದಿದೆ. ಹಾಗಾಗಿಯೇ ಫಡ್ನವಿಸ್ ಅವರು, ಹಿಂದಿನ ಸರಕಾರ ಅನುಮೋದನೆ ಮಾಡಿದ್ದ ಈ ಟೆಂಡರನ್ನು ತಕ್ಷಣವೇ ರದ್ದುಗೊಳಿಸಲು ಆದೇಶಿಸಿದ್ದಾರೆ. ಅಷ್ಟೇ ಅಲ್ಲದೇ ಹೊಸದಾಗಿ ಸಾರ್ವಜನಿಕ ಸಾರಿಗೆ ಬಸ್‌ಗಳಿಗೆ ಟೆಂಡರ್ ಪ್ರಾರಂಭಿಸಲು ಸೂಚಿಸಿದ್ದಾರೆ ಎಂದು ತಿಳಿದುಬಂದಿದೆ. ಇದೊಂದು ಮಾತ್ರವಲ್ಲ, ಶಿಂಧೆ ಸರಕಾರ 12,000 ಕೋಟಿ ರು. ಮೌಲ್ಯದ 900 ಆಂಬ್ಯುಲೆನ್ಸ್‌ಗಳು ಮತ್ತು ಭಾರಿ ಪ್ರಮಾಣದಲ್ಲಿ ವೈದ್ಯಕೀಯ ಉಪಕರಣಗಳನ್ನು ಖರೀದಿಸಲು ತೆಗೆದುಕೊಂಡ ಕ್ರಮಗಳ ಬಗೆಗೂ ತನಿಖೆ ನಡೆಸುವಂತೆ ಫಡ್ನವಿಸ್ ಆದೇಶಿಸಿದ್ದಾರೆ.

ರಾಜ್ಯ ಆರೋಗ್ಯ ಇಲಾಖೆಯ ಹಿಂದಿನ ಸಚಿವ ಮತ್ತು ಶಿವಸೇನಾ ಶಾಸಕ ತಾನಾಜಿ ಸಾವಂತ್ ಅವರು ಆಂಬ್ಯುಲೆನ್ಸ್‌ಗಳ ಖರೀದಿಗೆ ಸಂಬಂಧಿಸಿದ ಹಗರಣದಲ್ಲಿ ಭಾಗಿಯಾಗಿದ್ದಾರೆ ಎಂದು ಆರೋಪಿಸಲಾಗಿದೆ. ಇಲ್ಲಿಯೂ ಸಹ, ಕೆಲವೇ ಕೆಲವು ಗುತ್ತಿಗೆದಾರರು ಮತ್ತು ಪೂರೈಕೆದಾರರಿಗೆ ಅನುಕೂಲವಾಗುವಂತೆ ಟೆಂಡರುಗಳಲ್ಲಿನ ಷರತ್ತುಗಳನ್ನು ಬದಲಾಯಿಸಲಾಗಿದೆ ಎಂಬ ಆರೋಪಗಳೂ ಕೇಳಿಬಂದಿವೆ.

ಇದಲ್ಲದೆ, ಈ ಮಹತ್ವದ ಯೋಜನೆಗಳ ಒಟ್ಟಾರೆ ವೆಚ್ಚವನ್ನು 9,000 ಕೋಟಿ ರು.ಗಳಿಂದ 12,000 ಕೋಟಿ ರು.ಗಳಿಗೆ ತಲುಪುವಂತೆ ಮಾಡಲು ಹಲವಾರು ಬಾರಿ ದರಗಳನ್ನು ಹೆಚ್ಚಿಸಲಾಗಿದೆ ಎಂಬ ಆರೋಪಗಳೂ ಕೇಳಿ ಬಂದಿವೆ.

### ಉಸ್ತುವಾರಿ ಸಚಿವರ ನೇಮಕ ವಿಧಾನ ತಂದ ಸುಸ್ತು

ಉಸ್ತುವಾರಿ ಸಚಿವರ ನೇಮಕ ವಿಧಾನ ಕೂಡ ಶಿವಸೇನೆ ಮತ್ತು ಬಿಜೆಪಿ ನಡುವಿನ ಸಂಬಂಧವನ್ನು ಮತ್ತಷ್ಟು ಹದಗೆಡಿಸಿದೆ. ಶಾಲಾ ಶಿಕ್ಷಣ ಸಚಿವ ದಾದಾ ಭೂಸೆ ಮತ್ತು ಕ್ಯಾಬಿನೆಟ್ ಸಚಿವ ಭರತ್ ಗೋಗವಾಲೆ ಅವರನ್ನು ಕ್ರಮವಾಗಿ ನಾಸಿಕ್ ಮತ್ತು ರಾಯಗಡ ಜಿಲ್ಲೆಗಳ ಉಸ್ತುವಾರಿ ಮಂತ್ರಿಗಳಾಗಿ ನೇಮಿಸಬೇಕೆಂದು ಶಿವಸೇನೆ ಬಯಸಿತ್ತು. ಆದರೆ ಫಡ್ನವೀಸ್ ಆ ಬೇಡಿಕೆ ಈಡೇರಿಸಲು ಒಪ್ಪಲಿಲ್ಲ. ಬದಲಾಗಿ, ಬಿಜೆಪಿ ಸಚಿವ ಗಿರೀಶ್ ಮಹಾಜನ್ ಅವರನ್ನು ನಾಸಿಕ್ ಉಸ್ತುವಾರಿ ಸಚಿವರನ್ನಾಗಿ ಮತ್ತು ಎನ್‌ಸಿಪಿ ಸಚಿವೆ ಆದಿತಿ ತತ್ಕರೆ ಅವರನ್ನು ರಾಯಗಡ್ ಉಸ್ತುವಾರಿ ಸಚಿವರನ್ನಾಗಿ ನೇಮಿಸಿದ್ದಾರೆ. ಈ ನಿರ್ಧಾರದ ಬಗ್ಗೆ ಉಪ ಮುಖ್ಯಮಂತ್ರಿ ಏಕನಾಥ ಶಿಂಧೆ ತೀವ್ರ ಬೇಸರ ವ್ಯಕ್ತಪಡಿಸಿದ ನಂತರ, ಫಡ್ನವೀಸ್ ಇಬ್ಬರು ಉಸ್ತುವಾರಿ ಸಚಿವರ ನೇಮಕ ಪ್ರಕ್ರಿಯೆಗೆ ತಡೆ ನೀಡಿದ್ದಾರೆ. ಇದಕ್ಕೂ ಮೊದಲು, ತಮಗೆ ಗೃಹ ಖಾತೆ ನೀಡದಿದ್ದಕ್ಕೆ ಶಿಂಧೆ ಅಸಮಾಧಾನಗೊಂಡಿದ್ದರು. ಇದರಿಂದಲೇ ಮಹಾಯುತಿ ಮೈತ್ರಿಕೂಟ 2.0 ಸರಕಾರದ ಪ್ರಮಾಣ ವಚನ ಸ್ವೀಕಾರ ಸಮಾರಂಭ ನಿರೀಕ್ಷೆಗೂ ಮೀರಿ ಬಹಳ ವಿಳಂಬವಾಗಿ ನಡೆಯಿತು ಎಂಬುದನ್ನು ಇಲ್ಲಿ ಸ್ಮರಿಸಬಹುದು.

### ಶಾಲಾ ಸಮವಸ್ತ್ರದಲ್ಲೂ ಅಕ್ರಮದ ವಾಸನೆ

ಶಾಲಾ ವಿದ್ಯಾರ್ಥಿಗಳಿಗೆ ಉಚಿತವಾಗಿ ನೀಡಲಾಗುವ ಸಮವಸ್ತ್ರಗಳನ್ನು ಖರೀದಿಸುವ ಹಿಂದಿನ ಏಕನಾಥ ಶಿಂಧೆ ಅವರ ಸರಕಾರದ ನಿರ್ಧಾರದ ಬಗ್ಗೆ ತನಿಖೆ ನಡೆಸುವಂತೆಯು ಮುಖ್ಯಮಂತ್ರಿ ಫಡ್ನವಿಸ್ ಆದೇಶಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ. ಈ ಹಿಂದೆ, ಶಿವಸೇನಾ ಶಾಸಕ ಮತ್ತು ಹಿಂದಿನ ಶಾಲಾ ಶಿಕ್ಷಣ ಸಚಿವ ದೀಪಕ್ ಕೇಸರ್ಕರ ಅವರು ಶಾಲಾ ಸಮವಸ್ತ್ರಗಳನ್ನು ಖರೀದಿಸಲು ಒಂದೇ ಕೇಂದ್ರ ಸಂಸ್ಥೆಯನ್ನು ನೇಮಿಸಿದ್ದರು. ಆದರೆ, ಸಚಿವ ದೀಪಕ್ ತೆಗೆದುಕೊಂಡ ಈ ನಿರ್ಧಾರಕ್ಕೆ ತಡೆ ಹಾಕಿರುವ ದೇವೇಂದ್ರ ಸರಕಾರ, ಹೊಸದಾಗಿ ಟೆಂಡರು ಕರೆದು ಕೆಳಮಟ್ಟದಲ್ಲಿ ಹಲವಾರು ಸಿದ್ಧ ಉಡುಪುಗಳ ಘಟಕಗಳಿಗೆ ಕೆಲಸ ವಹಿಸುವ ನಿರ್ಧಾರ ಕೈಗೊಂಡಿದ್ದಾರೆ.

### ಉದ್ದವ್ ಠಾಕ್ರೆ ಶತ್ರು ಅಲ್ಲವೆಂದಿದ್ದ ಫಡ್ನವಿಸ್

ಫಡ್ನವಿಸ್ ಅವರು ಇತ್ತೀಚೆಗೆ, ಉದ್ದವ್ ಠಾಕ್ರೆ ಅವರು ನಮ್ಮ ಶತ್ರುವೇನೂ ಅಲ್ಲ ಎಂದು ಹೇಳಿ ಎಲ್ಲರಲ್ಲೂ ಅಚ್ಚರಿ ಮೂಡುವಂತೆ ಮಾಡಿದ್ದರು. ಆಗ, ಶಿವಸೇನೆ (ಉದ್ದವ ಠಾಕ್ರೆ ಬಣ) ಕಾಂಗ್ರೆಸ್-ಎನ್‌ಸಿಪಿ (ಶರದ್ ಬಣ) ಒಳಗೊಂಡ ಮಹಾ ವಿಕಾಸ ಆಘಾಡಿ ಒಕ್ಕೂಟ ತೊರೆದು ಮರಳಿ ಎನ್‌ಡಿಎ ಮೈತ್ರಿಕೂಟ ಸೇರಿಕೊಳ್ಳುವ ಸಾಧ್ಯತೆ ಇದೆ ಎಂಬ ಮಾತುಗಳು ಕೇಳಿ ಬಂದಿದ್ದವು. ಅದಕ್ಕೆ ತಕ್ಕಂತೆ ಸಂಸದ ಸಂಜಯ್ ರಾವತ್ ಸೇರಿದಂತೆ ಶಿವಸೇನೆ (ಉದ್ದವ ಠಾಕ್ರೆ ಬಣ) ಕೆಲ ನಾಯಕರು, ಇಂಡಿ ಒಕ್ಕೂಟದ ಸಭೆಯನ್ನು ಕರೆಯದೆ ನಿರ್ಲಕ್ಷ್ಯ ವಹಿಸಿರುವ ಕಾಂಗ್ರೆಸ್ ನಡೆಗಳನ್ನು ಖಂಡಿಸಿ ಮಾತನಾಡಿದ್ದರು.

## ಮಣಿಪುರ ಜೆಡಿಯು ಪಕ್ಷದ ಅಧ್ಯಕ್ಷ ಬಿರೇನ್ ಸಿಂಗ್ ವಜಾ

**ದೆಹಲಿ:** ಮಣಿಪುರದಲ್ಲಿ ಬಿಜೆಪಿ ನೇತೃತ್ವದ ಸರಕಾರಕ್ಕೆ ನೀಡಿದ್ದ ಬೆಂಬಲ ವಾಪಸ್ ಪಡೆಯುವುದಾಗಿ ರಾಜ್ಯಪಾಲರಿಗೆ ಪತ್ರ ಬರೆದ ಜೆಡಿಯು ಮಣಿಪುರ ರಾಜ್ಯಾಧ್ಯಕ್ಷ ಕ್ಯಾಪ್ಟನ್ ಬಿರೇನ್ ಸಿಂಗ್ ಅವರನ್ನು ಪಕ್ಷದ ರಾಷ್ಟ್ರೀಯ ಸಮಿತಿ ವಜಾಗೊಳಿಸಿ ಬುಧವಾರ ಸಂಜೆ ಆದೇಶ ಹೊರಡಿಸಿದೆ.

ಬಿರೇನ್ ಸಿಂಗ್, ಬುಧವಾರ ಬೆಳಗ್ಗೆ ರಾಜ್ಯಪಾಲರಿಗೆ ಪತ್ರ ಬರೆದು, ರಾಜ್ಯ ಸರಕಾರಕ್ಕೆ ನೀಡಿರುವ ಬೆಂಬಲವನ್ನು ಜೆಡಿಯು ಪಕ್ಷ ವಾಪಸ್ ತೆಗೆದುಕೊಂಡಿರುವುದಾಗಿ ತಿಳಿಸಿದ್ದರು. ಈ ಬೆಳವಣಿಗೆಯಿಂದ ರಾಷ್ಟ್ರಮಟ್ಟದಲ್ಲಿ ಬಿಜೆಪಿ -ಜೆಡಿಯು ಮೈತ್ರಿ ಬಗ್ಗೆ ಪ್ರಶ್ನೆಗಳು ಮೂಡಿದ್ದವು. ಸಿಂಗ್ ಅವರನ್ನು ಅಶಿಸ್ತಿನ ಕಾರಣದಿಂದ ತೆಗೆದುಹಾಕಲಾಗಿದೆ ಎಂದು ಪಕ್ಷದ ರಾಷ್ಟ್ರೀಯ ವಕ್ತಾರ ರಾಜೀವ್ ರಂಜನ್ ಹೇಳಿದ್ದಾರೆ ಮತ್ತು ಈಶಾನ್ಯ ರಾಜ್ಯದಲ್ಲಿ ಬಿಜೆಪಿ ನೇತೃತ್ವದ ಸರಕಾರವನ್ನು ಪಕ್ಷ ಬೆಂಬಲಿಸುವುದನ್ನು ಮುಂದುವರಿಸುತ್ತದೆ ಎಂದು ಸ್ಪಷ್ಟಪಡಿಸಿದ್ದಾರೆ. ಮಣಿಪುರದಲ್ಲಷ್ಟೇ ಅಲ್ಲದೇ ದೇಶಾದ್ಯಂತ ಬಿಜೆಪಿ ನೇತೃತ್ವದ ರಾಷ್ಟ್ರೀಯ ಪ್ರಜಾಸತ್ತಾತ್ಮಕ ಒಕ್ಕೂಟವನ್ನು (ಎನ್ ಡಿಎ) ಬೆಂಬಲಿಸಲು ಜೆಡಿಯು ಬದ್ಧವಾಗಿದೆ ಎಂದು ರಂಜನ್ ದೃಢಪಡಿಸಿದರು. ನಮ್ಮ ಪಕ್ಷ ಎನ್‌ಡಿಎಯನ್ನು ಬಲಪಡಿಸಲು ಕೈಜೋಡಿಸಿದೆ ಮತ್ತು ಅದನ್ನು ಮುಂದುವರಿಸುತ್ತದೆ ಎಂದು ಅವರು ಹೇಳಿದರು.

## ಇಬ್ಬರು ನಕ್ಸಲರ ಅಂತ್ಯ

**ರಾಂಚಿ:** ಜಾರ್ಖಂಡ್ ರಾಜ್ಯದ ಬೊಕಾರೊ ಜಿಲ್ಲೆಯಲ್ಲಿ ಬುಧವಾರ ಬೆಳಗ್ಗೆ ನಡೆದ ನಕ್ಸಲ್ ಧಮನ ಕಾರ್ಯಾಚರಣೆಯಲ್ಲಿ ಭದ್ರತಾ ಪಡೆಗಳು ಇಬ್ಬರು ನಕ್ಸಲರನ್ನು ಹೊಡೆದು ಹಾಕಿದ್ದಾರೆ.

ಗಿರಿದಿಹ್ ಜಿಲ್ಲೆಯ ಚತ್ರೋ ಏರಿಯ ಕಮಾಂಡರ್ ಶಾಂತಿ ಮತ್ತು ಅದೇ ಜಿಲ್ಲೆಯ ಧವರ್ತಾ ಗ್ರಾಮದ ಮನೋಜ್ ಎಂಬವರೆ ಹತರಾದವರು. ಇನ್ನೊಂದೆಡೆ, ಮಂಗಳವಾರ ಕಟ್ಟಾ ಮಾವೋವಾದಿ ಬೆರ್ಮೊ ಪ್ರದೇಶದಲ್ಲಿ ರಣವಿಜಯ್ ಮಹತೋ ಅವರನ್ನು ಬಂಧಿಸಲಾಗಿದೆ. ಎನ್ ಕೌಂಟರಲ್ಲಿ ಮಡಿದ ಶಾಂತಿ, ರಣವಿಜಯ್ ಮಹತೋ ಅವರ ಪತ್ನಿ. ಪೊಲೀಸರಿಗೆ ಬೇಕಾಗಿದ್ದ ಶಾಂತಿ ಅವರ ತಲೆಗೆ 15 ಲಕ್ಷ ರು. ಬಹುಮಾನ ಘೋಷಿಸಲಾಗಿತ್ತು. ಮೃತ ಮಾವೋವಾದಿಗಳಿಂದ ಎಕೆ -47 ರೈಫಲ್‌ಗಳು ಮತ್ತು ಐಎನ್‌ಎಸ್‌ಎಎಸ್ ಬಂದೂಕುಗಳನ್ನು ವಶಪಡಿಸಿಕೊಳ್ಳಲಾಗಿದೆ.

ಪೆಂಕ್ ನಾರಾಯಣಪುರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಗುಂಡಿನ ಚಕಮಕಿ ನಡೆದಿದೆ.

ಭದ್ರತಾ ಸಿಬ್ಬಂದಿಯ ಜಂಟಿ ತಂಡ ಘಟನೆ ಸ್ಥಳಕ್ಕೆ ತಲುಪಿದ ತಕ್ಷಣ, ನಕ್ಸಲರು ಭದ್ರತಾ ಪಡೆಗಳ ಮೇಲೆ ಗುಂಡು ಹಾರಿಸಲು ಪ್ರಾರಂಭಿಸಿದರು. ಭದ್ರತಾ ಪಡೆಗಳು ಪ್ರತಿದಾಳಿ ನಡೆಸಿದ್ದು, ಭಾರೀ ಗುಂಡಿನ ಚಕಮಕಿ ನಡೆದಿದೆ. ಎನ್‌ಕೌಂಟರ್‌ನಲ್ಲಿ ಇಬ್ಬರು ಪೊಲೀಸರು ಗಾಯಗೊಂಡಿದ್ದಾರೆ.

ಭದ್ರತಾ ಪಡೆಗಳ ಸಿಬ್ಬಂದಿ ನಕ್ಸಲರನ್ನು ಹಿಮ್ಮೆಟ್ಟಿಸಿದ್ದಾರೆ. ಸ್ಥಳದಲ್ಲಿ ಕೂಂಬಿಂಗ್ ಕಾರ್ಯಾಚರಣೆ ಮುಂದುವರಿದಿದೆ.

## ಜೈಶಂಕರ್-ರೂಬಿಯೊ ಪ್ರಥಮ ಸಭೆ

**ವಾಷಿಂಗ್ಟನ್:** ಅಮೆರಿಕದ ನೂತನ ಸೆಕ್ರೆಟರಿ ಆಫ್ ಸ್ಟೇಟ್ ಮಾರ್ಕೊ ರೂಬಿಯೊ(53) ಅವರು ಭಾರತದ ವಿದೇಶಾಂಗ ಸಚಿವ ಎಸ್. ಜೈಶಂಕರ್(70) ಜತೆ ಮೊದಲ ಸಭೆ ನಡೆಸಿದರು.

ಭಾರತದೊಂದಿಗೆ ಆರ್ಥಿಕ ಬಾಂಧವ್ಯ ಮುಂದುವರೆಸಲು ಮತ್ತು ಅನಿಯಮಿತ ವಲಸೆ ಸಮಸ್ಯೆ ಕುರಿತು ಚರ್ಚಿಸಿದರು.

ಕ್ವಾಡ್ ಸಚಿವರುಗಳ ಸಭೆಯ ನಂತರ ವಿದೇಶಾಂಗ ಇಲಾಖೆ ಪ್ರಧಾನ ಕಚೇರಿಯಲ್ಲಿ ಜೈಶಂಕರ್ ಅವರನ್ನು ಭೇಟಿಯಾಗಿ ಮಾತುಕತೆ ನಡೆಸಿದ್ದಾರೆ. ನಂತರ ಸುದ್ದಿಗೋಷ್ಠಿ ನಡೆಸಿದ ವಿದೇಶಾಂಗ ಇಲಾಖೆಯ ವಕ್ತಾರ ಟಮ್ಮಿ ಬ್ರೂಸ್, ಭಾರತದೊಂದಿಗೆ ಆರ್ಥಿಕ ಸಂಬಂಧಗಳನ್ನು ಹೆಚ್ಚಿಸಲು ಮತ್ತು ಅನಿಯಮಿತ ವಲಸೆಗೆ ಸಂಬಂಧಿಸಿದ ಕಳವಳಗಳನ್ನು ಪರಿಹರಿಸಲು ಭಾರತದ ಜತೆ ಕೆಲಸ ಮಾಡುವ ಇಂಗಿತವನ್ನು ರೂಬಿಯೊ ವ್ಯಕ್ತಪಡಿಸಿದ್ದಾರೆ. ಭಾರತ-ಯುಎಸ್ ಪಾಲುದಾರಿಕೆ ಬಲಪಡಿಸಲು, ಬದ್ಧತೆ ಮುಂದುವರೆಸಲು ಉಭಯ ರಾಷ್ಟ್ರಗಳ ನಾಯಕರು ದೃಢಪಡಿಸಿದ್ದಾರೆ ಎಂದು ಬ್ರೂಸ್ ಹೇಳಿದ್ದಾರೆ.

ರೂಬಿಯೊ ಅವರನ್ನು ಭೇಟಿಯಾದದ್ದು, ಸಂತೋಷವಾಗಿದೆ. ದ್ವಿಪಕ್ಷೀಯ ಸಭೆಯಲ್ಲಿ ಪ್ರಾದೇಶಿಕ ಮತ್ತು ಜಾಗತಿಕ ಸಮಸ್ಯೆಗಳ ಬಗ್ಗೆ ಮಾತುಕತೆ ನಡೆದಿದೆ. ಕಾರ್ಯತಂತ್ರದ ಸಹಕಾರವನ್ನು ಮುಂದುವರಿಸಲು ಅವರೊಂದಿಗೆ ನಿಕಟವಾಗಿ ಕೆಲಸ ಮಾಡಲು ಎದುರು ನೋಡುತ್ತಿದ್ದೇನೆ ಎಂದು ಜೈಶಂಕರ್ -ಎಕ್ಸ್ ಖಾತೆಯಲ್ಲಿ ಬರೆದುಕೊಂಡಿದ್ದಾರೆ.

ಕರ್ನಾಟಕ ಸರ್ಕಾರ
**ಆಡಳಿತ ವೈದ್ಯಾಧಿಕಾರಿಗಳು, ಸಾರ್ವಜನಿಕ ಆಸ್ಪತ್ರೆ, ಸೋಮವಾರಪೇಟೆ, ಕೊಡಗು ಜಿಲ್ಲೆ.**
ದೂರವಾಣಿ ಸಂಖ್ಯೆ : 08276-282700
ಇ-ಮೇಲ್ ವಿಳಾಸ: amosomwarpetgh@gmail.com
ಸಂ:ಸಾ.ಆ.ಸೋ/ಸರಬ/ನಾನ್ ಕ್ಲಿನಿಕಲ್/01/2024-25 ದಿನಾಂಕ:15.01.2025

**ಇ-ಪ್ರಕ್ಯೂರ್‌ಮೆಂಟ್ ಪ್ರಕಟಣೆ**

2024-25ನೇ ಸಾಲಿನ 31-03-2025 ರವರೆಗೆ ಮಾತ್ರ ಹೊರ ಗುತ್ತಿಗೆ ಆಧಾರದ ಮೇಲೆ ಗ್ರೂಪ್ ಡಿ ಮತ್ತು ನಾನ್ ಕ್ಲಿನಿಕಲ್ ಸ್ವಚ್ಛತಾ ಸೇವೆಗೆ ಅರ್ಹ ಟೆಂಡರ್‌ದಾರರಿಂದ/ ಮಾನ್ಯತೆ ಪಡೆದ ಅಧಿಕೃತ ಸಂಸ್ಥೆಗಳಿಂದ ಕರ್ನಾಟಕ ಪಾರದರ್ಶಕ ಅಧಿನಿಯಮ 1999-2000 ಮೇರೆಗೆ ದ್ವಿ-ಲಕೋಟೆ ಪದ್ಧತಿಯನ್ವಯ ಮೊಹರಾದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಟೆಂಡರ್ ಅಂದಾಜು ಮೊತ್ತ, ಇ.ಎಂ.ಡಿ ಮೊತ್ತ, ಮತ್ತು ಇತರೆ ಟೆಂಡರ್‌ಗೆ ಸಂಬಂಧಿಸಿದ ಮಾಹಿತಿಯನ್ನು www.eproc.karnataka.gov.in ವೆಬ್‌ಸೈಟ್‌ನಿಂದ ಡೌನ್ ಲೋಡ್ ಮಾಡಿಕೊಂಡು ಸಲ್ಲಿಸುವ ಮೂಲಕ ಇ-ಪ್ರಕ್ಯೂರ್‌ಮೆಂಟ್‌ನಲ್ಲಿ ಭಾಗವಹಿಸಬಹುದು. ಭರ್ತಿ ಮಾಡಿದ ಟೆಂಡರ್‌ಗಳನ್ನು ದಿನಾಂಕ: 13-02-2025 ಸಂಜೆ 4:00 ಗಂಟೆಯೊಳಗೆ ಸಲ್ಲಿಸಬೇಕು. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಪಡೆಯಬಹುದಾಗಿದೆ ಅಥವಾ ವೆಬ್‌ಸೈಟ್‌ನಲ್ಲಿ ಕಾಣಬಹುದು.

ಸಹಿ/-
ಆಡಳಿತ ವೈದ್ಯಾಧಿಕಾರಿಗಳು,
ಸಾರ್ವಜನಿಕ ಆಸ್ಪತ್ರೆ, ಸೋಮವಾರಪೇಟೆ
ಕೊಡಗು ಜಿಲ್ಲೆ.

### ಒಳಚರಂಡಿ ಸ್ವಚ್ಛತೆ ಕಾರ್ಮಿಕರ ಸಾವು

**ಅಹಮದಾಬಾದ್:** ಗುಜರಾತ್‌ನ ಸುರೇಂದ್ರನಗರ ಜಿಲ್ಲೆಯಲ್ಲಿ ಒಳಚರಂಡಿ ಸ್ವಚ್ಛಗೊಳಿಸುವಾಗ ಇಬ್ಬರು ಪೌರ ಕಾರ್ಮಿಕರು ಉಸಿರುಗಟ್ಟಿ ಸಾವನ್ನಪ್ಪಿದ್ದು, ಅಸ್ವಸ್ಥಗೊಂಡ ಮತ್ತೊಬ್ಬ ಕಾರ್ಮಿಕ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಮೃತರನ್ನು ಚಿರಾಗ್ ಕನು ಪಟಾಡಿಯಾ(18) ಮತ್ತು ಜಯೇಶ್ ಭರತ್ ಪಟಾಡಿಯಾ(28) ಎಂದು ಗುರುತಿಸಲಾಗಿದೆ. ಘಟನೆ ಸಂಬಂಧ ಒಬ್ಬ ವ್ಯಕ್ತಿಯನ್ನು ಬಂಧಿಸಿದ್ದು, ತನಿಖೆ ನಡೆಸಲಾಗುತ್ತಿದೆ. ಪುರಸಭೆ ಮುಖ್ಯ ಅಧಿಕಾರಿ ಸೇರಿದಂತೆ ಮೂವರ ವಿರುದ್ಧ ನರಹತ್ಯೆ ಪ್ರಕರಣ ದಾಖಲಿಸಲಾಗಿದೆ ಎಂದು ಪೊಲೀಸರು ಹೇಳಿದ್ದಾರೆ.

ರಾಮಚಂದ್ರ ರೆಡ್ಡಿ ಅಲಿಯಾಸ್ ಚಲಪತಿ ಅಂತ್ಯಕ್ಕೆ ಕಾರಣವಾಗಿದ್ದು ಸೆಲ್ಫಿ

## ಪತ್ನಿ ಜತೆಗಿನ ಸೆಲ್ಫಿಯಿಂದ ಹತನಾದ ಭೂಗತ ನಕ್ಸಲ್

**ಭುವನೇಶ್ವರ:** ಮಾವೋವಾದಿ ಪಕ್ಷದ ಸೂಕ್ಷ್ಮ ಕಾರ್ಯಾಚರಣೆಗಳ ಮಾಸ್ಟರ್ ಮೈಂಡ್ ಎಂದೇ ಗುರುತಾಗಿದ್ದ ರಾಮಚಂದ್ರ ರೆಡ್ಡಿ ಅಲಿಯಾಸ್‌ಚಲಪತಿ, ಬಸ್ತಾರ ಜಿಲ್ಲೆಯ ದಟ್ಟ ಕಾಡುಗಳಲ್ಲಿ ನಕ್ಸಲ್ ಸಿದ್ಧಾಂತ ಹರಡುವಲ್ಲಿ ನಿಸ್ಸೀಮ. 3 ದಶಕಗಳ ಕಾಲದಿಂದ ಚಲಪತಿ ನಿಗೂಢವಾಗಿದ್ದ. ತನ್ನ ಚಲನವಲನಗಳ ಬಗ್ಗೆ ಜಾಗರೂಕನಾಗಿದ್ದ. ಆದರೆ, ಪತ್ನಿ ಜತೆ ಒಂದು ಸೆಲ್ಫಿ ತೆಗೆದುಕೊಳ್ಳುವ ಆಸೆಗೆ ಬಿದ್ದು, ಜೀವಕ್ಕೆ ಸಂಚಕಾರ ತಂದುಕೊಂಡ.

ಸಿಪಿಐ (ಮಾವೋವಾದಿ) ಶ್ರೇಣಿಯ ಅಗ್ರ ಏಳು ಪ್ರಮುಖರಲ್ಲಿ ಒಬ್ಬನಾದ ಛಲಪತಿ, ಒಡಿಶಾ-ಛತ್ತೀಸಗಢರಾಜ್ಯಗಳ ಗಡಿಯಲ್ಲಿ ಸೋಮವಾರ-ಮಂಗಳವಾರ ಎರಡೂ ದಿನ ನಡೆದ ಭದ್ರತಾ ಪಡೆಗಳ ಜಂಟಿ ಕಾರ್ಯಾಚರಣೆಯಲ್ಲಿ ಇತರೆ 13 ಸಹಚರರೊಂದಿಗೆ ಹತನಾದ. ಛಲಪತಿ 2008ರಲ್ಲಿ ಒಡಿಶಾದ ನಯಾಗಢ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದ. 2008ರ ಫೆ.15 ರಂದು ಸಂಚು ಹೂಡಿ ದಾಳಿ ನಡೆಸಿ 13 ಭದ್ರತಾ ಸಿಬ್ಬಂದಿಗಳನ್ನು ಕೊಂದ ನಕ್ಸಲ್ ಗುಂಪಿನ ನೇತೃತ್ವ ವಹಿಸಿದ್ದ ಎಂದು ನಕ್ಸಲ್ ದಮನದ ಹಲವು ಕಾರ್ಯಾಚರಣೆಗಳಲ್ಲಿ ಭಾಗಿಯಾಗಿದ್ದ ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ಸುದ್ದಿಸಂಸ್ಥೆಗೆ ಹೇಳಿದ್ದಾರೆ.

ಶಸ್ತ್ರಾಗಾರದ ಮೇಲೆ ದಾಳಿ ನಡೆಯುತ್ತಿರುವಾಗ ಪೊಲೀಸ್ ಪಡೆಗಳು ನಯಾಗಢಕ್ಕೆ ಪ್ರವೇಶಿಸಲು ಸಾಧ್ಯವಾಗದಂತೆ ಚಲಪತಿ ಯೋಜನೆ ರೂಪಿಸಿದ್ದ. ಅವನ ಯೋಜನೆಯ ರೀತಿಯಲ್ಲೇ ನಕ್ಸಲರು ಬೃಹತ್ ಮರದ ತುಂಡುಗಳನ್ನು ರಸ್ತೆಗಳಿಗೆ ಅಡ್ಡಲಾಗಿ ಇರಿಸಿ ಪಟ್ಟಣಕ್ಕೆ ಹೋಗುವ ಎಲ್ಲಾ ಮಾರ್ಗಗಳನ್ನು ನಿರ್ಬಂಧಿಸಿದ್ದರು. ಹಾಗೆ ಭದ್ರತಾ ಪಡೆಗಳು ನಕ್ಸಲರ ಜಾಲದಲ್ಲಿ ಸಿಲುಕಿ 13 ಸಿಬ್ಬಂದಿ ಹುತಾತ್ಮರಾದರು ಎಂದು ಅಧಿಕಾರಿ ಘಟನೆ ನೆನಪಿಸಿಕೊಂಡರು.



ಆಂಧ್ರಪ್ರದೇಶದ ಚಿತ್ತೂರು ಜಿಲ್ಲೆಯವನಾಗಿದ್ದ ಚಲಪತಿ ಮುಖ್ಯವಾಗಿ ಛತ್ತೀಸಗಢ ಮತ್ತು ಒಡಿಶಾದಲ್ಲಿ ಸಕ್ರಿಯನಾಗಿದ್ದ. ಇತ್ತೀಚೆಗೆ ಮೊಣಕಾಲಿನಲ್ಲಿ ಸಮಸ್ಯೆ ಇದ್ದ ಕಾರಣ ಹೆಚ್ಚು ಪ್ರಯಾಣಿಸಲು ಸಾಧ್ಯವಾಗುತ್ತಿರಲಿಲ್ಲ. ಹಾಗಾಗಿ ಕೆಲ ವರ್ಷಗಳಿಂದ ಛತ್ತೀಸ್ಗಢದ ಬಸ್ತಾರ ಜಿಲ್ಲೆಯ ದರಭಾದಲ್ಲಿ ವಾಸಿಸುತ್ತಿದ್ದ ಎಂದು ಅಧಿಕಾರಿ ಹೇಳಿದ್ದಾರೆ.

ದಾಳಿ ತಂತ್ರ, ನೈಪುಣ್ಯ, ನಾಯಕತ್ವ ಕೌಶಲ, ಸವಾಲಿನ ಪ್ರದೇಶಗಳಲ್ಲಿ ಸಂಪನ್ಮೂಲ ಕ್ರೋಢೀಕರಿಸುವ ಸಾಮರ್ಥ್ಯ ಮೊದಲಾದ ಗುಣಗಳು ಚಲಪತಿಯನ್ನು ಈ ಭಾಗದಲ್ಲಿ ಮುಂಚೂಣಿ ಮಾವೋವಾದಿ ನಾಯಕನನ್ನಾಗಿ ಮಾಡಿದ್ದವು ಎಂದು ಹೇಳಿದ್ದಾರೆ.

ಅಬುಜ್ಮದ್‌ನಲ್ಲಿ ಭದ್ರತಾ ಪಡೆ ಕಾರ್ಯಾಚರಣೆ ಹೆಚ್ಚಿದ ಕಾರಣ ಛಲಪತಿ ಕೆಲ ತಿಂಗಳ ಹಿಂದಷ್ಟೇ ತನ್ನ ನೆಲೆಯನ್ನು ಸುರಕ್ಷಿತ ವಲಯವೆನಿಸಿದ್ದ ಒಡಿಶಾ ಗಡಿಗೆ ಹತ್ತಿರದ ಗರಿಯಾಬಂದ್ಗೆ ಸ್ಥಳಾಂತರಿಸಿದ್ದ. ಭದ್ರತಾ ಪಡೆಗಳಿಂದ ತಪ್ಪಿಸಿಕೊಳ್ಳಲು ಹೆಚ್ಚು ಕಾಲ ಭೂಗತನಾಗಿಯೇ ಇರುತ್ತಿದ್ದ ಚಲಪತಿ, ಪತ್ನಿ ಅರುಣಾ ಜತೆ ಒಂದು ಸೆಲ್ಫಿ ತೆಗೆದುಕೊಂಡು ಭದ್ರತಾ ಪಡೆಗಳ ಕಣ್ಣಿಗೆ ಬಿದ್ದ. ಆತ ಎರಡೂ ರಾಜ್ಯಗಳ ಪೊಲೀಸರಿಗೆ ಅದೆಷ್ಟು ಬೇಕಾಗಿದ್ದ ಎಂದರೆ ಆತನ ಪತ್ತೆಗೆ ನೆರವಾ ಆದವರಿಗೆ ಸರಕಾರ 1 ಕೋಟಿ ರು. ಬಹುಮಾನ ಕೊಡುವುದಾಗಿ ಘೋಷಿಸಿತ್ತು ಎಂದು ಹಿರಿಯ ಅಧಿಕಾರಿ ತಿಳಿಸಿದ್ದಾರೆ.

ಮೇ 2016 ರಲ್ಲಿ ಆಂಧ್ರಪ್ರದೇಶದಲ್ಲಿ ಮಾವೋವಾದಿಗಳು ಮತ್ತು ಭದ್ರತಾ ಪಡೆಗಳ ನಡುವಿನ ಗುಂಡಿನ ಚಕಮಕಿಯ ನಂತರ ವಶಪಡಿಸಿಕೊಂಡ ಸ್ಮಾರ್ಟ್‌ಫೋನ್‌ನಲ್ಲಿ ಚಲಪತಿ, ಪತ್ನಿ ಅರುಣಾ ಜತೆಗೆ ತೆಗೆದುಕೊಂಡು ಸೆಲ್ಫಿ ಕಂಡುಬಂದಿತು. ಇದರಿಂದ ಭದ್ರತಾ ಪಡೆಗಳು ಆತನ ಚಲನವಲನದ ಮೇಲೆ ನಿಗಾ ಇರಿಸಿದವು. ಹೀಗಾಗಿ ಆತ ತನ್ನ ಬೆಂಗಾವಲಿಗಿದ್ದ 13 ನಕ್ಸಲ್ ಕಾರ್ಯಕರ್ತರ ಜತೆಗೆ ಓಡಾಡುವಂತೆ ಆಯಿತು. ಕೊನೆಗೆ ಛತ್ತೀಸಗಢ-ಒಡಿಶಾ ಗಡಿಯಲ್ಲಿ ಸೋಮವಾರ ರಾತಿಯಿಂದ ಮಂಗಳವಾರ ಬೆಳಗ್ಗೆವರೆಗೂ ನಡೆದ ಭದ್ರತಾ ಪಡೆಗಳೊಂದಿಗಿನ ಗುಂಡಿನ ಚಕಮಕಿಯಲ್ಲಿ ಚಲಪತಿ ಸೇರಿದಂತೆ 14 ನಕ್ಸಲರು ಸಾವನ್ನಪ್ಪಿದರು ಎಂದು ಮಹತ್ವದ ಕಾರ್ಯಾಚರಣೆ ಯಶಸ್ಸನ್ನು ಅಧಿಕಾರಿ ವಿವರಿಸಿದ್ದಾರೆ.

**ಹೊಸಕೋಟೆ ಯೋಜನಾ ಪ್ರಾಧಿಕಾರ**
ಮಿಷನ್ ಹಾಸ್ಪಿಟಲ್ ರಸ್ತೆ, 1ನೇ ಅಡ್ಡರಸ್ತೆ, ಶ್ರೀ ವೆಂಕಟಾದ್ರಿ ಬಡಾವಣೆ, ಹೊಸಕೋಟೆ - 562114,
ಬೆಂಗಳೂರು ಗ್ರಾಮಾಂತರ ಜಿಲ್ಲೆ. ದೂರವಾಣಿ / ಫ್ಯಾಕ್ಸ್: 080-27934470/ 27935412
E-mail: hosakote.pa@gmail.com URL: www.hoskote.tpa.gov.in
ಸಂಖ್ಯೆ: ಹೊಯೋಪ್ರಾ/ಭೂಉಬ/35/2024-25 ದಿನಾಂಕ: 17-01-2025

**ಸಾರ್ವಜನಿಕ ಪ್ರಕಟಣೆ**

**ವಿಷಯ:** ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 14 (ಎ) ರಡಿಯಲ್ಲಿ ಕೈಗಾರಿಕಾ ಉದ್ದೇಶಕ್ಕಾಗಿ ಕಾಯ್ದಿರಿಸಿರುವ ಜಮೀನುಗಳನ್ನು ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಕೋರಿರುವ ಬಗ್ಗೆ.

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 14 (ಎ) ರಡಿಯಲ್ಲಿ ಈ ಕೆಳಕಂಡ ಜಮೀನುಗಳನ್ನು ಹೊಸಕೋಟೆ ಸ್ಥಳೀಯ ಯೋಜನಾ ಪ್ರದೇಶಕ್ಕೆ ಸರ್ಕಾರದಿಂದ ದಿನಾಂಕ: 30.01.2018 ರಂದು ಅನುಮೋದನೆಯಾದ ಮಹಾಯೋಜನೆಯಂತೆ **ಕೈಗಾರಿಕಾ ವಲಯದಲ್ಲಿ ಕಾಯ್ದಿರಿಸಿರುವ ಜಮೀನನ್ನು ವಸತಿ ಉದ್ದೇಶಕ್ಕಾಗಿ ಭೂ ಉಪಯೋಗ ಬದಲಾವಣೆ** ಮಾಡಲು ಕೋರಿ ಈ ಪ್ರಾಧಿಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಸದರಿ ಭೂ ಉಪಯೋಗ ಬದಲಾವಣೆಯ ಪ್ರಸ್ತಾವನೆಯನ್ನು ಪರಿಗಣಿಸುವ ಬಗ್ಗೆ ಅಕ್ಕಪಕ್ಕದ ಜಮೀನಿನ ಮಾಲೀಕರಿಗೆ / ಇತರರಿಗೆ / ಪರಿಸರಕ್ಕೆ ಉಂಟಾಗಬಹುದಾದಂತಹ ತೊಂದರೆಗಳು ಹಾಗೂ ಇತರೆ ಅಂಶಗಳಿಗೆ ಸಂಬಂಧಿಸಿದಂತೆ ತಮ್ಮ ಸಲಹೆ / ಸೂಚನೆ / ಆಕ್ಷೇಪಣೆಗಳು ಇದ್ದಲ್ಲಿ ಈ ಪ್ರಕಟಣೆ ನೀಡಿದ ದಿನಾಂಕದಿಂದ 15 ದಿನಗಳ ಒಳಗಾಗಿ ಲಿಖಿತ ರೂಪದಲ್ಲಿ **ಸದಸ್ಯ ಕಾರ್ಯದರ್ಶಿ, ಹೊಸಕೋಟೆ ಯೋಜನಾ ಪ್ರಾಧಿಕಾರ, ಮಿಷನ್ ಹಾಸ್ಪಿಟಲ್ ರಸ್ತೆ, 1ನೇ ಅಡ್ಡರಸ್ತೆ, ಶ್ರೀ ವೆಂಕಟಾದ್ರಿ ಬಡಾವಣೆ, ಹೊಸಕೋಟೆ - 562114, ಬೆಂಗಳೂರು ಗ್ರಾಮಾಂತರ ಜಿಲ್ಲೆ** ರವರಿಗೆ ಖುದ್ದಾಗಿ ಅಥವಾ ಅಂಚೆ ಮೂಲಕ ಸಲ್ಲಿಸಲು ಕೋರಲಾಗಿದೆ. ಅವಧಿ ಮೀರಿದ ನಂತರ ಸ್ವೀಕರಿಸಲಾಗುವ ಸಲಹೆ / ಸೂಚನೆ / ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

**ಹೊಸಕೋಟೆ ತಾಲ್ಲೂಕು, ಕಸಬಾ ಹೋಬಳಿ, ಮಲ್ಲಿಮಾಕನಪುರ ಗ್ರಾಮ**

| ಕ್ರ. ಸಂ. | ಭೂ ಮಾಲೀಕರ ಹೆಸರು | ಸ.ನಂ. | ವಿಸ್ತೀರ್ಣ ಎ-ಗುಂ | 'ಎ' ಖರಾಬು ಗುಂ |
|---|---|---|---|---|
| 1 | ಶ್ರೀ ಕೆ.ಎ. ಮಹಂತೇಶ್ ಕಸ್ತೂರ್ ಅಡವಿಸ್ವಾಮಿ ಬಿನ್ ಅಡವಿಸ್ವಾಮಿ | 79/1 | 00-39 | |
| 2 | | 79/2 | 0-38 | 01 |
| 3 | ಶ್ರೀ ವೆಂಕಟೇಗೌಡ ಸಿ. ಬಿನ್ ಲೇಟ್ ಚಿಕ್ಕಣ್ಣ | 79/4 | 01-01 | |

**ಷರಾ:-** ಪ್ರಶ್ನಿತ ಜಮೀನಿನ ಸುತ್ತಮುತ್ತಲಿನ ಪರಿಸರದಲ್ಲಿ ಹೆಚ್ಚಿನ ವಸತಿ ಬೆಳವಣಿಗೆಗಳು ಬಂದಿದ್ದು / ಬರುತ್ತಿದ್ದು, "ಉದ್ದೇಶಿತ ಜಮೀನುಗಳಲ್ಲಿ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಒಳಗೊಂಡ ಯೋಜನಾ ಬದ್ಧವಾದ ವಸತಿ ಚಟುವಟಿಕೆಯನ್ನು ಪ್ರಾರಂಭಿಸಲು ಉದ್ದೇಶಿಸಿರುವುದರಿಂದ ಸ್ಥಳೀಯ ಸಾರ್ವಜನಿಕರಿಗೆ ಅನೇಕ ಉದ್ಯೋಗವಕಾಶಗಳು ದೊರಕುವುದರ ಜೊತೆಗೆ ಸುತ್ತಲಿನ ಪರಿಸರದ ಪ್ರದೇಶವು ಸಹ ಯೋಜನಾಬದ್ಧವಾಗಿ ಅಭಿವೃದ್ಧಿ ಹೊಂದಲು ಸಹಕಾರಿಯಾಗುತ್ತದೆ" ಎಂಬ ಸಾರ್ವಜನಿಕ ಹಿತಾಸಕ್ತಿಯನ್ನು ಒಳಗೊಂಡಿರುತ್ತೇವೆ ಎಂದು ಅರ್ಜಿದಾರರು ತಮ್ಮ ಪ್ರಮಾಣ ಪತ್ರದ ಮುಖಾಂತರ ತಿಳಿಸಿರುತ್ತಾರೆ.

ಸಹಿ/-
ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು
ಹಾಗೂ ಸದಸ್ಯ ಕಾರ್ಯದರ್ಶಿ, ಹೊಸಕೋಟೆ ಯೋಜನಾ ಪ್ರಾಧಿಕಾರ, ಹೊಸಕೋಟೆ.
ವಾಸಾಸಂಇ/ವಾ.ಪ್ರ/4515/ಅಡ್ವರ್ಟೋರ್/2024-25

ಅಮೆರಿಕದಲ್ಲಿನ ಅಕ್ರಮ ವಲಸಿಗರಲ್ಲಿ ಗಡಿಪಾರು ಭೀತಿ

## 18000 ಪ್ರಜೆಗಳನ್ನು ಕರೆತರಲು ಭಾರತ ಸರಕಾರದಿಂದ ಸಿದ್ಧತೆ

**ದೆಹಲಿ:** ನೂತನ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅಮೆರಿಕದಲ್ಲಿ ಅಕ್ರಮ ವಲಸೆ ನಿರ್ಬಂಧಿಸುವ ಹಾಗೂ ಸರಿಯಾದ ದಾಖಲೆಗಳಿಲ್ಲದೆ ದೇಶದಲ್ಲಿ ಸದ್ಯ ವಾಸಿಸುತ್ತಿರುವ ಅಕ್ರಮ ವಲಸಿಗರೆಲ್ಲರನ್ನೂ ಗಡಿಪಾರು ಮಾಡುವ ಆದೇಶ ಹೊರಡಿಸಿದ್ದಾರೆ.

ಟ್ರಂಪ್ ನೇತೃತ್ವದ ಹೊಸ ಸರಕಾರವನ್ನು ಸಂತೃಪ್ತಿಪಡಿಸಲು ಹಾಗೂ ಅಕ್ರಮ ವಲಸಿಗರ ವಿರುದ್ಧ ಶಿಸ್ತುಕ್ರಮಕ್ಕೆ ಸಹಕರಿಸುವ ಪ್ರಯತ್ನದಲ್ಲಿ ಭಾರತ ಸರಕಾರ, ಅಮೆರಿಕದಲ್ಲಿ ಅಕ್ರಮವಾಗಿ ವಾಸಿಸುತ್ತಿರುವ ಭಾರತೀಯರನ್ನು ವಾಪಸ್ ಕರೆಸಿಕೊಳ್ಳಲು ಯೋಜಿಸುತ್ತಿದೆ.

ಸದ್ಯ ದಾಖಲೆ ಇಲ್ಲದೇ ಅಮೆರಿಕದಲ್ಲಿರುವ 18,000 ಭಾರತೀಯರನ್ನು ಗಡಿಪಾರು ಮಾಡಲು ಡೊನಾಲ್ಡ್ ಸರಕಾರ ಗುರುತಿಸಿದೆ ಎಂದು ಕೆಲ ಮೂಲಗಳನ್ನು ಉಲ್ಲೇಖಿಸಿ ಬ್ಲೂಮ್‌ಬರ್ಗ್ ಮಾಧ್ಯಮ ವರದಿ ಮಾಡಿದೆ. ಅಮೆರಿಕದಲ್ಲಿ ಅಕ್ರಮವಾಗಿ ವಾಸಿಸುತ್ತಿರುವ ಹಾಗೂ ತಾತ್ಕಾಲಿಕ ವೀಸಾದಲ್ಲಿ ನೆಲೆಸಿರುವವರನ್ನು ಗಡಿಪಾರು ಮಾಡಲಾಗುವುದು ಎಂದು ಅಧಿಕಾರ ವಹಿಸಿಕೊಂಡ ಕೆಲವೇ ಗಂಟೆಗಳಲ್ಲಿ ಹೇಳಿದ್ದ ಟ್ರಂಪ್, ವಲಸಿಗರಿಗೆ ಕೆಲಸದ ಅರ್ಹತೆಯನ್ನು ನೀಡುವ ಮೂಲಕ ಅಮೆರಿಕಕ್ಕೆ ಕಾನೂನುಬದ್ಧ ಪ್ರವೇಶವನ್ನು ಒದಗಿಸುವ ಸಿಬಿಪಿ ಆ್ಯಪ್ ಸ್ಥಗಿತಗೊಳಿಸಲು ಆದೇಶಿಸಿದರು. ಅಲ್ಲದೇ ಅಮೆರಿಕ-ಮೆಕ್ಸಿಕೋ ಗಡಿಯಲ್ಲಿ ರಾಷ್ಟ್ರೀಯ ತುರ್ತು ಪರಿಸ್ಥಿತಿ ಘೋಷಿಸಿದರು ಮತ್ತು ಅಕ್ರಮ ವಲಸಿಗರ ಪ್ರವೇಶವನ್ನು ನಿರ್ಬಂಧಿಸಲು ಸೈನ್ಯವನ್ನು ಸಜ್ಜುಗೊಳಿಸಿದರು.

**ಎಚ್1-ಬಿ ವೀಸಾ:** ಅಮೆರಿಕದ ಕಂಪನಿಗಳು ತಮ್ಮಲ್ಲಿನ ವಿಶೇಷ ಉದ್ಯೋಗಗಳಿಗೆ ಸಿಬ್ಬಂದಿ ನೇಮಕಕ್ಕೆ ಅವಕಾಶ ಮಾಡಿಕೊಡುವ ಎಚ್1- ಬಿ ವೀಸಾ ಮರಳಿ ಜಾರಿಗೆ ಬಂದಾಗಿನಿಂದ ಭಾರತೀಯರ ಸಂಖ್ಯೆ ಹೆಚ್ಚಾಗಿದೆ. ಅಧಿಕೃತ ಅಂಕಿ ಅಂಶಗಳ ಪ್ರಕಾರ, 2023ರಲ್ಲಿ ವಿತರಿಸಲಾದ ಒಟ್ಟು 3.86 ಲಕ್ಷ ಎಚ್ -1 ಬಿ ವೀಸಾಗಳಲ್ಲಿ 4ನೇ 3 ಭಾಗದಷ್ಟು ವೀಸಾಗಳನ್ನು ಭಾರತೀಯರೇ ಪಡೆದಿದ್ದಾರೆ. ಆದಾಗ್ಯೂ, ಅಕ್ರಮ ವಲಸೆಯ ವಿಷಯದಲ್ಲಿ ಮೆಕ್ಸಿಕೊ, ವೆನೆಜುವೆಲಾ ನಂತರದ ಸ್ಥಾನದಲ್ಲಿ ಭಾರತವಿದೆ.

## ಸಂಜಯ್ ರಾಯ್‌ಗೆ ಗಲ್ಲು ಶಿಕ್ಷೆ ಕೋರಿ ಹೈಗೆ ಸಿಬಿಐ ಮೇಲ್ಮನವಿ

**ಕೋಲ್ಕತ್ತಾ:** ಕೋಲ್ಕತ್ತ ನಗರದ ಆರ್.ಜಿ. ಕರ್ ಸರಕಾರಿ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯಲ್ಲಿ ಕರ್ತವ್ಯ ನಿರತ ಕಿರಿಯ ವೈದ್ಯೆಯ ಮೇಲೆ ಅತ್ಯಾಚಾರ ನಡೆಸಿ ಕೊಲೆ ಮಾಡಿರುವುದು ಅಪರೂಪದ ಪ್ರಕರಣ ಎಂದು ಪರಿಗಣಿಸಿ ಅಪರಾಧಿ ಸಂಜಯ್ ರಾಯ್‌ಗೆ ಗಲ್ಲು ಶಿಕ್ಷೆ ವಿಧಿಸುವಂತೆ ಕೋರಿ ಕೇಂದ್ರ ತನಿಖಾ ದಳ(ಸಿಬಿಐ) ಬುಧವಾರ ಕೋಲ್ಕತ್ತ ಹೈಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದೆ.

ಸೀಲ್ದಾದ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶ ಅನಿರ್ಬನ್ ದಾಸ್ ಅವರು ಸೋಮವಾರ ಪ್ರಕರಣದ ಏಕೈಕ ಅಪರಾಧಿ ಸಂಜಯ್ ರಾಯ್‌ಗೆ ಜೀವಾವಧಿ ಜೈಲು ಶಿಕ್ಷೆ ವಿಧಿಸಿದ್ದರು. ಆ ಶಿಕ್ಷೆಯ ಪ್ರಮಾಣದ ಬಗ್ಗೆ ಬಿಜೆಪಿ ಪಶ್ಚಿಮ ಬಂಗಾಳ ಘಟಕ ಅಸಮಾಧಾನ ವ್ಯಕ್ತಪಡಿಸಿತ್ತು. ತೀರ್ಪು ನ್ಯಾಯದಾನದ ಅಣಕ ಎಂದು ಬಿಜೆಪಿ ನಾಯಕರು ಟೀಕಿಸಿದ್ದರು. ರಾಜ್ಯದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ತೀರ್ಪು, ಶಿಕ್ಷೆ ಪ್ರಮಾಣಕ್ಕೆ ಅತೃಪ್ತಿ ವ್ಯಕ್ತಪಡಿಸಿ, ಮೇಲ್ಮನವಿ ಸಲ್ಲಿಸುವುದಾಗಿ ಹೇಳಿದ್ದರು ಈಗ ಖುದ್ದು ಸಿಬಿಐ ಬುಧವಾರ ಹೈಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದೆ.

**ಸೆಷನ್ಸ್ ನ್ಯಾಯಾಲಯ ತೀರ್ಪು:** ಸರಕಾರಿ ಸ್ವಾಮ್ಯದ ಆರ್.ಜಿ.ಕರ್ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯಲ್ಲಿ ಕರ್ತವ್ಯ ನಿರತ ವೈದ್ಯೆಯ ಮೇಲೆ ಅತ್ಯಾಚಾರ ಎಸಗಿ, ಕೊಲೆ ಮಾಡಿದ ಪ್ರಕರಣದಲ್ಲಿ ಅಪರಾಧಿ ರಾಯ್‌ಗೆ ಗಲ್ಲು ಶಿಕ್ಷೆ ವಿಧಿಸಬೇಕೆಂಬ ವಾದವನ್ನು ತಿರಸ್ಕರಿಸಿದ ಸೀಲ್ದಾ ಸೆಷನ್ಸ್ ನ್ಯಾಯಾಲಯ, ಇದೇನು ಅಪರೂಪದಲ್ಲಿ ಅಪರೂಪದ ಪ್ರಕರಣ ಅಲ್ಲ. ಹಾಗಾಗಿ ಗಲ್ಲು ಶಿಕ್ಷೆ ವಿಧಿಸಲು ಬರುವುದಿಲ್ಲ ಎಂದು ಹೇಳಿ, ಜೀವಾವಧಿ ಜೈಲು ಶಿಕ್ಷೆ ವಿಧಿಸಿತ್ತು. ಅಲ್ಲದೇ ಅಪರಾಧಿಗೆ 50,000 ರು. ದಂಡ ವಿಧಿಸಿ, ಮೃತ ವೈದ್ಯೆಯ ಕುಟುಂಬಕ್ಕೆ 17 ಲಕ್ಷ ರು. ಪರಿಹಾರ ನೀಡುವಂತೆ ರಾಜ್ಯ ಸರಕಾರಕ್ಕೆ ನಿರ್ದೇಶನ ನೀಡಿತ್ತು.

# ಒಪಿಎಸ್ ಜಾರಿಗೆ ರಾಜ್ಯ ಸರಕಾರಿ ನೌಕರರ ಪಟ್ಟು

## ಬಜೆಟ್‌ನಲ್ಲಿ ಘೋಷಿಸದಿದ್ದರೆ ಹೋರಾಟದ ಹಾದಿ ಅನಿವಾರ್ಯ

### ಒಪಿಎಸ್ ಮರು ಜಾರಿಗೊಳಿಸಿದರೆ ನಾಲ್ಕು ಪಟ್ಟು ಹೆಚ್ಚುವರಿ ಅನುದಾನ ಅಗತ್ಯ

**ಬೆಂಗಳೂರು:** ಪಂಚಗ್ಯಾರಂಟಿಗಳನ್ನು ಹೊರತುಪಡಿಸಿ, ವಿಧಾನಸಭಾ ಚುನಾವಣಾ ಪ್ರಣಾಳಿಕೆಯ ಪ್ರಮುಖ ಘೋಷಣೆಯಾಗಿದ್ದ ಹಳೇ ಪಿಂಚಣಿ ಮರುಜಾರಿ ಇದೀಗ ಸರಕಾರಕ್ಕೆ ನುಂಗಲಾರದ ತುತ್ತಾಗಿದೆ.

ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಹೊಸ ಪಿಂಚಣಿ ಯೋಜನೆ ಬದಲಿಗೆ ಹಳೆ ಪಿಂಚಣಿ ವ್ಯವಸ್ಥೆಯನ್ನು ಜಾರಿಗೊಳಿಸಲಾಗುವುದು ಎನ್ನುವ ಭರವಸೆ ನೀಡಿತ್ತು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಈ ವಿಷಯದಲ್ಲಿ

ಸಕಾರಾತ್ಮಕವಾಗಿ ಸ್ಪಂದಿಸಿದ್ದರು. ಆದರೀಗ ಮುಂದಿನ ಬಜೆಟ್‌ನಲ್ಲಿ ಈ ಬಗ್ಗೆ ಘೋಷಣೆ ಮಾಡದಿದ್ದರೆ ಹೋರಾಟ ನಡೆಸುವುದು ಅನಿವಾರ್ಯ ಎನ್ನುವ ಸರಕಾರಿ ನೌಕರರ ಸಂಘದ ಆಗ್ರಹ ಸರಕಾರವನ್ನು ಇಕ್ಕಟ್ಟಿಗೆ ಸಿಲುಕಿಸಿದೆ.

ರಾಜ್ಯ ಸರಕಾರಿ ನೌಕರರು ರಾಷ್ಟ್ರೀಯ ಪಿಂಚಣಿ ಯೋಜನೆ ರದ್ದುಗೊಳಿಸಿ, ರಾಜ್ಯದಲ್ಲಿ ಒಪಿಎಸ್ ಅನುಷ್ಠಾನ ಮಾಡುವಂತೆ ಬಿಗಿ ಪಟ್ಟು ಹಿಡಿದಿದ್ದಾರೆ. ಈ ಸಂಬಂಧ ಫೆಬ್ರವರಿಯಲ್ಲಿ ಒಪಿಎಸ್ ಹಕ್ಕೊತ್ತಾಯ ಧರಣಿ ನಡೆಸಲು ತೀರ್ಮಾನಿಸಲಾಗಿದೆ. ಬಜೆಟ್ ತಯಾರಿಯಲ್ಲಿರುವ ಸಿಎಂ ಸಿದ್ದರಾಮಯ್ಯಗೆ ಒಪಿಎಸ್ ಕಗ್ಗಂಟು ದೊಡ್ಡ ತಲೆನೋವಾಗಿ ಪರಿಣಮಿಸಲಿದೆ.

**ಆರ್ಥಿಕ ಹೊರೆ ಹೇಗಿರಲಿದೆ?:** ಹಳೆ ಪಿಂಚಣಿ ಯೋಜನೆಯನ್ನು ಅನುಷ್ಠಾನ ಮಾಡಿದರೆ ರಾಜ್ಯದ ಮೇಲೆ ಭಾರೀ ಆರ್ಥಿಕ ಹೊರೆ ಬೀಳಲಿದೆ. ಮಧ್ಯಮಾವಧಿ ವಿತ್ತೀಯ ವರದಿಯೂ ಕೂಡ ಒಪಿಎಸ್‌ಗೆ ಮರಳುವುದರಿಂದ ಉಂಟಾಗುವ ಆರ್ಥಿಕ ಸಂಕಷ್ಟದ ಬಗ್ಗೆ ಎಚ್ಚರಿಕೆ ನೀಡಿದೆ. ಹಳೆಯ ಪಿಂಚಣಿ ಯೋಜನೆಗೆ ಮರಳುವುದರಿಂದ ಸರಕಾರಕ್ಕೆ ಎನ್‌ಪಿಎಸ್‌ನಲ್ಲಿ ಭರಿಸುತ್ತಿರುವ ವೆಚ್ಚದ 4.5 ಪಟ್ಟು ಹೆಚ್ಚಿನ ಆರ್ಥಿಕ ಹೊರೆಯಾಗಲಿದೆ ಎಂದು ಆರ್‌ಬಿಐ ಕೂಡ ತನ್ನ ವರದಿಯಲ್ಲಿ ಹೇಳಿದೆ. ಆದ್ದರಿಂದ ಹಳೆ ಪಿಂಚಣಿ ಯೋಜನೆಗೆ ಮರಳುವುದು ದೀರ್ಘಾವಧಿಯಲ್ಲಿ ರಾಜ್ಯದ ಹಣಕಾಸಿನ ಮೇಲೆ ಭಾರಿ ಪೆಟ್ಟು ಬೀಳಲಿದೆ ಹಾಗೂ ಇದರಿಂದ ಕಲ್ಯಾಣ ಕಾರ್ಯಕ್ರಮಗಳ ಮತ್ತು ಅಭಿವೃದ್ಧಿ ವೆಚ್ಚದ ಹಂಚಿಕೆಯು ಕಡಿಮೆಯಾಗಲಿದೆ ಎಂಬ ಎಚ್ಚರಿಕೆ ನೀಡಿದೆ.

2024–25 ಸಾಲಿನಲ್ಲಿ ರಾಜ್ಯ ಸರಕಾರ 80,434 ಕೋಟಿ ರು. ಸರಕಾರಿ ನೌಕರರ ವೇತನಕ್ಕೆ ವ್ಯಯಿಸುತ್ತಿದೆ. 32,355 ಕೋಟಿ ರು. ಪಿಂಚಣಿಗೆ ವೆಚ್ಚ ಮಾಡುತ್ತಿದೆ. ಒಂದು ವೇಳೆ ಒಪಿಎಸ್ ಅನ್ನು ಮರುಜಾರಿಗೊಳಿಸಿದರೆ ಪಿಂಚಣಿ ವೆಚ್ಚ ನಾಲ್ಕು ಪಟ್ಟು ಹೆಚ್ಚಾಗಲಿದೆ ಎಂದು ಅಂದಾಜಿಸಲಾಗಿದೆ.

### ಏನಿದು ಒಪಿಎಸ್ ಜಾರಿ ಪಟ್ಟು?

**ಒಪಿಎಸ್ ಜಾರಿಗೆ ಪಟ್ಟು ಹಿಡಿದಿರುವ ಕರ್ನಾಟಕ ರಾಜ್ಯ ಸರಕಾರಿ ನೌಕರರ ಸಂಘದಿಂದ ಫೆ.7ರಂದು ಒಪಿಎಸ್ ಹಕ್ಕೊತ್ತಾಯ ಧರಣಿ ನಡೆಸಲು ತೀರ್ಮಾನಿಸಲಾಗಿದೆ. ಜ.19ರಂದು ಬೆಂಗಳೂರಿನಲ್ಲಿ ನಡೆದ ವಿಶೇಷ ರಾಜ್ಯ ಕಾರ್ಯಕಾರಿಣಿ ಸಭೆಯಲ್ಲಿ ಈ ಸರ್ವಾನುಮತದ ನಿರ್ಣಯ ಕೈಗೊಳ್ಳಲಾಗಿದೆ. ರಾಜ್ಯ ಸರಕಾರಿ ನೌಕರರು ನಮಗೆ ಎನ್‌ಪಿಎಸ್ ಬೇಡವೇ ಬೇಡ, ಕೇಂದ್ರ ಸರಕಾರದ ಹೊಸ ಏಕೀಕೃತ ಪಿಂಚಣಿ ಯೋಜನೆಯೂ ಬೇಡ ಎಂದು ಪಟ್ಟು ಹಿಡಿದಿರುವುದು ಇದೀಗ ಸಮಸ್ಯೆಯಾಗಿದೆ.**

**ಮುಂಬರುವ ಬಜೆಟ್‌ನಲ್ಲಿ ಎನ್‌ಪಿಎಸ್ ರದ್ದುಗೊಳಿಸಿ, ಒಪಿಎಸ್ ಜಾರಿ ಸಂಬಂಧ ಸಿಎಂ ಸಿದ್ದರಾಮಯ್ಯ ಘೋಷಣೆ ಮಾಡಬೇಕು. ನಮಗೆ ಯುಪಿಎಸ್ ಕೂಡ ಬೇಡ. ಶೀಘ್ರದಲ್ಲಿ ಒಪಿಎಸ್ ಜಾರಿ ಮಾಡಬೇಕು. ಸರಕಾರವು ಸಮಿತಿ ರಚಿಸುವ ಮೂಲಕ ಕಾಲಹರಣ ಮಾಡುತ್ತಿದೆ. ಹಣಕಾಸು ಇಲಾಖೆ, ಸಿಎಂ ಜತೆಗೆ ಸಭೆ ನಡೆಸಿದ್ದು, ಅನುಷ್ಠಾನದ ಭರವಸೆ ನೀಡಿದ್ದಾರೆ. ಇತ್ತ ಕಾಂಗ್ರೆಸ್ ಪ್ರಣಾಳಿಕೆಯಲ್ಲೂ ಭರವಸೆ ನೀಡಿದೆ. ಇದರ ಜಾರಿಗೆ ರಾಜಕೀಯ ಇಚ್ಛಾಶಕ್ತಿ ಬೇಕು.**

– **ಶಾಂತಾರಾಮ** ರಾಜ್ಯ ಸರಕಾರಿ ಎನ್‌ಪಿಎಸ್ ನೌಕರರ ಸಂಘದ ಅಧ್ಯಕ್ಷ

---

2 ವರ್ಷದ ಹಿಂದೆ ಮನೆ ಮುಂದೆ ನಿಲ್ಲಿಸಿದ್ದ ಬೈಕ್ ಕಳ್ಳತನ | ಮಾಲೀಕನಿಗೆ ನೋಟಿಸ್

# ಎರಡು ವರ್ಷದಲ್ಲಿ ಹದಿನೆಂಟು ಸಂಚಾರ ನಿಯಮ ಉಲ್ಲಂಘನೆ

**ಬೆಂಗಳೂರು:** ದ್ವಿಚಕ್ರ ವಾಹನ ಕಳ್ಳತನವಾಗಿದೆ ಎಂದು ಎರಡು ವರ್ಷದ ಹಿಂದೆ ನೀಡಿದ್ದ ದೂರಿನ ಜತೆ ರಾಜಾರೋಷವಾಗಿ ವಾಹನದಲ್ಲಿ ಓಡಾಡುತ್ತಿರುವ ಬಗ್ಗೆ ಫೋಟೋ ಸಮೇತ ಮಾಹಿತಿ ನೀಡಿದರೂ ಖದೀಮನನ್ನು ಬಂಧಿಸಲು ಡಿ.ಜೆ.ಹಳ್ಳಿ ಪೊಲೀಸರು ಮೀನಮೇಷ ಎಣಿಸುತ್ತಿರುವ ಆರೋಪ ಕೇಳಿಬಂದಿದೆ.

ಕಳ್ಳತನವಾದ ದ್ವಿಚಕ್ರವಾಹನ ನಗರದೆಲ್ಲೆಡೆ ಓಡಾಡಿ ಸಂಚಾರ ನಿಯಮ ಉಲ್ಲಂಘಿದ್ದು, ಇದರ ಪರಿಣಾಮ ವಾಹನದ ಮಾಲೀಕರಿಗೆ ದಂಡದ ನೋಟಿಸ್ ಬರುತ್ತಿದೆ. ಈ ಕುರಿತು ಪೊಲೀಸರಿಗೆ ಮಾಹಿತಿ ನೀಡಿದ್ದರೂ ಕಳ್ಳ ಮತ್ತು ವಾಹನವನ್ನು ಪತ್ತೆ ಹಚ್ಚುವುದು ಸಾಧ್ಯವಾಗುತ್ತಿಲ್ಲ ಎಂದು ಮಾಲೀಕ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಇನ್ನೊಂದೆಡೆ ದ್ವಿಚಕ್ರವಾಹನವನ್ನು ಖದೀಮ ಬೇರೆಯವರಿಗೆ ಮಾರಾಟ ಮಾಡಿರುವ ಶಂಕೆಯಿದ್ದು, ನಿಯಮ ಉಲ್ಲಂಘಿಸಿದ ವಾಹನದಲ್ಲಿ ಎಲ್ಲಾ ವರ್ಗದ ವಯೋಮಾನದವರು ಓಡಾಡುತ್ತಿದ್ದಾರೆ. ಅಲ್ಲದೆ, ಬರೋಬ್ಬರಿ 18 ಸಂಚಾರ ನಿಯಮ ಉಲ್ಲಂಘಿಸಿದ್ದಾರೆ. ಈ ಸಂಬಂಧ 9 ಸಾವಿರ ರು. ದಂಡ ಪಾವತಿಸುವಂತೆ ನೋಟಿಸ್ ಬಂದಿರುವುದು ಬೈಕ್ ಮಾಲೀಕರನ್ನು ಇಕ್ಕಟ್ಟಿಗೆ ಸಿಲುಕಿಸಿದೆ.

**ಮನೆ ಮುಂದೆ ನಿಲ್ಲಿಸಿದ್ದ ಬೈಕ್ ಕಳವು:** ಮೊಹಮ್ಮದ್ ಮಿಸ್ಬಾದ್ದಿನ್ ದ್ವಿಚಕ್ರ ವಾಹನ ಕಳೆದುಕೊಂಡ ಮಾಲೀಕರಾಗಿದ್ದು, ಡಿ.ಜೆ.ಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯ ಕಾವಲ್ ಭೈರಸಂದ್ರದಲ್ಲಿ ಕಳೆದ 10 ವರ್ಷಗಳಿಂದ ವಾಸವಾಗಿದ್ದಾರೆ. ವೃತ್ತಿಯಲ್ಲಿ ಸಾಫ್ಟ್‌ವೇರ್ ಎಂಜಿನಿಯರ್ ಆಗಿ ಕೆಲಸ ಮಾಡುತ್ತಿರುವ ಮೊಹಮ್ಮದ್, 2021ರ ಡಿಸೆಂಬರ್‌ನಲ್ಲಿ ಸುಜುಕಿ ಆ್ಯಕ್ಸಿಸ್ ವಾಹನ ಖರೀದಿಸಿದ್ದರು. ಇದಾದ 11 ತಿಂಗಳಲ್ಲಿ ಅಂದರೆ 2022ರ ಅಕ್ಟೋಬರ್ ರಂದು ಮನೆ ಮುಂದೆ ನಿಲ್ಲಿಸಿದ್ದ ದ್ವಿಚಕ್ರವಾಹನ ಕಳ್ಳತನವಾಗಿತ್ತು. ಈ ಸಂಬಂಧ ಡಿ.ಜೆ.ಹಳ್ಳಿ ಪೊಲೀಸರಿಗೆ ಮೊಹಮ್ಮದ್ ದೂರು ನೀಡಿದ್ದರು. ಪ್ರಕರಣ ದಾಖಲಿಸಿಕೊಂಡ ಪೊಲೀಸರು ತನಿಖೆ ನಡೆಸಿದರೂ ದ್ವಿಚಕ್ರವಾಹನ ಪತ್ತೆಯಾಗದಿದ್ದರಿಂದ ಸುಮ್ಮನಾಗಿದ್ದರು.

**ಎರಡು ವರ್ಷಗಳಲ್ಲಿ 18 ಸಂಚಾರ ನಿಯಮ ಉಲ್ಲಂಘನೆ**

ಕಳ್ಳತನವಾದ ಆರು ತಿಂಗಳ ಬಳಿಕ ದೂರುದಾರರ ಮೊಬೈಲ್‌ಗೆ ಟ್ರಾಫಿಕ್ ಪೊಲೀಸರು ಕಳುಹಿಸಿದ್ದ ಸಂದೇಶದಲ್ಲಿ ಕೆಎ51 ಎಚ್‌ಎಸ್ 2889 ಸಂಖ್ಯೆಯ ವಾಹನದ ಹಿಂಬದಿ ಸವಾರರು ಹೆಲ್ಮೆಟ್ ಧರಿಸದ ಕಾರಣ 500 ರುಪಾಯಿ ಪಾವತಿಸುವಂತೆ ತಿಳಿಸಿದ್ದರು. ಇದಾದ ಎರಡು ವರ್ಷಗಳಲ್ಲಿ 18 ಸಂಚಾರ ನಿಯಮ ಉಲ್ಲಂಘನೆ ಕಂಡುಬಂದಿದ್ದು, ಒಟ್ಟು 9 ಸಾವಿರ ಪಾವತಿಸುವಂತೆ ಹೇಳಿದ್ದರು. ಹಾಗಾಗಿ ಸಿಸಿಟಿವಿಯಲ್ಲಿ ಸೆರೆಯಾಗಿದ್ದ ದ್ವಿಚಕ್ರವಾಹನ ಸಮೇತ ಮೊಹಮ್ಮದ್ ಮಾಹಿತಿ ನೀಡಿದ್ದರು. ಈ ಬಗ್ಗೆ ಪರಿಶೀಲಿಸಿ ವಾಹನ ಪತ್ತೆ ಹಚ್ಚುವುದಾಗಿ ಪೊಲೀಸರು ಭರವಸೆ ನೀಡಿದ್ದರು. ನಗರದಲ್ಲೇ ವಾಹನ ಸಂಚರಿಸುತ್ತಿದ್ದರೂ ಈವರೆಗೆ ತಮ್ಮ ವಾಹನ ಪತ್ತೆ ಹಚ್ಚಿಲ್ಲ. ದ್ವಿಚಕ್ರವಾಹನ ಕಳ್ಳತನ ಪ್ರಕರಣ ಸಂಬಂಧ ತನಿಖೆ ನಡೆಸುತ್ತಿದ್ದು, ಕದ್ದ ವಾಹನದ ಮೂಲಕ ಟ್ರಾಫಿಕ್ ವೈಯಲೇಷನ್ ಆಗಿದೆ. ಈ ಬಗ್ಗೆ ಸಂಪೂರ್ಣವಾಗಿ ಪರಿಶೀಲಿಸಿ ಆದಷ್ಟು ಬೇಗ ದ್ವಿಚಕ್ರ ವಾಹನ ಪತ್ತೆ ಹಚ್ಚಿ ಖದೀಮನನ್ನು ಬಂಧಿಸಲಾಗುವುದು ಎಂದು ಡಿ.ಜೆ.ಹಳ್ಳಿ ಪೊಲೀಸರು ತಿಳಿಸಿದ್ದಾರೆ.

**ದ್ವಿಚಕ್ರ ವಾಹನ ಕಳ್ಳತನ ಬಗ್ಗೆ ಡಿ.ಜೆ. ಹಳ್ಳಿ ಪೊಲೀಸರಿಗೆ ದೂರು ನೀಡಿದ್ದೇನೆ. ತಮ್ಮ ವಾಹನವನ್ನು ಅಪರಿಚಿತರು ಓಡಿಸುತ್ತಿರುವ ಬಗ್ಗೆ ಮಾಹಿತಿ ನೀಡಿದ್ದರೂ ಯಾವುದೇ ಪ್ರಯೋಜನವಾಗಿಲ್ಲ. ನಿಯಮ ಉಲ್ಲಂಘಿಸಿದ ವ್ಯಾಪ್ತಿಗೆ ಬರುವ ಕಲಾಸಿಪಾಳ್ಯ ಹಾಗೂ ವಿಲ್ಸನ್ ಗಾರ್ಡನ್ ಟ್ರಾಫಿಕ್ ಪೊಲೀಸರಿಗೆ ಮಾಹಿತಿ ನೀಡಿದ್ದರೂ ಉಪಯೋಗವಾಗಿಲ್ಲ.**

**ಮೊಹಮ್ಮದ್**, ಟೆಕ್ಕಿ

---

# ದತ್ತಾಂಶ ಸಂಗ್ರಹ ಪ್ರಾದೇಶಿಕ ಅಸಮತೋಲನ ನಿವಾರಣೆಗೆ ದಾರಿಯಾಗಲಿ: ಪ್ರಿಯಾಂಕ್ ಖರ್ಗೆ

ಪ್ರಾದೇಶಿಕ ಅಸಮತೋಲನ ನಿವಾರಣಾ ಆಯೋಗದ ಅಧ್ಯಕ್ಷ ಪ್ರೊ.ಗೋವಿಂದರಾವ್ ಹಾಗೂ ಆಯೋಗದ ಸದಸ್ಯರೊಂದಿಗೆ ಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಸಭೆ ನಡೆಸಿದರು.

**ಬೆಂಗಳೂರು:** ಸಮಗ್ರ ದತ್ತಾಂಶ ಸಂಗ್ರಹದೊಂದಿಗೆ ಕಲ್ಯಾಣ ಕರ್ನಾಟಕದ ಪ್ರಾದೇಶಿಕ ಅಸಮತೋಲನ ನಿವಾರಣೆಗೆ ಪೂರವಾಗುವಂತಹ ಕಾರ್ಯಕ್ರಮಗಳನ್ನು ರೂಪಿಸುವ ಅವಶ್ಯಕತೆಯಿದೆ ಎಂದು ಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ಪ್ರಾದೇಶಿಕ ಅಸಮತೋಲನ ನಿವಾರಣಾ ಆಯೋಗದ ಅಧ್ಯಕ್ಷ ಪ್ರೊ.ಗೋವಿಂದರಾವ್ ಹಾಗೂ ಆಯೋಗದ ಸದಸ್ಯರೊಂದಿಗೆ ಸಭೆ ನಡೆಸಿದ ಅವರು, ವಿವಿಧ ಇಲಾಖೆಗಳ ಸೂಕ್ಷ್ಮ ಕಾರ್ಯಕ್ರಮಗಳ ಸಮಗ್ರ ದತ್ತಾಂಶಗಳನ್ನು ಸಂಗ್ರಹಿಸುವುದರೊಂದಿಗೆ ಅಧ್ಯಯನ ಮಾಡುವುದು ಸೇರಿದಂತೆ ಹಲವಾರು ವಿಷಯಗಳ ಬಗ್ಗೆ ಚರ್ಚಿಸಿದರು.

ಕಲ್ಯಾಣ ಕರ್ನಾಟಕ ಭಾಗದಲ್ಲಿ 371 ಜೆ ಜಾರಿಗೊಂಡ ಒಂದು ದಶಕದ ಅವಧಿಯಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ಸಾಕಷ್ಟು ಸುಧಾರಣೆಗಳಾಗಿವೆ. ಎಂಜಿನಿಯರಿಂಗ್, ಮೆಡಿಕಲ್ ಕಾಲೇಜುಗಳಲ್ಲಿ ಕಲ್ಯಾಣ ಕರ್ನಾಟಕದ ಬಹುತೇಕ ವಿದ್ಯಾರ್ಥಿಗಳು ಪ್ರವೇಶಾವಕಾಶ ಪಡೆದಿದ್ದಾರೆ, ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಈ ಭಾಗದ ಜನರು ತೇರ್ಗಡೆಯಾಗಿ ಉದ್ಯೋಗಾವಕಾಶ ಹೊಂದಿದ್ದಾರೆ. ಆದರೂ ಬೇರೆ ಬೇರೆ ಕ್ಷೇತ್ರಗಳಲ್ಲಿನ ಅಸಮತೋಲನವನ್ನು ಸರಿಹೊಂದಿಸುವ ಅನಿವಾರ್ಯತೆಯಿದೆ ಎಂದು ಆಯೋಗಕ್ಕೆ ತಿಳಿಸಿದರು.

ಸಭೆಯಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ ಅಂಜುಂ ಪರವೇಜ್ ಸೇರಿದಂತೆ ಅಧಿಕಾರಿಗಳು ಹಾಜರಿದ್ದರು.

### ಜೀವನ ಮಟ್ಟ ಸುಧಾರಣೆ

**ಪ್ರವಾಸೋದ್ಯಮಕ್ಕೆ ಉತ್ತೇಜನ ನೀಡುವುದರಿಂದ ಹಲವಾರು ಪೂರಕ ವ್ಯಾಪಾರಗಳ ಮೂಲಕ ಬದುಕು ಕಟ್ಟಿಕೊಳ್ಳುವ ಅವಕಾಶಗಳು ಲಭಿಸುವವು, ಕೃಷಿ, ತೋಟಗಾರಿಕೆ, ರೇಷ್ಮೆಯಂತಹ ಕ್ಷೇತ್ರಗಳಲ್ಲಿ ಪೂರಕ ಉದ್ಯಮಗಳಲ್ಲಿ ತೊಡಗಿಕೊಳ್ಳುವ ಮೂಲಕವೂ ಜೀವನ ಮಟ್ಟದ ಸುಧಾರಣೆ ಸಾಧ್ಯವಾಗುತ್ತದೆ, ಈ ನಿಟ್ಟಿನಲ್ಲಿ ಆಯೋಗ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು ಎಂದು ಸಚಿವರು ಆಯೋಗದ ಸಭೆಯಲ್ಲಿ ಅಭಿಪ್ರಾಯಪಟ್ಟರು.**

---

# ಇ-ಖಾತಾ ಗೊಂದಲಕ್ಕೆ ಎ ಖಾತಾ, ಬಿ ಖಾತಾ ಮಾದರಿ ಜಾರಿಗೆ ಚಿಂತನೆ

**ಬೆಂಗಳೂರು:** ಬಿಬಿಎಂಪಿ ವ್ಯಾಪ್ತಿಯಲ್ಲಿ ಆಸ್ತಿ ತೆರಿಗೆ ವಿಚಾರದಲ್ಲಿ ಉಂಟಾಗಿದ್ದ ಗೊಂದಲಗಳನ್ನು ಪರಿಹರಿಸಲು ರಾಜ್ಯ ಸರಕಾರ ಮುಂದಾಗಿದ್ದು, ಈ ನಿಟ್ಟಿನಲ್ಲಿ ಕ್ರಮ ಕೈಗೊಂಡಿದೆ.

ನಗರದಲ್ಲಿ ನಿಯಮ ಉಲ್ಲಂಘನೆ ಹಾಗೂ ಪರವಾನಗಿ ಪಡೆಯದೇ ನಿರ್ಮಾಣ ಮಾಡಲಾಗಿದ್ದ ಕಟ್ಟಡಗಳಿಗೆ ಎ ಖಾತಾ ಹಾಗೂ ಬಿ ಖಾತಾ ಎನ್ನುವ ಹೊಸ ಆಯ್ಕೆಗಳನ್ನು ಪರಿಚಯಿಸಿತ್ತು. ಈಗ ಇದೇ ಮಾದರಿಯನ್ನು ರಾಜ್ಯಾದ್ಯಂತ ಜಾರಿ ಮಾಡಲು ಸರಕಾರ ಮುಂದಾಗಿದೆ. ರಾಜ್ಯದಲ್ಲಿ ಆಸ್ತಿ ತೆರಿಗೆ ಹಾಗೂ ತೆರಿಗೆ ಸಂಗ್ರಹ ಮಾಡುವ ವಿಚಾರದ ರಾಜ್ಯ ಸರಕಾರವು ಗಂಭೀರ ಕ್ರಮಗಳನ್ನು ಕೈಗೊಳ್ಳುತ್ತಿದ್ದು, ಆದಾಯ ಸಂಗ್ರಹಕ್ಕೆ ಹೆಚ್ಚು ಗಮನ ಕೊಡುವುದಕ್ಕಾಗಿ ಎ ಖಾತಾ ಹಾಗೂ ಬಿ ಖಾತಾ ಮಾದರಿಯನ್ನು ಮತ್ತೆ ಜಾರಿ ಮಾಡಲು ಸರಕಾರ ನಿರ್ಧರಿಸಿದೆ.

ಬಿಬಿಎಂಪಿ ವ್ಯಾಪ್ತಿಯಲ್ಲಿ ಸ್ಥಳೀಯ ಸಂಸ್ಥೆಗಳಿಂದ ಸೂಕ್ತ ಪರವಾನಗಿ ಪಡೆಯದೆ ಕಟ್ಟಡಗಳನ್ನು ನಿರ್ಮಾಣ ಮಾಡಿರುವವರು ಹಾಗೂ ಕಟ್ಟಡ ನಿರ್ಮಾಣದ ನಿಯಮಗಳನ್ನು ಉಲ್ಲಂಘನೆ ಮಾಡಿದವರಿಗಾಗಿ ಎ ಖಾತಾ ಹಾಗೂ ಬಿ ಖಾತಾ ಮಾದರಿಯನ್ನು ಪರಿಚಯಿಸಲಾಗಿತ್ತು. ಇದೀಗ ಇದೇ ಮಾದರಿಯನ್ನು ರಾಜ್ಯಾದ್ಯಂತ ಈ ವ್ಯವಸ್ಥೆಯನ್ನು ಜಾರಿ ಮಾಡಲು ನಿರ್ಧರಿಸಲಾಗಿದ್ದು, ಜತೆಗೆ ಈ ರೀತಿ ಜಾರಿ ಮಾಡುವಾಗ ದುಪ್ಪಟ್ಟು ದಂಡ ಸಹ ವಿಧಿಸಲಾಗುತ್ತದೆ.

### ತೆರಿಗೆ ಸಂಗ್ರಹದಲ್ಲಿ ವ್ಯತ್ಯಾಸ ತಪ್ಪಿಸಲು ಕ್ರಮ

**ರಾಜ್ಯದಲ್ಲಿ ಲಕ್ಷಾಂತರ ಆಸ್ತಿಗಳಿಗೆ ಯಾವುದೇ ಖಾತಾ ಇಲ್ಲ. ಬೆಂಗಳೂರಿನಲ್ಲಿಯೇ ಅಂದಾಜು 5 ಲಕ್ಷಕ್ಕೂ ಹೆಚ್ಚು ಆಸ್ತಿಗಳು ಆಸ್ತಿ ತೆರಿಗೆ ವ್ಯಾಪ್ತಿಯಿಂದ ಹೊರಗುಳಿದಿವೆ. ಈ ಆಸ್ತಿಗಳನ್ನು ಆಸ್ತಿ ತೆರಿಗೆ ವ್ಯಾಪ್ತಿಗೆ ತರುವುದಕ್ಕೆ ಬಿಬಿಎಂಪಿಯು ಸಿದ್ಧತೆ ಮಾಡಿಕೊಂಡಿದ್ದು, ರಾಜ್ಯಾದ್ಯಂತ ಸ್ಥಳೀಯ ಸಂಸ್ಥೆಗಳಿಂದ ಪರವಾನಗಿ ಪಡೆಯದೆ ನಿರ್ಮಿಸಲಾಗಿರುವ ಲಕ್ಷಾಂತರ ಮನೆ ಹಾಗೂ ವಾಣಿಜ್ಯ ಕಟ್ಟಡಗಳು ಆಸ್ತಿ ತೆರಿಗೆ ವ್ಯಾಪ್ತಿಗೆ ಸೇರಿಲ್ಲ. ಈ ಆಸ್ತಿಗಳು ನಗರಸಭೆಯಲ್ಲಿ ನೋಂದಣಿ ಆಗದೆ ಇರುವುದರಿಂದ ಸರಕಾರಕ್ಕೆ ಕೋಟ್ಯಾಂತರ ರುಪಾಯಿ ನಷ್ಟವಾಗುತ್ತಿದೆ. ಅಂದಾಜು ಶೇ 50ಕ್ಕೂ ಹೆಚ್ಚು ತೆರಿಗೆ ಸಂಗ್ರಹವಾಗುತ್ತಿಲ್ಲ ಎಂದು ಅಂದಾಜಿಸಲಾಗಿದೆ. ಸರಕಾರ ಈ ರೀತಿ ಗಂಭೀರ ಕ್ರಮವನ್ನು ತೆಗೆದುಕೊಳ್ಳುತ್ತಿರುವುದರ ಹಿಂದೆ ಆಸ್ತಿ ತೆರಿಗೆ ಸಂಗ್ರಹ ಗುರಿ ಮಾತ್ರವಲ್ಲ. 15ನೇ ಹಣಕಾಸಿನ ವಿಷಯವೂ ಇದೆ. 15ನೇ ಹಣಕಾಸು ಯೋಜನೆಯ ಅಡಿಯಲ್ಲಿ ರಾಜ್ಯಕ್ಕೆ ಪ್ರಯೋಜನಗಳು ಸಿಗಬೇಕಾದರೆ, ಆಸ್ತಿ ತೆರಿಗೆ ವಿಚಾರದಲ್ಲಿ ಶೇ. 50ಕ್ಕಿಂತ ಹೆಚ್ಚು ಪ್ರಗತಿ ಆಗಿರಬೇಕು ಎನ್ನುವ ನಿಯಮ ಇದೆ ಎಂದು ಹೇಳಲಾಗಿದೆ.**

---

# ನಮ್ಮ ಕ್ಲಿನಿಕ್ ಸೌಲಭ್ಯ, ಸುರಕ್ಷತೆ ಬಗ್ಗೆ ಜಾಗೃತಿ

**ಬೆಂಗಳೂರು:** ನಗರದಲ್ಲಿ ಆರಂಭಿಸಲಾದ ನಮ್ಮ ಕ್ಲಿನಿಕ್‌ಗಳಿಗೆ ಭೇಟಿ ನೀಡಲು ಸಾರ್ವಜನಿಕರು ಹಿಂದೇಟು ಹಾಕುತ್ತಿರುವ ಬೆನ್ನಲ್ಲೇ ಕ್ಲಿನಿಕ್‌ಗಳ ಬಗ್ಗೆ ಜಾಗೃತಿ ಮೂಡಿಸಲು ಬಿಬಿಎಂಪಿ ಮುಂದಾಗಿದೆ ಎಂದು ವಿಶೇಷ ಆಯುಕ್ತ ಸುರಳ್ಕರ್ ವಿಕಾಸ್ ಕಿಶೋರ್ ಮಾಹಿತಿ ನೀಡಿದರು.

ನಗರದಲ್ಲಿ ಒಟ್ಟು 225 ವಾರ್ಡ್‌ಗಳಿದ್ದು, ಪ್ರತಿ ವಾರ್ಡ್‌ನಲ್ಲಿಯೂ ಒಂದೊಂದು ನಮ್ಮ ಕ್ಲಿನಿಕ್‌ಗಳಿವೆ. ನಮ್ಮ ಕ್ಲಿನಿಕ್‌ನ ವೈದ್ಯರು ಪಾಲಿಕೆ ಸಿಬ್ಬಂದಿಯೊಂದಿಗೆ ಆಯಾ ವಾರ್ಡ್‌ನ ಉದ್ಯಾನವನ, ಶಾಲಾ ಕಾಲೇಜುಗಳು ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ಜಾಗೃತಿ ಮೂಡಿಸುವ ಕಾರ್ಯಗಳನ್ನು ಕೈಗೊಳ್ಳುತ್ತಿದ್ದಯು, ಉಚಿತ ವೈದ್ಯಕೀಯ ಸೇವೆ ನೀಡುತ್ತಿದ್ದರೂ ಈ ಸೌಲಭ್ಯಗಳನ್ನು ಪಡೆಯಲು ಹಿಂದೇಟು ಹಾಕುತ್ತಿರುವ ಜನರಿಗೆ ಈ ಕುರಿತು ಜಾಗೃತಿ ಮೂಡಿಸಲು ಈ ಕ್ರಮಕ್ಕೆ ಬಿಬಿಎಂಪಿ ಮುಂದಾಗಿದೆ ಎಂದರು. ನಮ್ಮ ಕ್ಲಿನಿಕ್‌ಗಳಿಗೆ ಪ್ರಸ್ತುತ 30–40 ಜನರು ಭೇಟಿ ನೀಡುತ್ತಿದ್ದಾರೆ. ಈ ಸಂಖ್ಯೆ ಹೆಚ್ಚಿಸಲು ಹಲವಾರು ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ನಮ್ಮ ಕ್ಲಿನಿಕ್ ಆರಂಭವಾದಾಗ ವೈದ್ಯರು ಹಾಗೂ ಸಲಕರಣೆಗಳ ಕೊರತೆ ಬಗ್ಗೆ ದೂರುಗಳು ಕೇಳಿ ಬಂದಿದ್ದವು.

---

# ಗಣರಾಜ್ಯ ಪರೇಡ್‌ನಲ್ಲಿ ಲಕ್ಕುಂಡಿ ಸ್ತಬ್ಧಚಿತ್ರ

### ರಾಷ್ಟ್ರದ ಗಮನ ಸೆಳೆಯಲಿದೆ ಚಾಲುಕ್ಯರ ಕಾಲದ ಶಿಲ್ಪಕಲೆಯ ತೊಟ್ಟಿಲು

**ಬೆಂಗಳೂರು:** ಸರ್ವಜನಾಂಗದ ಶಾಂತಿಯ ತೋಟದಂತೆ ಕಂಗೊಳಿಸುತ್ತಿರುವ ಲಕ್ಕುಂಡಿ ಶಿಲ್ಪಕಲೆಯ ಸ್ತಬ್ಧಚಿತ್ರವು ಗಣರಾಜ್ಯೋತ್ಸವದ ಪಥಸಂಚಲನದಲ್ಲಿ ಭಾಗವಹಿಸಲು ಸಜ್ಜಾಗಿದೆ. ರಾಜಧಾನಿಯ ಕರ್ತವ್ಯಪಥದಲ್ಲಿ ಗಣರಾಜ್ಯೋತ್ಸವದಂದು ಕರ್ನಾಟಕ ರಾಜ್ಯದ ಹಿರಿಮೆ, ಸರ್ವಧರ್ಮ ಸಮನ್ವಯ. ಶಾಂತಿ, ಸಹಬಾಳ್ವೆಯನ್ನು ಪ್ರತಿಪಾದಿಸಲಿದೆ.

ಸುದ್ದಿಗೋಷ್ಠಿಯಲ್ಲಿ ಈ ಬಗ್ಗೆ ಮಾತನಾಡಿದ ವಾರ್ತಾ ಇಲಾಖೆ ಆಯುಕ್ತ ಹೇಮಂತ್ ನಿಂಬಾಳ್ಕರ್, ಈ ಬಾರಿಯ ಗಣರಾಜ್ಯೋತ್ಸವದ ಪಥಸಂಚಲನದಲ್ಲಿ ಲಕ್ಕುಂಡಿಯ ಶಿಲ್ಪಕಲೆಯಿಂದ ಕೂಡಿರುವ ಐತಿಹಾಸಿಕ ದೇವಾಲಯಗಳು ಎಲ್ಲರನ್ನು ಮಂತ್ರಮುಗ್ಧರನ್ನಾಗಿಸಲು ಹೊರಟಿದೆ ಎಂದು ಹೇಳಿದರು.

ಕರ್ನಾಟಕಕ್ಕೆ ಈ ಬಾರಿಯ ಗಣರಾಜ್ಯೋತ್ಸವದ ಸ್ತಬ್ಧಚಿತ್ರವು ಅತ್ಯಂತ ಸ್ಮರಣೀಯವಾದುದು. ಎಲ್ಲಾ ಧರ್ಮಗಳನ್ನು ಸಮಾನವಾಗಿ ಕಾಣುವ ನಮ್ಮ ರಾಜ್ಯದಲ್ಲಿ ಎಲ್ಲಾ ಧರ್ಮಗಳ ದೇವಾಲಯಗಳಿವೆ. ಈ ಪೈಕಿ ಐತಿಹಾಸಿಕ ಪಟ್ಟಣವಾದ ಗದಗದ ಲಕ್ಕುಂಡಿಯು ಒಂದಾಗಿದೆ. ಅಹಿಂಸಾವಾದಿಯ ನೆಲೆಬೀಡು. ಶಿಲ್ಪಕಲೆಯ ತೊಟ್ಟಿಲಾದ ಲಕ್ಕುಂಡಿಯಲ್ಲಿ ಶೈವ, ಜೈನ ಮತ್ತು ವೈಷ್ಣವ ದೇವಾಲಯಗಳಿವೆ. ಕಲಾತ್ಮಕತೆಯಿಂದ ಕಂಗೊಳಿಸುವ ಇಲ್ಲಿನ ದೇವಾಲಯಗಳು ಈ ಬಾರಿಯ ಸ್ತಬ್ಧಚಿತ್ರದಲ್ಲಿ ಅವುಗಳ ಪಡಿಯಚ್ಚಿನಂತೆ ಮೂಡಿಬಂದಿವೆ ಎಂದರು.

**ಸ್ತಬ್ಧಚಿತ್ರದಲ್ಲಿ ಏನಿರಲಿದೆ?:** ಕರ್ನಾಟಕದ ಗದಗ ಜಿಲ್ಲೆಯಲ್ಲಿರುವ ಲಕ್ಕುಂಡಿಯನ್ನು ಅದರ ಅದ್ಭುತ ಕಲ್ಲಿನ ವಾಸ್ತುಶಿಲ್ಪಕ್ಕಾಗಿ 'ಶಿಲ್ಪಕಲೆಯ ತೊಟ್ಟಿಲು' ಎಂದು ಕರೆಯಲಾಗುತ್ತದೆ. ಇಲ್ಲಿನ ಸುಂದರವಾದ ದೇವಾಲಯಗಳು, ಮೆಟ್ಟಿಲು ಬಾವಿಗಳು ಮತ್ತು ಚಾಲುಕ್ಯ ರಾಜವಂಶದ ಶಾಸನಗಳಿಗೆ ನೆಲೆಯಾಗಿದೆ. ಸಾಂಸ್ಕೃತಿಕ ಶಕ್ತಿ ಕೇಂದ್ರವಾಗಿರುವುದರೊಂದಿಗೆ 10 ರಿಂದ 12 ನೇ ಶತಮಾನದ ನಡುವೆ ಲಕ್ಕುಂಡಿ ಒಂದು ದೊಡ್ಡ ವಾಣಿಜ್ಯ ಕೇಂದ್ರವಾಗಿತ್ತು. ಈ ನಗರವು ಹಲವಾರು ರಾಜವಂಶಗಳಿಂದ ಆಳಲ್ಪಟ್ಟಿತ್ತಾದರೂ ಅವುಗಳಲ್ಲಿ ಅತ್ಯಂತ ಪ್ರಮುಖವಾದದ್ದು ಚಾಲುಕ್ಯರ ರಾಜವಂಶ.

ಸ್ತಬ್ಧಚಿತ್ರದ ಮುಂಭಾಗವು ಬ್ರಹ್ಮ ಜಿನಾಲಯ ದೇವಸ್ಥಾನದ ಬ್ರಹ್ಮನ ಪ್ರತಿಮೆಯನ್ನು ಹೊಂದಿದೆ. ಇದು ಲಕ್ಕುಂಡಿಯಲ್ಲಿರುವ ಅತ್ಯಂತ ಹಳೆಯ ಜೈನ ದೇವಾಲಯವಾಗಿದ್ದು ಭಗವಾನ್ ಮಹಾವೀರನಿಗೆ ಸಮರ್ಪಿತವಾಗಿದೆ. ಅದರ ನಂತರ ಬ್ರಹ್ಮ ಜಿನಾಲಯ ದೇವಸ್ಥಾನದ ತೆರೆದ ಕಂಬದ ಮಂಟಪವಿದೆ. ಸ್ತಬ್ಧಚಿತ್ರದ ಮುಖ್ಯ ವಿಭಾಗವು ಭವ್ಯವಾದ ಮತ್ತು ಅಲಂಕೃತವಾದ ಕಾಶಿ ವಿಶ್ವೇಶ್ವರ ದೇವಸ್ಥಾನ ಮತ್ತು ಶಿವನಿಗೆ ಸಮರ್ಪಿತವಾದ ನನ್ನೇಶ್ವರ ದೇವಸ್ಥಾನವನ್ನು ಪ್ರದರ್ಶಿಸುತ್ತದೆ.




**ಈ ಬಾರಿ 'ಲಕ್ಕುಂಡಿ : ಶಿಲ್ಪಕಲೆಯ ತೊಟ್ಟಿಲು' 'ಮೆಕ್ಕೆಕಟ್ಟು : ಮರಕೆತ್ತನೆಯ ದೈವ ನಿಧಿ', 'ಕರ್ನಾಟಕದ ಸಮೃದ್ಧಿಯ ಆಚರಣೆ' ಹಾಗೂ 'ಕರ್ನಾಟಕ ಒಂದು ರಾಜ್ಯ ಹಲವು ಜಗತ್ತು' ಎಂಬ ನಾಲ್ಕು ವಿಷಯಗಳನ್ನು ಆಯ್ಕೆ ಮಾಡಿಕಳುಹಿಸಿತ್ತು. ಮೊದಲ ಸಭೆಯಲ್ಲಿಯೇ 'ಲಕ್ಕುಂಡಿ: ಶಿಲ್ಪಕಲೆಯ ತೊಟ್ಟಿಲು' ಎಂಬ ವಿಷಯವನ್ನು ಪರಿಣತರ ಸಮಿತಿಯು ಒಮ್ಮತ ದಿಂದ ಅಂತಿಮಗೊಳಿಸಿತ್ತು. ಅದಕ್ಕನುಗುಣವಾಗಿ ಈ ಬಾರಿಯ ಸ್ತಬ್ಧಚಿತ್ರದಲ್ಲಿ ಲಕ್ಕುಂಡಿಯ ದೇವಾಲಯಗಳು ಕರ್ನಾಟಕದ ಶ್ರೀಮಂತ ಸಾಂಸ್ಕೃತಿಕ ಪರಂಪರೆಯನ್ನು ಪ್ರತಿಬಿಂಬಿಸುತ್ತಿವೆ.**

– **ಹೇಮಂತ್ ನಿಂಬಾಳ್ಕರ್**
ವಾರ್ತಾ ಇಲಾಖೆ ಆಯುಕ್ತ

---

3 ಕೇಂದ್ರಗಳಲ್ಲಿ ಪ್ರತಿ ತಿಂಗಳು 500 ಕ್ಕೂ ಹೆಚ್ಚು ಪ್ರಾಣಿಗಳಿಗೆ ಆಶ್ರಯ

# ಪ್ರಾಣಿ ರಕ್ಷಣಾ ಕೇಂದ್ರ ಸ್ಥಾಪನೆಗೆ ಬಿಬಿಎಂಪಿ ಚಿಂತನೆ

**ಬೆಂಗಳೂರು:** ಮನೆಯಿಂದ ಹೊರಹಾಕಲ್ಪಟ್ಟ, ಗಾಯಗೊಂಡ ಹಾಗೂ ಆರೈಕೆಯ ಅಗತ್ಯವಿರುವ ಪ್ರಾಣಿಗಳಿಗಾಗಿ ಪ್ರಾಣಿಗಳ ಕಲ್ಯಾಣ ಕೇಂದ್ರವನ್ನು ಆರಂಭಿಸಲು ಬಿಬಿಎಂಪಿ ಮುಂದಾಗಿದೆ.

ದಾಸರಹಳ್ಳಿಯಲ್ಲಿ ತನ್ನದೇ ಆದ ಕೇಂದ್ರವನ್ನು ಸ್ಥಾಪಿಸಿದ್ದು, ಪೂರ್ವ ಮತ್ತು ದಕ್ಷಿಣದಲ್ಲಿಯೂ ಪ್ರಾಣಿಗಳ ಕಲ್ಯಾಣ ಕೇಂದ್ರಗಳನ್ನು ಸ್ಥಾಪಿಸಲು ಕ್ರಮ ಕೈಗೊಳ್ಳಲಾಗುತ್ತಿದ್ದು,ಪ್ರತಿ ಕೇಂದ್ರದಲ್ಲಿ 200 ಪ್ರಾಣಿಗಳನ್ನು ನಿರ್ವಹಿಸುವ ಗುರಿ ಹೊಂದಿದೆ ಮತ್ತು ಒಟ್ಟಾರೆಯಾಗಿ ಈ ಮೂರು ಕೇಂದ್ರಗಳಲ್ಲಿ ಪ್ರತಿ ತಿಂಗಳು 500 ಕ್ಕೂ ಹೆಚ್ಚು ಪ್ರಾಣಿಗಳಿಗೆ ಆಶ್ರಯ ನೀಡಲಿದೆ. ಈ ಕಲ್ಯಾಣ ಕೇಂದ್ರಗಳಂತೆ ಇತರೆ ಕಡೆಗಳಲ್ಲಿಯೂ ಇಂತಹ ಕೇಂದ್ರ ತೆರೆಯಬೇಕು ಎಂಬುದು ಪ್ರಾಣಿ ಕಲ್ಯಾಣ ಕಾರ್ಯಕರ್ತರ ಬಹುದಿನಗಳ ಬೇಡಿಕೆಯಾಗಿತ್ತು.

ಬಿಬಿಎಂಪಿ ಆರೋಗ್ಯ ಮತ್ತು ಪಶುಸಂಗೋಪನೆ ವಿಶೇಷ ಆಯುಕ್ತ ಸುರಳ್ಕರ್ ವಿಕಾಸ್ ಕಿಶೋರ್ ಮಾತನಾಡಿ, ಇದುವರೆಗೂ ಬಿಬಿಎಂಪಿ ತನ್ನದೇ ಆದ ಪ್ರಾಣಿ ರಕ್ಷಣಾ ಕೇಂದ್ರವನ್ನು ಹೊಂದಿರಲಿಲ್ಲ. ಪಶುಸಂಗೋಪನಾ ಇಲಾಖೆಗೆ ಪ್ರಾಣಿಗಳ ರಕ್ಷಣೆಗಾಗಿ ಕರೆ ಬಂದಾಗ ಅಥವಾ ಕೈಬಿಟ್ಟ ಮತ್ತು ಗಾಯಗೊಂಡ ಸಾಕುಪ್ರಾಣಿಗಳನ್ನು ನೋಡಿಕೊಳ್ಳಲು ಮನವಿ ಬಂದಾಗಲೆಲ್ಲಾ, ನಾವು ಅವುಗಳನ್ನು ಖಾಸಗಿ ರಕ್ಷಣಾ ಕೇಂದ್ರಗಳಿಗೆ ಕಳುಹಿಸುತ್ತಿದ್ದೆವು. ಪ್ರಾಣಿಗಳನ್ನು ಅಲ್ಲಿಯೇ ನೋಡಿಕೊಂಡು ಚಿಕಿತ್ಸೆ ನೀಡಲಾಗುತ್ತಿತ್ತು. ಅವು ಸುಧಾರಿಸಿಕೊಂಡ ನಂತರ, ಅವುಗಳನ್ನು ಅದೇ ಸ್ಥಳಕ್ಕೆ ಹಿಂತಿರುಗಿಸಲಾಗುತ್ತಿತ್ತು ಎಂದು ಹೇಳಿದರು.

ಪ್ರತಿದಿನ ನಗರಾದ್ಯಂತ ಪ್ರಾಣಿಗಳ ರಕ್ಷಣೆಗಾಗಿ ಮನವಿ ಆಗಮಿಸುತ್ತಿದ್ದು, ಜನರು ಬೀದಿ ಬದಿ ಬಿಟ್ಟು ಹೋದ ಸಾಕುಪ್ರಾಣಿಗಳನ್ನು ನೋಡಿದಾಗ ಬಿಬಿಎಂಪಿಗೆ ಕರೆ ಮಾಡುತ್ತಾರೆ. ನಾವು ಖಾಸಗಿ ರಕ್ಷಣಾ ಕೇಂದ್ರಗಳೊಂದಿಗೆ ಸಮನ್ವಯ ಸಾಧಿಸುತ್ತೇವೆ ಮತ್ತು ವಿನಂತಿಗಳನ್ನು ಪೂರೈಸುತ್ತೇವೆ ಎಂದು ಬಿಬಿಎಂಪಿ ಅಧಿಕಾರಿಯೊಬ್ಬರು ಹೇಳಿದರು.

**ಬಿಬಿಎಂಪಿ ಮೂರು ವಲಯಗಳಲ್ಲಿ ಈ ಕೇಂದ್ರ ಸ್ಥಾಪಿಸಲಿದೆ ಮತ್ತು ಪ್ರತಿಕ್ರಿಯೆಯ ಆಧಾರದ ಮೇಲೆ, ನಾಗರಿಕ ಸಂಸ್ಥೆಯು ಅದನ್ನು ಎಂಟು ವಲಯಗಳಲ್ಲಿ ವಿಸ್ತರಿಸಬಹುದು ಎಂದು ಅವರು ಹೇಳಿದರು. ಟೆಂಡರ್ ಪ್ರಕ್ರಿಯೆ ಮುಗಿದಿದ್ದು, ದಾಸರಹಳ್ಳಿಯಲ್ಲಿ ಪ್ರಾಣಿ ಕಲ್ಯಾಣ ಕೇಂದ್ರವನ್ನು ಸ್ಥಾಪಿಸುವ ಕೆಲಸ ಪ್ರಾರಂಭವಾಗಿದೆ.**

**–ಸುರಳ್ಕರ್ ವಿಕಾಸ್ ಕಿಶೋರ್,**
ಬಿಬಿಎಂಪಿ ವಿಶೇಷ ಆಯುಕ್ತ

---

## ಸಮಾಚಾರ ಸಣ್ಣದಲ್ಲ

### ಫೋನ್ ಇನ್ ಕಾರ್ಯಕ್ರಮ

**ಬೆಂಗಳೂರು:** ಬೆಂಗಳೂರು ಜಲಮಂಡಳಿ ವತಿಯಿಂದ ಜ.24ರ ಬೆಳಗ್ಗೆ 9.30ರಿಂದ 10.30ರವರೆಗೆ ಫೋನ್ ಇನ್ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ ಎಂದು ಮಂಡಳಿ ತಿಳಿಸಿದೆ. ಈ ಕಾರ್ಯಕ್ರಮದಲ್ಲಿ ಜಲಮಂಡಳಿ ಅಧ್ಯಕ್ಷ ಡಾ.ವಿ.ರಾಮ್ ಪ್ರಸಾತ್ ಮನೋಹರ್ ಭಾಗವಹಿಸ ಲಿದ್ದು, ಸಾರ್ವಜನಿಕರು ತಮ್ಮ ವಲಯ/ ಪ್ರದೇಶಗಳಲ್ಲಿನ ಕುಡಿಯುವ ನೀರಿನ ಸಮಸ್ಯೆ ಮತ್ತು ಒಳಚರಂಡಿ ಕೊಳವೆ/ಇಳಿ ಗುಂಡಿಯಿಂದ ತ್ಯಾಜ್ಯ ನೀರು ಹೊರಬರುತ್ತಿರುವ ಬಗ್ಗೆ, ಜಲಮಾಪನ ಹಾಗೂ ನೀರಿನ ಬಿಲ್ಲಿನ ಸಮಸ್ಯೆಯ ಬಗ್ಗೆ ನೇರವಾಗಿ ಮಾತನಾಡಿ ಕುಂದು-ಕೊರತೆಗಳನ್ನು ಬಗೆಹರಿಸಿಕೊಳ್ಳಲು 080–22945119 ಮತ್ತು 080–22229639 ಕರೆ ಮಾಡಿ ದೂರು ದಾಖಲಿಸಬಹುದು. ನೀರಿನ ಸಂಪರ್ಕ ಹೊಂದಿರುವ ಗ್ರಾಹಕರು ತಮ್ಮ ಆರ್ ಆರ್ ಸಂಖ್ಯೆಯನ್ನು ನೀಡಬೇಕು ಎಂದು ಮಂಡಳಿ ತಿಳಿಸಿದೆ.

### ಅರ್ಜಿ ಆಹ್ವಾನ

**ಬೆಂಗಳೂರು:** ಬಂಜಾರರ ಸಾಂಪ್ರದಾಯಿಕ ಸಂಸ್ಕೃತಿ ಮತ್ತು ಕಲೆಗಳನ್ನು ಉಳಿಸಿ-ಬೆಳಸಿ, ಪುನಶ್ಚೇತನಗೊಳಿಸುವ ಉದ್ದೇಶದಿಂದ ಮತ್ತು ಬಂಜಾರ ಕಲಾವಿದರ ಪ್ರತಿಭೆ ಹೊರಹೊಮ್ಮಿಸಲು ಬಂಜಾರರ ಬಹುಮುಖಿ ಕಲಾ ಪ್ರತಿಭಾನ್ವೇಷಣೆಯ 'ಕಲಾ ಮಳಾವ್' ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ನಿಗಮದ ವ್ಯವಸ್ಥಾಪಕ ನಿರ್ದೇಶಕರು ತಿಳಿಸಿದ್ದಾರೆ. ಕರ್ನಾಟಕ ತಾಂಡಾ ಅಭಿವೃದ್ಧಿ ನಿಗಮ ಬಹುಮುಖಿ ಕಲಾ ಪ್ರಕಾರಗಳಾದ ವಾಜಾ ವಾದ್ಯ, ಕಲೆ, ಕಥನ ಗಾಯನ (ಸಣ್ಣವಾಜಾ), ಲೇಂಗಿ ನೃತ್ಯ, ನಂಗಾರ ಢೋಳಿ ಬಿಡಿಸುವ ನೃತ್ಯ, ಮಳೆಯರ ಸಾಂಪ್ರದಾಯಕ ನೃತ್ಯ, ಘೂಮರ್ ನೃತ್ಯ, ಮಳೆಯರ ಜನಪದ ನೃತ್ಯ, ಮಳೆಯರ ಸಾಂಪ್ರದಾಯಕ ಗಾಯನ ಮತ್ತು ನೃತ್ಯ, ಬಂಜಾರರ ಸುಗಮ ಸಂಗೀತ, ಬಾಲಕಿಯರ ನೃತ್ಯ, ಬಾಲಕರ ಲೇಂಗಿ ನೃತ್ಯ, ಬಾಲಕರ ಮತ್ತು ಬಾಲಕಿಯರ ಆಧುನಿಕ ನೃತ್ಯ, ಮಳೆಯರ ಹಾವೇಲಿ ಮತ್ತು ಢಾವಲೋ ಪ್ರಕಾರಗಳಲ್ಲಿ ಬಂಜಾರ ಸಮುದಾಯದ ಕಲಾವಿದರು ಭಾಗವಹಿಸಬಹುದು. ಕಲಾವಿದರು ಈ ಮಳಾವ್‌ನಲ್ಲಿ ಭಾಗವಹಿಸಿ ತಮ್ಮಲ್ಲಿ ಹುದುಗಿರುವ ಕಲಾ ಪ್ರತಿಭೆ ಹೊರತರಲು ಹಾಗೂ ಪ್ರಶಸ್ತಿ ಪಡೆಯಲು 2024–25ನೇ ಸಾಲಿನಲ್ಲಿ ಅವಕಾಶ ಕಲ್ಪಿಸಲಾಗಿದ್ದು, ಅರ್ಹ ಮತ್ತು ಆಸಕ್ತ ಬಂಜಾರ ಸಮುದಾಯದ ಕಲಾವಿದರು ಜ.30ರ ಒಳಗೆ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ಕರ್ನಾಟಕ ತಾಂಡಾ ಅಭಿವೃದ್ಧಿ ನಿಗಮ ನಿಯಮಿತ, ಬಂಜಾರ ಭವನ–03, 16ಕೆ, 1ನೇ ಮಹಡಿ, ಮಿಲ್ಲರ್ ಟ್ಯಾಂಕ್ ರಸ್ತೆ(ತಿಮ್ಮಯ್ಯ ರಸ್ತೆ), ವಸಂತನಗರ, ಬೆಂಗಳೂರು–560052. ಇಲ್ಲಿ ಸಂಪರ್ಕಿಸಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಶಕ್ತಿಸೌಧದಲ್ಲಿ ಸಾಹಿತ್ಯ ಸಂಸ್ಕೃತಿಯ ಅನಾವರಣ

← ಮೊದಲಪುಟದಿಂದ

**ಶಾಸಕರಿಗೆ ಪುಸ್ತಕ ಖರೀದಿಸುವಂತೆ ಮನವಿ**

ಈ ನಡುವೆ ಪುಸ್ತಕ ಖರೀದಿಗೆ ಹಾಗೂ ಸಾಹಿತಿಗಳನ್ನು ಆರ್ಥಿಕವಾಗಿ ಸದೃಢಗೊಳಿಸುವ ನಿಟ್ಟಿನಲ್ಲಿ ವಿಧಾನಸಭಾ ಸ್ಪೀಕರ್ ಯು.ಟಿ. ಖಾದರ್ ಅವರು ಪ್ರತಿಯೊಬ್ಬ ಶಾಸಕರಿಗೂ, ಮೂರು ಲಕ್ಷ ರು. ಮೌಲ್ಯದ ಪುಸ್ತಕಗಳನ್ನು ಶಾಸಕರ ಕ್ಷೇತ್ರಾಭಿವೃದ್ಧಿ ಅನುದಾನದಲ್ಲಿ, ಖರೀದಿಸಲು ಮನವಿ ಮಾಡಿದ್ದಾರೆ. ಇದೇ ರೀತಿಯ ಪುಸ್ತಕಗಳನ್ನು ಖರೀದಿಸಬೇಕು ಎನ್ನುವ ಷರತ್ತು ವಿಧಿಸದಿದ್ದರೂ, ಆಯಾ ಕ್ಷೇತ್ರದ ಗ್ರಂಥಾಲಯಗಳಿಗೆ, ಶಾಲಾ-ಕಾಲೇಜುಗಳಿಗೆ ಅಗತ್ಯವಿರುವ ಪುಸ್ತಕಗಳನ್ನು ಖರೀದಿಸುವಂತೆ ಮನವಿ ಮಾಡಿದ್ದಾರೆ. ಯಾವ ರೀತಿಯ ಪುಸ್ತಕಗಳು ಶಾಸಕರ ಕ್ಷೇತ್ರಗಳಿಗೆ ಅಗತ್ಯವಿದೆ ಎನ್ನುವುದನ್ನು ಮೊದಲೇ ತಿಳಿಸಿದರೆ, ಪುಸ್ತಕ ಮೇಳದ ಸಮಯದಲ್ಲಿ ಆ ಪುಸ್ತಕಗಳನ್ನು ಪ್ರಕಾಶಕರಿಗೆ ತರುವಂತೆ ಸೂಚನೆ ನೀಡಲಾಗುವುದು. ಇದರಿಂದ ಕ್ಷೇತ್ರದ ಸಾಹಿತ್ಯಾಸಕ್ತರಿಗೆ ಹಾಗೂ ಸ್ಪರ್ಧಾತ್ಮಕ ಪರೀಕ್ಷೆಗೆ ತಯಾರಾಗುವ ಅಭ್ಯರ್ಥಿಗಳಿಗೆ ಅಗತ್ಯವಿರುವ ಪುಸ್ತಕಗಳು ಸಿಗಲಿದೆ ಎನ್ನುವ ಆಲೋಚನೆಯಲ್ಲಿ ಈ ತೀರ್ಮಾನ ಮಾಡಲಾಗಿದೆ ಎಂದು ತಿಳಿದುಬಂದಿದೆ.

### ಕಾಂಗ್ರೆಸ್ ದ್ವಿಮುಖ ನೀತಿಯ ರಾಜಕೀಯ

**ಬೆಂಗಳೂರು:** ಬೆಳಗಾವಿಯ ಕಾಂಗ್ರೆಸ್ ಸಮಾವೇಶದ ಘೋಷಣೆಗೆ ಇವತ್ತಿನ ಕಾಂಗ್ರೆಸ್ ವಿರುದ್ಧವಾಗಿದೆ ಎಂದು ವಿಧಾನಪರಿಷತ್ ಪ್ರತಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಟೀಕಿಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿ, ಅಂಬೇಡ್ಕರರನ್ನು ಸೋಲಿಸಿ, ಅಪಮಾನ ಮಾಡಿ, ಜೀವಿತಾವಧಿಯಲ್ಲಿ ನೋಯಿಸಿ, ಇವತ್ತು ಅಂಬೇಡ್ಕರರು ನಮ್ಮ ಅಸ್ಮಿತೆ ಎಂಬಂತೆ ಮಾತನಾಡುವುದು ದುರ್ದೈವದ ಸಂಗತಿ ಎಂದರು. ಬಾಪೂ ಹೆಸರು ಹೇಳಿಕೊಂಡು ಗಾಂಧಿಯವರ ಮನಸ್ಥಿತಿಗೆ ವಿರುದ್ಧವಾಗಿ ನಕಲಿ ಗಾಂಧಿಗಳು ಇವತ್ತು ಕಾಂಗ್ರೆಸನ್ನು ನಡೆಸುತ್ತಿದ್ದಾರೆ. ಸಂವಿಧಾನಕ್ಕೆ ದ್ರೋಹ ಬಗೆದು, ಸ್ವಾರ್ಥಕ್ಕಾಗಿ ಸಂವಿಧಾನವನ್ನೇ ಸಂಹಾರ ಮಾಡಿದ್ದ ಕಾಂಗ್ರೆಸ್ ಇವತ್ತು ಸಂವಿಧಾನದ ರಕ್ಷಕರು ನಾವೇ ಎಂದು ಹೇಳಿಕೊಳ್ಳುತ್ತಿದೆ. ಇದು ಕಾಂಗ್ರೆಸ್ಸಿನ ದ್ವಿಮುಖ ನೀತಿಯ ರಾಜಕೀಯ ಎಂದು ದೂರಿದರು. ಎಐಸಿಸಿ ಅಧ್ಯಕ್ಷರು, ಕರ್ನಾಟಕದಲ್ಲಿ ನಾವೆಲ್ಲ ಮೆಚ್ಚಿಕೊಂಡಿದ್ದ ಮಲ್ಲಿಕಾರ್ಜುನ ಖರ್ಗೆಯವರು ಒಂದು ರೀತಿಯ ಅಟ್ಟಹಾಸ, ಅಹಂಕಾರ, ಜೊತೆಗೆ ಆತ್ಮವಂಚನೆಯ ಮಾತು ಆಡಿದ್ದಾರೆ.

{ **ಆರ್.ಅಶೋಕ್** } ವಿಪಕ್ಷ ನಾಯಕ

**ರಾಜ್ಯ ಸರಕಾರ ಬಸ್ ದರ, ಸ್ಟಾಂಪ್ ಡ್ಯೂಟಿ, ತೆರಿಗೆ, ಹಾಲಿನ ದರ ಹೆಚ್ಚಳ, ಮೆಟ್ರೋ ದರ ಹೆಚ್ಚಳ ಹೀಗೆ ಎಲ್ಲವೂ ಸಾರ್ವಜನಿಕರ ಮೇಲೆ ಬೆಲೆ ಏರಿಕೆಯ ಬರೆ ಹಾಕಿದೆ. ಗ್ಯಾರಂಟಿ ಯೋಜನೆಗಳಿಂದ ರಾಜ್ಯ ಸರಕಾರ ದಿವಾಳಿಯಾಗಿದ್ದು, ಕೋಮಾ ಹಂತ ತಲುಪಿದೆ.**

ವಿಶ್ವವಾಣಿ @vishwavaninews
ಬೆಂಗಳೂರು
ಗುರುವಾರ
23 | 01 | 2025
ಆರಾಮ
ಅನುದಿನವೂ ವಿರಾಮಕ್ಕೆ ಒಂದು ನೆಪ

# ಸೃಜನಶೀಲತೆಯ ಕೆಲವು ಬಗೆಗಳು

**ಬರೆಯುವುದೇ ಒಂದು ಮಾನಸಿಕ ವ್ಯಾಯಾಮ. ಅದನ್ನು ದೈನಂದಿನ ನೆಲೆಯಲ್ಲಿ ನಾವು ಕೈಗೆತ್ತಿಕೊಳ್ಳಬಹುದು.**

● ಡಾ. ಎನ್ ಜಯರಾಮ ಶೆಟ್ಟಿ

ಎರಡು ವರ್ಷಗಳಿಂದ ನಾಲ್ಕು ವರ್ಷಗಳೊಳಗಿನ ಶೇ. 95 ರಷ್ಟು ಮಕ್ಕಳು ಸೃಜನಶೀಲ ಮೂರ್ತಿಗಳೆಂದು ನಂಬಿದವರಲ್ಲಿ ಮಹಾನ್ ಐನ್‌ಸ್ಟೀನ್ ಮುಖ್ಯರು. ಇತ್ತೀಚೆಗಿನ ವೈಜ್ಞಾನಿಕ, ಮನೋವೈಜ್ಞಾನಿಕ ಮೂಲದ ಸಂಶೋಧನೆಗಳು ಸೃಜನ ಶೀಲತೆಯ ಮೂಲವನ್ನು ಮಕ್ಕಳಲ್ಲೇ ಕಂಡಿವೆ. ವರ್ಷ ಏಳರ ಹಂತದಲ್ಲಿ ಶೇ. 90 ರಷ್ಟು ಮಕ್ಕಳ ಸೃಜನಶೀಲತೆಯ ತೀಕ್ಷ್ಣತೆ ಮತ್ತು ತೀವ್ರತೆ ಕಡಿಮೆಯಾಗಿರುವ ಅಂಶಗಳೂ ಬೆಳಕಿಗೆ ಬಂದಿವೆ.

ಮಗು ಬೆಳೆದಂತೆಲ್ಲ ಪೋಷಕರ 'ಬೇಕು-ಬೇಡ' ಗಳ ಹಾವಳಿಗೆ ಅದು ತುತ್ತಾಗುತ್ತದೆ. ಇದೇ ಸಮಯದಲ್ಲಿ ಎದುರಾಗುವ ಶಾಲೆಗಳ ಪ್ರತಿಜ್ಞೆ, ಘೋಷಣೆ, ವೇಳಾಪಟ್ಟಿ, ನೀತಿ ಪಾಠಗಳು, ಶಿಕ್ಷಕರು ಬೋಧಿಸುವ ನಿಯಮಾವಳಿಗಳ ಹಾವಳಿ ಆರಂಭಿಕ ಗೊಂದಲವನ್ನುಂಟುಮಾಡಿ, ಕ್ರಮೇಣ ಮಕ್ಕಳು ಹೊಸಜಾಡಿಗೆ ಅಂಟಿಕೊಳ್ಳುವಂತೆ ಸೆಳೆದುಕೊಳ್ಳುತ್ತದೆ! ಅದರಲ್ಲೇ ಮುಂದುವರಿದು ಮಗು ತನ್ನ ಮೂಲಸ್ವರೂಪದ ಕ್ರಿಯಾಶೀಲತೆ, ಸೃಜನಶೀಲತೆಯನ್ನು ಮರೆಯುವುತ್ತದೆ. ನಾವು ಬೆಳೆದಂತೆ, ಸೃಜನಶೀಲತೆಯನ್ನು ಹೆಚ್ಚಿಸಿಕೊಳ್ಳುವ ಅಪಾರ ಸಾಧ್ಯತೆ ಮತ್ತು ವಿಪುಲ ಅವಕಾಶಗಳನ್ನು ಮೈಗೂಡಿಸಿಕೊಳ್ಳಬಹುದು. 'ಮನಸಿನೇಳಿಗೆ, ಮನುಜನೇಳಿಗೆ' ಎನ್ನುವ ಮಾತು ನಮಗೆಲ್ಲ ದಾರಿದೀಪದಂತಿದೆ. ಕೆಲವು ಬಗೆಗಳನ್ನು ಗಮನಿಸೋಣ.

## ಮೈಂಡ್ ಮ್ಯಾಪಿಂಗ್

ಯೋಚನೆಗಳನ್ನು ಒಂದಕ್ಕೊಂದು ಜೋಡಿಸಿ ಹಂದರವನ್ನಾಗಿ ಮಾಡಬಹುದು. ಇದು 'ಯೋಚನಾ ವ್ಯಾಯಾಮಕ್ಕೆ' ಪ್ರಥಮ ಪಾಠವೆಂದು ತಿಳಿಯಿರಿ. ಸಾವಿರಾರು ಪುಟಗಳ ಪುಸ್ತಕ ಆರಂಭವಾಗುವುದು ಪ್ರಥಮ ವಾಕ್ಯದಿಂದ ತಾನೆ? ನೀರಿನ ಬಾಟಲಿಯನ್ನು ನೋಡುತ್ತ ಮನಸ್ಸನ್ನು ಹಿಗ್ಗಿಸುವ ಪ್ರಯತ್ನ ಮಾಡಿ ನೋಡೋಣ( ಮೈಂಡ್ ಮ್ಯಾಪಿಂಗ್). ಆಗಬರುವ ಅನೇಕ ಯೋಚನೆಗಳಲ್ಲಿ ಕೆಲವು ಹೀಗಿರಬಹುದೆ? ಬಾಟಲಿಯ ಗಾಜಿನಂತೆ ನನ್ನ ವೃತ್ತಿಜೀವನದಲ್ಲಿ ಪಾರದರ್ಶಕತೆಯಿರಲಿ, ಬಾಟಲಿಯಲ್ಲಿರುವ ನೀರಿನಂತೆ ನಾನು ಹರಿದು ಮುಂದುವರಿಯುವೆ, ಬಾಟಲಿಯ ಆಕಾರದಂತೆ ನೀರು ರೂಪುಗೊಳ್ಳುತ್ತದೆ, ನನ್ನನ್ನು ಆವರಿಸುವ ವಾತಾವರಣದ ಬೇಡಿಕೆಗಳನ್ನು ನಾನು ಅದೇ ರೀತಿಯಲ್ಲಿ ಮನ್ನಿಸುವೆ, ನಾನೆಲ್ಲಿಯಿದ್ದರೂ ಜನರ ಬಯಕೆಗಳಿಗೆ ಸಿಲುಕಿ ಅವರ ಬಾಯಾರಿಕೆಯನ್ನು ನೀಗಿಸುವೆ, ಇತ್ಯಾದಿ. ಹೀಗೆ ನೀರಿನ ಬಾಟಲಿಯೊಂದನ್ನು ಮೂಲವಾಗಿಟ್ಟು ಅರ್ಥಪೂರ್ಣ ಶಬ್ದ, ವಾಕ್ಯಗಳನ್ನು ಹುಟ್ಟುಹಾಕುವುದು ಸೃಜನಶೀಲತೆ ವೃದ್ಧಿಸಿಕೊಳ್ಳುವ ಅನೇಕ ವಿಧಗಳಲ್ಲಿ ಇದು ಒಂದು. ಬರೆಯುವುದೇ ಒಂದು ಮಾನಸಿಕ ವ್ಯಾಯಾಮ. ಅದನ್ನು ದೈನಂದಿನ ನೆಲೆಯಲ್ಲಿ ನಾವು ಕೈಗೆತ್ತಿಕೊಳ್ಳಬಹುದು.

## ಮಿದುಳಿನ ಮಹಾಪೂರ

ಐದರಿಂದ ಏಳರ ಮಂದಿಯಿರುವ ಗುಂಪಿಗೆ 'ಸಮಸ್ಯೆ' ಯೊಂದನ್ನು ಒಪ್ಪಿಸಿ. ಗುಂಪಿನ ಪ್ರತಿಯೋರ್ವ ತನ್ನ 'ಮನಸ್ಸಿಗೆ' ಬಂದುದನ್ನು ನಿರಾತಂಕವಾಗಿ ಒಪ್ಪಿಸಲಿ. ಯಾವುದೇ ಸಲಹೆಯನ್ನು ಗೌಣವೆಂದು ತಿರಸ್ಕರಿಸಬೇಡಿ. ಗುಂಪಿನಲ್ಲಿ ಬರುವ ಅದೆಷ್ಟೋ ಸಲಹೆಗಳನ್ನು ಕೊನೆಯಲ್ಲಿ ಪರಿಶೀಲಿಸಬಹುದು, ಪರಿಷ್ಕರಿಸಬಹುದು. ಅದರಿಂದ ಯಾರಿಗೂ ಬೇಸರ, ಭ್ರಮನಿರಸನವಾಗದು. ಆದರೆ, ವಿಚಾರಗಳ ಕೊಡುಗೆ ಮಾತ್ರ ಪುಂಖಾನು ಪುಂಖವಾಗಿ ಬರುವ ಪ್ರಕ್ರಿಯೆಗೆ ಬ್ರೈನ್ ಸ್ಟಾರ್ಮಿಂಗ್ (ಮಿದುಳಿನ ಮಹಾಪೂರ) ಎಂದು ಹೆಸರಿಸಿ ವಿಸ್ತೃತವಾಗಿ ಬಳಸಲಾಗುತ್ತಿದೆ. ಈ ಪ್ರಕ್ರಿಯೆಗೆ ಗುಂಪೇ ಬೇಕಂತೇನಿಲ್ಲ. ವ್ಯಕ್ತಿಯೊಬ್ಬ ತನ್ನಲ್ಲೇ ಇದನ್ನು ಮಾಡಿಕೊಳ್ಳಬಹುದು. ಪ್ರತಿಯೋರ್ವ ಕ್ರಿಯಾಶೀಲ ಬರಹಗಾರ, ಕಲಾಕಾರ, ಅಧ್ಯಾಪಕ, ಭಾಷಣಕಾರ ಈ ಕ್ರಿಯೆಗೆ ಒಳಗಾಗಲೇಬೇಕು.

## ಉತ್ತರ ಪಡೆಯುವ ವಿಧಾನ

ನಿಮ್ಮ ಪ್ರಶ್ನೆಗೆ ಉತ್ತರಪಡೆಯುವ ಬಗೆಯನ್ನು ನೀವೇ ಕಂಡುಕೊಳ್ಳುವ ವಿಧಾನ ಈಗ ಹೆಚ್ಚೆಚ್ಚು ಬಳಕೆಯಲ್ಲಿದೆ. ಕಾಗದವೊಂದರಲ್ಲಿ, ನಿಮ್ಮ ಪ್ರಾಮಾಣಿಕ ಸಮಸ್ಯೆಯನ್ನು ಬರೆಯಿರಿ. ನಿಮ್ಮ ಉತ್ಕಟೇಚ್ಛೆಯನ್ನು ಕೇವಲ ಬರೆದಿಡಿ, ಉತ್ತರಕ್ಕಾಗಿ ಆಗ್ರಹ ಬೇಕಾಗಿಲ್ಲ. ರಾತ್ರಿ ಮಲಗುವ ಮುಂಚೆ ನಿಮ್ಮ ಸಮಸ್ಯೆಯನ್ನು ಸ್ಪಷ್ಟವಾಗಿ, ಬಿಡಿಬಿಡಿಯಾಗಿ ಓದಿ. ಸಾಮಾನ್ಯವಾಗಿ ಬೆಳಗಿನ ಹೊತ್ತಿಗೆ ಒಂದಲ್ಲ ಒಂದು ಪರಿಹಾರ ದೊರಕುವ ಸಾಧ್ಯತೆ ಇದೆಯೆನ್ನುವುದನ್ನು ನೆಪೋಲಿಯನ್ ಹಿಲ್ ತನ್ನ ಬೆಸ್ಟ್ ಸೆಲ್ಲರ್ ಪುಸ್ತಕ 'ಥಿಂಕ್ ರಿಚ್, ಗ್ರೋರಿಚ್' ಇದರಲ್ಲಿ ಪ್ರಸ್ತುತ ಪಡಿಸಿದ್ದಾರೆ. ಥಾಮಸ್ ಆಲ್ವಾ ಎಡಿಸನ್ ಈ ಮಾದರಿಯನ್ನು ಬಳಸಿದ್ದರಂತೆ! ನೀವೂ ಪ್ರಯತ್ನಿಸಿ 21 ದಿನ ನಿರಂತರವಾಗಿ. ಆವಿಷ್ಕಾರ ಆಕಸ್ಮಿಕವಲ್ಲ ಎಂದು ಎಡಿಸನ್ ಹೇಳಲಿಲ್ಲವೆ?

ಅತ್ಯುತ್ಸಾಹ ಯಾವುದೇ ಪ್ರಗತಿಯ ಮೂಲ ಮಂತ್ರವಂತೆ. ನಿಮ್ಮ ಪ್ರಯತ್ನ ಪಥದಲ್ಲಿ ವೈಯಕ್ತಿಕ ಉತ್ಸಾಹ ಉತ್ಸವದಂತೆ ಕಾಣಿಸಿಕೊಂಡಾಗ ಕೆಲಸದ ದಣಿವೂ ಇರದು, ಸೋಲಿನ ಭಯವೂ ಕಾಡದು.

ಸೃಜನ ಶೀಲರು ಕಾಣುವ 'ಮನೋವೈಜ್ಞಾನಿಕ ದೊಡ್ಡ ಚಿತ್ರ' ಅವರನ್ನು ಭವಿಷ್ಯದ ಎತ್ತರದ ಗುರಿಯತ್ತ ಸಾಗಿಸಲು ಸಹಕಾರಿ. ಯೋಚನೆಯೇ ಶಕ್ತಿಯೆಂದು ವಿದಿತವಾದಮೇಲೆ ಬೇರೆ ಯೋಚನೆ ಬೇಕೇ? ನಿರಕ್ಷರಕುಕ್ಷಿತಂದೆಯೊಬ್ಬರು ತನ್ನ ಮಗಳ ವಿದ್ಯಾಭ್ಯಾಸಕ್ಕಾಗಿ ಸರ್ವಸ್ವವನ್ನು ತ್ಯಾಗಮಾಡಿ, ಅವಳ ಉಜ್ವಲ ಭವಿಷ್ಯದ ರೂವಾರಿಯಾದರು. ರಾತ್ರಿ ಹಗಲೆನ್ನದೆ ಮಗಳು ಅಭ್ಯಾಸದಲ್ಲಿ ಶ್ರಮಿಸುತ್ತಿರಲು, ಅಕ್ಷರ ಜ್ಞಾನವಿಲ್ಲದ ತಂದೆ ಮಗಳ ಪಕ್ಕದಲ್ಲಿ ಕುಳಿತು ಅವಳನ್ನು ಪ್ರೇರೇಪಿಸಿದ ಪ್ರಕರಣಗಳು ದಿನಪತ್ರಿಕೆಯಲ್ಲಿ ಬಂದಿತ್ತು. ಅದನ್ನೇ ಓದಿ, ಆ ಮಾದರಿಯನ್ನು ಎಷ್ಟೋ ಪೋಷಕರು ಮತ್ತು ವಿದ್ಯಾರ್ಥಿಗಳು ಪಾಲಿಸಿ ಪ್ರತಿಫಲ ಪಡೆಯಬಹುದಲ್ಲವೆ?

# ಇಂದ್ರಿಯಗಳ ಸ್ವಯಂಚಾಲಿತ ಶಕ್ತಿ

ಪ್ರಕ್ಷುಬ್ದ ಇಂದ್ರಿಯಗಳು ಅಭೀಪ್ಸೆ ಹೊಂದಿದ ವಿವೇಕಯುತ ವ್ಯಕ್ತಿಯ ಮನಸ್ಸನ್ನೂ ಕೂಡ ಬಲವಂತವಾಗಿ ಅಧೀನ ಮಾಡಿ ಕೊಂಡುಬಿಡುತ್ತವೆ ಎಂಬ ಎಚ್ಚರಿಕೆಯನ್ನು ಕೃಷ್ಣ ಅರ್ಜುನನಿಗೆ ಕೊಡುತ್ತಾನೆ. ಈ ಶ್ಲೋಕವು ಪ್ರಚೋದನೆಗೊಳಪಡಿಸುವ ಇಂದ್ರಿಯ ಗಳ ಸ್ವಯಂಚಾಲಿತ ಶಕ್ತಿ ಬಗ್ಗೆ ಇದೆ.

ಇದಕ್ಕೆ ಅತ್ಯುತ್ತಮ ಉದಾಹರಣೆ ಎಂದರೆ ಧೂಮಪಾನ ಮಾಡುವ ವ್ಯಕ್ತಿ ಅವನಿಗೆ



ನಿತ್ಯಜೀವನದಲ್ಲಿ ಭಗವದ್ಗೀತೆ

ಹಿರಿಯ ಐಎಎಸ್ ಅಧಿಕಾರಿ ● ಕೆ.ಶಿವಪ್ರಸಾದ್

ಧೂಮಪಾನದ ಅಪಾಯದ ಬಗ್ಗೆ ತಿಳಿದಿರುತ್ತದೆ. ಆದರೆ ಅದನ್ನು ಬಿಡುವುದು ಅವನಿಗೆ ತುಂಬಾ ಕಷ್ಟ. ಆದರೆ ಸಿಗರೇಟು ಹಚ್ಚಿದ ನಂತರ ಇದು ತಿಳಿದು ಪಶ್ಚಾತಾಪ ಪಡುತ್ತಾನೆ. ರಸ್ತೆಯ ಅಪಘಾತ ಅಥವಾ ಅಪರಾಧದಲ್ಲಿ ಸಿಲುಕಿದ ಯಾವುದೇ ವ್ಯಕ್ತಿಗೆ ಇದು ಆ ಕ್ಷಣದ ಆವೇಶದಲ್ಲಿ ಆಗಿದೆಯೇ ಹೊರತು ಪ್ರಜ್ಞಾಪೂರ್ವಕವಾಗಿ ಆಗಿಲ್ಲ ಎಂಬುದು ತಿಳಿದಿರುತ್ತದೆ. ತನ್ನ ಕಾರ್ಯಕ್ಷೇತ್ರದಲ್ಲಿ ಅಥವಾ ಕುಟುಂಬದಲ್ಲಿ ಕಟು ನುಡಿಗಳನ್ನು ಉಪಯೋಗಿಸಿ ನಂತರ ಅವು ಉದ್ದೇಶಪೂರಿತವಾದವುಗಳಲ್ಲ ಎಂದು ಪರಿತಪಿಸುವ ವ್ಯಕ್ತಿಯ ವಿಷಯವು ಹೀಗೆ ಇರುತ್ತದೆ. ಇಂದ್ರಿಯಗಳು ನಮ್ಮ ಮೇಲೆ ಪ್ರಭುತ್ವ ಸಾಧಿಸಿ ನಮ್ಮನ್ನು ಕರ್ಮ ಬಂಧನಕ್ಕೊಳಪಡಿಸುತ್ತವೆ ಎಂಬುದು ಇದರ ಅರ್ಥ.

ನಮ್ಮ ಬೆಳವಣಿಗೆಯ ಪೂರ್ವ ಅವಧಿಯಲ್ಲಿ ನಮ್ಮ ಮೆದುಳಿನಲ್ಲಿರುವ ಮುಕ್ತ ನರಗಳು ಕ್ಲಿಷ್ಟ ಜೋಡಣೆಗಳೆಂಬ ಸಂಪರ್ಕವನ್ನು ಹೊಂದಿರುತ್ತವೆ. ಮೆದುಳಿನ ಸಾಕಷ್ಟು ಶಕ್ತಿಯನ್ನು ಉಳಿಸುವಂತಹ ನಡಿಗೆಯಂತಹ ಚಟುವಟಿಕೆಗಳನ್ನು ಇದು ನಿರ್ವಹಿಸುತ್ತದೆ. ನಮ್ಮ ಜೀವನದ ನಂತರದ ವರ್ಷಗಳಲ್ಲಿ ನಾವು ಹೊಂದುವ ಕೌಶಲ್ಯ ಹಾಗೂ ಚಟಗಳ ಸ್ಥಿತಿಯು ಹೀಗೆಯೇ ಇರುತ್ತದೆ.

ಈ ಪ್ರಕ್ರಿಯೆಯಲ್ಲಿ ನಾವು ಸಾಕಷ್ಟು ಶಕ್ತಿಯನ್ನು ವ್ಯಯಿಸುತ್ತೇವೆ ಮತ್ತು ಅವಶ್ಯವಿರುವ ದೃಢ ಸಂಪರ್ಕ ತುಂಬಾ ಬಲ ಪಡೆದುಕೊಳ್ಳುತ್ತದೆ ಹಾಗೂ ಈ ಸಂಪರ್ಕದ ಮೇಲೆ ನಿಂತಿರುವ ಚಟಗಳನ್ನು ಜಯಿಸುವುದು ತುಂಬಾ ಕಠಿಣ ವಾಗಿರುತ್ತದೆ. ನರವಿಜ್ಞಾನದ ಪ್ರಕಾರ ಇಂತಹ ದೃಢ ಸಂಪರ್ಕವನ್ನು ಭೇದಿಸುವದು ಅಸಾಧ್ಯ. ಹೊಸದನ್ನು ರಚಿಸುವುದರಿಂದ ಅಥವಾ ಇದ್ದುದ್ದನ್ನು ಕೈವಶ ಮಾಡಿಕೊಳ್ಳುವುದರಿಂದ ಮಾತ್ರ ಇದು ಸಾಧ್ಯ. ವಿವೇಕಯುತ ವ್ಯಕ್ತಿಯ ಮನಸ್ಸನ್ನೂ ಕೂಡ ದಾರಿ ತಪ್ಪಿಸುವ ಶಕ್ತಿ ಹೊಂದಿದ ಇಂದ್ರಿಯಗಳ ಬಗ್ಗೆ ಹೇಳುವಾಗ ಕೃಷ್ಣ ಈ ವಿಷಯ ಉಲ್ಲೇಖಿಸುತ್ತಾನೆ.

ಇಂದ್ರಿಯಗಳ ಸ್ವಯಂಚಾಲಿತ ಶಕ್ತಿಯನ್ನು ಗೆಲ್ಲಲು ನಾವು ಅಸ್ತಿತ್ವದ ಉನ್ನತ ರೂಪ ಅಥವಾ ಶಕ್ತಿಯ ಪರಮೇಶ್ವರನನ್ನು ಮೊರೆ ಹೋಗ ಬೇಕೆಂದು ಕೃಷ್ಣ ಹೇಳುತ್ತಾನೆ. (2.61) ಇದರ ಅರ್ಥ ಹೊಡೆದಾಡ ಬೇಕೆಂದಲ್ಲ ಆದರೆ ಜಾಗೃತಿಯಿಂದ ಶರಣಾಗಬೇಕು. ಇದೇ ಅವಶ್ಯಕತೆಯ ಮೂಲವಾಗಿದೆ.

## ಚಿತ್ತವಿಹಾರ

### ಅನುನಯದ ನಡೆ

ಝೆನ್‌ನ ಪ್ರಸಿದ್ಧ ಗುರುಗಳಾಗಿದ್ದ ಬೆಂಕೇ ಅವರ ಪ್ರವಚನಗಳಿಗೆ ಝೆನ್ ವಿದ್ಯಾರ್ಥಿಗಳ ಜತೆಯಲ್ಲೇ, ಸಮಾಜದ ವಿವಿಧ ವರ್ಗಗಳ ಜನರೂ ಸಹ ಬರುತ್ತಿದ್ದರು. ಅವರು ತಮ್ಮ ಮಾತುಗಳಲ್ಲಿ ದೊಡ್ಡ ದೊಡ್ಡ ಚಿಂತನೆಗಳನ್ನು, ಪದಗಳನ್ನು, ಹಿಂದಿನ ವಿದ್ವಾಂಸರ ತರ್ಕಗಳನ್ನು ಕೊಡುತ್ತಿರಲಿಲ್ಲ; ಬದಲಿಗೆ, ತಮ್ಮ ಅನುಭವದ ಮೂಸೆಯಲ್ಲಿ ಕಂಡುಕೊಂಡ ಸತ್ಯಗಳನ್ನುಸರಳವಾಗಿ ತಿಳಿಸುತ್ತಿದ್ದರು. ಆದ್ದರಿಂದ ಅವರ ಪ್ರವಚನಗಳು ಬಹಳ ಜನಪ್ರಿಯವಾಗಿದ್ದವು.

ಇವರ ಈ ಜನಪ್ರಿಯತೆಯು ಕೆಲವರ ಕಣ್ಣು ಕುಕ್ಕುತ್ತಿತ್ತು. ಅದವಲ್ಲಿ ಒಬ್ಬರೆಂದರೆ ನಿಚಿರೆನ್ ಎಂಬ ಪೂಜಾರಿ; ಸನಿಹದ ದೇವಾಲಯದಲ್ಲಿದ್ದ ನಿಚೆರನ್ ಅವರನ್ನು ತೊರೆದು, ಅಪಾರ ಜನಸಮೂಹ, ಬೆಂಕೇ ಗುರುಗಳ ಬಳಿ ಬರುತ್ತಿತ್ತು.

ಆಗ ನಿಚಿರೆನ್ ಅವರು ಒಂದು ಉಪಾಯ ಮಾಡಿದರು; ಬೆಂಕೇ ಗುರುಗಳನ್ನು ಮಾತಿನಲ್ಲಿ ಸೋಲಿಸಬೇಕು ಎಂದು ನಿಶ್ಚಯಿಸಿ, ಒಂದು ದಿನ ಅವರ ಬಳಿ ಹೋದರು.

'ಗುರುಗಳೇ, ನಿಮ್ಮ ಮಾತುಗಳನ್ನು ಕೇಳಿದವರು ಹೇಳಿದ್ದೇನೆಂದರೆ, ನೀವು ಏನನ್ನುಬೋಧಿಸುತ್ತೀರೋ ಅದನ್ನು ಅನುಸರಿಸುತ್ತೀರಿ ಎಂದು. ಜತೆಗೆ ನಿಮ್ಮ ಮಾತುಗಳನ್ನು ಎಲ್ಲರೂ ಶಿರಸಾವಹಿಸಿ ಪಾಲಿಸುತ್ತಾರಂತೆ, ಹೌದೆ?' ಎಂದು ಹೇಳಿದರು.

'ಏನೋ, ನನ್ನ ಕೈಲಾದಷ್ಟು ಮಾಡುತ್ತೇನೆ.ನಾನು ಮಾತನಾಡುವ ವಿಧಾನದ ಪರಿಚಯವಾಗಬೇಕಾದರೆ, ನನ್ನ ಬಳಿಗೆ ಇಲ್ಲಿಗೆ, ವೇದಿಕೆ ಮೇಲೆ ಬನ್ನಿ' ಎಂದರು ಬೆಂಕೇ. ಪೂಜಾರಿ ನಿಚಿರೆನ್ ಅವರು ಜನರ ನಡುವೆ ಹೆಮ್ಮೆಯಿಂದ ಸಾಗಿ, ಗುರುಗಳ ವೇದಿಕೆಯ ಬಳಿ ಹೋದರು. ಎಲ್ಲರ ಎದುರು, ಗುರುಗಳು ತನ್ನನ್ನು ಗುರುತಿಸಿದರು ಎಂದು ತೋರಿಸಿಕೊಳ್ಳುವುದು ಅವರ ಅಭಿಲಾಷೆ.

'ಇಲ್ಲಿ ಹೀಗೆ ಎಡಭಾಗಕ್ಕೆ ಬನ್ನಿ' ಎಂದರು ಬೆಂಕೇ. ಅದರಂತೆ ನಿಚಿರೆನ್ ಎಡಭಾಗಕ್ಕೆ ಹೋದರು.

'ಓಹ್, ಇಲ್ಲಿ ಬೇಡ, ಏಕೆಂದರೆ, ನೀವು ಬಲಭಾಗದಲ್ಲಿ ಕುಳಿತರೆ ಮಾತನಾಡಲು, ಅರ್ಥಮಾಡಿಕೊಳ್ಳಲು ಅನುಕೂಲ. ಆದ್ದರಿಂದ, ಬಲಭಾಗಕ್ಕೆ ಬನ್ನಿ' ಎಂದರು ಬೆಂಕೇ. ಅವರು ಹೇಳಿದಂತೆ, ನಿಚಿರೆನ್ ಬಲಭಾಗಕ್ಕೆ ಹೋದರು.

'ಇದು ಉತ್ತಮ ವಿಚಾರ. ನೀವು ಸಜ್ಜನರು. ನೋಡಿ, ನಾನು ಹೇಳಿದ್ದನ್ನು ಎಷ್ಟು ಚೆನ್ನಾಗಿ ಕೇಳುತ್ತೀರಿ! ಮೊದಲು ಎಡಭಾಗಕ್ಕೆ ಬಂದಿರಿ, ಈಗ ನಾನು ಹೇಳಿದಂತೆ ಬಲಭಾಗಕ್ಕೆ ಬಂದಿರಿ. ಇದು ನಿಮ್ಮ ದೊಡ್ಡತನವನ್ನು ತೋರಿಸುತ್ತದೆ. ಈಗ, ಇಲ್ಲೇ ಕುಳಿತುಕೊಳ್ಳಿ, ನನ್ನ ಮಾತುಗಳನ್ನು ಕೇಳಿ' ಎಂದು ಬೆಂಕೇ ತನ್ನ ಪ್ರವಚನ ಆರಂಭಿಸಿದರು.

ನಿಚಿರೆನ್ ಅವರ ಹೆಮ್ಮೆಯ ಬಲೂನು ಟುಸ್ ಎಂದಿತ್ತು. ಜತೆಗೆ, ಅದೇಕೆ ಬೆಂಕೇ ಗುರುಗಳ ಮಾತುಗಳನ್ನು ಜನರು ಪಾಲಿಸುತ್ತಾರೆ ಎಂಬ ವಿಚಾರವೂ ಸ್ಪಷ್ಟವಾಯಿತು.

● ಶಶಾಂಕ್ ಮುದೂರಿ

### ಅಶಾಶ್ವತ

ಯಾವುದೂ ಇಲ್ಲ
ಈ ಜಗದಲ್ಲಿ ಶಾಶ್ವತ
ಮದುವೆಯೂ ಅಷ್ಟೇ
ವಿಚ್ಛೇದನ ಅರ್ಜಿಗಳು
ನ್ಯಾಯಾಲಯದಲ್ಲಿ
ರಾಶಿ ರಾಶಿ ಪರ್ವತ

● ಮಹಾಂತೇಶ ಮಾಗನೂರ

### ನೀವೂ ಬರೆಯಬಹುದು

ನಮ್ಮ ವಿಳಾಸ:
ಪುರವಣಿ ವಿಭಾಗ, ನಂ.1687, 3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098
ಇ-ಮೇಲ್: vishwavanimagazine@gmail.com

# ಮಣ್ಣಿನಿಂದ ಆಭರಣ!



**ಮಣ್ಣಿನಿಂದ ಆಭರಣ ತಯಾರಿಸಿ, ಅವಕ್ಕೆ ಬಣ್ಣತುಂಬಿದಾಗ, ನೋಡುಗರ ಮನ ಮೆಚ್ಚುಗೆ ಗಳಿಸುತ್ತಿವೆ.**

● ಈರಣ್ಣ ಬೆಂಗಾಲಿ

ಮೈಸೂರಿನ ನೀಲಿ ಲೋಹಿತ್ ಎಂಬ ಮಹಿಳೆ ಈ ಮಣ್ಣಿನಿಂದಲೇ ಜೀವನ ಕಟ್ಟಿಕೊಂಡಿದ್ದಾಳೆ. ಮಣ್ಣಿನಿಂದ ಮಾಡಿದ ವಿವಿಧ ಆಭರಣಗಳನ್ನು ತಾನೇ ಸ್ವತಃ ತಯಾರಿಸುವ ಮೂಲಕ ಸ್ವಾವಲಂಬಿ ಜೀವನ ನಡೆಸಿ ಆದರ್ಶ ಮಹಿಳೆಯಾಗಿದ್ದಾಳೆ. ನೀಲಿ ತನ್ನ ಜೀವನದಲ್ಲಿನ ವಿಪರೀತ ಏರುಪೇರುಳಿಂದ ವಿಚಲಿತಳಾಗದೇ ಸಮಸ್ಯೆಗಳನ್ನು ಮೆಟ್ಟಿನಿಂತು ಸಾಧಕಿ ಮಹಿಳೆಯಾಗಿದ್ದಾರೆ.

ಕೊರೋನಾ ಕಾಲದಲ್ಲಿ ಕೋರಾನ ವಾರಿಯರ್ ಆಗಿದ್ದ ನೀಲಿ ಅವರ ಗಂಡ ಲೋಹಿತ್ ಕೊರೋನಾಕ್ಕೆ ಬಲಿಯಾಗುವರು. ಆಗಿನಿಂದ ನೀಲಿ ಅವರು ಬದುಕಿನಲ್ಲಿ ಧೃತಿಗೆಡದೆ, ಮಣ್ಣಿನ ಆಭರಣಗಳ ಉದ್ಯಮವನ್ನು ನಡೆಸಲು ಪ್ರಾರಂಭಿಸಿದರು. ಕಳೆದ ಏಳು ವರ್ಷಗಳಿಂದ ಮಣ್ಣಿನ ಆಭರಣಗಳ ತಯಾರಿಕೆಯಲ್ಲಿ ತೊಡಗಿದ ನೀಲಿ ಅವರು ಈ ಮುಂಚೆ ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರು. ರವಿವಾರ ಮತ್ತು ಇತರೆ ರಜಾದಿನಗಳಲ್ಲಿ ಈ ಕಲೆಯನ್ನು ಮಾಡುವಲ್ಲಿ ನಿರತರಾಗುತ್ತಿದ್ದರು. ಆರಂಭದಲ್ಲಿ ನೀಲಿ ಅವರು ತನ್ನ ಗಂಡನಿಂದ ಹಾಗೆಯೇ ಸುಮ್ಮನೆ ಕಲಿತಿರುತ್ತಾರೆ.

ಈ ಮಣ್ಣಿನ ಆಭರಣಗಳನ್ನು ತಯಾರಿಸಲು ಮಣ್ಣು, ವಾಯರ್, ಬಣ್ಣಗಳು, ದಾರ, ತಂತಿಗಳು ಬೇಕಾಗುವ ಸಾಮಗ್ರಿಗಳಾಗಿದ್ದು, ಸಾಮಾನ್ಯವಾಗಿ ನಮ್ಮ ಸುತ್ತಮುತ್ತಲಿನಲ್ಲಿ ದೊರೆಯುವ ಮಣ್ಣನ್ನೇ ಬಳಸುವರು. ಆ ಮಣ್ಣನ್ನು ನೀರಿನಲ್ಲಿ ವಾರಗಟ್ಟಲೆ ನೆನೆ ಹಾಕಿ, ಬಟ್ಟೆ ಇಂದ ಸೋಸಿ, ಅದರಿಂದ ನುಣುಪಾದ ಮಣ್ಣನ್ನು ಸಂಗ್ರಹಿಸಿ, ಒಣಗಿಸಿ, ಹಿಟ್ಟಿನ ಹದಕ್ಕೆ ತಗೊಂಡು ಬಂದು, ಅದಕ್ಕೆ ರೂಪವನ್ನು ಕೊಟ್ಟು, ಅವುಗಳನ್ನು ನೆರಳಲ್ಲಿ ಒಣಗಿಸುವರು, ಬೆಂಕಿಯಲ್ಲಿ ಸುಡುವರು. ಆ ನಂತರ ಅದಕ್ಕೆ ವಿವಿಧ ಬಣ್ಣಗಳನ್ನು ಹಚ್ಚುವರು. ತದನಂತರ ಪೋಣಿಸುವರು. ಇದು ಮಣ್ಣಿನ ಆಭರಣಗಳನ್ನು ಮಾಡಲಿಕ್ಕೆ ಇರುವ ವಿವಿಧ ಹಂತಗಳಾಗಿವೆ. ಇದು ಎರಡು ವಾರಗಳ ಸಮಯವನ್ನು ಇದು ತೆಗೆದುಕೊಳ್ಳುವುದು.

ಸಾವಿರಕ್ಕೂ ಹೆಚ್ಚು ವಿನ್ಯಾಸದ ಆಭರಣಗಳನ್ನು ಮಾಡಿರುವ ನೀಲಿ ಅವರು ಮೂಗುತಿ, ಜುಮ್ಕಾ, ಕಾಲಿನಗೆಜ್ಜೆ, ಸೊಂಟದ ಪಟ್ಟಿ, ತೋಳಬಂದಿ, ಬೈತಲೆ ಬೊಟ್ಟು, ಕತ್ತಿನ ಸರಗಳನ್ನು ಇನ್ನು ಮುಂತಾದ ಬಗೆ ಬಗೆಯ ಮಣ್ಣಿನ ಆಭರಣಗಳನ್ನು ಮಾಡಿದ್ದಾರೆ. ವಿಶೇಷವಾಗಿ ಉತ್ತರ ಕರ್ನಾಟಕ ಶೈಲಿಯ ಸರಗಳು, ಕೊಡಗಿನ ಶೈಲಿಯ ಸರಗಳು, ಮೈಸೂರು, ಮಂಡ್ಯ ಇನ್ನು ತರಹವೇವಾರಿ ಶೈಲಿಯ ಸರಗಳನ್ನು ಇವರು ಮಾಡುವುದರಲ್ಲಿ ಪರಿಣಿತರಾಗಿದ್ದಾರೆ. ತಾವು ತಯಾರಿಸಿದಮಣ್ಣಿನ ಆಭರಣಗಳನ್ನು ತಾನೇ ತೊಟ್ಟು, ತಾವೇ ಮಾಡೆಲ್ ಆಗಿ,

ಚೆಂದದ ಹಾಡಿಗೆ ಅಭಿನಯಿಸಿ, ವಿಡಿಯೋ ಮಾಡಿ ಸಾಮಾಜಿಕ ಜಾಲತಾಣಗಳಲ್ಲಿ ಪ್ರಚಾರ ಮಾಡುವರು.

ವಿವಿಧ ಸಾಮಾಜಿಕ ಜಾಲತಾಣಗಳಲ್ಲಿ ಇವರ ಮಣ್ಣಿನ ಆಭರಣಗಳು ವೈರಲ್ ಆಗಿದ್ದು, ಆ ಮೂಲಕ ಸಾವಿರಾರು ನಮೂನೆಯ ಮಣ್ಣಿನ ಆಭರಣಗಳು ಮಾರಾಟವಾಗಿವೆ. ಇವರು ತಯಾರಿಸಿದ ಮಣ್ಣಿನ ಆಭರಣಗಳು ಕ್ಯಾಲಿಫೋರ್ನಿಯಾ, ಲಂಡನ್ ಮೊದಲಾದ ನಗರಗಳಿಗೆ ರಫ್ತಾಗುವವು! ಅಲ್ಲದೆ ಇಪ್ಪತ್ತಕ್ಕೂ ಅಧಿಕ ಬ್ಯಾಚ್‌ನಲ್ಲಿ ಈ ಕಲೆಯನ್ನು 400 ಗಿಂತ ಅಧಿಕ ಹೆಣ್ಣುಮಕ್ಕಳಿಗೆ ಮಣ್ಣಿನ ಆಭರಣಗಳನ್ನು ಮಾಡುವುದನ್ನು ಕಲಿಸಿದ್ದಾರೆ.

ಇವರ ವಿಶಿಷ್ಟ ಕಲೆಗೆ, ಸಾಧನೆಗೆ 'ಮಹಿಳಾ ಸಾಧಕಿ' ಸೇರಿದಂತೆ ಅನೇಕ ಪ್ರಶಸ್ತಿ, ಪುರಸ್ಕಾರಗಳು, ಸನ್ಮಾನಗಳು ಒಲಿದು ಬಂದಿವೆ. ನೀಲಿ ಅವರ ಬದುಕಿನ ಉತ್ಸಾಹವು ಇತರೆ ಹೆಣ್ಣುಮಕ್ಕಳಿಗೆ ಮಾದರಿಯಾಗಿದೆ.



438 ದಿನಗಳ ಕಾಲ ಸಮುದ್ರದಲ್ಲಿ ಸಿಕ್ಕಿಹಾಕಿಕೊಂಡ ವ್ಯಕ್ತಿಯೊಬ್ಬನ ಅಸಾಧಾರಣ ಸಾಹಸಗಾಥೆಯು, ಎಲ್ಲರಲ್ಲೂ ಸ್ಫೂರ್ತಿ ತುಂಬಬಲ್ಲದು, ಬದುಕಿನ ಪಯಣವನ್ನು ಎದುರಿಸಲು ಧೈರ್ಯ ನೀಡಬಲ್ಲದು

# ಸಮುದ್ರದಲ್ಲಿ 438 ದಿನ!

● ಡಾ. ಜಗದೀಶ ಮಾನೆ

ಪೃಥ್ವಿಯ ಮೇಲಿರುವ ಐದು ಮಹಾಸಾಗರಗಳ ಪೈಕಿ ಶಾಂತಿ ಸಾಗರ ಅತಿ ವಿಶಾಲವಾದುದು. ಸುಮಾರು 155 ಮಿಲಿಯನ್ ಚದರ ಕಿ.ಮೀ. ವಿಸ್ತೀರ್ಣ ಹೊಂದಿದೆ. ಇಂತಹ ದೊಡ್ಡ ಮಹಾಸಾಗರದ ಮಧ್ಯೆ 439 ದಿನ ಸಿಲುಕಿದ ವ್ಯಕ್ತಿಯೊಬ್ಬ ತನಗೆ ಗೊತ್ತಿಲ್ಲದಂತೆ ವಿಶ್ವ ದಾಖಲೆಯನ್ನೇ ನಿರ್ಮಿಸಿಬಿಟಿದ! ಅಂತಹ ವ್ಯಕ್ತಿಯ ಬದುಕಿನ ರೋಚಕ ಕಥೆಯಿದು.




ಮೆಕ್ಸಿಕೊ ದೇಶದ 'ಕೋಸ್ಟಾಜ' ಎಂಬ ಗ್ರಾಮದ ಜೋಸ್ ಸಲ್ವಡೊರ್ ಅಲ್ವರೇಂಗಾ ಎಂಬ 36 ವರ್ಷದ ವ್ಯಕ್ತಿ ಮೀನು ಹಿಡಿಯಲು 12ರ ನವಂಬರ್ 2012 ರಂದು ತನ್ನ ಸ್ನೇಹಿತನ ಜೊತೆ ತೆರಳುತ್ತಾನೆ. ಮೀನು ಹಿಡಿಯುತ್ತಾ ಸಮುದ್ರ ತೀರದಿಂದ 120 ಕಿಲೋಮೀಟರ್ ವರೆಗೆ ಪ್ರಯಾಣ ಬೆಳೆಸಿದ್ದರು. ಇನ್ನೇನು ವಾಪಸ್ ಬರಬೇಕು ಅನ್ನುವಷ್ಟರಲ್ಲಿ ಆ ಸಮುದ್ರದಲ್ಲೊಂದು ಸುಂಟರಗಾಳಿ ಅವರನ್ನು ಸುತ್ತುವರಿಯುತ್ತದೆ. ಇದರಿಂದ ಗಾಬರಿಗೊಂಡ ಸ್ನೇಹಿತರಿಬ್ಬರೂ ಮೀನು ಹಿಡಿಯುವುದನ್ನು ಅಷ್ಟಕ್ಕೆ ನಿಲ್ಲಿಸಿ, ತಮ್ಮ ಪ್ರಾಣ ಉಳಿಸಿಕೊಳ್ಳುವುದಕ್ಕಾಗಿ ಮೆಕ್ಸಿಕೋದತ್ತ ತಮ್ಮ ಬೋಟನ್ನು ತಿರುಗಿಸುತ್ತಾರೆ. ಹೀಗೆ ಸತತ ಆರು ಗಂಟೆಗಳಕಾಲ ವೇಗವಾಗಿ ಬೋಟ್ ಚಲಿಸುತ್ತಾರೆ. ಸಮುದ್ರದ ತೀರ ಇನ್ನೇನು ಕೇವಲ 20 ಕಿ.ಮೀ ಅಷ್ಟೇ ಬಾಕಿ ಇತ್ತು. ಕಣ್ಮುಂದೆ ಅವರ ಊರು ಕೂಡಾ ಕಾಣಿಸುತ್ತಿತ್ತು. ದುರಾದೃಷ್ಟವೇನೋ ಗೊತ್ತಿಲ್ಲ! ಅವರಿದ್ದ ಬೋಟ್ ಇಂಜಿನ್ ಕೆಟ್ಟು ಹೋಗುತ್ತದೆ.

## ರೇಡಿಯೋ ಬ್ಯಾಟರಿ ಖಾಲಿ

ಆಗ ತಮ್ಮ ಬಳಿ ಇದ್ದ ರೇಡಿಯೋ ಸಹಾಯದಿಂದ ತಮ್ಮ ಮಾಲೀಕನಿಗೆ ತಾವಿರುವ ಲೈವ್ ಲೋಕೆಶನ್ ಕಳಿಸುತ್ತಾರೆ. ಆ ಸಂದರ್ಭದಲ್ಲಿ ರೇಡಿಯೋನ ಬ್ಯಾಟರಿ ಕೂಡಾ ಖಾಲಿಯಾಗಿಬಿಡುತ್ತದೆ. ಇಬ್ಬರೂ ಸ್ನೇಹಿತರು ಈ ಶಾಕ್ ನಲ್ಲಿರುವಾಗಲೇ, ವಿರುದ್ಧ ದಿಕ್ಕಿನಿಂದ ಬಲವಾಗಿ ಬೀಸುತ್ತಿದ್ದ ಗಾಳಿಯು ಅವರನ್ನು ಅದೆಷ್ಟು ದೂರದವರೆಗೆ ತಳ್ಳಿತೆಂದರೆ, ಅವರಿಗೆ ಕಾಣಿಸುತ್ತಿದ್ದ ಸಮುದ್ರದ ತೀರ ಕೂಡಾ ಮರೆಯಾಗಿತ್ತು. ಅವರ ಮಾಲೀಕ ಒಂದು ತಂಡವನ್ನು ನೇಮಿಸಿ ಕಳುಹಿಸಿದ್ದ. ತುಂಬಾ ಸಮಯ ಕಳೆದು ಹೋಗಿದ್ದರಿಂದ ಅವರಿರುವ ಸುಳಿವು ಮಾತ್ರ ಆ ತಂಡಕ್ಕೆ ಸಿಗಲೇ ಇಲ್ಲ.

ಅದೆಲ್ಲೋ ಸಮುದ್ರ ಮಧ್ಯೆ ಸಿಕ್ಕಿಹಾಕಿಕೊಂಡ ಆ ಸ್ನೇಹಿತರಿಬ್ಬರ ಬದುಕು ದುರ್ಭರವಾಗುತ್ತದೆ. ದಿನಗಳು ಕಳೆಯುತ್ತಿದ್ದಂತೆ ಜೋಸ್ ಮತ್ತು ಆತನ ಸ್ನೇಹಿತನಿಗೆ ಆ ಸಮುದ್ರದಲ್ಲಿ ಬದುಕುವುದು ತೀರಾ ಕಷ್ಟವಾಗಲಾರಂಭಿಸುತ್ತದೆ. ಐದಾರು ದಿನ ಕಳೆಯುವ ಹೊತ್ತಿನಲ್ಲಿ ಆ ಗಾಳಿ ಅವರನ್ನು ಸಮುದ್ರ ತೀರದಿಂದ ಸರಿ ಸುಮಾರು 4,000 ಕಿಲೋಮೀಟರ್ ದೂರದವರೆಗೆ ಎಳೆದುಕೊಂಡು ಹೋಗಿತ್ತು. ಯಾವ ದಿಕ್ಕಿನಲ್ಲಿ ನೋಡಿದರೂ ಅವರಿಗೆ ಕೇವಲ ನೀರು ಬಿಟ್ಟರೆ ಬೇರೇನೂ ಕಾಣಿಸುತ್ತಿರಲಿಲ್ಲ.

ತಂದಿದ್ದ ಅಲ್ಪ, ಸ್ವಲ್ಪ ಆಹಾರವಂತೂ ಅವತ್ತೇ ಖಾಲಿಯಾಗಿತ್ತು. ಏನೂ ತಿಳಿಯದಿದ್ದಕ್ಕೆ ಬೋಟ್ ಮೇಲೆ ಹಾರಿ ಬರುತ್ತಿದ್ದ ಪಕ್ಷಿಗಳನ್ನೇ ಕೊಂದು ಅದರ ಮಾಂಸವನ್ನು ತಿನ್ನಲು ಆರಂಭಿಸುತ್ತಾರೆ. ಪಕ್ಷಿಗಳು ಸಿಗದಿದ್ದ ದಿನ ಮೀನುಗಳನ್ನು ಹಿಡಿದು ಹಾಗೆ ತಿನ್ನುತ್ತಿದ್ದರು. ಸಮುದ್ರದಲ್ಲಿ ತೇಲಿ ಬಂದಿದ್ದ ವಾಟರ್ ಬಾಟಲ್ ಗಳಿಂದ ಮಳೆ ನೀರನ್ನು ಸಂಗ್ರಹಿಸಿ ಕುಡಿಯುತ್ತಿದ್ದರು. ಕೆಲ ದಿನ ಮಳೆ ಬೀಳದೆ ಇದ್ದಾಗ ಆಮೆ, ಮೀನುಗಳ ರಕ್ತವನ್ನು ಕುಡಿಯುತ್ತಾ ತಮ್ಮ ನೀರಡಿಕೆಯ ದಾಹ ತನಿಸಿಕೊಳ್ಳುತ್ತಿದ್ದರು.

ಹೀಗೆ ಅವರ ಬದುಕಿನ ದಿನಗಳು ತಿಂಗಳುಗಳಾಗಿ ಬದಲಾಗುತ್ತವೆ. ಆ ಸಂದರ್ಭದಲ್ಲಿ ಉಂಟಾದ ಖಿನ್ನತೆಯಿಂದಾಗಿ, ಜೋಸ್‌ನ ಸ್ನೇಹಿತ ಮೂರು ತಿಂಗಳ ನಂತರ ಸಮುದ್ರಕ್ಕೆ ಹಾರಿ ಆತ್ಮಹತ್ಯೆ ಮಾಡಿಕೊಳ್ಳುತ್ತಾನೆ. ಜೋಸ್‌ಗೂ ಸಾಕಷ್ಟು ಬಾರಿ ತಾನೂ ಸಾಯುವ ಆಲೋಚನೆಗಳು ಬರುತ್ತವೆ. ಆದರೆ, ಆತ ಈ ಮಹಾಸಾಗರದ ಜತೆಗೆ ತನ್ನ ಹೋರಾಟವನ್ನು ನಡೆಸಲೇಬೇಕೆಂಬ ದೃಢ ನಿರ್ಧಾರ ಮಾಡುತ್ತಾನೆ.

## 8000 ಕಿ.ಮೀ. ಏಕಾಂಗಿ ಪಯಣ

ಆ ಭಯಂಕರವಾದ ಕರಾಳ ಸಮುದ್ರದಲ್ಲಿ ಒಬ್ಬನೇ ಬದುಕುತ್ತಾ ಜೀವನ ಸಾಗಿಸಲು ಪ್ರಾರಂಭಿಸಿದ. ಆರು ತಿಂಗಳ ನಂತರ, ದೂರದಲ್ಲೊಂದು ಹಡಗು ಕಾಣಿಸುತ್ತದೆ. ಜೋಸ್ ಆ ಹಡಗಿನತ್ತ ಚಲಿಸುತ್ತ ಜೋರಾಗಿ ಕೂಗುತ್ತಾನೆ. ಆದರೆ, ಇದ್ಯಾವುದೂ ಹಡಗಿನೊಳಗಿದ್ದವರಿಗೆ ಕೇಳಿಸುವುದೂ ಇಲ್ಲ, ಮತ್ತು ಕಾಣಿಸುವುದೂ ಇಲ್ಲ. ಅದಾಗಲೇ ಜೋಸ್ ಸಮುದ್ರ ತೀರದಿಂದ 8000 ಕಿ.ಮೀ ನಷ್ಟು ದೂರಕ್ಕೆ ಬಂದಿದ್ದ.

14 ತಿಂಗಳು ಕಳೆದ ನಂತರ ಜನವರಿ 30-2024ರ ಹೊತ್ತಿಗೆ ಆ ಸಮುದ್ರದಲ್ಲಿ ತೆಂಗಿನಕಾಯಿಗಳು ತೇಲಿ ಬರುತ್ತಿರುವುದು ಆತನಿಗೆ ಕಾಣಿಸಿತು. ಹತ್ತಿದಲ್ಲೊಂದು ದ್ವೀಪ ಇರುವ ಕುರಿತು ಊಹಿಸಿ, ಅತ್ತ ಪಯಣಿಸುತ್ತಾನೆ. ಆಗ ಅಲ್ಲಿ ದ್ವೀಪವೊಂದು ಕಾಣಿಸುತ್ತದೆ. ಅದೇ ಸಂತೋಷದಲ್ಲಿ ಸಮುದ್ರಕ್ಕೆ ಹಾರಿದ ಜೋಸ್ ಸತತ 14 ತಿಂಗಳ ನಂತರ ಆತ ಭೂಮಿಯ ಮೇಲೆ ತನ್ನ ಕಾಲುಗಳನ್ನು ಇರಿಸಿದ. ಈ ದ್ವೀಪವು, ಜೋಸ್ ಪ್ರಯಾಣಿಸಿದ ಸ್ಥಳದಿಂದ ಸರಿಸುಮಾರು ಹನ್ನೊಂದು ಸಾವಿರ ಕಿಲೋಮೀಟರ್ ದೂರದಲ್ಲಿದೆ. ನಂತರ ಆತನನ್ನು ತನ್ನ ದೇಶಕ್ಕೆ ಕಳುಹಿಸಲಾಗುತ್ತದೆ.

ಹೀಗೆ ಸತತವಾಗಿ 14 ತಿಂಗಳ ಕಾಲ ತನ್ನ ಜೀವನ ಮರಣದ ಹೋರಾಟದಲ್ಲಿ ಕೊನೆಗೂ ಬದುಕಿ ಬಂದ ಜೋಸ್ ಮುಂದೆ ದೊಡ್ಡ ಶಾಕ್ ಎದುರಾಗುತ್ತದೆ. ಜೋಸ್ ತನ್ನ ಸ್ನೇಹಿತನನ್ನು ಕೊಂದಿದ್ದಾನೆಂದು ಠಾಣೆಯಲ್ಲಿ ಕೇಸ್ ದಾಖಲಾಗುತ್ತದೆ. ಕೆಲ ತಿಂಗಳ ಕಾನೂನು ಹೋರಾಟದ ನಂತರ ನಿರಪರಾಧಿ ಎಂದು ಹೊರಬಂದ ಜೋಸ್ '438 ದಿನಗಳು ಎಂಬ ಪುಸ್ತಕ ಬರೆಯುತ್ತಾನೆ. ಆ ಪುಸ್ತಕದಲ್ಲಿ ಆತನ ಬವಣೆಯ ವಿವರಗಳಿವೆ.

ಬದುಕಿನಲ್ಲಿ ಭರವಸೆಯಿಟ್ಟು, ಮುಂದುವರಿಯುತ್ತಲೇ ಇದ್ದರೆ ದಡ ಸೇರುತ್ತೇವೆ ಎಂಬುದಕ್ಕೆ ಈ ಪುಸ್ತಕವು ಒಂದು ಉದಾಹರಣೆ. ಜೋಸ್‌ನ ಅಸಾಧಾರಣ ಸಾಹಸಗಾಥೆ ಮತ್ತು ಜೀವನಪ್ರೀತಿಯು ಎಲ್ಲರಲ್ಲೂ ಸ್ಫೂರ್ತಿ ತುಂಬಬಲ್ಲದು.

# ಬಿಡಿಸಲಾಗದ ಸುಳಿ

● ಸುಮನಾ

ಮೊಬೈಲ್ ತನ್ನ ತೆಕ್ಕೆಯೊಳಗೆ ನಮ್ಮ ಮಕ್ಕಳನ್ನು ಬಂಧಿಯಾಗಿಸಿ, ಶಾಶ್ವತ ಖೈದಿಗಳನ್ನಾಗಿಸಿದೆ. ಮಕ್ಕಳು ಮೊಬೈಲ್ ನೋಡುತ್ತಾ ತಲ್ಲೀನರಾಗುವ ವಿದ್ಯಮಾನವು ಬಹುತೇಕ ಅಮ್ಮಂದಿರಿಗೆ ವರದಾನ; ಆದರೆ ಮಾಯಾವಿ ಮೊಬೈಲು ಮಕ್ಕಳ ಮನಕ್ಕೆ, ಕಣ್ಣಿಗೆ, ಬುದ್ಧಿಗೆ ಯಾವ ಹಾನಿ ಮಾಡುತ್ತದೋ ಗೊತ್ತಾಗದು.

ಅಂತರ್ಜಾಲ ಮತ್ತು ಮೊಬೈಲ್‌ಗಳು ಒಂದು ಭಯಾನಕ ಕಾಂಬಿನೇಷನ್. ಇದಕ್ಕೆ ಸಾಮಾಜಿಕ ಜಾಲತಾಣ ಸೇರಿದರೆ ಇನ್ನಷ್ಟು ಬಿಗಿಯಾದ ಬಂಧ; ಇದಕ್ಕೆ ಆನ್‌ಲೈನ್ ಆಟಗಳು ಸೇರಿಕೊಂಡರಂತೂ, ಅದೊಂದು ಡೆಡ್ಲಿ ಕಾಂಬಿನೇಷನ್. ಆನ್‌ಲೈನ್ ಆಟದಂತಹ ಗೀಳಿಗೆ ಮಕ್ಕಳು ಸಿಕ್ಕಿಬಿದ್ದರೆ, ಅದೊಂದು ತೀವ್ರ, ಚಕ್ರವ್ಯೂಹದ ಸುಳಿ ಎನಿಸುತ್ತದೆ; ಅಂತಹ ಸುಳಿಗೆ ಸಿಕ್ಕಿಕೊಂಡ ಮಕ್ಕಳ ಮನಸ್ಸನ್ನು ಹೊರತರುವುದು ಬಹಳ ಕಷ್ಟ ಎಂದು ಮನೋವಿಜ್ಞಾನಿಗಳು ಹೇಳಿದ್ದಾರೆ. ತೀವ್ರವಾದ ಮೊಬೈಲ್ ಮತ್ತು ಆನ್ ಲೈನ್ ಆಟಗಳಿಗೆ, ರೀಲ್ಸ್‌ನಂತಹ ವ್ಯಸನಗಳಿಗೆ ಸಿಲುಕಿಕೊಂಡ ಮಕ್ಕಳ ಮನಸ್ಸು, ಬೇರೊಂದೇ ವಿರ್ಚುವಲ್ ಲೋಕದಲ್ಲಿ ವಿಹರಿಸತೊಡಗುತ್ತದೆ; ಇದರಿಂದ ಹೊರಬರಲು ಅವರಿಗೆ ತುಂಬಾ ಕಷ್ಟ; ಮುಂದುವರಿದ ದೇಶಗಳಲ್ಲಿ ಇಂತಹ ಗೀಳಿಗೆ ಒಳಗಾದ ಮಕ್ಕಳಗನ್ನು ಸರಿದಾರಿಗೆ ತರಲು ಮನೋವೈದ್ಯರ ಸಹಾಯವನ್ನೂ ಬಳಸಲಾಗಿದೆ. ಇದು ನಮ್ಮ ದೇಶದವರಿಗೆ ಪಾಠವಾಗಬೇಕು. ಆದ್ದರಿಂದ, 16 ವರ್ಷದ ಒಳಗಿನ ಮಕ್ಕಳು ಸಾಮಾಜಿಕ ಜಾಲತಾಣ, ರೀಲ್ಸ್, ಇನ್ಸ್ಟಾ ಮೊದಲಾದ ಮಾಧ್ಯಮಗಳಿಗೆ ದೂರವಿರುವಂತೆ ಕಾನೂನು ತರುವುದು ಸೂಕ್ತ ಎನಿಸುತ್ತದೆ.

ಮೊಬೈಲು ಮರುಳು ಮಾಡುವ ಮಾಯಾವಿ. ಮೇಲ್ನೋಟಕ್ಕೆ ಕೇಳಿದ್ದನ್ನು ಕೊಡುವ ಕಲ್ಪವೃಕ್ಷ ದಂತೆ ಭಾಸವಾಗಿರುವುದೂ ಅಚ್ಚರಿಯೆನಿಸುವುದಿಲ್ಲ. ಮುಂದಿನ ದಿನಗಳಲ್ಲಿ ಪೋಷಕರಿಗೆ ಇದು ಚಿಂತೆಯಲ್ಲಿ ಮುಳುಗಿಸುವ ಶರಧಿಯಾಗುವ ದಿನಗಳು ದೂರವಿಲ್ಲ. ಆಸ್ಟ್ರೇಲಿಯಾದಲ್ಲಿ ಮಕ್ಕಳ ಮಾನಸಿಕ ಆರೋಗ್ಯವನ್ನು ಕಾಪಾಡುವ ನಿಟ್ಟಿನಲ್ಲಿ 16 ವರ್ಷದೊಳಗಿನ ಮಕ್ಕಳು ಸಾಮಾಜಿಕ ಜಾಲ ತಾಣ ಬಳಸದಂತೆ ನಿಯಂತ್ರಣ ವಿಧೇಯಕ ರೂಪಿಸಲಾಗಿದೆ; ಇದು ಒಳ್ಳೆಯ ಬೆಳವಣಿಗೆ. ಇದು ನಮ್ಮ ದೇಶಕ್ಕೂ ಅನುಕರಣೀಯವೆನಿಸುತ್ತದೆ.

# ಅವೆನ್ಯೂ ರೋಡ್
ನಿತ್ಯದ ವಿಂಡೋ ಶಾಪಿಂಗ್

ವಿಶ್ವವಾಣಿ
23.01.2025 ಗುರುವಾರ
vishwavani.news


## ದಿನ ದರ್ಶಿಕೆ
ಪುಷ್ಯ ಮಾಸ, ಕೃಷ್ಣ ಪಕ್ಷ, ವಿಶಾಖ-ಅನುರಾಧ ನಕ್ಷತ್ರ, ರಾಹುಕಾಲ: ಅಪರಾಹ್ನ 1.53-3.13, ಸೂರ್ಯಾಸ್ತ: ಮುಂಜಾನೆ 6.50, ಸೂರ್ಯಾಸ್ತ ಸಂಜೆ: 6.12, ಗಂಡ-ವೃದ್ಧಿ ಯೋಗ, ಗಿರಿಜ, ವಣಿಜ, ವಿಷ್ಟಿ-ಕರಣ, ಸಂಜೆ 7.24-9.10

## ಮನೆಮದ್ದು
ಏಲಕ್ಕಿ ದುರ್ವಾಸನೆಯನ್ನು ದೂರ ಮಾಡುತ್ತದೆ. ಕಪ್ಪು ಏಲಕ್ಕಿಯು ದೇಹದಲ್ಲಿನ ವಿಷಕಾರಿ ಅಂಶಗಳನ್ನು ಹೊರಕ್ಕೆ ಹಾಕುತ್ತದೆ. ಕಪ್ಪು ಏಲಕ್ಕಿಯನ್ನು ಜಗಿದರೆ ಅದರಿಂದ ದೇಹದಲ್ಲಿನ ವಿಷಕಾರಿ ಅಂಶಗಳು ದೂರವಾಗಿ ಚರ್ಮವು ಕಾಂತಿ ಪಡೆಯುತ್ತದೆ. ಏಲಕ್ಕಿಯನ್ನು ಫೇಸ್‌ಪ್ಯಾಕ್‌ನಲ್ಲಿ ಕೂಡ ಬಳಕೆ ಮಾಡಬಹುದು. ಉರಿಯೂತ ಶಮನಕಾರಿ ಮತ್ತು ಬ್ಯಾಕ್ಟೀರಿಯಾ ವಿರೋಧಿ ಗುಣಗಳು ಅದರಲ್ಲಿ ಇವೆ.

## ಸೌಂದರ್ಯ ಸೂತ್ರ
ರೋಸ್ ವಾಟರ್ ಮತ್ತು ಶ್ರೀಗಂಧದ ಸಂಯೋಜನೆಯ ಫೇಸ್ ಪ್ಯಾಕ್ ಕೂಡಾ ಒಂದು. ಇದು ಮುಖದಲ್ಲಿನ ಕೆಂಪಗಾಗುವಿಕೆ ಮತ್ತು ಮೊಡವೆಗಳಿಗೆ ಸಂಬಂಧಿತ ಕಿರಿಕಿರಿಯನ್ನು ಕಡಿಮೆ ಮಾಡುವಲ್ಲಿ ಸಹಾಯಕ. ಶ್ರೀಗಂಧವು ಚರ್ಮದ ರಂಧ್ರಗಳನ್ನು ಬಿಗಿಗೊಳಿಸಲು ಮತ್ತು ಕಡಿಮೆ ಮಾಡಲು ಸಹಾಯ ಮಾಡುತ್ತದೆ. ಅಷ್ಟೇ ಅಲ್ಲದೆ ಅವು ಚರ್ಮದ ರಂಧ್ರಗಳನ್ನು ಸ್ವಚ್ಛಗೊಳಿಸಲು ಸಹಾಯ ಮಾಡುತ್ತದೆ.

## ದಿನ ಭವಿಷ್ಯ

**ಮೇಷ**
ನೀವು ಧೈರ್ಯ ಶಾಲಿಗಳು, ಆದರ್ಶಗಳನ್ನು ಸಾಧಿಸಲು ಎದುರಾಗಿರುವ ಸಾಧ್ಯತೆಗಳನ್ನು ನೀವು ಉಪಯೋಗಿಸುತ್ತೀರಿ .

**ವೃಷಭ**
ಸ್ಥಿರತೆ ಮತ್ತು ಭದ್ರತೆಯು ನಿಮ್ಮ ಜೀವನದ ಪ್ರಮುಖ ಅಂಶಗಳು, ದೈಹಿಕ ಹಾಗೂ ಮಾನಸಿಕ ಶಕ್ತಿಯನ್ನು ಸದಾ ನೀವು ಹುಡುಕುತ್ತಿರುವಿರಿ.

**ಮಿಥುನ**
ವಿವಿಧ ವಿಚಾರಗಳಲ್ಲಿ ನಿಮ್ಮಲ್ಲಿ ಕುತೂಹಲ ಹೆಚ್ಚಾಗಿರುತ್ತದೆ, ಆದರೆ ಸದಾ ನೀವು ಸ್ಥಿರತೆಯನ್ನೂ ನೀವು ಬಯಸುತ್ತೀರಿ.

**ಕಟಕ**
ಆತ್ಮೀಯ ಸಂಬಂಧಗಳು ಹಾಗೂ ಮನೆಯ ಬದ್ಧತೆ ನಿಮಗೆ ಮುಖ್ಯವಾಗಿರುತ್ತವೆ. ಭಾವನಾತ್ಮಕವಾಗಿ ಉತ್ತಮ ಸಂಗಾತಿಯಾಗಿರುತ್ತೀರಿ.

**ಸಿಂಹ**
ನೀವು ದೃಢ ನಾಯಕರು, ಹಾಗಾಗಿ ಅನೇಕ ಜನರ ಜೊತೆ ಸಂಪರ್ಕ ಸಾಧಿಸುವುದರಲ್ಲಿ ಸದಾ ನಿಮ್ಮಲ್ಲಿ ವಿಶೇಷ ಕೌಶಲ್ಯವಿರುತ್ತದೆ.

**ಕನ್ಯಾ**
ನಿಖರತೆ ಮತ್ತು ಪ್ರಾಮಾಣಿಕತೆಯನ್ನು ಸದಾ ನೀವು ಬಯಸುತ್ತೀರಿ, ಹಾಗಾಗಿ ನೀವು ತೃಪ್ತಿಪಡುವ ಕಾರ್ಯಗಳಿಗಾಗಿ ಸದಾ ಶ್ರಮಿಸುತ್ತೀರಿ.

**ತುಲಾ**
ನೀವು ಸಮತೋಲನವನ್ನು ಒಪ್ಪುತ್ತೀರಿ, ಎಲ್ಲರೊಂದಿಗೆ ಸೌಮ್ಯತೆ ಮತ್ತು ನ್ಯಾಯವನ್ನು ಮೆಚ್ಚುತ್ತೀರಿ.

**ವೃಶ್ಚಿಕ**
ನೀವು ಸದಾ ಲವಲವಿಕೆಯಿಂದಿರುತ್ತೀರಿ, ಆದರೂ ನಿಮ್ಮ ಭಾವನೆಗಳನ್ನು ಬಹಿರಂಗಪಡಿಸಲು ನೀವು ಹಿಂಜರಿಯುತ್ತೀರಿ.

**ಧನು**
ಚಿಂತನೆಗಳಿಗೆ ಒರೆಹಚ್ಚುವ ಮನಸ್ಸು ನಿಮ್ಮದಾಗಿದೆ. ನಿಮ್ಮ ಜೀವನವು ಅಭ್ಯಾಸಗಳನ್ನು ಕಲಿಯಲು ಉತ್ಸಾಹದಾಗಿರುತ್ತೀರಿ.

**ಮಕರ**
ಆದರ್ಶ ವ್ಯಕ್ತಿಗಳಾಗುವ ನಿಟ್ಟನಲ್ಲಿ ಕಾರ್ಯಪ್ರವೃತ್ತರಾಗುತ್ತೀರಿ, ಸಾಧಿಸಲು ಶ್ರಮಪಟ್ಟು ಸಾಧನೆಗಳನ್ನು ಮಾಡುವತ್ತ ಕಾರ್ಯೋನ್ಮುಖರಾಗುತ್ತೀರಿ.

**ಕುಂಭ**
ಅವಲಂಬನೆಯ ಗುಣ ನಿಮ್ಮದಲ್ಲ. ಹಾಗಾಗಿ ಅದು ನಿಮ್ಮ ವ್ಯಕ್ತಿತ್ವಕ್ಕೆ ದೂರ ಎಂಬುದನ್ನು ಮನಗಾಣುವಿರಿ.

**ಮೀನ**
ನೀವು ಸದಾ ಸಾಧನೆಯ ಕನಸುಗಳನ್ನು ಕಾಣಲು ಪ್ರಯತ್ನಿಸುತ್ತೀರಿ, ಆ ಕಾರಣಕ್ಕಾಗಿ ಭಾವನಾತ್ಮಕವಾಗಿ ಮುಕ್ತವಾಗುವುದಕ್ಕೆ ಯೋಚಿಸುತ್ತಿರುತ್ತೀರಿ.

● ಕೆ.ಬಿ.ಸಂತೋಷ್ ಗುರೂಜಿ

## ಈ ದಿನ ಇತಿಹಾಸ

- 1897: ಭಾರತದ ಸ್ವಾತಂತ್ರ್ಯ ಹೋರಾಟಗಾರ ಸುಭಾಷ್ ಚಂದ್ರ ಬೋಸ್ ಅವರ ಜನ್ಮದಿನ
- 1957: ಭಾರತದ ರಾಜಕಾರಣಿ ಮತ್ತು ರಾಜತಾಂತ್ರಿಕ ಅಧಿಕಾರಿ ವಿ. ಕೆ. ಕೃಷ್ಣ ಮೆನನ್‌ರವರು ಸಂಯುಕ್ತ ರಾಷ್ಟ್ರ ಸಭೆಯಲ್ಲಿ 8 ಗಂಟೆಗಳ ಸುದೀರ್ಘ ಭಾಷಣ ಮಾಡಿದರು.

## ಚಿತ್ರಸ್ಫೂರ್ತಿ



ಪ್ರಯಾಗ್‌ರಾಜ್‌ನಲ್ಲಿ ನಡೆಯುತ್ತಿರುವ ಮಹಾ ಕುಂಭಮೇಳದಲ್ಲಿ ಭಾಗವಹಿಸಿದ ಭಕ್ತನೋರ್ವ ತನ್ನ ಬಾಯಿಯಿಂದ ಬೆಂಕಿ ಉಗುಳುತ್ತಿರುವುದು. (ಚಿತ್ರಕೃಪೆ: ದಿ ಗಾರ್ಡಿಯನ್)

# ಭಗವದ್ಗೀತೆಯ ಸಾರ ತಿಳಿದವರು

**ಒಂದೊಳ್ಳೆ ಮಾತು**

ರೂಪಾ ಗುರುರಾಜ್
rgururaj628@gmail.com



'ಒಂದೊಳ್ಳೆ ಮಾತು' ಈಗ Vishwavani TV Special ಯುಟ್ಯೂಬ್ ಚಾನೆಲ್‌ನಲ್ಲಿ!


ಒಬ್ಬ ರಾಜ ತನಗೆ ಭಗವದ್ಗೀತೆಯನ್ನು ಯಾರು ಅರ್ಥ ಮಾಡಿಸುವರೋ, ಅವರಿಗೆ ಅರ್ಧ ರಾಜ್ಯ ಕೊಡುವುದಾಗಿ ಘೋಷಣೆ ಮಾಡಿದ. ಇದನ್ನು ಕೇಳಿ ಅನೇಕ ಪಂಡಿತರು ರಾಜನಿಗೆ ಗೀತೆ ಕಲಿಸಲು ಬಂದರು. ಆದರೆ ರಾಜನ ಒಂದೆರಡು ಪ್ರಶ್ನೆಗಳಿಗೆ ಹೆದರಿ ಹಿಂದಿರುಗಿದರು.

ಒಬ್ಬ ಮಹಾ ಪಂಡಿತ ಬಂದು ರಾಜನ ಪ್ರಶ್ನೆಗಳಿಗೆ ಉತ್ತರ ಹೇಳಿ ಗೀತೆಯನ್ನು ಕಲಿಸಿದ. ರಾಜ ಆತನ ವಿದ್ವತ್ತನ್ನು ಮೆಚ್ಚಿ ದಕ್ಷಿಣೆಯನ್ನು ನೀಡಿ ಗೌರವಿಸಿದ, ಆದರೆ ಅರ್ಧ ರಾಜ್ಯ ಕೊಡಲಿಲ್ಲ.

ಪಂಡಿತ ಪಟ್ಟು ಹಿಡಿದ. ಗೀತೆ ನನಗೆ ಸರಿಯಾಗಿ ಅರ್ಥವಾಗಿಲ್ಲವೆಂದು ರಾಜ ಜಾರಿಕೊಂಡ, ಪಂಡಿತ ಬಿಡಲಿಲ್ಲ, ತೀರ್ಮಾನಕ್ಕೆ ವಿಂಧ್ಯಾಚಲದ ತಪೋವನದಲ್ಲಿರುವ ಮುನಿಯ ಬಳಿ ಕರೆದೊಯ್ದ. ಆಗ ಮುನಿಗಳು 'ನೀನು ರಾಜನಿಗೆ ಗೀತೆ ಕಲಿಸಿದ್ದು ನಿಜವೇ?' ಎಂದು ಪ್ರಶ್ನಿಸಿದರು. 'ಪ್ರತಿ ಪದದ ಪ್ರಕೃತಿ ಪ್ರತ್ಯಯ ಭಿನ್ನ ಭಿನ್ನ, ಅರ್ಥ ಎಲ್ಲಾ ತಿಳಿಸಿದ್ದೇನೆ' ಎಂದ ಪಂಡಿತ. ರಾಜನಿಗೆ ಪ್ರಶ್ನಿಸಿದಾಗ ಹೌದೆಂದು ಒಪ್ಪಿದ. ಆಗ ಮುನಿಗಳೆಂದರು, 'ನೀನು ಕಲಿಸಿಯೂ ಇಲ್ಲ, ರಾಜ ಅದನ್ನು ಕಲಿತೂ ಇಲ್ಲ. ಗೀತೆಯನ್ನು ನೀನು ತಿಳಿದವನಾದರೆ ನಿನಗೆ ರಾಜ್ಯದ ಲೋಭವೇಕೆ?' ರಾಜ 'ಗೀತೆಯನ್ನು ಅರ್ಥ ಮಾಡಿಕೊಂಡಿದ್ದರೆ ಕೊಟ್ಟ ಮಾತು ಉಳಿಸಿಕೊಳ್ಳಲು ಹಿಂಜರಿಕೆ ಏಕೆ?' ಎಂದರು.

ನಾಲಿಗೆ-ಹೃದಯದಲ್ಲಿ ಶುದ್ಧಿ ಇಲ್ಲದ ಮೇಲೆ ಗೀತೆ ಕಲಿತರೇನು? ಎಂದರು. ರಾಜ, ಪಂಡಿತ ಇಬ್ಬರಿಗೂ ಕೂಡ ಮುನಿಗಳ ಮಾತು ಅರ್ಥವಾಗಿ ತಲೆತಗ್ಗಿಸಿದರು. ನಿಜ ಜೀವನದಲ್ಲೂ ನಮ್ಮ ಸುತ್ತಲೂ ಅನೇಕ ವಿದ್ಯಾವಂತರನ್ನು ನೋಡುತ್ತೇವೆ. ಹೆಸರಿಗೆ ಡಿಗ್ರಿ, ಡಬಲ್ ಡಿಗ್ರಿ ಮಾಡಿಕೊಂಡಿರುತ್ತಾರೆ. ಆದರೆ ಅವರ ಓದಿಗೂ, ಅವರ ಸಂಸ್ಕಾರಕ್ಕೂ ಸಂಬಂಧವೇ ಇರುವುದಿಲ್ಲ. ಹೆಚ್ಚು ಓದಿದವರಿಗೂ ಕೆಲವೊಮ್ಮೆ ಸಾಮಾನ್ಯ ಜ್ಞಾನ ಕಡಿಮೆ ಇರುವುದನ್ನು ನೋಡುತ್ತೇವೆ. ವಿದ್ಯಾರ್ಜನೆ ಮಾಡಿದಾಕ್ಷಣ ಜೀವನ ಮೌಲ್ಯಗಳು ಮನವರಿಕೆ ಆಗಿರುತ್ತವೆ ಎಂದು ಯಾವ ಗ್ಯಾರಂಟಿಯೂ ತಂದೆ-ತಾಯಿಗಳು ಮಕ್ಕಳನ್ನು ಬೆಳೆಸುವಾಗ ಬದುಕಿಗೆ ಬೇಕಾದಂಥ ಅನೇಕ ವಿಷಯಗಳನ್ನು ಅವರಿಗೆ ತಿದ್ದಿ ತೀಡಿ ಬೆಳೆಸಬೇಕಾಗುತ್ತದೆ. ಬದುಕು ನಡೆಸಲು ವಿದ್ಯಾರ್ಜನೆ ಒಂದೇ ಸಾಲದು. ಜೀವನ ಕೌಶಲ್ಯ, ಸಾಮಾನ್ಯ ಜ್ಞಾನ 10 ಜನರೊಡನೆ ಬೆರೆತು ಬದುಕುವ ಕಲೆ ಎಲ್ಲವೂ ಗೊತ್ತಿರಬೇಕಾಗುತ್ತದೆ.

ಅದಿಲ್ಲದೆ ಹೋದರೆ ಅವರು ಅದೆಂತಹ ಮೇಧಾವಿಗಳಾದರೂ, 10 ಜನರೊಡನೆ ಬೆರೆತು ಹೇಗೆ ನಡೆದುಕೊಳ್ಳಬೇಕು ಎನ್ನುವ ಸಾಮಾನ್ಯ ಜ್ಞಾನವೂ ಇಲ್ಲದೆ ಎಲ್ಲರ ಹತ್ತಿರ ನಿಷ್ಠುರವಾಗಬೇಕಾಗುತ್ತದೆ.

ಜೀವನದಲ್ಲಿ ಅನೇಕ ಸಂದರ್ಭಗಳಲ್ಲಿ ಅಸಹಾಯಕರನ್ನು ಕಷ್ಟದಲ್ಲಿರುವವರನ್ನು ನೋಡಿದಾಗ ಅವರಿಗೆ ಏನಾದರೂ ಮಾಡಬೇಕು ಅನ್ನುವ ತುಡಿತ ಇರುವಂತಹ ವೈಚಾರಿಕತೆ, ಮಾನವೀಯ ಮೌಲ್ಯಗಳು ಇವೆಲ್ಲವನ್ನೂ ರೂಢಿಸಿಕೊಂಡಾಗ ನಾವು ಗಳಿಸಿದ ವಿದ್ಯೆಗೂ ಒಂದು ಮೌಲ್ಯ.

ಅದಿಲ್ಲದೆ ಸ್ವಾರ್ಥದಿಂದ ನಾನು ಮಾತ್ರ ಉದ್ಧಾರವಾಗಬೇಕು, ನನ್ನ ಕುಟುಂಬ ಚೆನ್ನಾಗಿದ್ದರೆ ಸಾಕು, ನಾನು ನನ್ನದು ಎನ್ನುವ ಆಲೋಚನೆಗಳಲ್ಲೇ ಬಂಧಿಯಾದವರು ಸಮಾಜಕ್ಕೆ ಒಂದು ಹೊರೆ ಎಂತಲೇ ಹೇಳಬೇಕು. ಅವರಿಂದ ಯಾರಿಗೂ ಕಿಂಚಿತ್ತು ಸಹಾಯವೂ ಆಗುವುದಿಲ್ಲ, ಅವರನ್ನು ಅವರಂತಾಗುತ್ತಾರೆ. ಅವರು ಬೆಳೆಸುವ ಮಕ್ಕಳು ಕೂಡ ಸಮಾಜಕ್ಕೆ ಹೊರೆಯಾಗುತ್ತಾರೆ.

ಆದ್ದರಿಂದಲೇ ವಿದ್ಯಾರ್ಜನೆಯ ಜೊತೆಗೆ ಜೀವನ ಕೌಶಲ್ಯ, ಮಾನವೀಯ ಮೌಲ್ಯಗಳನ್ನ ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವುದು ಕೂಡ ಬಹಳ ಮುಖ್ಯವಾಗುತ್ತದೆ. ಇವುಗಳಿಂದ ನಮಗೆ ಯಾವುದೇ ರೀತಿಯ ಆರ್ಥಿಕ ಸಹಾಯ ಆಗದೆ ಹೋದರೂ , ಬೌದ್ಧಿಕವಾಗಿ ಇವು ನಮ್ಮನ್ನು ಸಮಾಜದಲ್ಲಿ ಬಹಳ ಎತ್ತರಕ್ಕೆ ಕೊಂಡೊಯ್ಯುವ ಸಾಮರ್ಥ್ಯವಿರುವ ಗುಣಗಳು. ನಾವು ಇದನ್ನು ಅಳವಡಿಸಿಕೊಂಡಾಗ ನಮ್ಮ ಸುತ್ತಲೂ ಇರುವ ಅನೇಕರನ್ನು ನಾವು ಚೆನ್ನಾಗಿ ನೋಡಿಕೊಂಡು ನೂರಾರು ಜನರಿಗೆ ಮಾದರಿಯಾಗಿ ಬದುಕುವ ಜೀವವಾಗುತ್ತೇವೆ. ಇಂತಹ ಸಮಾಜಮುಖಿ ಜೀವನ ನಮ್ಮೆಲ್ಲರದು ಆಗಲಿ ಎನ್ನುವ ಶುಭ ಹಾರೈಕೆ ಮಾತ್ರ ನನ್ನದು.

## ಪದಬಂಧ



**ಎಡದಿಂದ ಬಲಕ್ಕೆ:**
1. ಎರಡು ನದಿಗಳು ಸೇರುವ ಸ್ಥಳ (3)
4. ಅರದ ಮಧ್ಯೆ ಬಂದಿರುವ ತುಟಿ (3)
6. ಗೊಡ್ಡುಪುರಾಣ ಎನ್ನದರ್ಥ (5)
7. ಮನೆಯ ಪಡಸಾಲೆ (3)
9. ಇರುಳು ಕಂಡ ಸ್ವಪ್ನ (3)
11. ಮಗಳ ಗಂಡ (3)
13. ಆಜ್ಞಾಪಿಸು, ತಿಳಿಯಪಡಿಸುವುದು (4)
14. ಮದುವೆಯ ಹುಡುಗಿ ಮತ್ತು ಹುಡುಗ ಜೊತೆಯಾಗಿ ಬಂದಿದ್ದಾರೆ (4)
15. ಮತ್ತೊಂದು ನಾಲಗೆ (3)
17. ಅಸ್ತವ್ಯಸ್ತವಾಗಿ ಬಂದಿರುವ ಒಂದು ಜಾತಿಯ ಹಾರುವ ಹುಳು (3)
19. ಕಹಿಯಾಗಿರುವ ತರಕಾರಿ (3)
21. ಪುನಃ ಬರು ಎಂದರ್ಥ (5)
22. ಸರಿಯಾಗಿ ಕಾಣದಂತೆ ಮುಸುಕು (3)
23. ಸಹಾಯಕ್ಕೆ ಆಗಿ ಬರುವವನು (3)

**ಮೇಲಿನಿಂದ ಕೆಳಕ್ಕೆ:**
1. ಏನೋ ಒಂದು ಗುಮಾನಿ (3)
2. ಮರದ ಮಧ್ಯೆ ಸಿಲುಕಿದೆ ಮೊಸಳೆ (3)
3. ಶೈತ್ಯವಾದ ವಾಯು (4)
4. ಅಣ್ಣ ಮಾಡಿದ ಅಪಹಾಸ್ಯ (3)
5. ಹೊಸದಾಗಿ ನಿರ್ಮಿಸು (3)
8. ಎಚ್ಚರದಿಂದಿರುವಿಕೆ, ಹುಷಾರು (5)
10. ಆನೆಯ ಮುಖ ದಿಕ್ಕು ತಪ್ಪಿಸಿ ಬಂದಿದೆ (5)
11. ಅರಸನಲ್ಲ, ಇವನು ರಾಕ್ಷಸ (3)
12. ಗ್ರೀಸ್ ದೇಶದವನು (3)
16. ಸವೆದು ಹೋದುದು ಎಂದರ್ಥ (4)
17. ಶೋಭಿಸು ಎನ್ನುವ ಪದ (3)
18. ಒಂದು ಬಗೆಯ ಚರ್ಮವಾದ್ಯ (3)
19. ಮಲಗಲು ಬಳಸುವ ಮೆತ್ತನೆಯ ಸಾಧನ (3)
20. ತಿರುಗಿ ಬಂದಿದೆ ಜೋಡಿಗೆ ಪರ್ಯಾಯ ಪದ (3)

**ನಿನ್ನೆಯ ಉತ್ತರ**

**ಎಡದಿಂದ ಬಲಕ್ಕೆ:** 3. ಅಗ್ರಜ 6. ದಾಸವಾಳ 7. ಲಗಾಮು 8. ಸಂಪದ 10. ವುನೆರ 12. ಗಯಾ 14. ಮರಣ 15. ಪಿಕ 16. ತಿಜೋರಿ 18. ನಾಯಕ 20. ದಡಾರ 21. ಅಮಾನುಷ 22. ಕರ್ತಾರ

**ಮೇಲಿನಿಂದ ಕೆಳಕ್ಕೆ:** 1. ಗೋದಾಮು 2. ಸುವಾಸನೆ 4. ಜಲದ 5. ಸಮುದ್ರಯಾನ 9. ಪರಿಣತಿ 11. ರಮಣೀಯ 13. ಗೋಪಿಚಂದನ 17. ಜೋಕುಮಾರ 18. ನಾರದ 19. ವಿಷಣ್ಣ

● ಸಿ. ರವಿಶಂಕರ ಶಾಸ್ತ್ರಿ, ದಂಬೆ

## ದಿನಕ್ಕೊಂದು ಮಾಹಿತಿ

### ಅಪಾಯಕಾರಿ 'ನೀಲಿ ಅಪ್ಸರೆ'ಯರು

'ಗ್ಲೇಕಸ್ ಅಟ್ಲಾಂಟಿಕಸ್' ಎಂಬ ವೈಜ್ಞಾನಿಕ ನಾಮಧೇಯವುಳ್ಳ, 'ಗ್ಲಾಸಿಡೆ' ಕುಟುಂಬಕ್ಕೆ ಸೇರಿದ, ಕವಚ ರಹಿತವಾದ ಮೃದ್ವಂಗಿಯಾದ ಸಮುದ್ರವಾಸಿ ಜೀಯೇ ಬ್ಲೂ ಗ್ಲೇಕಸ್ ಅರ್ಥಾತ್ ನೀಲಿ ಡ್ರಾಗನ್. ಇವು

ಅಟ್ಲಾಂಟಿಕ್, ಫೆಸಿಫಿಕ್ ಹಾಗೂ ಹಿಂದೂ ಮಹಾಸಾಗರದುದ್ದಕ್ಕೂ ಉಷ್ಣವಲಯದ ಸಮುದ್ರ ನೀರಿನಲ್ಲಿ ಮಾತ್ರ ಕಂಡು ಬರುತ್ತವೆ. ಅಕಶೇರುಕಗಳ ಗುಂಪಿಗೆ ಸೇರಿದ ನೀಲಿ ಡ್ರಾಗನ್‌ಗಳನ್ನು ಅವುಗಳ ದೇಹ ಸೌಂದರ್ಯದಿಂದಾಗಿ 'ನೀಲಿ ಅಪ್ಸರೆ'ಯರೆಂದೂ ಕರೆಯುತ್ತಾರೆ. ನೀರಿನ ಮೇಲ್ಮೈ ಒತ್ತಡವನ್ನೇ ಆಧಾರವನ್ನಾಗಿಸಿಕೊಂಡು ಸಮುದ್ರದ ನೀರಿನ ಮೇಲ್ಮೈ ಮೇಲೆ ತೇಲುತ್ತಾ ಇರುವ ಈ ನೀಲಿ ಡ್ರಾಗನ್‌ಗಳು ಪ್ರವಾಹ ಅಥವಾ ಮಾರುತಗಳ ಸೆಳೆತದೊಂದಿಗೆ ತಾವೂ ಒಂದು ಕಡೆಯಿಂದ ಮತ್ತೊಂದು ಭಾಗಕ್ಕೆ ಸುಲಭವಾಗಿ ಚಲಿಸುತ್ತಿರುತ್ತವೆ. ಇವು ಸದಾಕಾಲ ಆಗೆ ನೀರಿನ ಮೇಲೆ ತೇಲಲು ಅವುಗಳ ದೇಹದೊಳಗಿರುವ ಅನಿಲ ಚೀಲಗಳೇ ಪ್ರಮುಖ ಕಾರಣವಾಗಿವೆ. ಕ್ಯಾಪ್ಟನ್ ಕುಕ್‌ನ ಎರಡನೇ ಸಮುದ್ರಯಾನದ ಸಂದರ್ಭದಲ್ಲಿ ಫೆಸಿಫಿಕ್ ಪ್ರದೇಶದಲ್ಲಿ ಅವನ ಜೊತೆಗಿದ್ದ ಜೊಹಾನ್ ರೆನೋಲ್ಡ್ ಹಾಗೂ ಅವನ ಮಗ ಜಾರ್ಜ ಫಾರ್ಸ್ಟರ್ ಈ ನೀಲಿಡ್ರಾಗನ್‌ಗಳನ್ನು 1777ರಲ್ಲಿ ಮೊದಲಿಗೆ ಸಮುದ್ರದ ದಡದಲ್ಲಿ ಪತ್ತೆಹಚ್ಚಿ ಅವುಗಳನ್ನು ಗುರುತಿಸಿ ಹೆಸರಿಸುವ ಮೂಲಕ ಜೀವಜಗತ್ತಿಗೆ ಪರಿಚುಸಿದರು. ತದನಂತರ ಇವುಗಳ ಕುರಿತಾದ ಅನೇಕ ಅಧ್ಯಯನಗಳು ಸಾಗಿ ಬಂದಿವೆ.

-ಪ. ನಾ. ಹಳ್ಳಿ ಹರೀಶ್ ಕುಮಾರ್, ಶಿರಾ

## ಪುಸ್ತಕ ಲೋಕ

### ಕಟ್ಟೆಪುರಾಣ

ಲಂಕೇಶ್ ಪತ್ರಿಕೆಯಲ್ಲಿ 1980ರಿಂದ ಆರಂಭಗೊಂಡು, ಸುಮಾರು 20 ವರ್ಷಗಳ ಕಾಲ ಪ್ರಕಟಗೊಂಡ, ಬಿ. ಚಂದ್ರೇಗೌಡ ಅವರು ಬರೆಯುತ್ತಿದ್ದ ಅಂಕಣವೇ 'ಕಟ್ಟೆ ಪುರಾಣ'. ಜನಸಾಮಾನ್ಯರ ಕಣ್ಣಿನಲ್ಲಿ ರಾಜಕೀಯವನ್ನು, ರಾಜಕಾರಣಿಗಳನ್ನು, ಪ್ರಚಲಿತ ವಿದ್ಯಮಾನಗಳನ್ನು ನೋಡುತ್ತಾ, ಅವೆಲ್ಲವನ್ನೂ ವ್ಯಂಗ್ಯಕ್ಕೆ, ಮೊನಚು ಹಾಸ್ಯಕ್ಕೆ, ಸಟೈರ್‌ಗೆ ಒಳಪಡಿಸುವ ಅನನ್ಯ ಬರಹಗಳು ಆ ಅಂಕಣ ಸರಣಿಯಲ್ಲಿ ಪ್ರಕಟಗೊಂಡವು. ಅಂದಿನ ಪ್ರಖ್ಯಾತ ರಾಜಕಾರಣಿಗಳು ಈ ಅಂಕಣದ ಮೊನಚಿಗೆ, ವ್ಯಂಗ್ಯಕ್ಕೆ ಆಹಾರವಾದರು. ಗ್ರಾಮೀಣ ಕನ್ನಡದ ವಿಶಿಷ್ಟ ಶೈಲಿಯಲ್ಲಿ ಮೂಡಿಬಂದ ಆ ಬರಹಗಳು ಬಹುಜನರ ಮೆಚ್ಚುಗೆ ಗಳಿಸಿದವು. ಈಗ ಆ ಬರಹಗಳನ್ನು ಆಯ್ದು 'ಬೆಸ್ಟ್ ಆಫ್ ಕಟ್ಟೆ ಪುರಾಣ' ಸಂಕಲನದಲ್ಲಿ ಅಡಕಗೊಳಿಸಲಾಗಿದೆ. ಬೆಂಗಳೂರಿನ ಅಮೂಲ್ಯ ಪುಸ್ತಕ ಇದನ್ನು ಹೊರತಂದಿದೆ.

# ಹೃದಯ ಬಡಿತದ ಮೇಲೆ ಸಂಗೀತ ಅಲೆಗಳ ಪ್ರಭಾವ

**ತಿಳಿಯೋಣ**
● ಎಲ್.ಪಿ.ಕುಲಕರ್ಣಿ

ನಮ್ಮ ಸಿನಿಮಾಗಳ ಹೆಡ್ಲೈನ್‌ಗಳನ್ನು ಒಮ್ಮೆ ನೋಡೋಣ, 'ಹೃದಯ ಗೀತೆ', 'ಹೃದಯ ಹಾಡಿತು', 'ಮಿಡಿದ ಹೃದಯಗಳು', 'ದಿಲ್ ಸೇ','ಏ ದಿಲ್ ಹೆ ಮುಶ್ಕಿಲ್' ಮುಂತಾದವುಗಳು ಹೃದಯ ಬಡಿತದ ಸಂಗೀತದ ಅಲೆಗಳ ಬಗ್ಗೆ ಹೇಳುತ್ತವೆ, ಅಂದರೆ ಇದು ಭಾವನಾತ್ಮಕ. ನಾವು ದಿನನಿತ್ಯ ಆಡುವ ಮಾತುಗಳನ್ನು ನೋಡುವುದಾದರೆ, 'ನೀವು ಹಾಡನ್ನು ಹೃದಯದಿಂದ ಹಾಡಿದಾಗ ಮಾತ್ರ ಹಾಡಿಗೆ ನ್ಯಾಯ ಒದಗಿಸಿದಂತಾಗುತ್ತದೆ. ಹೃದಯ ತುಂಬಿ ಹಾಡಬೇಕು. ಹೃದಯದಿಂದ ಬಂದ ರಾಗ ಮನಮುಟ್ಟುತ್ತದೆ. ಇವೆಲ್ಲವುಗಳನ್ನು ಗಮನಿಸಿದಾಗ ಹೃದಯಕ್ಕೂ, ಸಂಗೀತಕ್ಕೂ ಏನಾದರೂ ನಂಟಿದೆಯೇ ಎಂಬ ಪ್ರಶ್ನೆ ಮನದಲ್ಲಿ ಮೂಡುತ್ತದೆ.

ಹೌದು, ಇತ್ತೀಚೆಗೆ ವಿಜ್ಞಾನಿಗಳು ನಮ್ಮ ಹೃದಯ ಬಡಿತವು ನಾವು ಕೇಳುತ್ತಿರುವ ಸಂಗೀತದೊಂದಿಗೆ ಸಿಂಕ್ರೊನೈಸ್(ಮೇಳೈಸು) ಆಗುತ್ತದೆ ಎನ್ನುತ್ತಿದ್ದಾರೆ. ವಾಸ್ತವವಾಗಿ ಸಂಗೀತದ ಗತಿ ಮತ್ತು ತೀವ್ರತೆಯು ನಮ್ಮ ಹೃದಯ ಬಡಿತ ಮತ್ತು ನಮ್ಮ ಉಸಿರಾಟದ ಮಾದರಿಗಳ ಮೇಲೆ ಪ್ರಭಾವ ಬೀರುತ್ತದೆ ಎಂದು ಇತ್ತೀಚಿನ ಸಂಶೋಧನೆಯೊಂದು ತೋರಿಸುತ್ತದೆ.

ಉದಾಹರಣೆಗೆ, ನಾವು ವೇಗದ, ಲವಲವಿಕೆಯ ಸಂಗೀತವನ್ನು ಕೇಳಿದಾಗ, ನಮ್ಮ ಹೃದಯ ಬಡಿತ ಹೆಚ್ಚಾಗುತ್ತದೆ, ಹಾಡಿನ ಲಯ ಮತ್ತು ಶಕ್ತಿಯನ್ನು ಅನುಕರಿಸುತ್ತದೆ. ಇದಕ್ಕೆ ವಿರುದ್ಧವಾಗಿ ನಿಧಾನ, ಮಧುರ, ಶಾಂತಗೊಳಿಸುವ ಸಂಗೀತವು ನಮ್ಮ ಹೃದಯ ಬಡಿತವನ್ನು ಕಡಿಮೆ ಮಾಡುತ್ತದೆ, ವಿಶ್ರಾಂತಿಯನ್ನು ಉತ್ತೇಜಿಸುತ್ತದೆ.

ಸಂಗೀತವು ಸ್ವ-ನಿಯಂತ್ರಿತ ನರಮಂಡಲದ ಮೇಲೆ ಪರಿಣಾಮ ಬೀರುತ್ತದೆ, ಇದು ಹೃದಯ ಬಡಿತ ಮತ್ತು ಉಸಿರಾಟದಂತಹ ಅನೈಚ್ಛಿಕ ದೈಹಿಕ ಕಾರ್ಯಗಳನ್ನು ನಿಯಂತ್ರಿಸುತ್ತದೆ. ಅದಕ್ಕಾಗಿಯೇ ಒತ್ತಡವನ್ನು ಕಡಿಮೆ ಮಾಡಲು ಚಿಕಿತ್ಸಕ ಸೆಟ್ಟಿಂಗ್‌ಗಳಲ್ಲಿ ಹಿತವಾದ ಸಂಗೀತವನ್ನು ಹೆಚ್ಚಾಗಿ ಬಳಸಲಾಗುತ್ತದೆ. ಆದರೆ, ಅಡ್ರಿನಾಲಿನ್ ಹಾರ್ಮೋನ್‌ನ ಸ್ರವಿಕೆಗೂ ಮತ್ತು ದೈಹಿಕ ಶಕ್ತಿಯನ್ನು ಹೆಚ್ಚಿಸಲು ವ್ಯಾಯಾಮಗಳಿಗೆ ಹೆಚ್ಚಿನ ಶಕ್ತಿಯ(ಆವೃತ್ತಿಯ) ಸಂಗೀತವು ಜನಪ್ರಿಯವಾಗಿದೆ. ಸಂಗೀತವು ನಿಜವಾಗಿಯೂ ನಾವು ಗಮನಿಸದ ರೀತಿಯಲ್ಲಿ ದೇಹದೊಂದಿಗೆ ಸಮನ್ವಯಗೊಳಿಸುವ ಶಕ್ತಿಹೊಂದಿದೆ.

ಇತರ ಆಹ್ಲಾದಕರ ಸಂವೇದನೆಗಳಂತೆ, ಸಂಗೀತವನ್ನು ಆಲಿಸಿ ಆಸ್ವಾದಿಸುವುದು ದೇಹದಲ್ಲಿ ಡೋಪಮೈನ್ ಹಾರ್ಮೋನ್ ಸ್ರವಿಕೆಗೆ ಪ್ರಚೋದಿಸುತ್ತದೆ ಹೃದಯ ತಜ್ಞ ಡಾ. ಹ್ಯಾರಿಸ್ ಗಮನಿಸಿದಂತೆ, ಸಂಗೀತವಿಲ್ಲದ ವ್ಯಾಯಾಮ ತರಗತಿಯನ್ನು ಊಹಿಸಲೂ ಸಾಧ್ಯವಿಲ್ಲ ಎಂಬುವುದಾಗಿದೆ. ಧ್ವನಿ ಸಂಸ್ಕರಣೆಯು ಮೆದುಳಿನ ಬುಡದಲ್ಲಿ ಪ್ರಾರಂಭವಾಗುತ್ತದೆ, ಇದು ಹೃದಯ ಬಡಿತ ಮತ್ತು ಉಸಿರಾಟದ ದರವನ್ನು ಸಹ ನಿಯಂತ್ರಿಸುತ್ತದೆ. ಸಂಗೀತವು ಹೃದಯ ಬಡಿತ, ಉಸಿರಾಟದ ದರ ಮತ್ತು ರಕ್ತದೊತ್ತಡವನ್ನು ಕಡಿಮೆ ಮಾಡಿ ದೇಹಕ್ಕೆ ವಿಶ್ರಾಂತಿಯನ್ನು ಕೊಡುತ್ತದೆಯಲ್ಲದೆ ನೋವು, ಒತ್ತಡ ಮತ್ತು ಆತಂಕವನ್ನು ಕಡಿಮೆ ಮಾಡುತ್ತದೆ ಎಂದು ವಿಜ್ಞಾನಿಗಳು ದೃಢಪಡಿಸಿದ್ದಾರೆ.

-ಎಲ್.ಪಿ.ಕುಲಕರ್ಣಿ.

# ಹಣ ನಮ್ಮಲ್ಲಿ ಎಷ್ಟು ಇದ್ದರೇನು?



ಜನ ,ಧನ, ಕನಕ, ಭೂಮಿ, ಗೌರವ, ಪ್ರತಿಷ್ಠೆ ಮತ್ತಿತರೆ ಸಾಮಾಜಿಕ ಗೌರವಗಳ ಹಿಂದೆ ಇದೀಗ ಹೆಚ್ಚಿನವರು ಓಡಲಾರಂಭಿಸಿದ್ದಾರೆ. ಅದು ಎಷ್ಟರಮಟ್ಟಿಗೆ ಎಂದರೆ, ತಂದೆ ದುಡಿದು ತಂದು ಉಣಬಡಿಸಿ, ತಾಯಿ ತನ್ನ ಮಡಿಲಲ್ಲಿ ಲಾಲಿಸಿ, ಪಾಲಿಸಿ ಮಕ್ಕಳನ್ನು ಸಾಕುತ್ತಾರೆ, ಆದರೆ ಮಗ ಅಥವಾ ಮಗಳು ಬೆಳೆದು ದೊಡ್ಡವರಾದ ಮೇಲೆ ಏನು ಮಾಡುತ್ತಾರೆ?

ತಂದೆಯ ಅಥವಾ ತಾಯಿಯ ದುಡಿಮೆಯಲ್ಲಿ ಓದುತ್ತಾರೆ, ಬೆಳೆಯುತ್ತಾರೆ, ತಮ್ಮ ಕಾಲ ಮೇಲೆ ತಾವು ನಿಲ್ಲುತ್ತಾರೆ ಎಂಬುದು ಸರಿ-ತಪ್ಪು ಎಂದು ಹೇಳಲು ಸಾಧ್ಯವಿಲ್ಲ, ಆದರೆ ಕೆಲವು ಮಕ್ಕಳು ತಮ್ಮ ಕರ್ತವ್ಯ ಮರೆತುಬಿಡುತ್ತಾರೆ. ತಂದೆ ಸಾಕಿ, ಸಲಹಿ ತನ್ನ ಜೀವನವನ್ನೇ ಮುಡುಪಿಟ್ಟು, ತಾಯಿ ತನ್ನ ಅದೆಷ್ಟೋ ಆಸೆಗಳನ್ನು ಕೈಬಿಟ್ಟು ಚಿಕ್ಕವರಿರುವಾಗ ಮಕ್ಕಳನ್ನು ಸಾಕಿರುತ್ತಾರೆ. ಆದರೆ ನಾವು ಅವರಿಗೆ ಸಮಯ ಕೊಡುವುದಿಲ್ಲ, ಕಾರಣ ನಾವೆಲ್ಲರೂ ತುಂಬಾ ಬ್ಯುಸಿ ಎಂದು ಹೇಳಿದರೂ ಅದು ಯಾವುದರಲ್ಲಿ ಎಂಬ ಸ್ಪಷ್ಟ ಅರಿವಿಲ್ಲ.

ಕೆಲವರು ಪ್ರೀತಿಸಿ ಮದುವೆಯಾಗುತ್ತಾರೆ. ಮದುವೆಯಾದ ನಂತರ ಎಲ್ಲವೂ ಮುಗಿದು ಹೋಯಿತು ಎಂದು ದುಡಿಯಲು ಆರಂಭಿಸುತ್ತಾರೆ. ಪ್ರೀತಿಸಿ ಮದುವೆಯಾದವರಿಗೆ ಪ್ರೀತಿ ಬೇಕು, ಗಂಡನ ಸಮಯ ಬೇಕು. ತನ್ನ ಹೆಂಡತಿಯನ್ನು ಸುಖವಾಗಿ ಇಡಬೇಕೆಂಬ ಕಲ್ಪನೆಯಲ್ಲಿ ಕೆಲವು ಗಂಡಸರು ದುಡಿಮೆಯ ಕಡೆಗೆ ಹೆಚ್ಚಿನ ಗಮನ ನೀಡಿ ಹೆಂಡತಿ ಕಡೆಗೆ ಹೆಚ್ಚಿನ ಗಮನವನ್ನು ನೀಡುವಲ್ಲಿ ವಿಫಲರಾಗುತ್ತಾರೆ. ದುಡಿಯುವ ಕಡೆಗೆ ಗಮನ ಎಂದುಕೊಂಡರೆ ಪ್ರೀತಿಸಿದ ಹೃದಯದ ಕಥೆ ಏನು? ಸಮಯ ಕೊಡದ ಇಂತಹ ಜಂಜಾಟ ಬೇಕೇ?

ಕುಟುಂಬಸ್ಥರು, ಹಿರಿಯರು ನೋಡಿ ಮದುವೆಯಾದ ಕೆಲ ಯುವತಿಯರು ಸಂಸಾರಿಕ ಜೀವನದಲ್ಲಿ ತೊಡಗಿಕೊಂಡು ಉದ್ಯೋಗಕ್ಕೆ ಹೋಗುವ ಗಂಡನನ್ನು, ಮಗುವನ್ನು ಸಿದ್ಧ ಮಾಡಿ ಶಾಲೆಗೆ ಕಳುಹಿಸಿ ಮನೆಯ ಕೆಲಸಗಳಲ್ಲಿ ತಲ್ಲೀನರಾಗುತ್ತಾರೆ. ಅವರಿಗೆ ಆಗೊಮ್ಮೆ-ಈಗೊಮ್ಮೆ ತನ್ನ ಮನೆಯವರ, ಕೆಲಸಕ್ಕೆ ಹೋದ ಗಂಡನ ನೆನಪಾಗುವುದು ಸಹಜ. ನೆನಪಾದ ಗಂಡನಿಗೆ ದೂರವಾಣಿ ಮೂಲಕ ಸಂಪರ್ಕಿಸಿ ಮಾತನಾಡಲು ಹೋದರೆ, ಸ್ವಲ್ಪ ಹೊತ್ತು ಬಿಟ್ಟು ಕಾಲ್ ಮಾಡುತ್ತೇನೆ, ಬ್ಯುಸಿ ಇದ್ದೇನೆ ಎಂದು ಫೋನ್ ಕಟ್ ಮಾಡುತ್ತಾರೆ ಅತ್ತ ಕಡೆಯಿಂದ ತಂದೆ-ತಾಯಿ ಕಾಲ್ ಮಾಡಿದರೂ ಅದೇ ಉದ್ಗಾರ.

ಊರಿನಲ್ಲಿರುವ ತಂದೆ-ತಾಯಿಗೆ ಇದ್ದಕ್ಕಿದ್ದಂತೆ ಆರೋಗ್ಯದಲ್ಲಿ ಏರುಪೇರಾಗಿದೆ ಎಂದು ಪಕ್ಕದ ಮನೆಯವರು ಕಾಲ್ ಮಾಡಿ ಹೇಳುತ್ತಾರೆ, ತಂದೆಗೆ ಹುಷಾರಿಲ್ಲ, ತಾಯಿಗೆ ಹುಷಾರಿಲ್ಲ ಬಂದು ನೋಡಿಕೋ ಎಂದು ಕಾರ್ಯ ಒತ್ತಡದ ನಡುವೆ ಮಗ ಅಥವಾ ಮಗಳು ಹೀಗನ್ನುವುದೂ ಇದೆ: ಅಕೌಂಟಿಗೆ ಹಣವನ್ನು ಹಾಕುತ್ತೇನೆ, ದಯಮಾಡಿ ಅವರನ್ನು ಆಸ್ಪತ್ರೆಗೆ ತೋರಿಸಿ..!

ಕೆಲವೊಮ್ಮೆ ಸ್ನೇಹಿತರಿಗೆ ಕರೆ ಮಾಡಿ ತನ್ನ ಅಪ್ಪ-ಅಮ್ಮನಿಗೆ ಆರೋಗ್ಯದಲ್ಲಿ ತೊಂದರೆಯಾಗಿದೆ, ಹೋಗಿ ತೋರಿಸುವ ಸಹಾಯ ಮಾಡಿ ಎಂದು ಕೂಡ ಹೇಳಬಹುದು. ಕೆಲವೊಮ್ಮೆ ಊರಿನ ಆಟೋ ಚಾಲಕರ ಸಹಾಯ ಪಡೆಯುವುದು ಉಂಟು. ಅತ್ತ ಕಡೆಯಿಂದ ಅದಕ್ಕೊಂದು ಕೊಂಕು ನುಡಿ ನಾವಿಲ್ಲಿ ನೋಡಿಕೊಳ್ಳುತ್ತೇವೆ ಎಂದರೂ ಇವರು ಬರುವುದಿಲ್ಲ. ಅವರು ಹೇಗೆ ತಾನೇ ಬರುತ್ತಾರೆ ಎಂಬ ಸಮರ್ಥನೆಯೂ ಇಲ್ಲದ್ದೇನಲ್ಲ. ಶಾಲೆ ಬಿಟ್ಟು ಬಂದ ಮಗನ ಜೊತೆಗೆ ಒಂದಿಷ್ಟು ಆಟ ಆಡಲಾಗದ, ಪ್ರೀತಿಯಿಂದ ಸಾಕಿ ಸಲಹಿದ ತಂದೆ-ತಾಯಿ ಆರೋಗ್ಯ ಕಳೆದುಕೊಂಡಾಗ ಪಕ್ಕದಲ್ಲಿ ಇದ್ದು ಆರೈಕೆ ಮಾಡಲಾಗದ, ತನ್ನ ಸರ್ವಸ್ವವನ್ನು ಹಂಚಿಕೊಂಡ ಹೆಂಡತಿಗೆ ಕೊಡಲಾಗದ ಸಮಯ, ಹಣ ಇದ್ದರೆ ಅದು ನಶ್ವರವೇ ಸರಿ. ಹೌದು... ಹಣ ಮುಖ್ಯ. ಹಣವಿಲ್ಲದ ದುಡಿಮೆ ಇಲ್ಲದ ಯಾರಿಗಾದರೂ ಬೆಲೆ ಸಿಗುವುದಿಲ್ಲ, ಹಾಗೆಂದ ಮಾತ್ರಕ್ಕೆ ಹಣದ ಜೊತೆ ಇರಲು ಸಾಧ್ಯವೇ..? ಮಾನವನ ದೇಹ, ಮೂಳೆ, ಮಾಂಸ, ಪ್ರೀತಿ, ಮಮಕಾರ, ವಿಶ್ವಾಸ ಅಭಿಮಾನ ಇತ್ಯಾದಿ ಹಲವಾರು ಅಂಶಗಳಿಂದ ಕೂಡಿದ ತಡಿಕೆ. ಅದಕ್ಕೆ ಕೇವಲ ಹಣದಿಂದ ತೃಪ್ತಿಪಡಿಸಲು ಸಾಧ್ಯವಿಲ್ಲ. ಇದ್ದಷ್ಟು ದಿನ ಒಂದಷ್ಟು ಪ್ರೀತಿಯನ್ನು ಹಂಚಿಕೊಳ್ಳೋಣ, ಪ್ರೀತಿಪಾತ್ರರೊಂದಿಗೆ ನಗುನಗುತ ಬದುಕೋಣ, ಅವರಿಗಾಗಿ ಒಂದಿಷ್ಟು ಸಮಯ ಮೀಸಲು ಇರಿಸೋಣ.

ಹಣವಿಲ್ಲದ ಜೀವನ, ಕಾಳಜಿ, ಸಮಯ ನೀಡದ ಪ್ರೀತಿ ಇಲ್ಲದೆ ಜಗ ನಡೆಯದು. ಎಲ್ಲವನ್ನು ಸರಿದೂಗಿಸಿಕೊಂಡು ಮುನ್ನಡೆಯುವುದು ಅವಶ್ಯಕ. ಏನಂತೀರಿ..?

-ಡಾ. ಸುಧಾಕರ.ಜಿ.ಲಕ್ಕವಳ್ಳಿ.

# ಚಿತ್ತದಲ್ಲಿ ದೃಢವಾಗಿ ಚಿಂತನವೊಂದಿರಲಿ..!

ಇಟ್ಟ ಗುರಿ ಮತ್ತು ಕೊಟ್ಟ ಮಾತನ್ನು ಎಂತಹದ್ದೇ ಸಂದರ್ಭದಲ್ಲೂ ದಾಟಬಾರದು, ತಪ್ಪಬಾರದು ಎಂದು ನಮ್ಮ ಗುರು ಹಿರಿಯರು ನಮಗೆ ಬಾಲ್ಯದಿಂದಲೂ ತಿಳಿ ಹೇಳುತ್ತಾ ನಮ್ಮನ್ನೆಲ್ಲಾ ಪಾಲನೆ-ಪೋಷಣೆ ಮಾಡಿರುವುದು ನಮ್ಮ ನೆಲದ ಜೀವವೇ ಆಗಿದೆ. ಹೀಗಿದ್ದೂ ನರ ಸ್ವಭಾವದ ಸಹಜತೆಯಂತೆ ನಮಗೆ ಒದಗಿಬರುವ ಅಥವಾ ಎದುರಾಗುವ ಎಷ್ಟೋ ಕಷ್ಟದ ಸಂದರ್ಭಗಳಲ್ಲಿ ಧೃತಿಗೆಡುವ ಸಾಧ್ಯತೆ ಎದುರಾಗುತ್ತದೆ. ಗುರಿ ತಪ್ಪುತ್ತೇವೆ, ಮಾತನ್ನು ತಪ್ಪುತ್ತೇವೆ ಇದರಿಂದ ಊಹಿಸಲಾರದ ಸೋಲು ನಮ್ಮದಾಗಬಹುದು. ಈ ಸೋಲು ಯಾವ್ಯಾದ ಸ್ಪರ್ಧೆಯಲ್ಲೋ ಅಥವಾ ಜೀವನದಲ್ಲೋ ಆಗಿರಬಹುದು.

ಹೀಗೆ ಸೋಲುವುದಕ್ಕೆ ಕಾರಣವೇನೆಂದು ಕುಳಿತು ಯೋಚಿಸಿದಾಗ ಸಿಗುವ ಉತ್ತರ 'ಏನೂ ಇಲ್ಲ', ಏಕೆಂದರೆ ಒಳ್ಳೆ ಕೌಟುಂಬಿಕ ವಾತಾವರಣ, ಉತ್ತಮ ಗೆಳೆಯರು, ಉತ್ತಮ ಸಾಮಾಜಿಕ ಸಂಬಂಧಗಳು, ಖರ್ಚಿಗೆ ಸಾಕಾಗುವಷ್ಟು ಹಣ, ಹೀಗೆ ಎಲ್ಲಾ ರೀತಿಯ ಸೌಲಭ್ಯಗಳು ಇದ್ದೂ ಸೋಲುವ ಸಾಧ್ಯತೆಗಳೇ ಹೆಚ್ಚು. ಇದರ ಅರಿವು ಎಲ್ಲರಿಗೂ ಆಗಿಯೇ ಇರುತ್ತದೆ. ಆದರೆ ಕಾರಣವನ್ನು ಹುಡುಕುವ ಮನಸ್ಥಿತಿಯಲ್ಲಿ ನಾವಿರದ ಕಾರಣ ಈ ರೀತಿಯ ಸೋಲು ಜೀವನದಲ್ಲಿ ಪುನರಾವರ್ತನೆಗೊಳ್ಳುತ್ತಲೇ ಇರುತ್ತವೆ. ಒಂದು ನಿಖರವಾದ ನಿರ್ದಿಷ್ಟವಾದ ಗುರಿಯನ್ನು ತಲುಪಲು ಹೊರಟಾಗ ದಾರಿಯುದ್ದಕ್ಕೂ ಸೂಚನಾಫಲಕಗಳನ್ನು ಕಾಣುತ್ತೇವೆ. ಅವುಗಳ ಸೂಚನೆಯಂತೆ ಗುರಿಯೆಡೆಗೆ ತಲುಪುವ ಗಮನ ನಮ್ಮದಾಗಬೇಕು ಅದೂ ಸಹ ನಮ್ಮ ಪರಿಶ್ರಮದಿಂದಲೇ ಎಂಬುದನ್ನು ಮರೆಯಕೂಡದು, ಆದರೆ ಆ ಫಲಕಗಳು ನಮ್ಮೊಟ್ಟಿಗೆ ಸಾಗಿ ಬರಲಾರವು.

-ಶರಣಕುಮಾರ ಎಲ್.ಎಂ ದಾವಣಗೆರೆ

## ಸಮಾಚಾರ ಸಣ್ಣದಲ್ಲ

### ಟಾಟಾ ಸ್ಟೀಲ್ ಚೆಸ್: ಪ್ರಜ್ಞಾನಂದ ಮುನ್ನಡೆ

**ವಿಯ್ಕ್ ಆನ್ ಝೀ:** ಗ್ರಾಂಡ್ ಮಾಸ್ಟರ್ ಪ್ರಜ್ಞಾನಂದ ಅವರು ಸ್ವದೇಶದ ಲಿಯಾನ್ ಲ್ಯೂಕ್ ಮೆಂಡೊನ್ಸ ಅವರನ್ನು ಸುಲಭವಾಗಿ ಸೋಲಿಸಿ ಟಾಟಾ ಸ್ಟೀಲ್ ಮಾಸ್ಟರ್ಸ್ ಚೆಸ್ ಟೂರ್ನಿಯ ನಾಲ್ಕನೇ ಸುತ್ತಿನ ನಂತರ ಏಕಾಂಗಿಯಾಗಿ ಅಗ್ರಸ್ಥಾನ ಕ್ಕೇರಿದರು. ಚೆನ್ನೈನ ಪ್ರಜ್ಞಾನಂದ ಅವರು 3.5 ಪಾಯಿಂಟ್ಸ್ ಗಳಿಸಿದರೆ, ಎರಡನೇ ಸ್ಥಾನದಲ್ಲಿರುವ ಉಜ್ಬೇಕಿಸ್ತಾನದ ನದಿರ್ಬೆಕ್ ಅಬ್ದುಸತ್ತಾರೊವ್ (3) ಒಬ್ಬರೇ ಎರಡನೇ ಸ್ಥಾನದಲ್ಲಿದ್ದಾರೆ. ಇದು 19 ವರ್ಷದ ಪ್ರಜ್ಞಾನಂದ ಅವರಿಗೆ ಸತತ ಮೂರನೇ ಜಯ. ಅವರು ತಮ್ಮದೇ ದೇಶದ ಗುಕೇಶ್ ಎದುರು ಆಡಬೇಕಾಗಿದೆ.

### 2ನೇ ಸ್ಥಾನಕ್ಕೆ ಸ್ಮೃತಿ ಮಂದಾನ

**ದುಬೈ:** ಉತ್ತಮ ಲಯದಲ್ಲಿರುವ ಭಾರತ ಮಹಿಳಾ ಕ್ರಿಕೆಟ್ ತಂಡದ ಆರಂಭ ಆಟಗಾರ್ತಿ ಸ್ಮೃತಿ ಮಂದಾನ ಅವರು ಐಸಿಸಿ ಮಹಿಳಾ ಏಕದಿನ ರ‍್ಯಾಂಕಿಂಗ್‌ನಲ್ಲಿ ಬ್ಯಾಟರ್‌ಗಳ ವಿಭಾಗದಲ್ಲಿ ಎರಡನೇ ಕ್ರಮಾಂಕಕ್ಕೆ ಏರಿದ್ದಾರೆ. ಐರ್ಲೆಂಡ್ ವಿರುದ್ಧ ಇತ್ತೀಚಿನ ಸರಣಿಯಲ್ಲಿ ಸ್ಮೃತಿ ಉತ್ತಮವಾಗಿ ಆಡಿದ್ದಾರೆ. 28 ವಯಸ್ಸಿನ ಮಂದಾನ ಅಗ್ರ ಹತ್ತರಲ್ಲಿ ಸ್ಥಾನ ಪಡೆದಿರುವ ಭಾರತದ ಏಕೈಕ ಆಟಗಾರ್ತಿ. ಅವರು 738 ಪಾಯಿಂಟ್ಸ್ ಕಲೆ ಹಾಕಿದ್ದಾರೆ. ದಕ್ಷಿಣ ಆಫ್ರಿಕಾದ ಲಾರಾ ವೋಲ್ವಾರ್ಟ್ (773) ಅಗ್ರಸ್ಥಾನದಲ್ಲಿದ್ದರೆ, ಶ್ರೀಲಂಕಾದ ಚಮಾರಿ ಅಟ್ಟಪಟ್ಟು (733 ಪಾಯಿಂಟ್ಸ್) ಮೂರನೇ ಸ್ಥಾನದಲ್ಲಿದ್ದಾರೆ. ಬೌಲರ್‌ಗಳ ರ‍್ಯಾಂಕಿಂಗ್ ನಲ್ಲಿ ಇಂಗ್ಲೆಂಡ್‌ಮ ಎಡಗೈ ಸ್ಪಿನ್ನರ್ ಸೋಫಿ ಎಕ್ಲೆಸ್ಟೋನ್ ಮೊದಲ ಸ್ಥಾನದಲ್ಲಿದ್ದರೆ, ಭಾರತದ ಸ್ಪಿನ್ನರ್ ದೀಪ್ತಿ ಶರ್ಮಾ ನಾಲ್ಕನೇ ಸ್ಥಾನಕ್ಕೆ ಜಿಗಿದಿದ್ದಾರೆ.

### ಕೊಹ್ಲಿ, ರೋಹಿತ್: ಕೈಫ್ ಪ್ರಶಂಸೆ

**ದೆಹಲಿ:** ಮುಂಬರುವ 2025ರ ಐಸಿಸಿ ಚಾಂಪಿಯನ್ಸ್ ಟ್ರೋಫಿ ಟೂರ್ನಿಯಲ್ಲಿ ಭಾರತ ತಂಡ ಚಾಂಪಿಯನ್ ಆಗಬೇಕೆಂದರೆ ರೋಹಿತ್ ಶರ್ಮಾ ಮತ್ತು ವಿರಾಟ್ ಕೊಹ್ಲಿ ಅವರ ಫಾರ್ಮ್ ತುಂಬಾ ಮುಖ್ಯವಾಗುತ್ತದೆ ಎಂದು ಮಾಜಿ ಕ್ರಿಕೆಟಿಗ ಮೊಹಮ್ಮದ್ ಕೈಫ್ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಆಸ್ಟ್ರೇಲಿಯಾ ವಿರುದ್ಧ ಬಾರ್ಡರ್-ಗವಾಸ್ಕರ್ ಟ್ರೋಫಿ ಟೆಸ್ಟ್ ಸರಣಿಯ ವೈಫಲ್ಯವನ್ನು ಪರಿಗಣಿಸಬೇಡಿ, ಅವರು ಈ ಮಹತ್ವದ ಟೂರ್ನಿಯಲ್ಲಿ ಫಾರ್ಮ್‌ಗೆ ಕಮ್ ಬ್ಯಾಕ್ ಮಾಡಲಿದ್ದಾರೆಂಬ ವಿಶ್ವಾಸವನ್ನು ವ್ಯಕ್ತಪಡಿಸಿದ್ದಾರೆ.

ಮೊದಲ ಟಿ20 | ಅಭಿಷೇಕ್ ಶರ್ಮಾ ಸ್ಫೋಟಕ ಬ್ಯಾಟಿಂಗ್ | ಸರಣಿಯಲ್ಲಿ ಮುನ್ನಡೆ

# ಆಂಗ್ಲರ ವಿರುದ್ಧ ಭರ್ಜರಿ ಜಯ

**ಕೋಲ್ಕತ್ತಾ:** ಇಲ್ಲಿನ ಈಡನ್ ಗಾರ್ಡನ್ಸ್‌ನಲ್ಲಿ ನಡೆದ ಐದು ಪಂದ್ಯಗಳ ಟಿ20 ಸರಣಿಯ ಮೊದಲ ಪಂದ್ಯದಲ್ಲಿ ಪ್ರವಾಸಿ ಇಂಗ್ಲೆಂಡ್ ತಂಡ ನೀರಸ ಪ್ರದರ್ಶನ ತೋರಿ ಭಾರತದ ವಿರುದ್ಧ ಮಂಡಿಯೂರಿದೆ. ಇಂಗ್ಲೆಂಡ್ ನೀಡಿದ 133 ರನ್‌ಗಳ ಗುರಿಯನ್ನು ಬೆನ್ನಟ್ಟಿದ ಭಾರತ ತಂಡವು ಆರಂಭಿಕ ಆಟಗಾರ ಅಭಿಷೇಕ್ ಶರ್ಮಾರವರ ಸ್ಫೋಟಕ ಬ್ಯಾಟಿಂಗ್ ನೆರವಿನಿಂದ ಕೇವಲ 12.5 ಓವರ್‌ಗಳಲ್ಲಿ ತನ್ನ ಗುರಿ ತಲುಪಿ 7 ವಿಕೆಟ್‌ಗಳ ಜಯ ಗಳಿಸಿದೆ.

ಟಾಸ್ ಗೆದ್ದ ಭಾರತ ತಂಡದ ನಾಯಕ ಸೂರ್ಯಕುಮಾರ್ ಯಾದವ್ ಬೌಲಿಂಗ್ ಆಯ್ಕೆ ಮಾಡಿಕೊಂಡರು. ಬ್ಯಾಟಿಂಗ್ ಆರಂಭಿಸಿದ ಆಂಗ್ಲ ಪಡೆಯು ಖಾತೆ ತೆರೆಯುವ ಮುನ್ನವೇ ತನ್ನ ಮೊದಲ ವಿಕೆಟ್ ಕಳೆದುಕೊಂಡಿತು. ಅರ್ಶದೀಪ್ ಸಿಂಗ್ ಮೊದಲ ಓವರ್‌ನಲ್ಲೇ ಫಿಲ್ ಸಾಲ್ಟ್ (0) ಕೀಪರ್ ಸಂಜು ಸ್ಯಾಮ್ಸನ್‌ಗೆ ಕ್ಯಾಚ್ ನೀಡಿ ಔಟ್ ಆದರು. ನಂತರ ಮತ್ತೆ 3ನೇ ಓವರ್‌ನಲ್ಲಿ ಮತ್ತೊಬ್ಬ ಆರಂಭಿಕ ಬೆನ್ ಡಕೆಟ್(4) ರನ್ನ ಕೂಡ ಅರ್ಶದೀಪ್ ಪೆವಿಲಿಯನ್‌ಗಟ್ಟಿದರು. ಒಂದು ಕಡೆ ವಿಕೆಟ್ ಬೀಳುತ್ತಿದ್ದರೂ ನಾಯಕ ಬಟ್ಲರ್ ಮಾತ್ರ ಸಿಡಿಲಬ್ಬರದ ಬ್ಯಾಟಿಂಗ್ ನಡೆಸಿದರು. ಅವರು 44 ಎಸೆತಗಳಲ್ಲಿ 8 ಬೌಂಡರಿ, 2 ಸಿಕ್ಸರ್ ಸಹಿತ 68 ರನ್ ಗಳಿಸಿ ತಂಡದ ಗರಿಷ್ಠ ಸ್ಕೋರರ್ ಎನಿಸಿಕೊಂಡರು.

ಬಟ್ಲರ್, ಹ್ಯಾರಿ ಬ್ರೂಕ್ ಜೊತೆ ಸೇರಿ 3ನೇ ವಿಕೆಟ್‌ಗೆ 48 ರನ್ ಗಳಿಸಿದರು. ಆದರೆ ಬ್ರೂಕ್ ಕೇವಲ 17 ರನ್ ಗಳಿಸಿ ವರುಣ್ ಚಕ್ರವರ್ತಿ ಬೌಲಿಂಗ್‌ನಲ್ಲಿ ಕ್ಲೀನ್ ಬೌಲ್ಡ್ ಆದರು. ನಂತರ ಬಂದ ಆಲ್‌ರೌಂಡರ್ ಲಿಯಾಮ್ ಲಿವಿಂಗ್ ಸ್ಟೋನ್ ಅದೇ ಓವರ್‌ನಲ್ಲಿ 2 ಎಸೆತಗಳ ಡಕ್

ಆದರು. ಆರ್ಚರ್ (12) ಹೊರತುಪಡಿಸಿ ನಂತರ ಬಂದ ಯಾವ ಬ್ಯಾಟರ್ ಕೂಡ ಎರಡಂಕಿ ಮೊತ್ತ ದಾಖಲಿಸಲಿಲ್ಲ. ಜಾಕೋಬ್ ಬೆಥೆಲ್ 7, ಜೇಮಿ ಓವರ್‌ಟನ್ 2, ಗಸ್ ಅಟ್ಕಿನ್ಸನ್ 2, ಆದಿಲ್ ರಶೀದ್ ಅಜೇಯ 8, ಮಾರ್ಕ್‌ವುಡ್ 1 ರನ್‌ಗಳಿಸಿದರು. ಇಂಗ್ಲೆಂಡ್ ತಂಡ 20 ಓವರ್‌ಗಳಲ್ಲಿ 132ಕ್ಕೆ ಆಲೌಟ್ ಆಯಿತು. ಉತ್ತಮ ಫಾರ್ಮ್‌ನಲ್ಲಿರುವ ವರುಣ್ ಚಕ್ರವರ್ತಿ 4 ಓವರ್‌ನಲ್ಲಿ 23 ರನ್ ನೀಡಿ 3 ವಿಕೆಟ್ ಪಡೆದರೆ, ಅಕ್ಷರ್ ಪಟೇಲ್ 22ಕ್ಕೆ 2 ವಿಕೆಟ್, ಅರ್ಶದೀಪ್ 17ಕ್ಕೆ 2, ಹಾರ್ದಿಕ್ ಪಾಂಡ್ಯ 42ಕ್ಕೆ 2 ವಿಕೆಟ್ ಪಡೆದರು.

133 ರನ್‌ಗಳ ಸುಲಭ ಗುರಿಯನ್ನು ಪಡೆದ ಭಾರತ ತಂಡದ ಆರಂಭಿಕ ಬ್ಯಾಟರ್‌ಗಳಾದ ಅಭಿಷೇಕ್ ಶರ್ಮಾ ಮತ್ತು ಸಂಜು ಸ್ಯಾಮ್ಸನ್ (26) ಮೊದಲನೇ ವಿಕೆಟ್‌ಗೆ 41 ರನ್‌ಗಳ ಜೊತೆಯಾಟದ ಉತ್ತಮ ಪ್ರದರ್ಶನವನ್ನು ತೋರಿದರು. ಸ್ಯಾಮ್ಸನ್ ಆರ್ಚರ್‌ಗೆ ವಿಕೆಟ್ ಒಪ್ಪಿಸಿದರು. ಆದರೆ ಆ ಬಳಿಕ ಕ್ರೀಸ್‌ಗೆ ಬಂದ ಭಾರತ ತಂಡದ ನಾಯಕ

ಸೂರ್ಯಕುಮಾರ್ ಆರ್ಚರ್‌ಗೇ ವಿಕೆಟ್ ಒಪ್ಪಿಸಿ ಶೂನ್ಯಕ್ಕೆ ಔಟ್ ಆದರು. ಎರಡನೇ ವಿಕೆಟ್ ಪತನದ ಬಳಿಕ ಕ್ರೀಸ್‌ಗೆ ಬಂದ ತಿಲಕ್ ವರ್ಮಾ (19) ಆರಂಭಿಕ ಆಟಗಾರ ಅಭಿಷೇಕ್ ಶರ್ಮಾಗೆ ಉತ್ತಮ ಜತೆಯಾಟ ಪ್ರದರ್ಶಿಸಿದರು. ಕೇವಲ 34 ಬಾಲ್‌ಗಳಲ್ಲಿ 79 ರನ್‌ಗಳನ್ನು ಸಿಡಿಸಿ ಅವರು ಭಾರತ ತಂಡದ ಭರ್ಜರಿ ಗೆಲುವಿಗೆ ಕಾರಣರಾದರು. ಅವರ ವಿಕೆಟ್ ಪತನದ ಬಳಿಕ ಬಂದ ಹಾರ್ದಿಕ್ ಪಾಂಡ್ಯ 3 ರನ್ ಸಿಡಿಸಿ ಅಜೇಯರಾಗಿ ಉಳಿದರು.

ಬಿಸಿಸಿಐ ಮಹತ್ವದ ನಿರ್ಧಾರ | ದುಬೈನಲ್ಲಿ ಪಾಕ್ ವಿರುದ್ಧ ಭಾರತದ ಪಂದ್ಯ

# ಇಂಡಿಯಾ ಜೆರ್ಸಿಯಲ್ಲಿ ಪಾಕ್ ಹೆಸರು

**ದುಬೈ:** ಫೆಬ್ರವರಿ 19ರಿಂದ ಆರಂಭವಾಗಲಿರುವ ಚಾಂಪಿಯನ್ಸ್ ಟ್ರೋಫಿ ಹೈಬ್ರಿಡ್ ಮಾದರಿಯಲ್ಲಿ ನಡೆಯುತ್ತಿದೆ. ಆ ಪ್ರಕಾರ ಟೀಂ ಇಂಡಿಯಾ ತನ್ನ ಎಲ್ಲಾ ಪಂದ್ಯಗಳನ್ನು ದುಬೈನಲ್ಲಿ ಆಡಿದರೆ ಉಳಿದ ಎಲ್ಲಾ ತಂಡಗಳು ಪಾಕಿಸ್ತಾನದಲ್ಲಿ ಆಡಲಿವೆ. ಈ ಮಧ್ಯೆ, ಈ ಐಸಿಸಿ ಟೂರ್ನಿಯಲ್ಲಿ ಆತಿಥೇಯ ರಾಷ್ಟ್ರ ಪಾಕಿಸ್ತಾನದ ಹೆಸರನ್ನು ತಮ್ಮ ಜೆರ್ಸಿಯಲ್ಲಿ ನಮೂದಿಸಲು ಭಾರತ ತಂಡ ನಿರಾಕರಿಸಿದೆ ಎಂದು ವರದಿಯಾಗಿದ್ದು, ನಿನ್ನೆಯಿಂದ ಈ ವಿಚಾರದ ಬಗ್ಗೆ ಸಾಕಷ್ಟು ಚರ್ಚೆಗಳು ನಡೆದಿದ್ದವು. ಸಾಮಾನ್ಯವಾಗಿ, ಐಸಿಸಿ ಪಂದ್ಯಾವಳಿಯನ್ನು ಆಯೋಜಿಸುವ ದೇಶದ ಹೆಸರು ಎಲ್ಲಾ ತಂಡಗಳ ಜೆರ್ಸಿಯ ಮೇಲೆ ನಮೂದಿಸಲೇಬೇಕು. ಆದರೀಗ ಬಿಸಿಸಿಐ, ಪಾಕಿಸ್ತಾನದ ಹೆಸರನ್ನು ತಂಡದ ಜೆರ್ಸಿಯ ಮೇಲೆ ನಮೂದಿಸಲು ತಗಾದೆ ತೆಗೆದಿದೆ ಎಂಬ ಸುದ್ದಿ ಎಲ್ಲೆಡೆ ಹಬ್ಬಿದ ಬಳಿಕ ಹೊಸ ವಿವಾದವೊಂದು ಹುಟ್ಟಿಕೊಂಡಿತ್ತು. ಆದರೆ, ಇದೀಗ ಈ ವಿಚಾರವಾಗಿ ಬಿಸಿಸಿಐ ಸ್ಪಷ್ಟನೆ ನೀಡಿ, ವದಂತಿಗಳಿಗೆ ತೆರೆ ಎಳೆದಿದೆ.

**ಜೆರ್ಸಿಯಲ್ಲಿ ಪಾಕಿಸ್ತಾನದ ಹೆಸರು:** ನಿಯಮಗಳ ಪ್ರಕಾರ, ಐಸಿಸಿ ಬ್ಯಾನರ್ ಅಡಿಯಲ್ಲಿ ನಡೆಯುವ ಎಲ್ಲಾ ಪಂದ್ಯಾವಳಿಗಳಲ್ಲಿ ಭಾಗವಹಿಸುವ ಎಲ್ಲಾ ತಂಡಗಳು ತಮ್ಮ ಜೆರ್ಸಿಯಲ್ಲಿ ಆತಿಥೇಯ ದೇಶದ ಹೆಸರು ಮತ್ತು ಪಂದ್ಯಾವಳಿಯ ವರ್ಷವನ್ನು ಪಂದ್ಯಾವಳಿಯ ಹೆಸರಿನೊಂದಿಗೆ ನಮೂದಿಸುವುದು ಕಡ್ಡಾಯವಾಗಿದೆ. ಆ

ಪ್ರಕಾರ, ಇದೀಗ ಎದ್ದಿರುವ ವದಂತಿಗೆ ತೆರೆ ಎಳೆದಿರುವ ಬಿಸಿಸಿಐನ ಹೊಸ ಕಾರ್ಯದರ್ಶಿ ದೇವ್‌ಜಿತ್ ಸೈಕಿಯಾ ಅವರು ಐಸಿಸಿಯ ಪ್ರತಿಯೊಂದು ನಿಯಮವನ್ನು ಬಿಸಿಸಿಐ ಅನುಸರಿಸಲಿದೆ ಎಂದು ಖಚಿತಪಡಿಸಿದ್ದಾರೆ, ಅಂದರೆ ಈ ಟೂರ್ನಿಯ ಆತಿಥೇಯ ಪಾಕಿಸ್ತಾನದ ಹೆಸರು ಟೀಂ ಇಂಡಿಯಾದ ಜೆರ್ಸಿ ಮೇಲೆ ಕಾಣಿಸಿಕೊಳ್ಳಲಿದೆ.

ಇತ್ತೀಚೆಗಷ್ಟೇ ಪಾಕಿಸ್ತಾನದ ಮಾಧ್ಯಮಗಳು ಈ ವಿಷಯವನ್ನು ಪ್ರಸ್ತಾಪಿಸಿ ಟೀಮ್ ಇಂಡಿಯಾದ ಜೆರ್ಸಿಯಲ್ಲಿ ಪಾಕಿಸ್ತಾನದ ಹೆಸರನ್ನು ಮುದ್ರಿಸಲು ಬಿಸಿಸಿಐ ನಿರಾಕರಿಸಿದೆ ಎಂದು ಆರೋಪಿಸಿದ್ದವು. ಪಿಸಿಬಿ ಕೂಡ ಈ ಸಮಸ್ಯೆಯನ್ನು ಐಸಿಸಿ ಮುಂದಿಡಲು ಬಯಸಿತ್ತು. ಆದರೆ ಬಿಸಿಸಿಐ ಈಗ ಈ ಎಲ್ಲಾ ವರದಿಗಳನ್ನು ತಿರಸ್ಕರಿಸಿದ್ದು, ಜೆರ್ಸಿಗೆ ಸಂಬಂಧಿಸಿದ ಪ್ರತಿಯೊಂದು ಐಸಿಸಿ ನಿಯಮವನ್ನು ಅನುಸರಿಸುವುದಾಗಿ ಘೋಷಿಸಿದೆ.

### ಟೀಂ ಇಂಡಿಯಾ ವೇಳಾಪಟ್ಟಿ

**ಫೆಬ್ರವರಿ 20ರಿಂದ ಈ ಟೂರ್ನಿಯಲ್ಲಿ ಟೀಮ್ ಇಂಡಿಯಾದ ಅಭಿಯಾನ ಆರಂಭವಾಗಲಿದ್ದು, ಚೊಚ್ಚಲ ಪಂದ್ಯದಲ್ಲಿ ಬಾಂಗ್ಲಾದೇಶವನ್ನು ಎದುರಿಸಲಿದೆ. ನಂತರ ಟೀಂ ಇಂಡಿಯಾ ತನ್ನ ಎರಡನೇ ಪಂದ್ಯವನ್ನು ಪಾಕಿಸ್ತಾನದ ವಿರುದ್ಧ ಫೆಬ್ರವರಿ 23ರಂದು ಆಡಲಿದೆ. ಅದರ ನಂತರ, ಗುಂಪಿನ ಕೊನೆಯ ಪಂದ್ಯದಲ್ಲಿ, ಮಾರ್ಚ್ 2ರಂದು ನ್ಯೂಜಿಲೆಂಡ್ ತಂಡವನ್ನು ಎದುರಿಸಲಿದೆ. ಅದಾದ ಬಳಿಕ ಸೆಮಿಫೈನಲ್ ಮತ್ತು ಫೈನಲ್ ಪಂದ್ಯ ನಡೆಯಲಿದೆ. ಒಂದು ವೇಳೆ ಟೀಮ್ ಇಂಡಿಯಾ ಸೆಮಿಫೈನಲ್ ಮತ್ತು ಫೈನಲ್‌ಗೆ ಅರ್ಹತೆ ಪಡೆದರೆ, ಆ ಪಂದ್ಯಗಳು ಕೂಡ ದುಬೈನಲ್ಲಿ ಮಾತ್ರ ನಡೆಯಲಿವೆ.**

ಆಸ್ಟ್ರೇಲಿಯನ್ ಓಪನ್ ಟೆನ್ನಿಸ್ | ಹೋರಾಡಿ ಸೋತ ಭಾರತದ ಬೋಪಣ್ಣ

# ಸ್ವಿಯಾಟೆಕ್ VS ಕೀಸ್ ಸೆಮಿಫೈನಲ್ ಇಂದು

**ಮೆಲ್ಬರ್ನ್:** ವಿಶ್ವದ 2ನೇ ಶ್ರೇಯಾಂಕದ ಐಗಾ ಸ್ವಿಯಾಟೆಕ್ ಮತ್ತು ಅಮೆರಿಕದ 19ನೇ ಶ್ರೇಯಾಂಕಿತೆ ಮ್ಯಾಡಿಸನ್ ಕೀಸ್ ಆಸ್ಟ್ರೇಲಿಯನ್ ಓಪನ್ ಟೆನಿಸ್ ಟೂರ್ನಿಯಲ್ಲಿ ಸೆಮಿಫೈನಲ್ ಪ್ರವೇಶಿಸಿದ್ದಾರೆ. ಉಭಯ ಆಟಗಾರ್ತಿಯರೇ ಗುರುವಾರ ನಡೆಯುವ ಸೆಮಿ ಪಂದ್ಯದಲ್ಲಿ ಮುಖಾಮುಖಿಯಾಗಲಿದ್ದಾರೆ.

ಬುಧವಾರ ನಡೆದ 2 ಮಹಿಳಾ ಸಿಂಗಲ್ಸ್ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಸ್ವಿಯಾಟೆಕ್ ಮತ್ತು ಮ್ಯಾಡಿಸನ್ ಗೆಲುವು ಸಾಧಿಸಿ ಸೆಮಿ ಪ್ರವೇಶಿಸಿದರು. ಬೆಳಗ್ಗೆ ನಡೆದ ಮೊದಲ ಕ್ವಾರ್ಟರ್ ಪಂದ್ಯದಲ್ಲಿ ಸ್ವಿಯಾಟೆಕ್ 8ನೇ ಶ್ರೇಯಾಂಕದ ಎಮ್ಮಾ ನವರೊ ವಿರುದ್ಧ 6-1, 6-2 ನೇರ ಸೆಟ್‌ಗಳಿಂದ ಸುಲಭ ಜಯ ಸಾಧಿಸಿದರು.

ದಿನದ ಮತ್ತೊಂದು ಪಂದ್ಯದಲ್ಲಿ ಮ್ಯಾಡಿಸನ್ ಕೀಸ್ 3-6, 6-3, 6-4 ಅಂತರದಿಂದ ಎಲಿನಾ ಸ್ವಿಟೋಲಿನಾ ಅವರನ್ನು ಹಿಮ್ಮೆಟ್ಟಿಸಿದರು. ಮೂರು ಸೆಟ್‌ಗಳ ತೀವ್ರ ಪೈಪೋಟಿಯ ಆರಂಭಿಕ ಸೆಟ್‌ನಲ್ಲಿ ಕೀಸ್ ಸೋತರೂ, ಆ ಬಳಿಕದ ಎರಡು ಸೆಟ್‌ಗಳಲ್ಲಿ ಬಲಿಷ್ಠ ಹೊಡೆತಗಳ ಮೂಲಕ ಕಮ್‌ಬ್ಯಾಕ್ ಮಾಡಿ ಪಂದ್ಯವನ್ನು ಗೆಲ್ಲುವಲ್ಲಿ ಯಶಸ್ವಿಯಾದರು. ಮೊದಲ ಸೆಟ್‌ನಲ್ಲಿ ಸ್ವಿಟೋಲಿನಾ ಗೆದ್ದು ಮುನ್ನಡೆ ಸಾಧಿಸಿರೂ, ಆ ಬಳಿಕದ ಸೆಟ್‌ನಲ್ಲಿ ಲಯ ಕಳೆದುಕೊಂಡರು.

### ಹೋರಾಡಿ ಸೋತ ಬೋಪಣ್ಣ

**ಮಿಶ್ರ ಡಬಲ್ಸ್ ವಿಭಾಗದಲ್ಲಿ ಭಾರತದ ಅನುಭವಿ ಆಟಗಾರ ರೋಹನ್ ಬೋಪಣ್ಣ ಮತ್ತು ಚೀನಾದ ಸುವಾಯ್ ಜಾಂಗ್ ಜೋಡಿ ಕ್ವಾರ್ಟರ್ ಫೈನಲ್‌ನಲ್ಲಿ ಸೋತು ಕೂಟದಿಂದ ಹೊರಬಿದ್ದಿದೆ. ಕೊನೆಯ ಕ್ಷಣದ ವರೆಗೂ ಜಿದ್ದಾಜಿದ್ದಿನಿಂದ ಸಾಗಿದ ಪಂದ್ಯದಲ್ಲಿ ಸ್ಥಳೀಯ ಜೋಡಿ ಆಸ್ಟ್ರೇಲಿಯಾದ ಜಾನ್ ಪೀರ್ಸ್ ಮತ್ತು ಒಲಿವಿಯಾ ಗಡೆಕಿ ವಿರುದ್ಧ 6-2, 4-6, 9-11ರ ಕಠಿಣ ಅಂತರದಲ್ಲಿ ಸೋಲನುಭವಿಸಿತು. ಮೊದಲ ಸೆಟ್ ಗೆದ್ದ ಬೋಪಣ್ಣ-ಜಾಂಗ್ ಜೋಡಿ ಮುನ್ನಡೆ ಗಳಿಸಿತು. ಆದರೆ ಎರಡನೇ ಸೆಟ್‌ನಲ್ಲಿ ಹಿನ್ನಡೆ ಅನುಭವಿಸಿತು.**

ಸೆಮೀಸ್‌ಗೇರಿದ ಜೋಕೋ: ಸರ್ಬಿಯಾದ ನೋವಾಕ್ ಜೋಕೋವಿಕ್ ಆಸ್ಟ್ರೇಲಿಯನ್ ಓಪನ್ ಟೆನಿಸ್ ಟೂರ್ನಿಯಲ್ಲಿ ಸೆಮಿಫೈನಲ್ ಪ್ರವೇಶಿಸುವ ಮೂಲಕ ದಾಖಲೆಯೊಂದನ್ನು ಬರೆದಿದ್ದಾರೆ. ಆಸ್ಟ್ರೇಲಿಯನ್ ಓಪನ್‌ನಲ್ಲಿ 12ನೇ, ಒಟ್ಟಾರೆ ಗ್ರ್ಯಾನ್ ಸ್ಲಾಂನಲ್ಲಿ 50ನೇ ಸೆಮಿಫೈನಲ್ ಪ್ರವೇಶಿಸಿದ ಸಾಧನೆಗೈದರು. ಗೆಲುವಿನೊಂದಿಗೆ ಅವರ ಐತಿಹಾಸಿಕ 25ನೇ ಗ್ರ್ಯಾನ್ ಸ್ಲಾಂ ಪ್ರಶಸ್ತಿ ಗೆಲ್ಲುವ ಆಸೆ ಕೂಡ ಜೀವಂತವಾಗಿದೆ. ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಜೋಕೊ ಸ್ಪೇನ್‌ನ ಕಾರ್ಲೋಸ್

ಅಲ್ಕರಾಜ್ ವಿರುದ್ಧ ನಾಲ್ಕು ಸೆಟ್‌ಗಳ ಹೋರಾಟದಲ್ಲಿ 4-6, 6-4, 6-3, 6-4 ಸೆಟ್‌ಗಳಿಂದ ಗೆದ್ದು ಬೀಗಿದ್ದರು.

# ಅರ್ಶದೀಪ್ ಸಿಂಗ್: ಹೊಸ ದಾಖಲೆ

**ಕೋಲ್ಕತಾ:** ಬುಧವಾರ ನಡೆದ ಇಂಗ್ಲೆಂಡ್ ವಿರುದ್ಧದ ಪಂದ್ಯದಲ್ಲಿ ಆರಂಭದಲ್ಲೇ ಇಂಗ್ಲೆಂಡ್‌ಗೆ ಆಘಾತ ನೀಡಿದ ಭಾರತದ ಅರ್ಶದೀಪ್ ಸಿಂಗ್ 2 ವಿಕೆಟ್ ಕೀಳುವ ಮೂಲಕ ಹೊಸ ಇತಿಹಾಸ ನಿರ್ಮಿಸಿದ್ದಾರೆ. ಟಿ20 ಕ್ರಿಕೆಟ್‌ನಲ್ಲಿ ಒಟ್ಟು 97 ವಿಕೆಟ್ ಗಳಿಸುವ ಮೂಲಕ ಭಾರತದ ಪರ ಚುಟುಕು ಕ್ರಿಕೆಟ್‌ನಲ್ಲಿ ಅತಿ ಹೆಚ್ಚು ವಿಕೆಟ್ ಗಳಿಸಿದ ಗೌರವಕ್ಕೆ ಅವರು ಪಾತ್ರರಾಗಿದ್ದಾರೆ.

ಪ್ರಥಮ ಟಿ20 ಪಂದ್ಯದ ಪ್ರಥಮ ಓವರ್‌ನ ಎರಡನೇ ಎಸೆತದಲ್ಲೇ ಅವರು ಅಪಾಯಕಾರಿ ಆರಂಭಿಕ ಫಿಲ್ ಸಾಲ್ಟ್ ಅವರನ್ನು ಬಲಿ ಪಡೆದರು. ಅವರ ಎಸೆತವನ್ನು ತಪ್ಪಾಗಿ ಅಂದಾಜಿಸಿದ ಸಾಲ್ಟ್ ಹೊಡೆದ ಚೆಂಡು ಆಗಸದೆತ್ತರಕ್ಕೆ ಚಿಮ್ಮಿತು. ಅದನ್ನು ಕ್ಯಾಚ್ ಪಡೆಯುವಲ್ಲಿ ಕೀಪರ್ ಸ್ಯಾಮ್ಸನ್ ಶಸ್ವಿಯಾದರು. ಇದಾಗಿ ಕೆಲವೇ ಹೊತ್ತಲ್ಲೇ ಅರ್ಶದೀಪ್ ಇಂಗ್ಲೆಂಡ್‌ಗೆ ಮತ್ತೊಂದು ಹೊಡೆತ ನೀಡಿದರು. 3ನೇ ಓವರ್ ನ 5ನೇ ಎಸೆತದಲ್ಲಿ ಮತ್ತೊಬ್ಬ ಆರಂಭಕಾರ ಬೆನ್ ಡಕೆಟ್ ಅವರನ್ನು ರಿಂಕು ಸಿಂಗ್‌ಗೆ ಕ್ಯಾಚ್ ಕೊಡಿಸುವಲ್ಲಿ ಯಶಸ್ವಿಯಾದರು. ಅದು ಅರ್ಶದೀಪ್ ಅವರ ಟಿ20ಯ 97ನೇ ವಿಕೆಟ್ ಆಗಿದೆ. ಈ ಮೂಲಕ ಅವರು ಭಾರತದ ಪರ ಅತಿ ಹೆಚ್ಚು ವಿಕೆಟ್ ಪಡೆದ ಯುಜುವೇಂದ್ರ ಚಾಹಲ್ ಅವರ ದಾಖಲೆಯನ್ನು ಮುರಿದರು. ಚಾಹಲ್ ಅವರು 80 ಪಂದ್ಯಗಳಲ್ಲಿ 96 ವಿಕೆಟ್ ಪಡೆದಿದ್ದು ಈ ಹಿಂದಿನ ಸಾಧನೆಯಾಗಿತ್ತು. ಅರ್ಶದೀಪ್ ಅವರು ಕೇವಲ 61 ಪಂದ್ಯಗಳಲ್ಲೇ ಈ ಸಾಧನೆ ಮಾಡಿದ್ದಾರೆ.

ಇನ್ನು 3 ವಿಕೆಟ್ ಗಳನ್ನು ಗಳಿಸಿದಲ್ಲಿ 100 ವಿಕೆಟ್‌ಗಳ ಮೈಲಿಗಲ್ಲು ತಲುಪಿದ ಭಾರತದ ಮೊದಲ ಬೌಲರ್ ಎಂಬ ಗೌರವಕ್ಕೂ ಅವರು ಪಾತ್ರರಾಗಲಿದ್ದಾರೆ. ಪ್ರಸ್ತುತ ಆಡುತ್ತಿರುವವರಲ್ಲಿ ಹಾರ್ದಿಕ್ ಪಾಂಡ್ಯ 89 ವಿಕೆಟ್ ಗಳಿಸಿದ್ದು, ಅವರೂ ಸಹ ಇದೇ ಸರಣಿಯಲ್ಲಿ ಈ ಸಾಧನೆ ಮಾಡುವ ನಿರೀಕ್ಷೆ ಇದೆ.

# ರಾಯಲ್ ಆಗಿದೆ ದಿನಕರ್ ಚಿತ್ರ

ಲೈಫ್ ಜೊತೆ ಒಂದು ಸೆಲ್ಫಿ ಕಥೆ ಹೇಳಿ ರಂಜಿಸಿದ್ದ ನಿರ್ದೇಶಕ ದಿನಕರ್ ತೂಗುದೀಪ ಬಹು, ದಿನಗಳ ಬಳಿಕ ರಾಯಲ್ ಆಗಿರುವ ಕಥೆಯನ್ನು ಹೊತ್ತುಬಂದಿದ್ದಾರೆ. ಇಲ್ಲಿ ಲವ್ ಸ್ಟೋರಿ ಮಾತ್ರವಲ್ಲ, ಮಾಸ್ ಕ್ಲಾಸ್ ಕಥೆಯೂ ಬೆರೆತಿದೆ. ಟೈಟಲ್‌ನಲ್ಲಿಯೇ ಮನಗೆದ್ದಿರುವ ರಾಯಲ್, ಹಾಡುಗಳ ಮೂಲಕ ಭರ್ಜರಿ ಸದ್ದು ಮಾಡುತ್ತಿದೆ. ಹೆಸರಿಗೆ ತಕ್ಕಂತೆ ಚಿತ್ರ ರಾಯಲ್ ಆಗಿಯೇ ಸಿದ್ಧವಾಗಿದೆ. ತಮ್ಮ ಚಿತ್ರದ ಕುರಿತಂತೆ ದಿನಕರ್ ಮಾತನಾಡಿದ್ದಾರೆ.

ಇದು ಸಂಪೂರ್ಣ ಫ್ಯಾಮಿಲಿ ಎಂಟರ್‌ಟೇನ್‌ಮೆಂಟ್ ಸಿನಿಮಾ. ಪ್ರೇಕ್ಷಕರಿಗೆ ಅಗತ್ಯವಾದ ಮನರಂಜನೆ ಇಲ್ಲಿದೆ. ಹಿಂದಿನ ಚಿತ್ರದಲ್ಲಿ ಲವ್ವರ್ ಬಾಯ್ ಆಗಿದ್ದ ವಿರಾಟ್ ಈ ಚಿತ್ರದಲ್ಲಿ ಮಾಸ್ ಜತೆಗೆ ಎನರ್ಜೆಟಿಕ್ ಆಗಿ ಮಿಂಚಿದ್ದಾರೆ. ಈ ಚಿತ್ರ ಪ್ರೇಕ್ಷಕರನ್ನು ಖಂಡಿತಾ ಸೆಳೆಯುತ್ತದೆ.

**ಕಥೆ ಬಯಸಿದ ಕಲಾವಿದ**

ರಾಯಲ್ ಕಥೆ ಅದ್ಭುತವಾಗಿದೆ, ಕಥೆಗೆ ತಕ್ಕ ಕಲಾವಿದರನ್ನೇ ಆಯ್ಕೆ ಮಾಡಿಕೊಳ್ಳಲಾಗಿದೆ. ಕಥೆಯಲ್ಲಿ ಆತ್ಮವಿದೆ. ಅದೇ ಎಲ್ಲವನ್ನೂ ನಡೆಸಿಕೊಂಡು ಹೋಗುತ್ತದೆ. ನಾನು ನಿರ್ದೇಶಿಸಿದ ಈ ಹಿಂದಿನ ಸಿನಿಮಾಗಳಿಗಿಂತ ಈ ಚಿತ್ರದ ಕಥೆ ವಿಭಿನ್ನವಾಗಿದೆ. ಕಥೆಯ ನಿರೂಪಣಾ ಶೈಲಿಯೂ ಹೊತನದಿಂದ ಕೂಡಿದೆ. ದರ್ಶನ್‌ಗಾಗಿ ಸಾರಥಿ ಸಿನಿಮಾ ಮಾಡಿದ್ದೆ. ಈಗ ವಿರಾಟ್‌ಗಾಗಿ ರಾಯಲ್ ಚಿತ್ರ ನಿರ್ದೇಶಿಸಿದ್ದೇನೆ. ಸಂಜನಾ ಆನಂದ್, ಅಚ್ಯುತ್ ಕುಮಾರ್, ಛಾಯಾ ಸಿಂಗ್, ರಂಗಯಣ ರಘು, ರವಿ ಭಟ್, ರಘು ಮುಖರ್ಜಿ, ಪ್ರಮೋದ್ ಶೆಟ್ಟಿ ಹೀಗೆ ದೊಡ್ಡ ತಾರಾಗಳಗವೇ ನಮ್ಮ ಚಿತ್ರದಲ್ಲಿ ನಟಿಸಿದ್ದಾರೆ.

**ಆ ಕನಸು ಕೈಗೂಡಲಿಲ್ಲ**

ಅಪ್ಪು ಸರ್‌ಗಾಗಿ ಒಂದು ಸಿನಿಮಾ ಮಾಡಬೇಕು ಎಂಬ ಆಸೆಯಿತ್ತು. ಅದಕ್ಕೆ ತಕ್ಕಂತೆ ಕಥೆಯೂ ಸಿದ್ಧವಾಗಿತ್ತು. ಪುನೀತ್ ಸರ್ ಕೂಡ ಕಥೆ ಕೇಳಿ ಮೆಚ್ಚಿದ್ದರು. ಚಿತ್ರದ ಬಗ್ಗೆ ಸಾಕಷ್ಟು ಚರ್ಚಿಸಿದ್ದರು. ಆದರೆ ನಾವಂದುಕೊಂಡಂತೆ ಯಾವುದೂ ಆಗಲಿಲ್ಲ. ಅಪ್ಪು ಸರ್ ನಮ್ಮನ್ನು ಅಗಲಿ ಬಾರದ ಲೋಕಕ್ಕೆ ಪಯಣಿಸಿದರು. ಆ ಬಳಿಕ ನಿರ್ಮಾಪಕ ಜಯಣ್ಣ, ವಿರಾಟ್‌ಗಾಗಿ ಸಿನಿಮಾ ಮಾಡುವಂತೆ ಹೇಳಿದ್ದರು. ಅಂತೆಯೇ ಕಥೆ ಬರೆದು ಚಿತ್ರ ನಿರ್ದೇಶಿಸಿದ್ದೇನೆ. ಇಡೀ ಚಿತ್ರತಂಡದ ಸಹಕಾರದಿಂದ ಸಿನಿಮಾ ಸೊಗಸಾಗಿ ತಯಾರಾಗಿದೆ.

**ಹಾಡುಗಳೇ ಜೀವಾಳ**

ಚಿತ್ರದ ಕಥೆಗೆ ಪೂರಕವಾಗುವಂತೆ ಹಾಡುಗಳಿವೆ. ಹಾಡುಗಳೇ ಕಥೆಯ ಜೀವಾಳವಾಗಿದೆ. ಅದರಲ್ಲಿಯೂ ಟಾಂಗು ಟಾಂಗು.. ಹಾಡು ಯುವ ಜನರ ಮನಗೆದ್ದಿದೆ. ಕವಿರಾಜ್ ಸಾಹಿತ್ಯದ ಈ ಹಾಡಿಗೆ ಚರಣ್ ರಾಜ್ ಸಂಗೀತದ ಶಕ್ತಿತುಂಬಿದ್ದಾರೆ. ಟಾಂಗು..ಟಾಂಗು.. ಸಾಂಗ್ ರಾಯಲ್ ಆಗಿ ಮೂಡಿಬಂದಿದೆ. ನಿರ್ಮಾಪಕರಾದ ಜಯಣ್ಣ ಅವರು ಚಿತ್ರದ ಕಥೆ ಕೇಳಿದ್ದೆಲ್ಲವನ್ನು ಒದಗಿಸಿ ಕೊಟ್ಟಿದ್ದಾರೆ. ಅದಕ್ಕಾಗಿಯೇ ಚಿತ್ರ ಇಷ್ಟೊಂದು ಶ್ರೀಮಂತವಾಗಿ ಮೂಡಿಬಂದಿದೆ.

**ರಾಯಲ್ ಅಪ್ಪಟ ಕನ್ನಡ ಸಿನಿಮಾ. ಕಾಂತಾರದಂತೆ ರಾಯಲ್ ಕೂಡ ಪ್ಯಾನ್ ಇಂಡಿಯಾ ಸಿನಿಮಾವಾಗಲಿದೆ.**

# ಭಗೀರಥನ ಸುಂದರ ಗಾನ

ಟೈಟಲ್‌ನಲ್ಲಿ ಸದ್ದು ಮಾಡುತ್ತಿರುವ ಭಗೀರಥ ಚಿತ್ರದ ಹಾಡುಗಳು ಹಾಗೂ ಟ್ರೇಲರ್ ಬಿಡುಗಡೆಯಾಗಿವೆ. ಫಿಲಂ ಚೇಂಬರ್ ಮಾಜಿ ಅಧ್ಯಕ್ಷರಾದ ಎಸ್.ಎ.ಚಿನ್ನೇಗೌಡ, ಟ್ರೇಲರ್ ಹಾಗೂ ಹಾಡುಗಳನ್ನು ಬಿಡುಗಡೆ ಮಾಡಿ ಚಿತ್ರತಂಡಕ್ಕೆ ಶುಭಕೋರಿದರು. ಅಸಾಧ್ಯವಾದುದ್ದನ್ನು ಕಷ್ಟಪಟ್ಟು ಸಾಧ್ಯವಾಗಿಸಿದರೆ ಅದನ್ನು ಭಗೀರಥ ಪ್ರಯತ್ನ ಎನ್ನುತ್ತಾರೆ. ಅಂತಹ ಒಂದು ವಿಭಿನ್ನ ಕಥೆಯನ್ನಿಟ್ಟುಕೊಂಡು ಬರುತ್ತಿರುವ ಸಿನಿಮಾ ಭಗೀರಥ. ಪ್ರದೀಪ್ ವರ್ಮ ಸಂಗೀತ ಸಂಯೋಜಿಸಿರುವ ಚಿತ್ರದ ಹಾಡುಗಳಿಗೆ ವಿಜಯ್ ಪ್ರಕಾಶ್, ಶ್ರುತಿ ಪ್ರಹ್ಲಾದ್ ಹಾಗೂ ಹೇಮಂತ್ ಕುಮಾರ್ ದನಿಯಾಗಿದ್ದಾರೆ.

ಈ ಚಿತ್ರದಲ್ಲಿ ನನ್ನದು ಯಾವುದಕ್ಕೂ ಹೆದರದ, ಪಾತ್ರದಲ್ಲಿ ನಟಿಸಿದ್ದೇನೆ. ಈ ಚಿತ್ರದಲ್ಲಿ ಸಾಹಸ ಸನ್ನಿವೇಶಗಳೇ ಹೈಲೆಟ್. ಥ್ರಿಲ್ಲರ್ ಮಂಜು ಅವರ ಸಾರಥ್ಯದಲ್ಲಿ ಅದ್ಭುತವಾದ ಸಾಹಸ ಸನ್ನಿವೇಶಗಳು ಮೂಡಿಬಂದಿವೆ ಎಂದು ನಾಯಕ ನಟ ಎಸ್.ಜಯಪ್ರಕಾಶ್ ಹೇಳಿದರು.

ಚಂದನಾ ರಾಘವೇಂದ್ರ ನಾಯಕಿಯಾಗಿ ಬಣ್ಣಹಚ್ಚಿದ್ದು, ಗುಡ್ ನ್ಯೂಸ್ ಗಾಯತ್ರಿ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ನಿಸರ್ಗಾ ಅಣ್ಣಪ್ಪ ರಾಧಾ ಎಂಬ ಪಾತ್ರದಲ್ಲಿ ಅಭಿನಯಿಸಿದ್ದಾರೆ. ರೂಪಶ್ರೀ ಮತ್ತೊಬ್ಬ ನಾಯಕಿಯಾಗಿ ನಟಿಸಿದ್ದಾರೆ. ಸಾಯಿ ರಮೇಶ್ ಪ್ರೊಡಕ್ಷನ್ ಲಾಂಛನದಲ್ಲಿ, ಚೇತನ್. ಎಸ್.ರಮೇಶ್ ಹಾಗೂ ಬಿ.ಭೈರಪ್ಪ ಒಟ್ಟಾಗಿ ಚಿತ್ರ ನಿರ್ಮಾಣ ಮಾಡಿದ್ದಾರೆ.

**ಭಗೀರಥ ಶೀರ್ಷಿಕೆಯೇ ಹೇಳುವಂತೆ ಹಠತೊಟ್ಟು ಅಸಾಧ್ಯವಾದುದ್ದನ್ನು ಸಾಧಿಸುವವನು. ನಮ್ಮ ಚಿತ್ರದ ಕಥೆಯೂ ಇದೇ ಅರ್ಥದಲ್ಲಿ ಸಾಗುತ್ತದೆ. ಈಗಾಗಲೇ ಚಿತ್ರೀಕರಣ ಮುಗಿದಿದ್ದು, ಫೆಬ್ರವರಿ 7 ರಂದು ಚಿತ್ರ ತೆರೆಗೆ ಬರಲಿದೆ.**

**-ಜನಾರ್ದನ್** ನಿರ್ದೇಶಕ

ಕಿರುತೆರೆಯಲ್ಲಿ ಈಗಾಗಲೇ ಹತ್ತು ಹಲವು ಧಾರಾವಾಹಿಗಳು ಪ್ರಸಾರವಾಗುತ್ತಿವೆ. ಈಗ ಆ ಸಾಲಿಗೆ ನಾ ನಿನ್ನ ಬಿಡಲಾರೆ ಧಾರಾವಾಹಿಯೂ ಸೇರುತ್ತಿದೆ. ಥ್ರಿಲ್ಲರ್, ಹಾರರ್ ಮತ್ತು ಅಮ್ಮ-ಮಗಳ ಬಾಂಧವ್ಯದ ಕಥೆ ಇಲ್ಲಿದ್ದು, ಸದ್ಯ ಈ ಧಾರಾವಾಹಿಯ ಪ್ರೊಮೊ ಬಿಡುಗಡೆಯಾಗಿದೆ. ಪ್ರೇಕ್ಷಕರಲ್ಲಿ ಕುತೂಹಲ ಹೆಚ್ಚಿಸಿದೆ. ವಿಕ್ರಾಂತ್ ರೋಣ ಖ್ಯಾತಿಯ ನಟಿ ನೀತಾ ಅಶೋಕ್ ಈ ಧಾರಾವಾಹಿಯ ಪ್ರಮುಖ ಪಾತ್ರದಲ್ಲಿ ನಟಿಸುತ್ತಿದ್ದು, ಕೆಲವು ವರ್ಷಗಳ ಬಳಿಕ ಕಿರುತರೆಗೆ ಮರಳಿದ್ದಾರೆ. ಶರತ್ ಪದ್ಮನಾಭ್, ನೀತಾ ಅಶೋಕ್‌ಗೆ ಜೋಡಿಯಾಗಿ ನಟಿಸಲಿದ್ದಾರೆ. ಬೇಬಿ ಮಹಿತಾ ಈ ಜೋಡಿಗೆ ಮಗಳಾಗಿ ನಟಿಸಲಿದ್ದಾಳೆ. ಹಿರಿಯ ನಟಿ ವೀಣಾ ಸುಂದರ್, ರಿಷಿಕಾ, ಬಾಬು ಹಿರಣ್ಣಯ್ಯ ಮುಖ್ಯ ಪಾತ್ರಗಳಲ್ಲಿ ಅಭಿನಯಿಸುತ್ತಿದ್ದಾರೆ.

ಶರತ್-ಅಂಬಿಕಾ ದಂಪತಿಗೆ ಮಗಳು ಹಿತಾನೇ ಪ್ರಪಂಚ. ಆದರೆ ಈ ಪುಟ್ಟ ಸಂಸಾರಕ್ಕೆ ಮಾಯಾ ಎಂಬ ಹೆಣ್ಣಿನ ಕೆಟ್ಟ ದೃಷ್ಟಿ ಬೀಳುತ್ತದೆ. ಶರತ್‌ನನ್ನು ತನ್ನವನನ್ನಾಗಿಸಿಕೊಳ್ಳಬೇಕೆಂಬ ದುರಾಸೆಗೆ ಬಿದ್ದ ಮಾಯಾ, ಅಂಬಿಕಾಳನ್ನು ಸಾಯಿಸುತ್ತಾಳೆ. ಇತ್ತ ಮಗಳು ಹಿತ ಅಮ್ಮನಿಲ್ಲದೆ ಅನಾಥಳಾಗಿ ಅಪ್ಪನ ಮೇಲೆ ಮುನಿಸಿ ಕೊಳ್ಳು ತ್ತಾಳೆ. ತನ್ನ ದಾರಿಗೆ ಹಿತ ಅಡ್ಡವಾಗಿದ್ದಾಳೆ ಎಂದು ಆ ಪುಟ್ಟ ಕಂದನನ್ನು ಮುಗಿಸಲು ಮಾಯಾ ಸಂಚು ರೂಪಿಸುತ್ತಾಳೆ. ತನ್ನ ಮಗಳಿಗೆ ತೊಂದರೆ ಇದೆ ಎಂದು ಗೊತ್ತಾದ ಅಂಬಿಕಾ ಸತ್ತು ಹೋಗಿದ್ದರೂ ಮತ್ತೆ ಹೇಗೆ ಮರಳಿ ಬಂದು ಮಗಳನ್ನು ರಕ್ಷಿಸುತ್ತಾಳೆ ಅದನ್ನು ರೋಚಕವಾಗಿ ಧಾರಾವಾಗಿಯಲ್ಲಿ ಕಟ್ಟಿಕೊಡಲಾಗುತ್ತಿದೆ. ನಾ ನಿನ್ನ ಬಿಡಲಾರೆ ಇದೇ 27ರಿಂದ ಜೀ ಕನ್ನಡ ವಾಹಿನಿಯಲ್ಲಿ ಪ್ರಸಾರವಾಗಲಿದೆ. ಜಯದುರ್ಗ ಕ್ರಿಯೇಷನ್‌ನಲ್ಲಿ ಈ ಧಾರಾವಾಹಿ ನಿರ್ಮಾಣವಾಗುತ್ತಿದ್ದು, ಸತೀಶ್ ಕೃಷ್ಣ ನಿರ್ಮಾಣದ ಜವಾಬ್ದಾರಿ ಹೊತ್ತಿದ್ದಾರೆ.

# ಕಿರುತೆರೆಗೆ ಮರಳಿದ ನೀತಾ